ವಿಶ್ವವಾಣಿ

ವಿಶ್ವಾಸವೇ ವಿಶ್ವ

ತಮಿಳುನಾಡು ಚುನಾವಣೆಯಲ್ಲಿ ತಮ್ಮ ಪಕ್ಷ ಟಿವಿಕೆ ಹೆಚ್ಚು ಸ್ಥಾನ ಗೆದ್ದ ಹಿನ್ನೆಲೆಯಲ್ಲಿ ಪಕ್ಷದ ಸಂಸ್ಥಾಪಕ, ನಟ ವಿಜಯ್ ಚೆನ್ನೈನಲ್ಲಿರುವ ತಮ್ಮ ತಂದೆ, ತಾಯಿಯ ನಿವಾಸಕ್ಕೆ ತೆರಳಿ ಅವರ ಆಶೀರ್ವಾದ ಪಡೆದರು.

ದಾರಿದೀಪೋಕ್ತಿ

ನೆಮ್ಮದಿಯ ಜೀವನಕ್ಕೆ ಎರಡು ನಿಯಮಗಳನ್ನು ಪಾಲಿಸಬೇಕು. ಮೊದಲನೆಯದು, ಸೋತಾಗ ಮಾನಸಿಕ ಖಿನ್ನತೆಯನ್ನು ಹೃದಯಕ್ಕೆ ತೆಗೆದುಕೊಳ್ಳಬಾರದು ಹಾಗೂ ಗೆದ್ದಾಗ ಅಹಂಕಾರವನ್ನು ತಲೆಗೆ ತೆಗೆದುಕೊಳ್ಳಬಾರದು.

ವಕ್ರತುಂಡೋಕ್ತಿ

ಹೆಂಡತಿ 'ಐದು ನಿಮಿಷದಲ್ಲಿ ಬರ್ತೀನಿ' ಅಂದ್ರೆ ಅದು ಒಂದು ಗಂಟೆ ಅಂತ ಅರ್ಥ. ಗಂಡ 'ಇನ್ನೇನು ಬಂದೆ' ಅಂದ್ರೆ ಇನ್ನೂ ಗಾಡಿ ಸ್ಟಾರ್ಟ್ ಮಾಡಿಲ್ಲ ಅಂತ ಅರ್ಥ!

ಆವರಣದಲ್ಲಿರುವುದು ಕಳೆದ ಚುನಾವಣೆಯಲ್ಲಿ ಗಳಿಸಿದ ಸ್ಥಾನ

ಪಶ್ಚಿಮ ಬಂಗಾಳ 294 / 148		ತಮಿಳುನಾಡು 234 / 118		ಕೇರಳ 140 / 71		ಅಸ್ಸಾಂ 126 / 64		ಪುದುಚೇರಿ 30 / 16	
ಬಿಜೆಪಿ	207 (77)	ಟಿವಿಕೆ	107 (0)	ಯುಡಿಎಫ್	89 (40)	ಬಿಜೆಪಿ	102 (73)	ಎನ್‌ಡಿಎ	18 (16)
ಟಿಎಂಸಿ	80 (214)	ಡಿಎಂಕೆ	74 (159)	ಎಲ್‌ಡಿಎಫ್	35 (92)	ಕಾಂಗ್ರೆಸ್	21 (31)	ಇಂಡಿ	06 (8)
ಎಡಪಕ್ಷ	2 (1)	ಎಐಎಡಿಎಂಕೆ	52 (75)	ಬಿಜೆಪಿ	03 (0)	ಎಐಡಿಯು	02 (16)	ಟಿವಿಕೆ	03 (0)
ಕಾಂಗ್ರೆಸ್	2 (0)	ಇತರ	1 (0)	ಇತರ	13 (8)	ಇತರ	1 (6)	ಇತರ	3 (6)

ರಾಜ್ಯಕ್ಕೆ ಮೇಟಿ ಸಮರ್ಥ

ಬಾಗಲಕೋಟೆ: ಉಮೇಶ್ ಮೇಟಿ	
ಕಾಂಗ್ರೆಸ್	98,919
ಅಂತರ	22,332
ದಾವಣಗೆರೆ: ಸಮರ್ಥ ಶಾಮನೂರು	
ಕಾಂಗ್ರೆಸ್	69,578
ಅಂತರ	5,708

ಐದು ರಾಜ್ಯಗಳ ವಿಧಾನಸಭಾ ಚುನಾವಣಾ ಫಲಿತಾಂಶವು ಭಾರತೀಯ ರಾಜಕಾರಣದ ಹೊಸ ದಿಕ್ಕನ್ನು ಸೂಚಿಸಿದೆ. ಪಶ್ಚಿಮ ಬಂಗಾಳ, ತಮಿಳುನಾಡು ಮತ್ತು ಕೇರಳದಲ್ಲಿ ಆಡಳಿತಾರೂಢ ಪಕ್ಷಗಳು ಮಣ್ಣುಮುಕ್ಕಿದ್ದು, ಮತದಾರ ಬದಲಾವಣೆಯ ಪರವಾಗಿ ತೀರ್ಪು ನೀಡಿದ್ದಾನೆ. ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಭರ್ಜರಿ ಜಯ ಸಾಧಿಸುವ ಮೂಲಕ ಹೊಸ ಇತಿಹಾಸ ಬರೆದಿದೆ. ತಮಿಳುನಾಡಿನಲ್ಲಿ ವಿಜಯ್ ಅವರ ಟಿವಿಪಿ ಪಕ್ಷವು 108ಕ್ಕೂ ಹೆಚ್ಚು ಸ್ಥಾನಗಳಲ್ಲಿ ಮುನ್ನಡೆ ಸಾಧಿಸಿ, ರಾಜಕೀಯ ಪಂಡಿತರ ಲೆಕ್ಕಾಚಾರವನ್ನು ತಲೆಕೆಳಗಾಗಿಸಿದೆ. ಕೇರಳದಲ್ಲಿ ಎಡರಂಗದ ಹ್ಯಾಟ್ರಿಕ್ ಕನಸನ್ನು ಕಾಂಗ್ರೆಸ್ ನೇತೃತ್ವದ ಯುಡಿಎಫ್ ಭಗ್ನಗೊಳಿಸಿದೆ. ಅಸ್ಸಾಂ ಮತ್ತು ಪುದುಚೇರಿಯಲ್ಲಿ ಅಧಿಕಾರ ಉಳಿಸಿಕೊಳ್ಳುವ ಮೂಲಕ ಎನ್‌ಡಿಎ ಒಕ್ಕೂಟ ಗೆಲುವಿನ ನಗೆ ಬೀರಿದೆ.

ವಿಜಯ ವಿಕ್ರಮ ಕಮಲ ತ್ರಿವಿಕ್ರಮ

ಉತ್ತರ-ದಕ್ಷಿಣದಲ್ಲಿ ಹೊಸ ಇತಿಹಾಸ ಸೃಷ್ಟಿ | ಪಶ್ಚಿಮ ಬಂಗಾಳದಲ್ಲಿ ಕಮಲ ಕಮಾಲ್, ತಮಿಳುನಾಡಿಗೆ ವಿಜಯ್ ಹೊಸ ಜನನಾಯಕ, ಕೇರಳದಲ್ಲಿ ಮತ್ತೆ ಯುಡಿಎಫ್ ಆಳ್ವಿಕೆ | ಅಸ್ಸಾಂ, ಪುದುಚೇರಿ ಮರಳಿ ಬಿಜೆಪಿಗೆ | ಸ್ವಕ್ಷೇತ್ರದಲ್ಲೇ ಸೋತ ಮಮತಾ, ಸ್ಟಾಲಿನ್ | ಬಾಗಲಕೋಟೆ, ದಾವಣಗೆರೆಯಲ್ಲಿ ಕೈ ಭದ್ರ

ಇತಿಹಾಸ ಬರೆದ ಕೇಸರಿ ಪಡೆ

ಕೋಲ್ಕತಾ: ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯ ಫಲಿತಾಂಶವು ಭಾರತೀಯ ರಾಜಕಾರಣದ ಅತಿದೊಡ್ಡ ಮತ್ತು ಐತಿಹಾಸಿಕ ಪಲ್ಲಟಕ್ಕೆ ಸಾಕ್ಷಿಯಾಗಿದೆ. ಮಮತಾ ಬ್ಯಾನರ್ಜಿ ಅವರ



15 ವರ್ಷಗಳ ಸುದೀರ್ಘ ಆಡಳಿತಕ್ಕೆ ಅಂತ್ಯ ಹಾಡಿರುವ ಬಿಜೆಪಿ, ರಾಜ್ಯದಲ್ಲಿ ಮೊದಲ ಬಾರಿಗೆ ಅಧಿಕಾರದ ಗದ್ದುಗೆ ಏರುವ ಮೂಲಕ ಹೊಸ ಇತಿಹಾಸ ಬರೆದಿದೆ.

ಒಟ್ಟು 294 ಕ್ಷೇತ್ರಗಳ ಪೈಕಿ ಬಿಜೆಪಿ 200ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲುವ ಮೂಲಕ ಭರ್ಜರಿ ಬಹುಮತ ಸಾಧಿಸಿದ್ದು, ಈ ಮೂಲಕ ಜನಸಂಘದ ಸಂಸ್ಥಾಪಕ ಶ್ಯಾಮ್ ಪ್ರಸಾದ್ ನೆಲದಲ್ಲಿ ಮೊದಲ ಬಾರಿಗೆ ನೆಲೆ ಕಂಡಿದೆ. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ತೃಣಮೂಲ ಕಾಂಗ್ರೆಸ್ ಕೇವಲ 80-90 ಸ್ಥಾನಗಳಿಗೆ ಕುಸಿದಿದೆ. ಸ್ವತಃ ಮಮತಾ ಬ್ಯಾನರ್ಜಿ ಅವರೇ ಭವಾನಿಪುರ ಕ್ಷೇತ್ರದಲ್ಲಿ ಬಿಜೆಪಿಯ ಸುವೇಂದು ಅಧಿಕಾರಿ ವಿರುದ್ಧ ಸೋಲನುಭವಿಸಿರುವುದು ಟಿಎಂಸಿಗೆ ಆಘಾತ ನೀಡಿದೆ. ಕಾಂಗ್ರೆಸ್ ಮತ್ತು ಎಡರಂಗವು ಈ ಬಾರಿಯೂ ಯಾವುದೇ ಪ್ರಭಾವ ಬೀರಲು ಸಾಧ್ಯವಾಗದೆ ಮೂಲೆಗುಂಪಾಗಿವೆ. ಈ ಚುನಾವಣೆಯು ಶೇ. 92ಕ್ಕೂ ಹೆಚ್ಚು ಮತದಾನಕ್ಕೆ ಸಾಕ್ಷಿಯಾಗಿತ್ತು. ಭ್ರಷ್ಟಾಚಾರದ ಆರೋಪಗಳು ಮತ್ತು ಆಡಳಿತ ವಿರೋಧಿ ಅಲೆಯು ಟಿಎಂಸಿ ಪತನಕ್ಕೆ ಮುಖ್ಯ ಕಾರಣಗಳಾಗಿವೆ ಎಂದು ವಿಶ್ಲೇಷಿಸಲಾಗಿದೆ.

ದಕ್ಷಿಣದಲ್ಲಿ ವಿಜಯದ ಕೇಕೆ

ಚೆನ್ನೈ: ತಮಿಳುನಾಡು ವಿಧಾನಸಭಾ ಚುನಾವಣಾ ಫಲಿತಾಂಶವು ಇಡೀ ದೇಶವೇ ದಕ್ಷಿಣದತ್ತ ತಿರುಗಿ ನೋಡುವಂತೆ ಮಾಡಿದೆ. ಐದು ದಶಕಗಳ ಕಾಲ ದ್ರಾವಿಡ ಪಕ್ಷಗಳಾದ ಡಿಎಂಕೆ ಮತ್ತು ಎಐಎಡಿಎಂಕೆ

ನಡುವೆ ನಡೆಯುತ್ತಿದ್ದ ಹಣಾಹಣಿಯನ್ನು ಬದಿಗೊತ್ತಿ, ನಟ ವಿಜಯ್ ನೇತೃತ್ವದ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮುವ ಮೂಲಕ ರಾಜಕೀಯ ಸುನಾಮಿ ಎಬ್ಬಿಸಿದೆ.

234 ಕ್ಷೇತ್ರಗಳ ಪೈಕಿ ವಿಜಯ್ ಅವರ ಟಿವಿಪಿ ಪಕ್ಷವು 108ಕ್ಕೂ ಹೆಚ್ಚು ಸ್ಥಾನಗಳಲ್ಲಿ ಮುನ್ನಡೆ ಸಾಧಿಸಿ, ಮಾಧ್ಯಮ ಸಮೀಕ್ಷೆಗಳನ್ನು ತಲೆಕೆಳಗಾಗಿಸಿದೆ. ವಿಜಯ್ ಅವರು ಪೆರಂಬೂರ್ ಮತ್ತು ತಿರುಚಿ ಪೂರ್ವ ಎರಡೂ ಕ್ಷೇತ್ರಗಳಲ್ಲಿ ಭರ್ಜರಿ ಜಯ ದಾಖಲಿಸಿದ್ದಾರೆ. ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ಆಡಳಿತಕ್ಕೆ ಮತದಾರರು ಬ್ರೇಕ್ ಹಾಕಿದ್ದಾರೆ. ಅಚ್ಚರಿಯ ಬೆಳವಣಿಗೆಯಲ್ಲಿ, ಸ್ವತಃ ಸ್ಟಾಲಿನ್ ಅವರೇ ಕೊಳತ್ತೂರು ಕ್ಷೇತ್ರದಲ್ಲಿ ಟಿವಿಕೆ ಅಭ್ಯರ್ಥಿ ಎದುರು ಸೋಲನುಭವಿಸಿದ್ದಾರೆ. ಡಿಎಂಕೆ ಕೇವಲ 60ರ ಆಸುಪಾಸಿನ ಸ್ಥಾನಗಳಿಗೆ ಕುಸಿದಿದೆ. ಎಐಎಡಿಎಂಕೆ ಮತ್ತು ಬಿಜೆಪಿ ಮೈತ್ರಿಕೂಟ ಮೂರನೇ ಸ್ಥಾನಕ್ಕೆ ಕುಸಿದಿದೆ. ಎಡಿಎಂಕೆ ಸುಮಾರು 46 ಸ್ಥಾನಗಳನ್ನು ಗಳಿಸಿದರೆ, ಬಿಜೆಪಿ ಕೇವಲ 1 ಸ್ಥಾನಕ್ಕೆ ತೃಪ್ತಿಪಟ್ಟಿದೆ. ವಿಜಯ್ ಅವರಿಗೆ ಯುವಜನತೆ ಮತ್ತು ಮಹಿಳೆಯರು ಹೆಚ್ಚಿನ ಬೆಂಬಲ ನೀಡಿದ್ದಾರೆ.



ಎಡಕೋಟೆಯ ಪತನ

ತಿರುವನಂತಪುರ: ಕೇರಳದಲ್ಲಿ ಹತ್ತು ವರ್ಷಗಳ ಎಡರಂಗದ ಆಡಳಿತಕ್ಕೆ ಅಂತ್ಯ ಹಾಡಿರುವ ಮತದಾರ ಪ್ರಭು, ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮೈತ್ರಿಕೂಟಕ್ಕೆ ಭರ್ಜರಿ ಬಹುಮತ



ನೀಡಿದ್ದಾನೆ. ಒಟ್ಟು 140 ಕ್ಷೇತ್ರಗಳ ಪೈಕಿ ಯುಡಿಎಫ್ 102 ಸ್ಥಾನಗಳನ್ನು ಗೆಲ್ಲುವ ಮೂಲಕ ಅಧಿಪತ್ಯ ಸ್ಥಾಪಿಸಿದೆ. ಕಾಂಗ್ರೆಸ್ ಏಕಾಂಗಿಯಾಗಿ 63 ಸ್ಥಾನಗಳನ್ನು ಗಳಿಸಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಕಳೆದ ಎರಡು ಬಾರಿ ಸತತವಾಗಿ ಅಧಿಕಾರ ಹಿಡಿದಿದ್ದ ಪಿಣರಾಯಿ ವಿಜಯನ್ ನೇತೃತ್ವದ ಎಲ್‌ಡಿಎಫ್ ಈ ಬಾರಿ ಕೇವಲ 35 ಸ್ಥಾನಗಳಿಗೆ ಕುಸಿದಿದೆ. ಈ ಭಾರಿ ಸೋಲಿನಲ್ಲಿ ಪಿಣರಾಯಿ ಸಂಪುಟದ 13 ಸಚಿವರು ಪರಾಭವಗೊಂಡಿರುವುದು ಗಮನಾರ್ಹ. ಕೇರಳದಲ್ಲಿ ಇದುವರೆಗೆ ಖಾತೆ ತೆರೆಯಲು ಹೆಣಗಾಡುತ್ತಿದ್ದ ಬಿಜೆಪಿಗೆ ಈ ಬಾರಿ ದೊಡ್ಡ ಯಶಸ್ಸು ಸಿಕ್ಕಿದೆ. ನೇಮಂ, ಕಳಕೂಟಂ ಮತ್ತು ಚಾತನೂರು ಕ್ಷೇತ್ರಗಳಲ್ಲಿ ಜಯಗಳಿಸುವ ಮೂಲಕ ಬಿಜೆಪಿ ಮೊದಲ ಬಾರಿಗೆ 3 ಸ್ಥಾನಗಳನ್ನು ಗೆದ್ದು ಅಸೆಂಬ್ಲಿಯಲ್ಲಿ ಶಕ್ತಿ ಪ್ರದರ್ಶಿಸಿದೆ. ಈ ಫಲಿತಾಂಶದೊಂದಿಗೆ ದಕ್ಷಿಣ ಭಾರತದಲ್ಲಿ ಕರ್ನಾಟಕ ಮತ್ತು ತೆಲಂಗಾಣದ ನಂತರ ಕೇರಳವು ಕಾಂಗ್ರೆಸ್ ಪಾಲಾದ ಮೂರನೇ ರಾಜ್ಯವಾಗಿದೆ.

ಅಸ್ಸಾಂನಲ್ಲಿ ಬಿಜೆಪಿ ಹ್ಯಾಟ್ರಿಕ್

ಅಸ್ಸಾಂ: ಅಸ್ಸಾಂನಲ್ಲಿ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ನೇತೃತ್ವದ ಬಿಜೆಪಿ

ಮೈತ್ರಿಕೂಟ ಸತತ ಮೂರನೇ ಬಾರಿಗೆ ಅಧಿಕಾರ ಹಿಡಿಯುವ ಮೂಲಕ ಐತಿಹಾಸಿಕ 'ಹ್ಯಾಟ್ರಿಕ್' ಸಾಧನೆ ಮಾಡಿದೆ. ಒಟ್ಟು 126 ಸ್ಥಾನಗಳಲ್ಲಿ ಎನ್‌ಡಿಎ 85ಕ್ಕೂ ಹೆಚ್ಚು ಸ್ಥಾನಗಳನ್ನು ಗೆದ್ದು ಭರ್ಜರಿ ಬಹುಮತ ಸಾಧಿಸಿದೆ. ಬಿಜೆಪಿ ಏಕಾಂಗಿಯಾಗಿ 68 ಸ್ಥಾನಗಳನ್ನು ಗಳಿಸಿದರೆ, ಮಿತ್ರಪಕ್ಷಗಳಾದ ಎಜಿಪಿ ಮತ್ತು ಯುಪಿಪಿಎಲ್ ಗಮನಾರ್ಹ ಸಾಧನೆ ಮಾಡಿವೆ. ಕಾಂಗ್ರೆಸ್ ನೇತೃತ್ವದ ಮೈತ್ರಿಕೂಟ 35 ಸ್ಥಾನಗಳಿಗೆ ಸೀಮಿತವಾಗಿದೆ.

ಪುದುಚೇರಿಗೆ ಮತ್ತೆ ರಂಗಸ್ವಾಮಿ

ಪುದುಚೇರಿ: ಕೇಂದ್ರಾಡಳಿತ ಪ್ರದೇಶವಾದ ಪುದುಚೇರಿಯಲ್ಲಿ ಅಧಿಕಾರ



ಉಳಿಸಿಕೊಳ್ಳುವಲ್ಲಿ ಎನ್‌ಡಿಎ ಯಶಸ್ವಿಯಾಗಿದೆ. ಎನ್. ರಂಗಸ್ವಾಮಿ ಅವರ ನಾಯಕತ್ವ ಮತ್ತು ಬಿಜೆಪಿಯ ಸಂಘಟಿತ ಹೋರಾಟ ಇಲ್ಲಿ ಫಲ ನೀಡಿದೆ. ಒಟ್ಟು 30 ವಿಧಾನಸಭಾ ಕ್ಷೇತ್ರಗಳಲ್ಲಿ ಎನ್‌ಡಿಎ ಮೈತ್ರಿಕೂಟ 18 ಸ್ಥಾನಗಳನ್ನು ಗೆಲ್ಲುವ ಮೂಲಕ ಸರಳ ಬಹುಮತದ ಗಡಿ ದಾಟಿದೆ. ಎನ್.ಆರ್. ಕಾಂಗ್ರೆಸ್ 11 ಮತ್ತು ಬಿಜೆಪಿ 7 ಸ್ಥಾನಗಳನ್ನು ಗೆದ್ದುಕೊಂಡಿವೆ. ಡಿಎಂಕೆ ಮತ್ತು ಕಾಂಗ್ರೆಸ್ ಮೈತ್ರಿಕೂಟ 10 ಸ್ಥಾನಗಳಿಗೆ ತೃಪ್ತಿಪಡಬೇಕಾಗಿದೆ. ಇತರರು 2 ಸ್ಥಾನಗಳಲ್ಲಿ ಜಯಗಳಿಸಿದ್ದಾರೆ.

ಸೊಂಪಾದ ಪುಟಗಳು

ಕೈ ಮೌನದಾಟದ ಹಿಂದಿನ ಗುಟ್ಟೇನು?

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ

8

ಶತಕವಂಚಿತ ರಾಹುಲ್ ಗಾಂಧಿಯೇ ಅಸಲಿ ಧುರಂಧರ್!

ಪದಸಾಗರ
ನವೀನ್ ಸಾಗರ್

8

ಈ ಬಾರಿಯ ಪಂಚರಾಜ್ಯ ಚುನಾವಣೆಗಳಲ್ಲಿ ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿಯಲ್ಲಿ ಬಿಜೆಪಿಗೆ ಅಧಿಕಾರ ಕೊಟ್ಟ ಅಲ್ಲಿನ ಜನತೆಗೆ ವಂದನೆಗಳು. ಕೇರಳದಲ್ಲಿ ನಾವು ಮತ್ತೆ ಬಲವಾಗಿ ಹೆಜ್ಜೆಯೂರುವಂತೆ ಮಾಡಿದ ಕೇರಳಿಗರಿಗೆ ಧನ್ಯವಾದಗಳು.

-ನರೇಂದ್ರ ಮೋದಿ, ಪ್ರಧಾನಿ

ನಮಗೆ ಬಹುಮತದ ಸರಕಾರ ರಚಿಸಲು ಅವಕಾಶ ಕಲ್ಪಿಸಿದ ಕೇರಳದ ಮತದಾರರಿಗೆ ಧನ್ಯವಾದಗಳು. ಯುಡಿಎಫ್ ನಾಯಕರಿಗೆ ಅಭಿನಂದನೆಗಳು. ಕೇರಳದ ಸಂಸ್ಕೃತಿ ಕಾಪಾಡುವಲ್ಲಿ ನಮ್ಮ ಯುಡಿಎಫ್ ಸರಕಾರ ಪ್ರಯತ್ನಿಸಲಿದೆ. ರಾಜ್ಯದ ಜನರ ಏಳಿಗೆಗಾಗಿ ಪಕ್ಷವು ನಿರಂತರವಾಗಿ ಶ್ರಮಿಸಲಿದೆ. ಇಂಡಿ ಒಕ್ಕೂಟದ ಹೋರಾಟ ಮುಂದುವರಿಯಲಿದೆ.

-ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ಕೇಂದ್ರ ಸರಕಾರವು ತನ್ನ ಅಧೀನ ಎಲ್ಲಾ ತನಿಖಾ ಸಂಸ್ಥೆಗಳನ್ನು ಬಳಸಿಕೊಂಡು ಟಿಎಂಸಿ ಪಕ್ಷಕ್ಕೆ ಕಾಟ ಕೊಟ್ಟಿದ್ದು, ಚುನಾವಣೆಯಲ್ಲಿ ನಾನಾ ರೀತಿಯ ತಂತ್ರಗಾರಿಕೆಗಳು, ಮತಎಣಿಕೆಯಲ್ಲಿನ ದೋಷ ಇತ್ಯಾದಿಗಳ ಮೂಲಕ ಪಶ್ಚಿಮ ಬಂಗಾಳದಲ್ಲಿ ಅಧಿಕಾರ ಪಡೆದುಕೊಂಡಿದೆ.

-ಮಮತಾ ಬ್ಯಾನರ್ಜಿ, ಟಿಎಂಸಿ ಅಧಿನಾಯಕಿ

ದಕ್ಷಿಣದ ರಾಜ್ಯಗಳಾದ ಕರ್ನಾಟಕ ಮತ್ತು ತೆಲಂಗಾಣ ರಾಜ್ಯಗಳಂತೆ ಕೇರಳ ಮತ್ತು ತಮಿಳುನಾಡು ರಾಜ್ಯಗಳಲ್ಲಿಯೂ ಬಿಜೆಪಿಯ ಕೋಮುವಾದಿ ರಾಜಕಾರಣಕ್ಕೆ ಪ್ರವೇಶ ಇಲ್ಲ ಎನ್ನುವ ಸ್ಪಷ್ಟ ಸಂದೇಶ ಬಂದಿದೆ. ಎರಡು ರಾಜ್ಯದ ಮತದಾರರನ್ನು ದೇಶದ ಎಲ್ಲ ಜಾತ್ಯತೀತ ಮತ್ತು ಪ್ರಜಾಪ್ರಭುತ್ವವಾದಿ ಜನರ ಪರವಾಗಿ ಅಭಿನಂದಿಸುತ್ತೇನೆ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ಜನರಿಗೆ ಭಾವನೆ ಮೇಲೆ ರಾಜಕಾರಣ ಮಾಡಬೇಕು. ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿ ಅಧಿಕಾರ ದುರುಪಯೋಗ ಮಾಡಿಕೊಂಡಿದೆ. ವಿಶೇಷವಾಗಿ ಪಶ್ಚಿಮ ಬಂಗಾಳ, ಅಸ್ಸಾಂ ಹಾಗೂ ತಮಿಳುನಾಡಿನಲ್ಲಿ ದೊಡ್ಡಮಟ್ಟದಲ್ಲಿ ಅಧಿಕಾರ ದುರುಪಯೋಗ ಮಾಡಿಕೊಂಡಿದ್ದಾರೆ.

-ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಫನ್‌ತರಂಗ

- ರಘುಪತಿ ಶೃಂಗೇರಿ -

ಪಂಚರಾಜ್ಯ ಚುನಾವಣೆ 2026



ಬದಲಾವಣೆ ಗಾಳಿಯಲ್ಲಿ ಹೊಸ ಪಾಠ

ಪ್ರತಿ ಚುನಾವಣೆಯೂ ರಾಜಕೀಯ ಪಕ್ಷಗಳಿಗೆ, ಜನವಿರೋಧಿ ರಾಜಕಾರಣಿಗಳು, ಸರಕಾರಗಳಿಗೆ ಪಾಠ ಕಲಿಸುತ್ತಲೇ ಇರುತ್ತದೆ. ಆದರೆ ಈ ಆಡಳಿತ ಪಕ್ಷ ಪರಾಜಯ ಕಂಡ ಮೂರು ರಾಜ್ಯಗಳಲ್ಲಿ ಆಡಳಿತ ವಿರೋಧಿ ಅಲೆ ಒಂದೇ ಅಲ್ಲ ದೇಶದ ಭದ್ರತೆ, ಹಿಂದೂಗಳ ನಿರ್ಲಕ್ಷ್ಯ, ಕುಟುಂಬ ರಾಜಕಾರಣದ ಬಗ್ಗೆ ಹೇವರಿಕೆ ಎಲ್ಲವೂ ಫಲಿತಾಂಶವಾಗಿ ಹೊರ ಹೊಮ್ಮಿವೆ. ಮೌನವಾಗಿದ್ದ ಮತದಾರರ ಲೆಕ್ಕಾಚಾರ ಗ್ರಹಿಸುವಲ್ಲಿ ವಿಫಲವಾದ ಟಿಎಂಸಿ, ಡಿಎಂಕೆ ಮತ್ತು ಎಲ್‌ಡಿಎಫ್ ಸೋಲಿಗೆ ಕೊರಳೊಡ್ಡುವಂತಾಗಿದೆ.

ಶೋಭಾ ಮಳವಳ್ಳಿ

ದೇಶದ ಇತಿಹಾಸದಲ್ಲೇ ಮೊದಲ ಬಾರಿಗೆ ಎಡಪಕ್ಷಗಳಿಗೆ ಸೋಲುಣಿಸಿದ್ದಾನೆ ಮತದಾರ.

ಒಣ ಸಿದ್ಧಾಂತ, ಪಾಳೇಗಾರಿಕೆ ಕುಟುಂಬ ರಾಜಕಾರಣ, ಅಧಿಕಾರದ ಬಲ, ತೋಳ್ಬಲ, ದರ್ಪ, ಧರ್ಮದ ಧ್ರುವೀಕರಣ ಎಲ್ಲವನ್ನು ಒಂದೇ ಏಟಿಗೆ ಒರೆಸಿ ಹಾಕಿದ್ದಾನೆ. ಮತದಾರ. ಇದಕ್ಕೆ ಇಂದಿನ ನಾಲ್ಕು ರಾಜ್ಯಗಳ ಚುನಾವಣಾ ಫಲಿತಾಂಶವೇ ನಿಚ್ಚಳ ಉದಾಹರಣೆ.

ಆಡಳಿತ ವಿರೋಧಿ ಅಲೆಯ ಹೊಡೆತಕ್ಕೆ ಸಿಕ್ಕಿ ಪಶ್ಚಿಮ ಬಂಗಾಳ ಧೂಳೀಪಟವಾದರೆ, ತಮಿಳುನಾಡಿನಲ್ಲಿ ಕರುಣಾನಿಧಿ ಕುಟುಂಬ ರಾಜಕಾರಣದ ಬೇರು ಕುಸಿದುಬಿದ್ದಿದೆ. ಅತ್ತ ಪುದುಚೇರಿಯಲ್ಲಿ ಎನ್ ಡಿಎ ಮೈತ್ರಿ ಕೂಟ ಮತ್ತೆ ಅಧಿಕಾರ ಹಿಡಿಯುವತ್ತ ದಾಪುಗಾಲಿಟ್ಟಿದೆ. ಕೇರಳದಲ್ಲಿ ಮೂರು ಅವಧಿಯಿಂದ ಅಧಿಕಾರದಲ್ಲಿದ್ದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ನೇತೃತ್ವದ ಎಡರಂಗದ ಎಲ್‌ಡಿಎಫ್ ಪಕ್ಷದಿಂದ ಅಧಿಕಾರ ಕಸಿದು ಕಾಂಗ್ರೆಸ್ ನೇತೃತ್ವದ ಯುಡಿಎಫ್ ಗದ್ದುಗೆ ಏರುತ್ತಿದೆ. ಕೇರಳದಲ್ಲೂ ಬಿಜೆಪಿ ಮೊದಲ ಬಾರಿಗೆ ಮೂರು ಸ್ಥಾನ ಗೆದ್ದಿದೆ. ಈ ನಾಲ್ಕು ರಾಜ್ಯಗಳ ಫಲಿತಾಂಶ, ದೇಶ ಬದಲಾವಣೆಯತ್ತ ವಾಲುತ್ತಿರುವುದಕ್ಕೆ ಉದಾಹರಣೆ.

ದೀದಿ ಅಬ್ಬರ ಅಂತ್ಯ: ಪಶ್ಚಿಮ ಬಂಗಾಳದ ರಾಜಕೀಯ ಇತಿಹಾಸವೇ ನೆನಪಿಟ್ಟುಕೊಳ್ಳುವಂಥ ಹೊಸ ಕ್ರಾಂತಿಗೆ ಬಿಜೆಪಿ ಮುನ್ನುಡಿ ಬರೆದಿದೆ. 34 ವರ್ಷಗಳ ಎಡಪಂಥೀಯ ಆಡಳಿತವನ್ನು ಅಂತ್ಯಗೊಳಿಸಿದ್ದಲ್ಲದೇ, 'ನಾ ಮಾಟೇ ಶಾಸನ' ಎಂಬಂಥ ಸಿಎಂ ಮಮತಾ ಬ್ಯಾನರ್ಜಿಯ 15 ವರ್ಷಗಳ ಸುದೀರ್ಘ ಆಡಳಿತವೂ ಕೊನೆಗೊಂಡಿದೆ.

ಮಾಂ, ಮಾತೃಭೂಮಿ, ಔರ್ ಲೋಗ್' ಎನ್ನುತ್ತಲೇ ಬಂಗಾಳವನ್ನು ಹಿಡಿತದಲ್ಲಿಟ್ಟುಕೊಂಡಿದ್ದ ತೃಣಮೂಲ ಕಾಂಗ್ರೆಸ್ (ಟಿಎಂಸಿ) ವಿರುದ್ಧ ಪರಿವರ್ತನೆಯ ಗಾಳಿ ಬಲವಾಗಿಯೇ ಬೀಸಿದೆ.

→ 11

ಕೇರಳದಲ್ಲಿ ಎಡಪಂಥೀಯರಿಗೆ ಶಾಕ್!

ಚುನಾವಣೆ ಫಲಿತಾಂಶವು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ನೇತೃತ್ವದ ಎಡರಂಗದ ಮೈತ್ರಿಕೂಟಕ್ಕೆ ಭಾರಿ ಆಘಾತ ನೀಡಿದೆ. ಆಡಳಿತ ವಿರೋಧಿ ಅಲೆಯಲ್ಲಿ ಎಲ್‌ಡಿಎಫ್ ಕೊಚ್ಚಿ ಹೋಗಿದೆ. ಉದ್ಯೋಗಾವಕಾಶಗಳಿಲ್ಲದೇ ನಲುಗಿದ ಯುವ ಸಮೂಹ, ಕಾಂಗ್ರೆಸ್ ನೇತೃತ್ವದ ಯುಡಿಎಫ್‌ಗೆ ಜೈ ಎಂದಿದೆ. ಹತ್ತು ವರ್ಷದ ಎಲ್‌ಡಿಎಫ್ ಆಡಳಿತದ ನಂತರ ಕೇರಳ ಜನರು, ಈ ಬಾರಿ ಬದಲಾವಣೆಗೆ ಮತ ಹಾಕಿದ್ದಾರೆ. ಈ ಬಾರಿಯೂ ಬಿಜೆಪಿಯ ಅಧಿಕಾರದ ಕನಸು ನನಸಾಗದಿದ್ದರೂ, ಪಕ್ಷದ ನೆಲಮಟ್ಟದ ಬೇರು ಗಟ್ಟಿಯಾಗುತ್ತಿದೆ. ಮತ್ತೊಂದು ಗಮನಾರ್ಹ ವಿಷಯ, ಎಲ್‌ಡಿಎಫ್‌ಗೆ ಬಂಡಾಯ ನಾಯಕರೇ ಪೆಟ್ಟು ಕೊಟ್ಟಿರುವುದು. ಕಾಂಗ್ರೆಸ್ ನೇತೃತ್ವದಲ್ಲಿ ಯುಡಿಎಫ್ ಬೆಂಬಲ ಪಡೆದ ಹಿರಿಯ ನಾಯಕ ಸುಧಾಕರನ್ ಸೇರಿ ಹಲವು ನಾಯಕರು ಪಿಣ ರಾಯಿ ವಿಜಯ್ ವಿರುದ್ಧ ಬಂಡೆದ್ದು ಕಣಕ್ಕಿಳಿದಿದ್ದು, ಎಲ್‌ಡಿಎಫ್‌ಗೆ ಬಿಸಿತುಪ್ಪವೇ ಆಯ್ತು.

ರಾಜ್ಯದಲ್ಲಿ ಗೆಲುವಿನ ದಡ ಸೇರಿದ ಕಾಂಗ್ರೆಸ್ ಕಲಿಗಳು

ಬೆಂಗಳೂರು: ಹಾಲಿ ಶಾಸಕರ ನಿಧನದಿಂದ ಕರ್ನಾಟಕದಲ್ಲಿ ತೆರವಾಗಿದ್ದ 2 ಕ್ಷೇತ್ರಗಳಿಗೆ ನಡೆದ ಉಪಚುನಾವಣೆಯಲ್ಲಿ, ಪಕ್ಷದ ಅಭ್ಯರ್ಥಿ ಗಳನ್ನೇ ಗೆಲ್ಲಿಸಿಕೊಳ್ಳುವ ಮೂಲಕ ಕಾಂಗ್ರೆಸ್ ನಿರಾಳಗೊಂಡಿದೆ. ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ ತೆರವಾಗಿದ್ದ ದಾವಣಗೆರೆ ದಕ್ಷಿಣ ಹಾಗೂ ಎಚ್.ವೈ. ಮೇಟಿ ಅವರ ನಿಧನದಿಂದ ತೆರವಾಗಿದ್ದ ಬಾಗಲಕೋಟೆ ಕ್ಷೇತ್ರಕ್ಕೆ ನಡೆದ ಉಪಚುನಾವಣೆಯಲ್ಲಿ, ಆಂತರಿಕ ಗೊಂದಲದ ಹೊರತಾಗಿಯೂ ಎರಡೂ ಕ್ಷೇತ್ರದಲ್ಲಿ ಗೆಲುವಿನ ನಗೆಯನ್ನು ಕಾಂಗ್ರೆಸ್ ಬೀರಿದೆ.

ದಾವಣಗೆರೆಯಲ್ಲಿ ಶಾಮನೂರು ಮೊಮ್ಮಗ ಸಮರ್ಥ್ ಗೆಲುವು ಸಾಧಿಸಿದ್ದರೆ, ಬಾಗಲಕೋಟೆಯಲ್ಲಿ ಎಚ್.ವೈ.ಮೇಟಿ ಮಗ ಉಮೇಶ್ ಮೇಟಿ ಗೆಲುವು ಸಾಧಿಸಿದ್ದಾರೆ. ದಾವಣಗೆರೆ ದಕ್ಷಿಣದಲ್ಲಿ ಮುಸ್ಲಿಂ ಸಮುದಾಯದ ತೀವ್ರ ಬಂಡಾಯದ ಹೊರತಾಗಿಯೂ ಸಮರ್ಥ್ ಅವರನ್ನು ಗೆಲ್ಲಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ.

ದಾವಣಗೆರೆ

ಸಮರ್ಥ ಶಾಮನೂರು (ಕಾಂಗ್ರೆಸ್) **69,578**

ಶ್ರೀನಿವಾಸ್ ದಾಸ್ ಕರಿಯಪ್ಪ (ಬಿಜೆಪಿ) **63,870** ಮತಗಳು

ಅಂತರ: **5,708** ಮತಗಳು

ಬಾಗಲಕೋಟೆ

ಉಮೇಶ್ ಮೇಟಿ (ಕಾಂಗ್ರೆಸ್) **98.919**

ವೀರಣ್ಣ ಚರಂತಿಮಠ (ಬಿಜೆಪಿ) **76587** ಮತಗಳು

ಅಂತರ: **22,332** ಮತಗಳು

ಉಪಚುನಾವಣೆಯಲ್ಲಿ ಗೆದ್ದ ಸರಕಾರ

ದಾವಣಗೆರೆ ದಕ್ಷಿಣದಲ್ಲಿ ನಿರೀಕ್ಷೆಗೂ ಮೀರಿದ ಅಂತರ | ಆಡಳಿತ ವಿರೋಧಿ ಅಲೆಯಿಲ್ಲವೆಂದು ಬೆನ್ನುತಟ್ಟಿಕೊಂಡ ಕೈ

ದಾವಣಗೆರೆ–ಬಾಗಲಕೋಟೆ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಜಯಗಳಿಸಿದ ಹಿನ್ನೆಲೆಯಲ್ಲಿ ಪಕ್ಷದ ಶಾಸಕರಾದ ರಿಜ್ವಾನ್ ಅರ್ಷದ್ ಮತ್ತು ವಿಧಾನ ಪರಿಷತ್ ಮುಖ್ಯ ಸಚೇತಕರಾದ ಸಲೀಂ ಅಹ್ಮದ್ ಅವರು ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಸಿಹಿ ತಿನ್ನಿಸಿ ಸಂಭ್ರಮಿಸಿದರು.

ಬೆಂಗಳೂರು: ಆಡಳಿತರೂಢ ಕಾಂಗ್ರೆಸ್‌ಗೆ ಪ್ರತಿಷ್ಠೆಯ ಕಣವಾಗಿದ್ದ ಎರಡು ಕ್ಷೇತ್ರಗಳ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆದ್ದು ಬೀಗುವ ಮೂಲಕ ರಾಜ್ಯದಲ್ಲಿ 'ಆಡಳಿತ ವಿರೋಧಿ ಅಲೆಯಿಲ್ಲ ಎನ್ನುವ ಸಂದೇಶ ರವಾನಿಸುವ ಪ್ರಯತ್ನ ಮಾಡಿದೆ.

ಚುನಾವಣೆ ಘೋಷಣೆಯಾದಾಗ ಎರಡೂ ಕ್ಷೇತ್ರದಲ್ಲಿದ್ದ ಗೊಂದಲದ ನಡುವೆಯೂ, ಬಾಗಲಕೋಟೆಯಲ್ಲಿ ಮೇಟಿ ಪುತ್ರ, ಉಮೇಶ್ ಮೇಟಿ ಹಾಗೂ ದಾವಣಗೆರೆ ದಕ್ಷಿಣದಲ್ಲಿ ಶಾಮನೂರು ಶಿವಶಂಕರಪ್ಪ ಮೊಮ್ಮಗ, ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಪುತ್ರ ಸಮರ್ಥ್ ಶಾಮನೂರು ಗೆಲುವಿನ ನಗೆ ಬೀರಿದ್ದಾರೆ.

2023ರ ವಿಧಾನಸಭಾ ಚುನಾವಣೆಯಲ್ಲಿ ದಾವಣಗೆರೆ ದಕ್ಷಿಣದಿಂದ ಗೆಲುವು ಸಾಧಿಸಿದ್ದ ಶಾಮನೂರು ಶಿವಶಂಕರಪ್ಪ ಹಾಗೂ ಬಾಗಲಕೋಟೆಯಿಂದ ಗೆಲುವು ಸಾಧಿಸಿದ್ದ ಎಚ್.ವೈ. ಮೇಟಿ ನಿಧನದಿಂದ ತೆರವಾಗಿದ್ದ ಶಾಸಕ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವು ಸಾಧಿಸುವ ಮೂಲಕ ಸಂಖ್ಯಾಬಲ ಕುಗ್ಗದಂತೆ ನೋಡಿಕೊಂಡಿದ್ದಾರೆ. ಉಪಚುನಾವಣೆ ನಡೆದ ಎರಡು ಕ್ಷೇತ್ರದ ಪೈಕಿ ಒಂದರಲ್ಲಿ ಗೆಲ್ಲುವ ಮೂಲಕ ಕಾಂಗ್ರೆಸ್ ಸರಕಾರದ ವಿರುದ್ಧ ಆಡಳಿತ ವಿರೋಧಿ ಅಲೆಯಿದೆ ಎನ್ನುವ ಸಂದೇಶ ರವಾನಿಸಲು ಪ್ರಯತ್ನಿಸಿದ್ದ ಬಿಜೆಪಿಗೆ ಯಶಸ್ಸು ಸಿಕ್ಕಿಲ್ಲ.

ಕೈ ಅಂತರ ತಗ್ಗಿಸಿದ ಎಸ್‌ಡಿಪಿಐ: ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಗೆಲುವು ಕಷ್ಟ ಎನ್ನುವ ಮಾತುಗಳು ಕೇಳಿಬಂದಿತ್ತು. ಪ್ರಮುಖವಾಗಿ ಮುಸ್ಲಿಂ ಪ್ರಾಬಲ್ಯ ವಿರುವ ಈ ಕ್ಷೇತ್ರದಲ್ಲಿ ಎಸ್‌ಡಿಪಿಐನಿಂದ ಅಫ್ಸರ್ ಕುಡ್ಲಿಪೇಟೆ ಸ್ಪರ್ಧಿಸಿದ್ದು ಹಾಗೂ ಬಂಡಾಯ ಅಭ್ಯರ್ಥಿಯಾಗಿ ಸಾದಿಕ್ ಪೈಲ್ವಾನ್ ಕಣದಲ್ಲಿ ಇದ್ದದ್ದರಿಂದ ಮತಗಳು ವಿಭಜನೆಯಾಗಬಹುದು ಎಂದು ಅಂದಾಜಿಸಲಾಗಿತ್ತು. ಆದರೆ ಚುನಾವಣೆಯಿಂದ ಹಿಂದೆ ಸರಿದಿದ್ದ ಸಾದಿಕ್ 47 ಮತ ಸೆಳೆದಿದ್ದರೆ, ಕುಡ್ಲಿಪೇಟೆ 18 ಸಾವಿರಕ್ಕೂ ಹೆಚ್ಚು ಮತ ಪಡೆದಿದ್ದಾರೆ. ಈ ಕಾರಣಕ್ಕೆ ಗೆಲುವಿನ ಅಂತರ 5708ಕ್ಕೆ ಇಳಿದಿದೆ ಎನ್ನಲಾಗುತ್ತಿದೆ.

ನಿರೀಕ್ಷಿತ ಫಲಿತಾಂಶ: ಬಿಜೆಪಿ

ಸಾಮಾನ್ಯವಾಗಿ ಉಪಚುನಾವಣೆಗಳಲ್ಲಿ ಆಡಳಿತಪಕ್ಷದ ಅಭ್ಯರ್ಥಿಗಳು ಅಥವಾ ಮೃತಪಟ್ಟ ಶಾಸಕರ ಕುಟುಂಬ ಸದಸ್ಯರು ಅನುಕಂಪದ ಅಲೆಯಲ್ಲಿ ಗೆಲುವು ಸಾಧಿಸುವುದು ಸಹಜ. ಆದರೆ ಈ ಬಾರಿ ದಾವಣಗೆರೆ ದಕ್ಷಿಣದಲ್ಲಿ ಆಗಿದ್ದ ಮುಸ್ಲಿಂ ದಂಗಲ್‌ನ ಲಾಭ ಪಡೆದು ಗೆಲ್ಲುವ ಸಣ್ಣ ಆಸೆಯನ್ನು ಬಿಜೆಪಿ ಹೊಂದಿತ್ತು. ಬಾಗಲಕೋಟೆಯಲ್ಲಿ ಆರಂಭದಲ್ಲಿ ಬಿಜೆಪಿ ಪರವಾಗಿದ್ದರೂ, ಕೊನೆಯ ಕ್ಷಣದಲ್ಲಿ ಕಾಂಗ್ರೆಸ್ 'ಎಲ್ಲ ಶಕ್ತಿ' ಪ್ರಯೋಗಿಸಿತ್ತು. ಆದ್ದರಿಂದ ಈ ಎರಡೂ ಕ್ಷೇತ್ರದಲ್ಲಿ ಗೆಲುವುದು ಕಷ್ಟ ಎನ್ನುವ ಮನಸ್ಥಿತಿಯಲ್ಲಿಯೇ ಇದಿದ್ದರಿಂದ ಉಪಸಮರದ ಫಲಿತಾಂಶವನ್ನು ಹೆಚ್ಚು ತಲೆಕೆಡಿಸಿಕೊಂಡಂತೆ ಕಾಣುತ್ತಿಲ್ಲ. ಈ ಎರಡು ಕ್ಷೇತ್ರದ ಸೋಲಿನ ಬದಲು ಪಶ್ಚಿಮ ಬಂಗಾಳ, ಅಸ್ಸಾಂ ರಾಜ್ಯದ ಗೆಲುವಿನ ಸಂಭ್ರಮದಲ್ಲಿ ರಾಜ್ಯ ಬಿಜೆಪಿ ನಾಯಕರು ಮುಳುಗಿದ್ದಾರೆ.

ಸಚಿವ ಜಮೀರ್ ಅಹಮದ್ ನಿರಾಳ

ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಸಮರದಲ್ಲಿ ಕಾಂಗ್ರೆಸ್ ಮುಸ್ಲಿಂ ನಾಯಕರು ಬಂಡಾಯ ಅಭ್ಯರ್ಥಿಗೆ ಸಹಕರಿಸಿದ್ದಾರೆ ಎನ್ನುವ ಆರೋಪ ಹೈಕಮಾಂಡ್ ತನಕ ಹೋಗಿತ್ತು. ಇದೇ ವಿಷಯಕ್ಕೆ ಅಬ್ದುಲ್ ಜಬ್ಬಾರ್ ಹಾಗೂ ನಸೀರ್ ಅಹ್ಮದ್ ತಮ್ಮ ಸ್ಥಾನವನ್ನು ಕಳೆದು ಕೊಳ್ಳಬೇಕಾಯಿತು. ಒಂದು ವೇಳೆ ದಾವಣಗೆರೆ ದಕ್ಷಿಣದಲ್ಲಿ ಸಮರ್ಥ್ ಸೋಲನುಭವಿಸಿದ್ದರೆ ಸಚಿವ ಜಮೀರ್ ಅವರ ಸ್ಥಾನಕ್ಕೂ ಕುತ್ತು ಎನ್ನುವ ಮಾತುಗಳಿತ್ತು. ಆದರೆ ಸಮರ್ಥ್ ಗೆಲುವು ಸಾಧಿಸುವ ಮೂಲಕ ಜಮೀರ್ ಸ್ಥಾನ ಭದ್ರವಾಗಿದೆ ಎನ್ನುವ ಮಾತುಗಳು ಕೇಳಿಬರುತ್ತಿದೆ.

ಫಲಿತಾಂಶ

ದಾವಣಗೆರೆ ದಕ್ಷಿಣ	
ಸಮರ್ಥ್ ಶಾಮನೂರು (ಕಾಂಗ್ರೆಸ್)	69,578
ಶ್ರೀನಿವಾಸ್ ದಾಸಕರಿಯಪ್ಪ (ಬಿಜೆಪಿ)	63,870
ಅಫ್ಸರ್ ಕುಡ್ಲಿಪೇಟೆ (ಎಸ್‌ಡಿಪಿಐ)	18,975
ನೋಟಾ	511
ಗೆಲುವಿನ ಅಂತರ	5,708
ಬಾಗಲಕೋಟೆ	
ಉಮೇಶ್ ಮೇಟಿ (ಕಾಂಗ್ರೆಸ್)	98,919
ವೀರಣ್ಣ ಚರಂತಿಮಠ(ಬಿಜೆಪಿ)	76,587
ನೋಟಾ	1,458
ಗೆಲುವಿನ ಅಂತರ	22,332

ದೆಹಲಿಯಲ್ಲಿ ಪರೇಡ್ ನಡೆಸಲು ಸಿದ್ಧತೆ

ಪಂಚರಾಜ್ಯ ಚುನಾವಣಾ ಫಲಿತಾಂಶದ ಬೆನ್ನಲ್ಲೇ, ರಾಜ್ಯ ಕಾಂಗ್ರೆಸ್‌ನಲ್ಲಿ ದೆಹಲಿ ಪರೇಡ್‌ಗೆ ಸಚಿವಾಕಾಂಕ್ಷಿಗಳು ಸಿದ್ಧತೆ ನಡೆಸಿಕೊಂಡಿದ್ದಾರೆ. ಪಂಚರಾಜ್ಯ ಚುನಾವಣಾ ಬಳಿಕ ದೆಹಲಿಗೆ ಬನ್ನಿ ಎನ್ನುವ ಸಂದೇಶವನ್ನು ಖರ್ಗೆ ಹಿರಿಯ ಶಾಸಕರಿಗೆ ನೀಡಿದ್ದರು. ಆದ್ದರಿಂದ ಇನ್ನೆರಡು ದಿನದಲ್ಲಿ 50ಕ್ಕೂ ಹೆಚ್ಚು ಸಚಿವಾಕಾಂಕ್ಷಿಗಳು ದೆಹಲಿ ಪರೇಡ್ ನಡೆಸಲಿದ್ದಾರೆ ಎನ್ನಲಾಗಿದೆ. ಇದರೊಂದಿಗೆ ಮೇ.9ರ ಬಳಿಕ ಸಿಎಂ ಸಿದ್ದರಾಮಯ್ಯ ದೆಹಲಿಗೆ ಹೋಗಿ ಸಚಿವ ಸಂಪುಟಪುನಾರಚನೆಗೆ ಒತ್ತಡ ಹೇರುವ ಸಾಧ್ಯತೆಯಿದೆ ಎಂದು ಹೇಳಲಾಗಿದೆ.

ಗೆದ್ದ ಪ್ರಮುಖರು

ಉಮೇಶ್ ಮೇಟಿ

ಪಕ್ಷ: ಕಾಂಗ್ರೆಸ್
ಕ್ಷೇತ್ರ: ಬಾಗಲಕೋಟೆ
ಎದುರಾಳಿ: ವೀರಣ್ಣ ಚರಂತಿಮಠ

ಸಮರ್ಥ್ ಶಾಮನೂರು



ಪಕ್ಷ: ಕಾಂಗ್ರೆಸ್
ಕ್ಷೇತ್ರ: ದಾವಣಗೆರೆ
ಎದುರಾಳಿ: ಶ್ರೀನಿವಾಸ್ ದಾಸ ಕರಿಯಪ್ಪ

ಸೋತ ಪ್ರಮುಖರು

ವೀರಣ್ಣ ಚರಂತಿಮಠ

ಪಕ್ಷ: ಬಿಜೆಪಿ
ಕ್ಷೇತ್ರ: ಬಾಗಲಕೋಟೆ
ಎದುರಾಳಿ: ಉಮೇಶ್ ಮೇಟಿ

ಶ್ರೀನಿವಾಸ್ ದಾಸ ಕರಿಯಪ್ಪ



ಪಕ್ಷ: ಬಿಜೆಪಿ
ಕ್ಷೇತ್ರ: ದಾವಣಗೆರೆ
ಎದುರಾಳಿ: ಸಮರ್ಥ್ ಶಾಮನೂರು

ಕೆಪಿಸಿಸಿ ಕಚೇರಿ ಎದುರು ಕಾಂಗ್ರೆಸ್ ಕಾರ್ಯಕರ್ತರಿಂದ ಸಂಭ್ರಮಾಚರಣೆ

ಗೆಲುವಿಗೆ ಕಾರಣ

1. ಸಿದ್ದರಾಮಯ್ಯ ಆಪ್ತ ಸ್ನೇಹಿತ ದಿ. ಎಚ್.ವೈ.ಮೇಟಿ ಕುಟುಂಬದ ಮೇಲೆ ಅನುಕಂಪದ ಅಲೆ
2. ಮೇಟಿ ಕುಟುಂಬದ ಒಳ ಜಗಳ ಶಮನಗೊಳಿಸಿ ಎಲ್ಲರನ್ನೂ ಒಗ್ಗೂಡಿಸಿದ್ದು
3. ಬಾಗಲಕೋಟೆ ಮತಕ್ಷೇತ್ರದ ಗ್ರಾಮೀಣ ಭಾಗದಲ್ಲಿ ಸಿಎಂ ಸಿದ್ದರಾಮಯ್ಯನವರು ಪ್ರಚಾರ ಕೈಗೊಂಡಿದ್ದು
4. ದಾವಣಗೆರೆ ದಕ್ಷಿಣ ಮತಕ್ಷೇತ್ರದಲ್ಲಿ ಶಾಮನೂರು ಶಿವಶಂಕರಪ್ಪ ನಿಧನದ ಅನುಕಂಪದ ಅಲೆ
5. ರಾಜ್ಯದಲ್ಲಿ ಆಡಳಿತದಲ್ಲಿ ಕಾಂಗ್ರೆಸ್ ಪಕ್ಷ ಇರುವುದು
6. ತಂದೆ ಪ್ರಭಾವಿ ಸಚಿವ, ತಾಯಿ ಸಂಸದೆ ಆಗಿ ಕ್ಷೇತ್ರದಲ್ಲಿ ಬಿಗಿಪಟ್ಟು

ಸೋಲಿಗೆ ಕಾರಣ

1. ಬಿಜೆಪಿ ನಾಯಕರು ವೈಷಮ್ಯ ಬದಿಗಿಟ್ಟು ಚುನಾವಣೆ ನಡೆಸದಿರುವುದು
2. ಕಾಂಗ್ರೆಸ್ ಸರಕಾರದ ವೈಫಲ್ಯಗಳನ್ನು ಜನರ ಮುಂದಿಡಲು ವಿಫಲರಾಗಿದ್ದು
3. ಪ್ರಚಾರದ ಸಂದರ್ಭದಲ್ಲಿ ಕೆಲ ಸಮುದಾಯದ ಕುರಿತು ಬಿಜೆಪಿ ನಾಯಕರು ನಾಲಿಗೆ ಹರಿಬಿಟ್ಟದ್ದು
4. ದಾವಣಗೆರೆ ದಕ್ಷಿಣದಲ್ಲಿ ಒಂದು ಬಾರಿಯೂ ಬಿಜೆಪಿ ಗೆಲ್ಲದಿರುವುದು
5. ಬಿಜೆಪಿ ನಾಯಕರ ನಡುವಿನ ಆಂತರಿಕ ಕಲಹ ತಣಿಯದಿರುವುದು
6. 284 ಬೂತ್‌ಗಳಲ್ಲಿ ಬಿಜೆಪಿಗೆ 62 ಬೂತ್ ಗಳಲ್ಲಿ ನೆಲೆಯೇ ಇಲ್ಲದಿರುವುದು

ಎನ್‌ಡಿಎ ಅಭೂತಪೂರ್ವ ಗೆಲುವು, ಪ್ರಧಾನಿ ಮೋದಿ ಅವರ ದೂರದೃಷ್ಟಿಯ ನಾಯಕತ್ವ ಮತ್ತು ವಿಕಸಿತ ಭಾರತಕ್ಕಾಗಿ ಅವರ ಪರಿವರ್ತನಾ ಪ್ರೇರಿತ ಕಾರ್ಯಸೂಚಿಯಲ್ಲಿ ಜನರು ಹೊಂದಿರುವ ನಿರಂತರ ನಂಬಿಕೆಯ ದೃಢೀಕೃತ ಫಲಿತಾಂಶವಾಗಿದೆ.

ಎಚ್.ಡಿ.ಕುಮಾರಸ್ವಾಮಿ
ಕೇಂದ್ರ ಸಚಿವ



ಕೇರಳದಲ್ಲಿ ನಿಜವಾದ ಕಲ್ಯಾಣ ಮತ್ತು ಆರ್ಥಿಕ ಸಬಲೀಕರಣ ಈಗ ಪ್ರಾರಂಭವಾಗಿದೆ. ಕಾಂಗ್ರೆಸ್ ಮತ್ತು ಯುಡಿಎಫ್ ಮೇಲೆ ನಂಬಿಕೆ ಇಟ್ಟದ್ದಕ್ಕಾಗಿ ಕೇರಳದ ಪ್ರತಿ ಮತದಾರರಿಗೂ ಕಾಂಗ್ರೆಸ್ ಪರವಾಗಿ ನಾನು ಹೃತ್ಪೂರ್ವಕ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಮಲ್ಲಿಕಾರ್ಜುನ ಖರ್ಗೆ
ಎಐಸಿಸಿ ಅಧ್ಯಕ್ಷ

ಪಂಚರಾಜ್ಯಗಳ ಚುನಾವಣೆಯಲ್ಲಿ ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿಯಲ್ಲಿ ಬಿಜೆಪಿ ಜಯಭೇರಿ ಬಾರಿಸಿರುವುದಕ್ಕೆ ಆ ಪಕ್ಷವನ್ನು ಅಭಿನಂದಿಸುತ್ತೇನೆ. ಇದು ಪ್ರಧಾನಿ ನರೇಂದ್ರ ಮೋದಿಯವರ ಜನಪ್ರಿಯತೆ, ಅಮಿತ್ ಶಾ ಕಾರ್ಯತಂತ್ರದ ಫಲ.

ಎಚ್.ಡಿ. ದೇವೇಗೌಡ
ಮಾಜಿ ಪ್ರಧಾನಿ

ನೆಚ್ಚಿನ ಪ್ರಧಾನಿ ಮೋದಿಯವರ ವಿಕಸಿತ ಭಾರತದ ಪರಿಕಲ್ಪನೆಯಲ್ಲಿ ವಿಶ್ವಾಸ ವಿಟ್ಟು ಆಶೀರ್ವದಿಸಿದ ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ಪುದುಚೇರಿಯ ಜನರಿಗೆ ಹೃತ್ಪೂರ್ವಕ ಕೃತಜ್ಞತೆಗಳು. ಈ ಜನಾದೇಶ ಪ್ರಧಾನಿ ನರೇಂದ್ರ ಮೋದಿಯವರ ಬಲಿಷ್ಠ ನಾಯಕತ್ವಕ್ಕೆ ಮತ್ತೊಂದು ಸಾಕ್ಷಿಯಾಗಿದೆ.

ಬಿ.ಎಸ್. ಯಡಿಯೂರಪ್ಪ
ಮಾಜಿ ಮುಖ್ಯಮಂತ್ರಿ

ಅಂಗ, ಕಳಿಂಗ ಮತ್ತು ಈಗ, ಬಂಗಾಳದಲ್ಲಿ ವಿಜಯೋತ್ಸವದಿಂದ ಕಮಲ ಅರಳಿದೆ. ಜನಾದೇಶವು ಪಶ್ಚಿಮ ಬಂಗಾಳದಲ್ಲಿ ದಬ್ಬಾಳಿಕೆಯ ತೃಣಮೂಲ ಆಡಳಿತವನ್ನು ನಾಶಪಡಿಸಿದೆ. ಈ ಗೆಲುವು ಭಾರತೀಯ ಸಂಘದ ಸ್ಥಾಪಕ ಡಾ. ಶ್ಯಾಮ ಪ್ರಸಾದ್ ಮುಖರ್ಜಿ ಅವರಿಗೆ ಸಲ್ಲಿಸುವ ಗೌರವವಾಗಿದೆ.

ಬಿ.ವೈ. ವಿಜಯೇಂದ್ರ
ಬಿಜೆಪಿ ರಾಜ್ಯಾಧ್ಯಕ್ಷ

ಉಪ ಕಣದಲ್ಲಿ ಸಿಎಂ ಕಮಾಲ್ | ಕಾಂಗ್ರೆಸ್ ಕೈ ಹಿಡಿದ ಸಚಿವ ಸತೀಶ್ ಅಹಿಂದ ಅಸ್ತ್ರ

ಮೇಟಿ ಬಿಡದ ಮತದಾರ, ವೀರಣ್ಣ ಹರೋಹರ

ವಿನಾಯಕ ಮಠಪತಿ ಬಾಗಲಕೋಟೆ

ಒಂದು ಕಡೆ ಆಪ್ತ ಸ್ನೇಹಿತನ ಪುತ್ರ ಚುನಾವಣಾ ಕಣದಲ್ಲಿ ಮತ್ತೊಂದೆಡೆ ತಮ್ಮದೇ ಕುರುಬ ಸಮುದಾಯದ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳುವ ಒತ್ತಡ, ಇವೆರಡನ್ನು ಪ್ರತಿಷ್ಠೆಯಾಗಿ ಸ್ವೀಕರಿಸಿದ್ದ ಸಿಎಂ ಸಿದ್ದರಾಮಯ್ಯನ ತಮ್ಮ ಸಂಪೂರ್ಣ ಶಕ್ತಿಯನ್ನು ವಿನಿಯೋಗಿಸುವ ಮೂಲಕ ಉಮೇಶ್ ಮೇಟಿ ಅವರನ್ನು ಗೆಲ್ಲಿಸುವಲ್ಲಿ ಯಶಸ್ವಿಯಾಗಿದ್ದಾರೆ. ಜತೆಗೆ ಅಹಿಂದ ವರ್ಗ ತಮ್ಮ ಬೆನ್ನಿಗೆ ಈಗಲೂ ಗಟ್ಟಿಯಾಗಿದೆ ಎಂಬುದನ್ನು ತಮ್ಮ ರಾಜಕೀಯ ಎದುರಾಳಿಗಳಿಗೆ ತಿಳಿಸುವಲ್ಲಿ ಸಿಎಂ ಸಿದ್ದರಾಮಯ್ಯ ಸಫಲರಾಗಿದ್ದಾರೆ.

ದಿ. ಎಚ್.ವೈ ಮೇಟಿ ನಿಧನದಿಂದ ತೆರವಾದ ಬಾಗಲಕೋಟೆ ಕ್ಷೇತ್ರಕ್ಕೆ ನಡೆದ ಉಪ ಚುನಾವಣೆ ಸಾಕಷ್ಟು ಕುತೂಹಲ ಮೂಡಿಸಿತ್ತು. ಆರಂಭದಲ್ಲಿ ಕೈ ಟಿಕೆಟ್ ವಿಚಾರವಾಗಿ ಮೇಟಿ ಕುಟುಂಬದಲ್ಲಿ ಉಂಟಾದ ಗೊಂದಲ ಕಾಂಗ್ರೆಸ್ ಗೆ ಕೊಂಚ ಹಿನ್ನಡೆ ಉಂಟುಮಾಡಿದ್ದರೂ ಕೊನೆಗೆ ಸಿಎಂ ಸಿದ್ದರಾಮಯ್ಯನವರ ಸಂಧಾನದ ಫಲವಾಗಿ ಉಮೇಶ್ ಮೇಟಿಯನ್ನು ಅಭ್ಯರ್ಥಿಯನ್ನಾಗಿ ಘೋಷಿಸಲಾಯಿತು. ಜತೆಗೆ ಖುದ್ದಾಗಿ ಸಿಎಂ ಸಿದ್ದರಾಮಯ್ಯ ಬಾಗಲಕೋಟೆ ಮತಕ್ಷೇತ್ರದ ಅಭ್ಯರ್ಥಿ ಪರವಾಗಿ ಹಳ್ಳಿ, ಹಳ್ಳಿಯಲ್ಲೂ ಪ್ರಚಾರ ಮಾಡಿದ್ದರ ಕಾರಣಕ್ಕೆ ಕಾಂಗ್ರೆಸ್ 20 ಸಾವಿರಕ್ಕೂ ಅಧಿಕ ಮತಗಳ ಅಂತರದಿಂದ ಭರ್ಜರಿ ಗೆಲುವು ಸಾಧಿಸಿದೆ.

ಇತ್ತ ಬಿಜೆಪಿ ಸಂಘಟಿತ ಪ್ರಯತ್ನ ನಡೆಸಿದರೂ ಆಡಳಿತಾರೂಢ ಪಕ್ಷದ ನಾಯಕರ ವೇಗ ತಡೆಯುವಲ್ಲಿ ವಿಫಲವಾಗಿದೆ. ರಾಜ್ಯ ಬಿಜೆಪಿ ಘಟಾನುಘಟಿ ನಾಯಕರ ದಂಡು ಬಾಗಲಕೋಟೆಯಲ್ಲಿ ಬೀಡುಬಿಟ್ಟು ಪ್ರಚಾರ ನಡೆಸಿದರು. ತಮ್ಮ ಅಭ್ಯರ್ಥಿ ವೀರಣ್ಣ ಚರಂತಿಮಠ ಅವರನ್ನು ಗೆಲ್ಲಿಸುವಲ್ಲಿ ಸಫಲವಾಗಿಲ್ಲ. ಜತೆಗೆ ಬಿಜೆಪಿಯಿಂದ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅಬ್ಬರದ ಪ್ರಚಾರ ನಡೆಸಿದರೂ ಬಾಗಲಕೋಟೆಯಲ್ಲಿ ಯಾವುದೇ ಪ್ರಯೋಜನವಾಗಿಲ್ಲ.

ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ್ ಮೇಟಿ ಗೆಲುವು ಸಾಧಿಸುತ್ತಿದ್ದಂತೆ ಕೈ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು.

ಕಲ್ಲು ತೂರಾಟ ಘಟನೆ ಪರಿಣಾಮ ಶೂನ್ಯ: ಶಿವಾಜಿ ಮೆರವಣಿಗೆ ಮೇಲೆ ಕಲ್ಲು ತೂರಾಟ ಪ್ರಕರಣ ಉಪ ಚುನಾವಣೆಯಲ್ಲಿ ಬಿಜೆಪಿಗೆ ಲಾಭವಾಗುತ್ತದೆ ಎಂಬ ನಿರೀಕ್ಷೆ ಹಲವರಲ್ಲಿತ್ತು. ಇದಕ್ಕೆ ಪೂರಕವೆಂಬತೆ ಘಟನೆ ನಡೆದ ಬಾಗಲಕೋಟೆ ನಗರದ ಪ್ರದೇಶದಲ್ಲಿ ಬಿಜೆಪಿಗೆ ಲೀಟ್ ಸಿಕ್ಕಿದೆ. ಆದರೆ ಬಿಜೆಪಿ ನಾಯಕರು ಅಂದುಕೊಂಡ ಪ್ರಮಾಣದಲ್ಲಿ ಮತದಾರು ಕಮಲ ದತ್ತ ಒಲವು ತೋರಿಸಿಲ್ಲ. ಜೊತೆಗೆ ಬಾಗಲಕೋಟೆ ಗ್ರಾಮೀಣ ಭಾಗದಲ್ಲಿ ಕಾಂಗ್ರೆಸ್ ಗೆ ಭರ್ಜರಿ ಬೆಂಬಲ ವ್ಯಕ್ತವಾದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ್ ಮೇಟಿ 21,861 ಮತಗಳ ಬೃಹತ್ ಅಂತರದ ಗೆಲುವು ಸಾಧಿಸಲು ಸಹಕಾರಿಯಾಗಿದೆ.

ಸಿ.ಸಿ.ಪಾಟೀಲ್ ಹೇಳಿಕೆಯಿಂದ ಬಿಜೆಪಿ ಅಭ್ಯರ್ಥಿಗೆ ನಷ್ಟ

ಬಾಗಲಕೋಟೆ ಉಪ ಚುನಾವಣೆ ಸಂದರ್ಭದಲ್ಲಿ ಪ್ರಚಾರ ಸಭೆ ಉದ್ದೇಶಿಸಿ ಮಾತನಾಡುವ ಸಂದರ್ಭದಲ್ಲಿ ಶಾಸಕ ಸಿ.ಸಿ ಪಾಟೀಲ್ ಅವರು ಕುರುಬ ಹಾಗೂ ಮುಸ್ಲಿಂ ಸಮುದಾಯದ ಕುರಿತು ಅನುಚಿತ ಪದಬಳಕೆ ಮಾಡಿ ಅವಹೇಳನಕಾರಿ ಹೇಳಿಕೆ ನೀಡಿದ್ದರು. ಈ ಹಿನ್ನೆಲೆಯಲ್ಲಿ ಹಾಲುಮತ ಸಮುದಾಯದ ಮುಖಂಡರು ಪ್ರತಿಭಟನೆ ನಡೆಸಿ ಸಿ.ಸಿ. ಪಾಟೀಲ್ ವಿರುದ್ಧ ಆಕ್ರೋಶ ಹೊರಹಾಕಿದ್ದರು. ಚುನಾವಣೆ ಸಂದರ್ಭದಲ್ಲಿ ತಮ್ಮ ಹೇಳಿಕೆಯಿಂದ ಸಾರ್ವಜನಿಕ ವಲಯದಲ್ಲಿ ಸಾಕಷ್ಟು ಆಕ್ರೋಶ ವ್ಯಕ್ತವಾದ ಹಿನ್ನೆಲೆಯಲ್ಲಿ ತಮ್ಮ ಹೇಳಿಕೆಗೆ ವಿಷಾದ ವ್ಯಕ್ತಪಡಿಸಿದ್ದ ಸಿ.ಸಿ ಪಾಟೀಲ್ ಹಾಲುಮತ ಹಾಗೂ ಮುಸ್ಲಿಂ ಸಮುದಾಯದ ಕ್ಷಮೆ ಕೇಳಿದರು. ಆದರೆ ಸಿ.ಸಿ. ಪಾಟೀಲ್ ಹೇಳಿಕೆಯನ್ನು ಪ್ರಚಾರದ ವೇಳೆ ಜನರ ಮುಂದಿಡುವ ಮೂಲಕ ಕಾಂಗ್ರೆಸ್ ನಾಯಕರು ಇದರ ಲಾಭ ಪಡೆಯುವಲ್ಲಿ ಯಶಸ್ವಿಯಾದರು.

ಫಲ ಕೊಟ್ಟ ಗೋಕಾಕ್ ಸಾಹುಕಾರ್ ಅಹಿಂದ ಅಸ್ತ್ರ

ಬಾಗಲಕೋಟೆ ಮತಕ್ಷೇತ್ರದಲ್ಲಿ ಒಂದು ಲಕ್ಷಕ್ಕೂ ಅಧಿಕ ಅಹಿಂದ ವರ್ಗದ ಮತದಾರರಿದ್ದು ಭಾಗಶಃ ಇವರನ್ನು ಕಾಂಗ್ರೆಸ್ ನತ್ತ ಸೆಳೆಯುವಲ್ಲಿ ಸಚಿವ ಸತೀಶ್ ಜಾರಕಿಹೊಳಿ ಪಾತ್ರ ಬಹುಮುಖ್ಯ ವಾಗಿದೆ. ಬಾಗಲಕೋಟೆ ಕಾಂಗ್ರೆಸ್ ಚುನಾವಣಾ ಉಸ್ತುವಾರಿಯಾಗಿದ್ದ ಸತೀಶ್ ಜಾರಕಿಹೊಳಿ ಬಾಗಲಕೋಟೆ ಮತಕ್ಷೇತ್ರದಲ್ಲಿರುವ ಅಹಿಂದ ವರ್ಗದ ಮುಖಂಡರನ್ನು ಖುದ್ದಾಗಿ ಭೇಟಿ ಮಾಡಿ ಅವರನ್ನು ವಿಶ್ವಾಸಕ್ಕೆ ಪಡೆದುಕೊಂಡರು. ಜತೆಗೆ ಎಲ್ಲರಿಗೂ ಸ್ಥಳೀಯ ಮಟ್ಟದಲ್ಲಿ ಜವಾಬ್ದಾರಿ ನೀಡಿ ಪ್ರತಿ ಮತವೂ ಕಾಂಗ್ರೆಸ್ ಪಕ್ಷಕ್ಕೆ ಬರುವಂತೆ ರಣತಂತ್ರ ಹೆಣೆಯುವಲ್ಲಿ ಯಶಸ್ವಿಯಾಗಿದ್ದಾರೆ. ಇವರ ಜತೆಗೆ ಸಚಿವರಾದ ಆರ್.ಬಿ ತಿಮ್ಮಾಪುರ, ಶಿವಾನಂದ ಪಾಟೀಲ್, ಎಂ.ಬಿ ಪಾಟೀಲ್, ಶಾಸಕ ವಿಜಯಾನಂದ ಕಾಶಪ್ಪನ್ನವರ ಸೇರಿ ಹಲವರು ಈ ಚುನಾವಣೆಯಲ್ಲಿ ಕೆಲಸ ಮಾಡಿದ್ದರ ಪರಿಣಾಮ ಕಾಂಗ್ರೆಸ್ ಇಷ್ಟೊಂದು ಬೃಹತ್ ಅಂತರ ಗೆಲುವು ಸಾಧಿಸುವಲ್ಲಿ ಯಶಸ್ವಿಯಾಗಿದೆ.

ದಕ್ಷಿಣಾಧಿಪತಿಯಾಗಿ ಸಮರ್ಥ್ ಶಾಮನೂರು | 'ಕೈ' ಬಿಡದ ಮತದಾರ ಪ್ರಭು

ಹಾವು, ಏಣಿ ಆಟಕ್ಕೆ ಸಿಕ್ಕ ಸಮರ್ಥ್ ಗೆಲುವು

ಗಣೇಶ್ ಕಮ್ಮಾಪುರ ದಾವಣಗೆರೆ

ರಾಜ್ಯ ರಾಜಕೀಯದಲ್ಲಿ ಭಾರೀ ಸಂಚಲನ ಸೃಷ್ಟಿಸಿದ್ದ ದಾವಣಗೆರೆ ದಕ್ಷಿಣ ವಿಧಾನ ಸಭಾ ಕ್ಷೇತ್ರದ ಉಪ ಚುನಾವಣೆಯ ಕದನದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಅವರು 69,578 ಮತ ಪಡೆಯುವ ಮೂಲಕ ಬಿಜೆಪಿ ಅಭ್ಯರ್ಥಿಯ ವಿರುದ್ಧ 5708 ಮತಗಳ ಅಂತರದ ಗೆಲವು ಸಾಧಿಸಿದ್ದಾರೆ.

ಬಿಜೆಪಿ ಅಭ್ಯರ್ಥಿ ಶ್ರೀನಿವಾಸ್ ದಾಸಕರಿಯಪ್ಪ 63,870 ಮತಗಳನ್ನು ಪಡೆದು ಕಾಂಗ್ರೆಸ್ ಅಭ್ಯರ್ಥಿ ವಿರುದ್ಧ ಪರಾಭವಗೊಂಡಿದ್ದಾರೆ. ಈ ಮೂಲಕ ದಾವಣಗೆರೆ ದಕ್ಷಿಣ ಮತ್ತೊಮ್ಮೆ ಕಾಂಗ್ರೆಸ್ ಭದ್ರ ಕೋಟೆ ಎಂದು ಸಾಬೀತಾಗಿದೆ. ಆದರೆ, ಕಳೆದ ಬಾರಿ 1700 ಮಾತ್ರ ಮತ ಪಡೆದಿದ್ದ ಎಸ್‌ಡಿಪಿಐ ಅಭ್ಯರ್ಥಿ ಈ ಬಾರಿ ಬರೋಬ್ಬರಿ 18,975 ಮತಗಳನ್ನು ಪಡೆದು 3ನೇ ಸ್ಥಾನಕ್ಕೆ ತಲುಪಿದೆ. ಈ ಮೂಲಕ ಕಾಂಗ್ರೆಸ್ ಗೆಲುವಿನ ಅಂತರ ಕಡಿಮೆಗೊಳ್ಳಲು ಕಾರಣರಾಗಿದ್ದಾರೆ. ನಗರದ ಹಳೇ ಪಿಬಿ ರಸ್ತೆಯ ಡಿಆರ್ ಆರ್ ಶಾಲೆಯಲ್ಲಿ ನಡೆದ ಮತ ಎಣಿಕೆಯಲ್ಲಿ ಸೋಮವಾರ ಮಧ್ಯಾಹ್ನ 3 ಗಂಟೆಯ ಹೊತ್ತಿಗೆ ಅಂತಿಮ ಸುತ್ತಿನ ಮತ ಎಣಿಕೆ ಕಾರ್ಯ ಮುಗಿದ ಬಳಿಕ ಅಧಿಕೃತವಾಗಿ ಫಲಿತಾಂಶವನ್ನು ಚುನಾವಣಾಧಿಕಾರಿ ಘೋಷಣೆ ಮಾಡಿದರು.

ತಗ್ಗಿದ ಅಂತರ: 2023ರಲ್ಲಿ ಕಾಂಗ್ರೆಸ್ ಅಭ್ಯರ್ಥಿ ಶಾಮನೂರು ಶಿವಶಂಕರಪ್ಪ ಅವರು 27,888 ಅಂತರದ ಮತಗಳ ಮೂಲಕ ಬಿಜೆಪಿ ಅಭ್ಯರ್ಥಿ ಮಣಿಸಿದ್ದರು. ಆದರೆ, ಈ ಬಾರಿ ಮುಸ್ಲಿಂರ ಟಿಕೆಟ್ ಬೇಡಿಕೆ, ಕುಟುಂಬ ರಾಜಕಾರಣ ಮತ್ತಿತರ ಕಾರಣಗಳ ನಡುವೆಯೂ ಅವರ ಮೊಮ್ಮಗ ಸಮರ್ಥ್ ಕೇವಲ 5708 ಮತ ಪಡೆಯುವ ಮೂಲಕ ಗೆಲುವು ಕಂಡಿದ್ದಾರೆ.

ಬ್ಯಾಲೆಟ್ ಪೇಪರ್ ಎಣಿಕೆ: 21 ಸುತ್ತುಗಳಿದ್ದ ಎಣಿಕೆ ಕಾರ್ಯ ಮುಗಿಯುವ ವೇಳೆಗೆ 19 ಸುತ್ತಿನಲ್ಲಿ ಅಜಾದ್ ನಗರ, ಬಾಷಾನಗರ ಬೂತ್‌ಗಳ ಮೂರು ಇವಿಎಂ ಯಂತ್ರಗಳು ತಾಂತ್ರಿಕ ಕಾರಣದಿಂದ ಓಪನ್ ಆಗದೆ 1626 ಮತಗಳ ಎಣಿಕೆ ಸ್ಥಗಿತಗೊಂಡಿತ್ತು. ನಂತರ, ವಿವಿ ಪ್ಯಾಟ್‌ನಲ್ಲಿನ ಬ್ಯಾಲೆಟ್ ಪೇಪರ್ ಎಣಿಕೆ ನಡೆಯಿತು.

ಕೈ ಕೊಟ್ಟ ಸ್ಟ್ರಾಂಗ್ ರೂಂ ಬೀಗದ ಕೈ: ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಮತ ಎಣಿಕೆ ನಗರದ ಡಿಆರ್ ಆರ್ ಶಾಲೆಯಲ್ಲಿ ಸೋಮವಾರ ನಡೆದಿದ್ದು, ಬೆಳ್ಳಂಬೆಳಗ್ಗೆ ಸ್ಟ್ರಾಂಗ್ ರೂಂ ಓಪನ್ ಮಾಡಲು ಹೋದಾಗ ಮತ ಯಂತ್ರಗಳು ಇರುವ ರೂಮ್ ನಂಬರ್ 1, 2, 3ರ ಬೀಗದ ಕೀ ಸಿಗದೇ ಬಾಗಿಲು ತೆರೆಯಲು ಹರಸಾಹಸ ಮಾಡಲಾಯಿತು. 7.36 ಗಂಟೆಯಿಂದ 7.46ರ ವರೆಗೆ ಕೀ ಗೊಂಚಲು ತಡಕಾಡಿದರೂ ರೂಂ ನಂಬರ್ 1ರ ಬೀಗದ ಕೀ ಸಿಗಲೇ ಇಲ್ಲ. ಪ್ರತಿಯೊಂದು ಸ್ಟ್ರಾಂಗ್ ರೂಂಗೂ ಎರಡೆರೆಡು ಅತ್ಯಾಧುನಿಕ ಬೀಗಗಳನ್ನೇ ಹಾಕಲಾಗಿತ್ತು. ಡಬಲ್ ಲಾಕರ್ ಬೀಗ ಸಹ ಅವುಗಳಿಗೆ ಅಳಡಿಸಲಾಗಿತ್ತು. ಆದರೆ, ಚುನಾವಣಾಧಿಕಾರಿ ಬಳಿ ಇದ್ದ ಕೀಗಳಿಂದ ಬೀಗಗಳನ್ನು ತೆಗೆಯಲಾಗದೇ ಅನಿವಾರ್ಯವಾಗಿ ಎರಡು ಸ್ಟ್ರಾಂಗ್ ರೂಂಗಳ ಬೀಗ ಮುರಿದು, ಕೊನೆಗೆ ಸುತ್ತಿಗೆ ಬಳಸಿ ಬಾಗಿಲು ತೆಗೆಯಲಾಯಿತು. ಇನ್ನೂ, ಕೊನೆಯ 19 ಸುತ್ತಿನಲ್ಲಿ ಅಜಾದ್ ನಗರ, ಬಾಷಾನಗರ ಬೂತ್‌ಗಳ ಮೂರು ಇವಿಎಂ ಯಂತ್ರಗಳು ಓಪನ್ ಆಗದೆ 1626 ಮತಗಳ ಎಣಿಕೆ ಸ್ಥಗಿತಗೊಂಡಿತ್ತು. ಈಗ ವಿವಿ ಪ್ಯಾಟ್‌ನಲ್ಲಿನ ಬ್ಯಾಲೆಟ್ ಪೇಪರ್ ಎಣಿಕೆ ನಡೆಯಿತು. ಈ ಎಣಿಕೆ ಕಾರ್ಯ ಪೂರ್ಣಗೊಂಡ ನಂತರ ಸಮರ್ಥ್ ಅವರ ಗೆಲುವು ಘೋಷಿಸಲಾಯಿತು.

ಉಪಚುನಾವಣೆಯಲ್ಲಿ ಸಮರ್ಥ್ ಶಾಮನೂರು ಗೆಲುವು ಸಾಧಿಸಿದ್ದಂತೆ ಕಾಂಗ್ರೆಸ್ ಕಾರ್ಯಕರ್ತರು, ಅಭಿಮಾನಿಗಳು ಸಂಭ್ರಮಿಸಿದರು.

ಕಾಂಗ್ರೆಸ್‌ಗೆ ಅಡ್ಡಗಾಲು ಹಾಕಿದ ಪಕ್ಷೇತರರು!

ದಾವಣಗೆರೆ ದಕ್ಷಿಣ ಕ್ಷೇತ್ರದ ಟಿಕೆಟ್‌ಗಾಗಿ ಪಟ್ಟು ಹಿಡಿದು ಪಕ್ಷೇತರರಾಗಿ ಸ್ಪರ್ಧಿಸಿದ್ದ ಎಸ್‌ಡಿಪಿಐ ಸೇರಿ ಹಲವು ಮುಸ್ಲಿಂ ಪಕ್ಷೇತರ ಅಭ್ಯರ್ಥಿಗಳು 22 ಸಾವಿರಕ್ಕೂ ಅಧಿಕ ಮತ ಪಡೆದು ಕಾಂಗ್ರೆಸ್‌ಗೆ ಹೆಚ್ಚಿನ ಲೀಡ್ ತಪ್ಪಿಸುವಲ್ಲಿ ಯಶಸ್ಸು ಕಂಡಿದ್ದಾರೆ. ಆರಂಭದಲ್ಲಿ ಟಿಕೆಟ್ ಆಕಾಂಕ್ಷಿಯಾಗಿದ್ದ ಕಾಂಗ್ರೆಸ್‌ನ ಹಿರಿಯ ಮುಖಂಡ ಸಾಧಿಕ್ ಪೈಲ್ವಾನ್ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ, ನಂತರ ಕಣದಿಂದ ನಿವೃತ್ತಿ ಹೊಂದಿದ್ದರೂ ಅವರಿಗೆ 47 ಮತಗಳು ಬಂದಿವೆ. ಎಸ್‌ಡಿಪಿಐನ ಅಪ್ಸರ್ ಕೊಡ್ಲಿಪೇಟೆ ಅವರು ಬರೋಬ್ಬರಿ 18975 ಮತ ಪಡೆದಿದ್ದಾರೆ. ಇನ್ನು, ಪಕ್ಷೇತರರಾಗಿ ಸ್ಪರ್ಧಿಸಿದ್ದ ಖಾದರ್ ಅದಿಲ್ ಭಾಷಾ ರೈತ ಸಂಘಟನೆಗಳ ಬೆಂಬಲ ಪಡೆದು ಅಬ್ಬರದ ಪ್ರಚಾರ ನಡೆಸಿದ್ದರು. ಅವರೂ 1082 ಮತ ಪಡೆದಿದ್ದಾರೆ. ನಂತರ, ಸೈಯದ್ ರಿಜಾಯ್ 1186 ಮತ ಪಡೆದಿದ್ದಾರೆ.

ಶಾಮನೂರು ಕುಟುಂಬದ 3ನೇ ತಲೆಮಾರು ವಿಧಾನಸಭೆಗೆ

ಈ ಗೆಲುವು ಶಾಮನೂರು ಕುಟುಂಬಕ್ಕೆ ಅತ್ಯಂತ ಪ್ರತಿಷ್ಠೆಯ ಪ್ರಶ್ನೆ ಆಗಿತ್ತು. ದಶಕಗಳ ಕಾಲ ದಾವಣಗೆರೆಯ ರಾಜಕಾರಣದ ಸಾರಥ್ಯ ವಹಿಸಿದ್ದ ಶಾಮನೂರು ಶಿವಶಂಕರಪ್ಪ ಅವರ ನಿಧನ ಮುಂದೆ ಯಾರು ಎಂಬ ಪ್ರಶ್ನೆ ಸೃಷ್ಟಿಸಿತ್ತು. ಅದನ್ನು ತುಂಬಲು ಕಣಕ್ಕಿಳಿದಿದ್ದ ಮೊಮ್ಮಗ ಸಮರ್ಥ್ ಶಾಮನೂರು, ಅಜ್ಜ ಮತ್ತು ತಂದೆಯವರ ರಾಜಕೀಯ ಪರಂಪರೆ ಯಶಸ್ವಿಯಾಗಿ ಮುಂದುವರಿಸಿದ್ದಾರೆ. ಇದು ನಮ್ಮ ಅಜ್ಜ ಈ ಕ್ಷೇತ್ರದ ಜನತೆಗೆ ನೀಡಿದ ಸೇವೆಗೆ ಮತ್ತು ಕಾಂಗ್ರೆಸ್ ಸರಕಾರದ ಅಭಿವೃದ್ಧಿ ಕೆಲಸಗಳಿಗೆ ಸಿಕ್ಕ ಜಯ ಎಂದು ಸಮರ್ಥ್ ಹರ್ಷ ವ್ಯಕ್ತಪಡಿಸಿದ್ದಾರೆ. ಒಟ್ಟಾರೆಯಾಗಿ, ದಾವಣಗೆರೆ ದಕ್ಷಿಣ ಕ್ಷೇತ್ರ ಮತ್ತೊಮ್ಮೆ ಕಾಂಗ್ರೆಸ್‌ನ ಭದ್ರಕೋಟೆ ಎಂಬುದನ್ನು ಸಾಬೀತುಪಡಿಸಿದ್ದು, ಸಮರ್ಥ್ ಶಾಮನೂರು ಅಸೆಂಬ್ಲಿ ಪ್ರವೇಶದ ಹಾದಿ ಸುಗಮವಾಗಿದೆ.

ಗೆದ್ದ ಪ್ರಮುಖರು

ಸುವೇಂದು ಅಧಿಕಾರಿ

ಪಕ್ಷ ಬಿಜೆಪಿ
ಕ್ಷೇತ್ರ ನಂದಿಗ್ರಾಮ
ಎದುರಾಳಿ ಪಬಿತ್ರ ಕರ್

ಅಗ್ನಿಮಿತ್ರ ಪೌಲ್

ಪಕ್ಷ ಬಿಜೆಪಿ
ಕ್ಷೇತ್ರ ಅಸಾನ್ಸೋಲ್ ದಕ್ಷಿಣ
ಎದುರಾಳಿ ತಪಸ್ ಬ್ಯಾನರ್ಜಿ

ಡಾ.ಬಿಜನ್ ಮುಖರ್ಜಿ

ಪಕ್ಷ ಬಿಜೆಪಿ
ಕ್ಷೇತ್ರ ಜಮುರಿಯಾ
ಎದುರಾಳಿ ಹರೇರಾಮ್ ಸಿಂಗ್

ಸಬೀನಾ ಯೇಸ್ಮಿನ್

ಪಕ್ಷ ಟಿಎಂಸಿ
ಕ್ಷೇತ್ರ ಸುಜಾಪುರ
ಎದುರಾಳಿ ಅಬ್ದುಲ್ ಹನ್ನನ್

ಹುಮಾಯುನ್ ಕಬೀರ್

ಪಕ್ಷ ಎಜೆಯುಪಿ
ಕ್ಷೇತ್ರ ನೌಡಾ
ಎದುರಾಳಿ ರಾಣಾ ಮಂಡಲ್

ಸೋತ ಪ್ರಮುಖರು

ಅಧೀರ್ ರಂಜನ್ ಚೌಧರಿ

ಪಕ್ಷ ಕಾಂಗ್ರೆಸ್
ಕ್ಷೇತ್ರ ಬಹರಾಮಪುರ
ಎದುರಾಳಿ ಸುಬ್ರತಾ ಮೈತ್ರಾ

ಪ್ರದೀಪ್ ಸರ್ಕಾರ್

ಪಕ್ಷ ಟಿಎಂಸಿ
ಕ್ಷೇತ್ರ: ಖರಗಪುರಸದರ್
ಎದುರಾಳಿ ದಿಲೀಪ್ ಘೋಷ್

ಶಶಿ ಪಂಜಾ

ಪಕ್ಷ ಟಿಎಂಸಿ,
ಕ್ಷೇತ್ರ ಶ್ಯಾಮಪುಕುರ
ಎದುರಾಳಿ ಪೂರ್ಣಿಮಾ

ಸೌಗತ್ ಕುಮಾರ್ ಬರ್ಮನ್

ಪಕ್ಷ ಟಿಎಂಸಿ
ಕ್ಷೇತ್ರ ರಾಣಾಘಾಟ್
ಎದುರಾಳಿ ಅಶಿಮ್ ಬಿಸ್ವಾಸ್

ತಪಸ್ ಬ್ಯಾನರ್ಜಿ

ಪಕ್ಷ ಟಿಎಂಸಿ
ಕ್ಷೇತ್ರ ಅಸಾನ್ಸೋಲ್ ದಕ್ಷಿಣ
ಎದುರಾಳಿ ಅಗ್ನಿಮಿತ್ರ ಪೌಲ್

10 ವರ್ಷಗಳ ನಿರಂತರ ಸೆಣಸಾಟದ ನಂತರ ಪ.ಬಂಗಾಳವನ್ನು ವಶಕ್ಕೆ ಪಡೆದ ಮೋದಿ ಬಿಜೆಪಿ

ಕೇಸರಿಗೆ ವಂಗನಾಡಿನಲ್ಲಿ ಮೊದಲ ಬಾರಿ ಅಧಿಕಾರ, ಬಿಜೆಪಿ ಸಂಸ್ಥಾಪಕ ಶ್ಯಾಮಪ್ರಸಾದ್‌ಗೆ ನಮನ

ಸತತ 2ನೇ ಬಾರಿ ಮಮತಾಗೆ ಸುವೇಂದು ವಿರುದ್ಧ ಸೋಲು । ಎರಡೂ ಕಡೆ ಗೆದ್ದ ಸುವೇಂದು

ದೀದಿ ಕೋಟೆಯಲ್ಲಿ ಕಮಲದ ಓಂಕಾರ

ಕೋಲ್ಕತಾ: ಪಶ್ಚಿಮ ಬಂಗಾಳದ ಐತಿಹಾಸಿಕ ಸಾಧನೆ ಮಾಡಿದೆ. ವಂದೇ ಮಾತರಂ ಗೀತೆಗೆ ಕಾಂಗ್ರೆಸ್‌ನಿಂದ ಅನ್ಯಾಯವಾಗಿದೆ, ಅದರ ಚರಣಗಳನ್ನು ಕತ್ತರಿಸಲಾಗಿದೆ, ಅದಕ್ಕೆ ರಾಷ್ಟ್ರಗೀತೆಯ ಸ್ಥಾನಮಾನ ತಪ್ಪಿಸಿದ್ದೇ ಕಾಂಗ್ರೆಸ್ ಎಂಬುದರಿಂದ ಹಿಡಿದು, ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರ ಸುಭಾಷ್‌ಚಂದ್ರ ಬೋಸ್ ವರೆಗೆ ಬಂಗಾಳದ ಪ್ರತಿ ಭಾವನೆಗಳನ್ನು ಕೆದಕಿದ ಬಿಜೆಪಿ ಅದಕ್ಕೆ ಸರಿಯಾದ ಪ್ರತಿಫಲ ಪಡೆದಿದೆ. ಹಲವು ವರ್ಷಗಳಿಂದ ಟಿಎಂಸಿ ವಿರುದ್ಧ ಹೋರಾಡುತ್ತಿದ್ದರೂ ಬಿಜೆಪಿ ಸೋಲುತ್ತಲೇ ಬಂದಿತ್ತು. ಈ ಬಾರಿ ಪಟ್ಟುಬಿಡದೇ ಸರ್ವಶಕ್ತಿಯನ್ನೂ ವಿನಿಯೋಗಿಸಿ ನಿರ್ಣಾಯಕ ಹೋರಾಟ ಸಂಘಟಿಸಿದ ಬಿಜೆಪಿ 294 ಕ್ಷೇತ್ರಗಳಲ್ಲಿ 206ಕ್ಕೂ ಅಧಿಕ ಸ್ಥಾನ ಗೆದ್ದು, ನಿರೀಕ್ಷೆಗೂ ಮೀರಿದ ಅಸಾಮಾನ್ಯ ಸಾಧನೆ ಮಾಡಿದೆ (ಪುಟ ಮುದ್ರಣಕ್ಕೆ ಹೋಗುವ ಸಮಯದಲ್ಲಿದ್ದ ದಾಖಲೆ ಆಧರಿಸಿ ಫಲಿತಾಂಶಗಳನ್ನು ವರದಿ ಮಾಡಲಾಗಿದೆ).

2021ರಲ್ಲಿ ಬಿಜೆಪಿ ಆಗಷ್ಟೇ ಟಿಎಂಸಿ ನಾಯಕ ಸುವೇಂದು ಅಧಿಕಾರಿಯನ್ನು ಸೆಳೆದುಕೊಂಡು ಮಮತಾ ವಿರುದ್ಧ ಹೋರಾಟ ಸಂಘಟಿಸಿತ್ತು. ಆಗ ತಕ್ಕಮಟ್ಟಿಗೆ ಫಲ ಪಡೆದಿತ್ತು. ಈ ಬಾರಿ ನಿರ್ಣಾಯಕವಾಗಿ ಬಿಜೆಪಿ ಗೆಲುವು ಸಾಧಿಸಿದೆ. 2021ರಲ್ಲಿ ಬಿಜೆಪಿಗೆ ಪ್ರಬಲ ಸವಾಲೊಡ್ಡಿದ್ದ ಟಿಎಂಸಿ 214 ಸ್ಥಾನ ಪಡೆದಿತ್ತು. ಈ ಬಾರಿ ಅದರ ಸ್ಥಾನ ಬರೀ 79ಕ್ಕೆ ಸೀಮಿತವಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ಕಳೆದ ಬಾರಿ ನಂದಿಗ್ರಾಮದಲ್ಲಿ ಸುವೇಂದು ಅಧಿಕಾರಿ ವಿರುದ್ಧ ಸೋತಿದ್ದ ಮಮತಾ, ಈ ಬಾರಿ ಮತ್ತೆ ಸುವೇಂದು ವಿರುದ್ಧವೇ ಭವಾನಿಪುರದಲ್ಲಿ ಸೋತಿದ್ದಾರೆ. ಇದು ಅವರಿಗೆ ಅನಿರೀಕ್ಷಿತ ಸೋಲು. ಆರಂಭದಲ್ಲಿ 12000ಕ್ಕೂ ಅಧಿಕ ಮತಗಳ ಮುನ್ನಡೆ ಸಾಧಿಸಿದ್ದ ಅವರು, 16ನೇ ಸುತ್ತಿನ ಎಣಿಕೆ ಮುಗಿದ ನಂತರ 500ಕ್ಕೂ ಅಧಿಕ ಮತಗಳಿಂದ ಹಿನ್ನಡೆ ಸಾಧಿಸಿದರು. ನಂತರ ಹಿನ್ನಡೆ ಜಾಸ್ತಿಯಾಗುತ್ತಲೇ ಹೋಗಿ 15000ಕ್ಕೂ ಅಧಿಕ ಮತಗಳಿಂದ ಭಾರೀ ಮುಖಭಂಗ ಅನುಭವಿಸಿದರು.

ಇದು ಮಮತಾ ರಾಜಕೀಯ ಜೀವನ ಮುಕ್ತಾಯದತ್ತ ಸಾಗಿದೆಯಾ ಎಂಬ ಪ್ರಶ್ನೆಗಳನ್ನು ಹುಟ್ಟು ಹಾಕಿದೆ. ರಾಷ್ಟ್ರಮಟ್ಟದಲ್ಲಿ ಬಿಜೆಪಿಗೆ ಪ್ರಬಲ ಪ್ರತಿಸ್ಪರ್ಧಿಯಾಗಿ ಕಾಣಿಸಿಕೊಂಡಿದ್ದ ಅವರು ಬಂಗಾಳದಲ್ಲಿ ತಲೆಬಾಗಿದ್ದಾರೆ . ಈಗ ಮಮತಾಗೆ 71 ವರ್ಷ. ಇನ್ನೂ ಐದು ವರ್ಷ ಅವರು ಅಧಿಕಾರದಲ್ಲಿರುವುದಿಲ್ಲ. ಮಾತ್ರವಲ್ಲ ಅಲ್ಲಿನ ವಿಧಾನಸೌಧದಲ್ಲೂ ಇರುವುದಿಲ್ಲ. ಸತತ 15 ವರ್ಷ ಮುಖ್ಯಮಂತ್ರಿಯಾಗಿದ್ದ ಮಮತಾಗೆ ಜೀರ್ಣಿಸಿಕೊಳ್ಳಲು ಸಾಧ್ಯವಾಗದ ಸೋಲಾಗಿದೆ. ಎಂದಿನಂತೆ ಮಮತಾ ಇದನ್ನು ಚುನಾವಣಾ ಅಕ್ರಮ ಎಂದಿದ್ದಾರೆ.

ಸುವೇಂದು ಅಧಿಕಾರಿಯದ್ದು ಅಸಾಮಾನ್ಯ ಪರಾಕ್ರಮ. ತಮ್ಮ ಕ್ಷೇತ್ರ ನಂದಿಗ್ರಾಮದಲ್ಲಿ ಟಿಎಂಸಿಯ ಪಬಿತ್ರಾ ಕರ್ ವಿರುದ್ಧ 9665 ಮತಗಳಿಂದ ಗೆದ್ದ ಅವರು, ಭವಾನಿಪುರದಲ್ಲೂ ಸ್ಪರ್ಧಿಸಿ ಮಮತಾರನ್ನು ಸೋಲಿಸಿದರು. ತಮ್ಮ ಗುರುವನ್ನೇ ಮಣಿಸುವ ಮೂಲಕ ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ಧವಾಗಿದ್ದಾರೆ. ಪ.ಬಂಗಾಳದಲ್ಲಿ ಘಟಾನುಘಟಿ ಟಿಎಂಸಿ ನಾಯಕರು ಸೋತಿದ್ದಾರೆ. ಬಿಜೆಪಿ ನಾಯಕರ ಪೈಕಿ ರಾಜ್ಯಾಧ್ಯಕ್ಷ ಸಮಿಕ್ ಭಟ್ಟಾಚಾರ್ಯ, ದಿಲೀಪ್ ಘೋಷ್, ಅಗ್ನಿಮಿತ್ರ ಪೌಲ್‌ರಂತಹ ನಾಯಕರು ಗೆದ್ದಿದ್ದಾರೆ.

ಅಹಂಕಾರಕ್ಕೆ ಏಟು?: ಬಂಗಾಳದಲ್ಲಿ ಮಮತಾ ಅಹಂಕಾರದ ತುತ್ತತುದಿಗೇರಿದ್ದರು ಎಂಬ ಮಾತುಗಳಿವೆ. ತಮ್ಮ ಪಕ್ಷದ ಕಾರ್ಯಕರ್ತರು ಗೂಂಡಾಗಿರಿ ಮಾಡುತ್ತಿದ್ದರೂ ಸಹಿಸಿಕೊಂಡಿದ್ದರು, ಶಿಕ್ಷಕರ ನೇಮಕಾತಿಯಲ್ಲಿನ ಹಗರಣವೂ ಸೇರಿ ಹಲವು ಅಕ್ರಮಗಳನ್ನು ಮುಚ್ಚಿಹಾಕಲು ಯತ್ನಿಸಿದ್ದಾರೆ ಎಂಬ ಆರೋಪಗಳಿವೆ. ಕೇಂದ್ರೀಯ ತನಿಖಾಧಿಕಾರಿಗಳನ್ನೇ ವಶಕ್ಕೆ ಪಡೆಯುವ ಸಾಹಸವನ್ನೂ ಮಾಡಿದ್ದರು. ಬಂಗಾಳ ವರ್ಸಸ್ ಕೇಂದ್ರ ಎಂಬ ಮಟ್ಟಿಗೆ ಅವರು ಕೇಂದ್ರಕ್ಕೆ ಸೆಡ್ಡು ಹೊಡೆದಿದ್ದರು.

ಬಿಜೆಪಿ ಮೀನೂಟ, ದೀದಿಗೆ ತಿರುಗೇಟು

ಪಶ್ಚಿಮ ಬಂಗಾಳದ 2026 ವಿಧಾನಸಭಾ ಚುನಾವಣೆಯ ವೇಳೆ ಬಿಜೆಪಿ ಜಯ ಸಾಧಿಸುವುದು ಖಚಿತವಾಗುತ್ತಿದ್ದಂತೆ, ಕೋಲ್ಕತ್ತಾದ ಸಾಲ್ಟ್ ಲೇಕ್‌ನಲ್ಲಿರುವ ಪಕ್ಷದ ಕಚೇರಿಯಲ್ಲಿ ವಿಶಿಷ್ಟ ರೀತಿಯಲ್ಲಿ ಸಂಭ್ರಮಾಚರಣೆ ನಡೆಯಿತು. ಬಂಗಾಳದಲ್ಲಿ ಮೀನು ಜನಪ್ರಿಯ ಖಾದ್ಯ. ಇಲ್ಲಿ ಯಾವುದೇ ಸಂಭ್ರಮಾಚರಣೆ ವೇಳೆ ಅದಿರಲೇ ಬೇಕು. ದೇವರಿಗೆ ಮೀನನ್ನೇ ನೈವೇದ್ಯವನ್ನಾಗಿ ಅರ್ಪಿಸಲಾಗುತ್ತದೆ. ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಅಭೂತಪೂರ್ವ ಜಯ ಸಾಧಿಸಿರುವ ಬಿಜೆಪಿ, ಇದೀಗ ವಿರೋಧ ಪಕ್ಷದ ನಾಯಕಿ ಮಮತಾ ಬ್ಯಾನರ್ಜಿ ಅವರಿಗೆ 'ರುಚಿಕರವಾಗಿ' ತಿರುಗೇಟು ನೀಡಿದೆ. ಬಿಜೆಪಿ ರಾಜ್ಯ ಪ್ರಧಾನ ಕಚೇರಿಯಲ್ಲಿ 'ಮಚ್-ಭಾತ್' (ಮೀನು-ಅನ್ನ) ಬಡಿಸುವ ಮೂಲಕ ಹಬ್ಬದ ವಾತಾವರಣವನ್ನು ಸೃಷ್ಟಿಸಲಾಗಿತ್ತು.

ಚುನಾವಣಾ ಪ್ರಚಾರದ ಸಮಯದಲ್ಲಿ ಮಮತಾ ಬ್ಯಾನರ್ಜಿ ಅವರು ಪದೇಪದೇ ಒಂದು ಮಾತನ್ನು ಹೇಳುತ್ತಿದ್ದರು. 'ಬಿಜೆಪಿ ಅಧಿಕಾರಕ್ಕೆ ಬಂದರೆ ಬಂಗಾಳಿಗಳ ನೆಚ್ಚಿನ ಆಹಾರವಾದ ಮೀನು ಮತ್ತು ಮಾಂಸವನ್ನು ನಿಷೇಧಿಸುತ್ತದೆ. ಅವರು ನಿಮ್ಮ ಸಂಸ್ಕೃತಿಯನ್ನು ನಾಶ ಮಾಡುತ್ತಾರೆ' ಎಂದು ಜನರಲ್ಲಿ ಭಯ ಬಿತ್ತಲು ಪ್ರಯತ್ನಿಸಿದ್ದರು. ಅದಕ್ಕೆ ಪ್ರತಿಯಾಗಿ ಬಿಜೆಪಿ ಕಚೇರಿಯಲ್ಲಿ ಮೀನೂಟವನ್ನೇ ಬಡಿಸಿ, ದೀದಿಯ ಆ ಎಲ್ಲಾ ಮಾತುಗಳು ಕೇವಲ 'ಚುನಾವಣಾ ಗಿಮಿಕ್' ಎಂದು ಪ್ರತಿಕ್ರಿಯಿಸಲಾಯಿತು. ರಾಜಕೀಯ ವಿಶ್ಲೇಷಕರ ಪ್ರಕಾರ, ಬಿಜೆಪಿ ಕಚೇರಿಯಲ್ಲಿ ಮೀನು-ಊಟ ಬಡಿಸಿದ್ದು ಆಕಸ್ಮಿಕವೇನಲ್ಲ. ಟಿಎಂಸಿಯ 'ಹೊರಗಿನವರು' ಮತ್ತು 'ಸಂಸ್ಕೃತಿ ವಿರೋಧಿಗಳು' ಎಂಬ ಟ್ಯಾಗ್ ಅನ್ನು ಕಿತ್ತೆಸೆಯಲು ಬಿಜೆಪಿ ಈ ತಂತ್ರ ಹೂಡಿದೆ.

ಪಕ್ಷ	2026	ಹಿಂದಿನ ಬಾರಿ
ಬಿಜೆಪಿ	206	{77}
ಟಿಎಂಸಿ	81	{214}
ಕಾಂಗ್ರೆಸ್	02	{000}
ಸಿಪಿಎಂ	01	{000}

ಸದ್ದಿಲ್ಲದೇ ಗೆಲ್ಲಿಸಿದ ಆರ್‌ಎಸ್‌ಎಸ್

ಬಿಜೆಪಿ ಗೆಲುವಿನಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ವ್ಯವಸ್ಥಿತ ಕೆಲಸ ಪ್ರಮುಖ ಪಾತ್ರ ವಹಿಸಿದೆ. ಕಳೆದ ಒಂದು ವರ್ಷದಿಂದ ಸಂಘವು ಬುಡಮಟ್ಟದಲ್ಲಿ ನಡೆಸಿದ ಕಾರ್ಯಾಚರಣೆ ಈಗ ಬಿಜೆಪಿಯ ಅಭೂತಪೂರ್ವ ಗೆಲುವಿಗೆ ದಾರಿಯಾಗಿದೆ. ರಾಜ್ಯದ 294 ಕ್ಷೇತ್ರಗಳ ಪೈಕಿ 250 ಕ್ಷೇತ್ರಗಳಲ್ಲಿ ಆರ್‌ಎಸ್‌ಎಸ್ ಅಕ್ಷರಶಃ ಮತದಾರರ ಜಾಗೃತಿ ಅಭಿಯಾನದ ಸುನಾಮಿಯನ್ನೇ ಎಬ್ಬಿಸಿತ್ತು.

ಕೇಸರಿ ಗುಲಾಲ್ ಚೆಲ್ಲಿ ಸಂಭ್ರಮಾಚರಣೆ ನಡೆಸಿದ ಬಿಜೆಪಿ

ಕೋಲ್ಕತಾ ನಗರದಲ್ಲಿ ಬಿಜೆಪಿ ಬೆಂಬಲಿಗರು ಕೇಸರಿ ಗುಲಾಲ್ ಚೆಲ್ಲಿ ಸಂಭ್ರಮಾಚರಣೆ ನಡೆಸಿದ ದೃಶ್ಯಗಳು ಗಮನ ಸೆಳೆದವು. ಚುನಾವಣಾ ಮತ ಎಣಿಕೆ ಪ್ರಾರಂಭವಾಗುತ್ತಿದ್ದಂತೆ ಬಿಜೆಪಿ ಪರವಾಗಿ ಫಲಿತಾಂಶ ದಾಖಲಾದ ಹಿನ್ನೆಲೆಯಲ್ಲಿ, ಕಾರ್ಯಕರ್ತರು ದೊಡ್ಡ ಸಂಖ್ಯೆಯಲ್ಲಿ ರಸ್ತೆಗಳ ಮೇಲೆ ಸೇರಿದರು. ಪಕ್ಷದ ಧ್ವಜಗಳನ್ನು ಬೀಸುತ್ತಾ, ಘೋಷಣೆಗಳನ್ನು ಕೂಗುತ್ತಾ ಉತ್ಸಾಹಭರಿತ ವಾತಾವರಣ ನಿರ್ಮಿಸಿದರು. ಕೇಸರಿ ಬಣ್ಣವು ಬಿಜೆಪಿಯ ಪ್ರತೀಕವಾಗಿರುವುದರಿಂದ, ಅದೇ ಬಣ್ಣದ ಗುಲಾಲ್ ಎರಚಿದ್ದು ಬಹಳ ಸಾಂಕೇತಿಕವಾಗಿತ್ತು. ಕೆಲವೆಡೆ ಡೊಳ್ಳುಗಳ ತಾಳಕ್ಕೆ ಕುಣಿದು, ಪಟಾಕಿ ಸಿಡಿಸಿ ಹಬ್ಬದಂತೆಯೇ ಸಂಭ್ರಮಿಸಿದರು. ಇದು ಹೋಳಿ ಹಬ್ಬವನ್ನು ನೆನಪಿಸುವಂತಿತ್ತು. ಪೊಲೀಸರು ಮತ್ತು ಭದ್ರತಾ ಸಿಬ್ಬಂದಿ ಪ್ರಮುಖ ಕೇಂದ್ರಗಳ ಬಳಿ ಕಟ್ಟುನಿಟ್ಟಿನ ನಿಗಾವಹಿಸಿದ್ದರು.

ಗೆಲುವಿಗೆ ಕಾರಣ

1 ದೀರ್ಘಕಾಲ ಬಂಗಾಳವನ್ನು ಆಳಿದ ಮಮತಾ ನೇತೃತ್ವದ ತೃಣಮೂಲ ಕಾಂಗ್ರೆಸ್ ವಿರುದ್ಧ ಜನರಲ್ಲಿ ಅಸಮಾಧಾನ ಹೆಚ್ಚಾಗಿತ್ತು. ಆದ್ದರಿಂದ ಮತಗಳು ಬಿಜೆಪಿ ಪರ ಏಕೀಕೃತಗೊಂಡವು

2 ಪ್ರಧಾನಿ ನರೇಂದ್ರ ಮೋದಿಯ ವರ್ಚಸ್ಸು, ಚುನಾವಣೆ ವೇಳೆ ಅವರು ನೀಡಿದ ಭರವಸೆಗಳು ಬಂಗಾಳಿಗರ ಗಮನ ಸೆಳೆದಿದ್ದವು. ಅಮಿತ್ ಶಾ ಸೇರಿ ಬಿಜೆಪಿ ದಿಗ್ಗಜರ ಪ್ರಚಾರವೂ ಪ್ರಭಾವ ಬೀರಿದೆ

3 ಬಿಜೆಪಿ ಸಂಘಟನೆ ಆಧಾರಿತ ಪಕ್ಷ. ಕಳೆದ ಹಲವು ವರ್ಷಗಳಲ್ಲಿ ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯ ಸಂಘಟನೆ ಇನ್ನೂ ಬಲವಾಗಿದೆ, ನೆಲಮಟ್ಟದಲ್ಲಿ ಕಾರ್ಯಕರ್ತರ ಸಕ್ರಿಯತೆ ಹೆಚ್ಚಾಗಿದೆ

4 ಬಂಗಾಳದಲ್ಲಿ ಈ ಹಿಂದೆ ಎಡಪಂಥೀಯ ವಿಚಾರಗಳಿದ್ದವು. ಪ್ರಸ್ತುತ ಬಲಪಂಥೀಯ ಧೋರಣೆ ಅಲ್ಲಿ ತೀವ್ರವಾಗಿದೆ, ಧಾರ್ಮಿಕ, ಸಾಂಸ್ಕೃತಿಕ ವಿಚಾರಗಳು ಬಿಜೆಪಿ ಕೆಲಸ ಮಾಡಿವೆ

5 ಕೇಂದ್ರ ಸರಕಾರದ ಕಲ್ಯಾಣ ಯೋಜನೆಗಳು (ಸಬ್ಸಿಡಿ ದರದಲ್ಲಿ ಮನೆ, ಉಚಿತ ಉಜ್ವಲಾ ಗ್ಯಾಸ್, ಶೌಚಾಲಯ), ವಂದೇ ಭಾರತ್ ಟ್ರೈನುಗಳು, ಹೆದ್ದಾರಿಗಳು ಧನಾತ್ಮಕ ಅಭಿಪ್ರಾಯ ಸೃಷ್ಟಿಸಿವೆ

ಸೋಲಿಗೆ ಕಾರಣ

1 ಬಂಗಾಳದಲ್ಲಿ ಟಿಎಂಸಿ 15 ವರ್ಷಗಳ ಆಡಳಿತ ವಿರೋಧಿ ಅಲೆಗೆ ಕಾರಣವಾಯಿತು. ಸಹಜವಾಗಿ ಜನರಲ್ಲಿ ಹುಟ್ಟಿಕೊಂಡ ಹೊಸಮುಖವನ್ನು ನೋಡುವ ಬಯಕೆ ಟಿಎಂಸಿಗೆ ಮುಳುವಾಯಿತು

2 ಟಿಎಂಸಿ ವಿರುದ್ಧ ಭ್ರಷ್ಟಾಚಾರ ಆರೋಪಗಳು ಕೇಳಿಬಂದವು. ಶಿಕ್ಷಕರ ನೇಮಕಾತಿ ಅಕ್ರಮ ಪ್ರಭಾವ ಬೀರಿದೆ, ಕೇಂದ್ರೀಯ ತನಿಖಾಧಿಕಾರಿಗಳನ್ನೇ ಬಂಧಿಸಿದ್ದು ಋಣಾತ್ಮಕ ಪರಿಣಾಮವಾಗಿದೆ

3 ಕಾನೂನು-ಸುವ್ಯವಸ್ಥೆ ಕುರಿತು ಬಂಗಾಳದಲ್ಲಿ ಆತಂಕ ಉಂಟಾಗಿದೆ. ರಾಜಕೀಯ ಹಿಂಸಾಚಾರ, ಶಾಂತಿ-ಸುರಕ್ಷತೆಯ ಕೊರತೆಯಿದೆ ಎಂದು ಬಿಂಬಿಸಲು ಬಿಜೆಪಿ ಯಶಸ್ವಿಯಾಯಿತು

4 ಆಂತರಿಕ ಭಿನ್ನಾಭಿಪ್ರಾಯಗಳು ಪರಿಣಾಮ ಬೀರಿವೆ. ಪಕ್ಷದ ಒಳಗಿನ ಗೊಂದಲಗಳು ಅಥವಾ ನಾಯಕತ್ವದ ಒಳಜಗಳಗಳು ಟಿಎಂಸಿ ಸಂಘಟನೆಯನ್ನು ದುರ್ಬಲಗೊಳಿಸಿ, ಸೋಲಿನತ್ತ ತಳ್ಳಿತು

5 ಏಟಿಗೆ ಎದಿರೇಟು ಎನ್ನುವಂತೆ ಕೇಂದ್ರ ಸರಕಾರ ತಂತ್ರಗಾರಿಕೆ ಮಾಡಿತು. ಚುನಾವಣೆ ಘೋಷಣೆಯಾದ ಕೂಡಲೇ ಬಂಗಾಳದ ಪ್ರಮುಖ ಅಧಿಕಾರಿಗಳನ್ನೇ ವರ್ಗಾಯಿಸಿತು


ಬಂಗಾಳದ ಫಲಿತಾಂಶ ಸೇರಿ ಕೆಲವು ರಾಜ್ಯ ಚುನಾವಣೆಗಳಲ್ಲಿ ಎನ್‌ಡಿಎ ಗೆಲುವು ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವ ಮತ್ತು ವಿಕಸಿತ್ ಭಾರತ್ ದೃಷ್ಟಿಕೋನದಲ್ಲಿ ಜನರ ನಿರಂತರ ಮತ್ತು ಬೆಳೆಯುತ್ತಿರುವ ವಿಶ್ವಾಸವನ್ನು ಪ್ರತಿಬಿಂಬಿಸುತ್ತದೆ.
ಎನ್. ಚಂದ್ರಬಾಬು ನಾಯ್ಡು
ಆಂಧ್ರಪ್ರದೇಶದ ಮುಖ್ಯಮಂತ್ರಿ

ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಗಳಿಸಿರುವ ಜಯ ಐತಿಹಾಸಿಕವಾದದ್ದು. ಇದು ನರೇಂದ್ರ ಮೋದಿಯವರ ನಾಯಕತ್ವಕ್ಕೆ ಸಂದ ಜಯ. ಸತತ 15 ವರ್ಷಗಳವರೆಗೆ ಒಂದೇ ರೀತಿಯ ಆಡಳಿತ ನೋಡಿದ್ದ ಬಂಗಾಳದ ಜನರು ಈಗ ಬದಲಾವಣೆ ಮಾಡಲು ಮನಸ್ಸು ಮಾಡಿದ್ದು ಖುಷಿಯ ವಿಚಾರ.
ದೇವೇಂದ್ರ ಫಡ್ನವಿಸ್
ಮಹಾರಾಷ್ಟ್ರ ಸಿಎಂ

ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಗೆದ್ದಿರುವುದು ಸೋನಾರ್ ಬಾಂಗ್ಲಾಕ್ಕೆ ಶ್ರೀಕಾರ ಹಾಕಲಿದೆ. ಇದು ಹೊಸ ಉದಯಕ್ಕೆ ನಾಂದಿ ಹಾಡಲಿದೆ. ಈ ಫಲಿತಾಂಶ ನಮ್ಮ ಮೇಲೆ ಬಂಗಾಳದ ಜನರು ಇಟ್ಟಿರುವ ನಂಬಿಕೆಯ ಪ್ರತೀಕವಾಗಿದೆ. ಆ ನಂಬಿಕೆಯನ್ನು ನಾವು ಉಳಿಸಿಕೊಳ್ಳುತ್ತೇವೆ.
ಸುವೇಂದು ಅಧಿಕಾರಿ
ಪಶ್ಚಿಮ ಬಂಗಾಳ ಬಿಜೆಪಿ ನಾಯಕ

ಬಂಗಾಳಿ ಜನರು ಅಂತರಂಗದ ಆಳದಲ್ಲಿ ಬದಲಾವಣೆಯನ್ನು ಬಯಸಿದ್ದರಿಂದ ಬಿಜೆಪಿಗೆ ಇಂತಹದ್ದೊಂದು ಜಯ ಸಿಕ್ಕಿದೆ. ಮತದಾರರು ಹೆದರಿಕೆಯನ್ನು ಮೀರಿ ಮತ ಚಲಾವಣೆ ಮಾಡಿದ್ದಾರೆ. ನವ ರಾಜಕೀಯ ಉದಯದ ಮೇಲೆ ಭರವಸೆ ತೋರಿದ್ದಾರೆ.
ಸ್ವಪನ್‌ದಾಸ್ ಗುಪ್ತಾ
ಬಿಜೆಪಿ ಶಾಸಕ

ಇಂದು ಕೇವಲ ಸಂಭ್ರಮಾಚರಣೆ ಮಾಡುವ ದಿನವಲ್ಲ. ಯಾರ ಕಾರಣಕ್ಕೆ ಬಂಗಾಳವು ಹಿಂದೂಗಳ ಮಾತೃಭೂಮಿಯಾಯಿತೋ, ಆ ಶ್ಯಾಮಪ್ರಸಾದ್ ಮುಖರ್ಜಿಗೆ ಸಮರ್ಪಿತವಾದ ಕ್ಷಣವಿದು. ಅವರ ದೂರದೃಷ್ಟಿಯಿಂದಲೇ ಪ.ಬಂಗಾಳ ಬಿಜೆಪಿ ಸರಕಾರ ರಚನೆಗೆ ಸಿದ್ಧವಾಗಿದೆ.
ಅಗ್ನಿಮಿತ್ರ ಪೌಲ್
ಬಿಜೆಪಿ ಶಾಸಕಿ

ಪಶ್ಚಿಮ ಬಂಗಾಳದಲ್ಲಿ ವಿಜಯೋತ್ಸವಕ್ಕೆ ನಿಷೇಧ

ಪಶ್ಚಿಮ ಬಂಗಾಳದಾದ್ಯಂತ ಚುನಾವಣಾ ಫಲಿತಾಂಶ ಪ್ರಕಟವಾದ ಬಳಿಕ ವಿಜಯೋತ್ಸವ ರ‍್ಯಾಲಿ ನಡೆಸುವುದಕ್ಕೆ ಆಯೋಗ ನಿಷೇಧ ಹೇರಿತ್ತು. ವಿಶೇಷ ವೀಕ್ಷಕ ಸುಬ್ರತಾ ಗುಪ್ತಾ ಅವರು ಈ ನಿರ್ಬಂಧವನ್ನು ದೃಢಪಡಿಸಿದ್ದು, ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಸಲುವಾಗಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ. ಟಿಎಂಸಿಯನ್ನು ಸೋಲಿಸಿ, ಇದೇ ಮೊದಲ ಬಾರಿಗೆ ಬಿಜೆಪಿ ಬಂಗಾಳ ದಲ್ಲಿ ಅಧಿಕಾರಕ್ಕೆ ಬಂದಿದೆ. ಎರಡೂ ಪಕ್ಷಗಳ ಕಾರ್ಯಕರ್ತರ ನಡುವೆ ಮಾರಾಮಾರಿಯೂ ನಿರಂತರವಾಗಿ ನಡೆದಿದೆ. ಇದನ್ನು ಗಮನದಲ್ಲಿಟ್ಟುಕೊಂಡೇ ಆಯೋಗ ಈ ನಿರ್ಧಾರ ಮಾಡಿದೆ.

ಟಿಎಂಸಿ-ಬಿಜೆಪಿ ಕಾರ್ಯಕರ್ತರ ಸಂಘರ್ಷ

ಪಶ್ಚಿಮ ಬಂಗಾಳದಲ್ಲಿ ಮತ ಎಣಿಕೆ ವೇಳೆಯೂ ಮತ್ತೆ ಟಿಎಂಸಿ ಮತ್ತು ಬಿಜೆಪಿ ಕಾರ್ಯಕರ್ತರ ನಡುವೆ ಸಂಘರ್ಷವಾಗಿ, ಹಿಂಸಾತ್ಮಕ ಸ್ವರೂಪ ಪಡೆದುಕೊಂಡಿತ್ತು. ಎರಡೂ ಪಕ್ಷಗಳ ಬೆಂಬಲಿಗರು ಪರಸ್ಪರ ಘೋಷಣೆ ಕೂಗಿ ಉದ್ರಿಕ್ತ ವಾತಾವರಣ ಸೃಷ್ಟಿಸಿದ ಪರಿಣಾಮ ಕಲ್ಲುತೂರಾಟ ಹಾಗೂ ತಳ್ಳಾಟ ನಡೆದಿದ್ದು, ಘಟನೆ ತಿಳಿದ ತಕ್ಷಣವೇ ಪೊಲೀಸರು ಹಾಗೂ ಭದ್ರತಾ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರುವಲ್ಲಿ ಯಶಸ್ವಿಯಾಗಿದ್ದಾರೆ. ಕೆಲವರು ಗಾಯಗೊಂಡಿದ್ದು, ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದೆ. ಪರಿಸ್ಥಿತಿ ಮತ್ತಷ್ಟು ಹದಗೆಡದಂತೆ ಹೆಚ್ಚುವರಿ ಪಡೆಗಳನ್ನು ನಿಯೋಜಿಸಲಾಗಿದೆ. ಪ್ರಮುಖ ಪ್ರದೇಶಗಳಲ್ಲಿ ಕಟ್ಟುನಿಟ್ಟಿನ ಭದ್ರತೆ ಜಾರಿಗೊಳಿಸಲಾಗಿತ್ತು. ಈ ನಡುವೆ ಅಧಿಕಾರಿಗಳು ಶಾಂತಿ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವಂತೆ ಸಾರ್ವಜನಿಕರಿಗೆ ಮನವಿ ಮಾಡಿದ್ದರು. ಮತ ಎಣಿಕೆ ಪ್ರಕ್ರಿಯೆ ಶಾಂತಿಯುತವಾಗಿ ನಡೆಯಬೇಕೆಂಬ ಉದ್ದೇಶದಿಂದ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಸಮಿಕ್, ದಿಲೀಪ್ ಕೂಡ ಸಿಎಂ ಪೈಪೋಟಿಯಲ್ಲಿ

ಪ.ಬಂಗಾಳದ ಸಿಎಂ ಆಗುವತ್ತ ಸುವೇಂದು ಅಧಿಕಾರಿ ದಾಪುಗಾಲು

ಪ.ಬಂಗಾಳದ ಇತಿಹಾಸದಲ್ಲೇ ಮೊದಲ ಬಾರಿ ಬಿಜೆಪಿ ಅಧಿಕಾರಕ್ಕೇರಿದೆ. ಇದರ ಹಿಂದೆ ಇಡೀ ಬಿಜೆಪಿಯೇ ಇದ್ದರೂ, ಗಮನಿಸಬೇಕಾದ ಹೆಸರೆಂದರೆ ಸುವೇಂದು ಅಧಿಕಾರಿಯವರದ್ದು. ಒಂದು ಕಾಲದಲ್ಲಿ ಮಮತಾ ಬ್ಯಾನರ್ಜಿಯವರ ಪರಮಾಪ್ತರಾಗಿದ್ದ ಸುವೇಂದುರನ್ನು ಬಿಜೆಪಿ 2020ರಲ್ಲಿ ಪಕ್ಷಕ್ಕೆ ಕರೆ ತಂದಿತು. 2021ರ ಚುನಾವಣೆಯಲ್ಲಿ ಅವರೇ ನೇತೃತ್ವ ವಹಿಸಿದ್ದರು. ಆಗ ಬಿಜೆಪಿ ಉತ್ತಮ ಸಾಧನೆಯನ್ನೇ ಮಾಡಿತ್ತು. ಸಮಿಕ್ ಭಟ್ಟಾಚಾರ್ಯ ರಾಜ್ಯಾಧ್ಯಕ್ಷರಾದರೂ, ಸುವೇಂದು ಇಡೀ ಪ್ರಚಾರದ ಕೇಂದ್ರ ಬಿಂದುವಾಗಿದ್ದಾರೆ. ಸದ್ಯ ಸುವೇಂದು ಅಧಿಕಾರಿ, ಆರ್‌ಎಸ್‌ಎಸ್ ಹಿನ್ನೆಲೆ ಹೊಂದಿರುವ ಸಮಿಕ್ ಭಟ್ಟಾಚಾರ್ಯ, ಅಗ್ನಿಮಿತ್ರ ಪೌಲ್, ಸ್ವಪನ್‌ದಾಸ್ ಗುಪ್ತಾ, ದಿಲೀಪ್ ಘೋಷ್ ನಡುವೆ ಮುಖ್ಯಮಂತ್ರಿ ಸ್ಥಾನಕ್ಕಾಗಿ ಪೈಪೋಟಿ ಇದೆ. ಸದ್ಯ ಮಟ್ಟಿಗೆ ಸುವೇಂದು ಮುಂಚೂಣಿಯಲ್ಲಿದ್ದಾರೆ, ಅವರೇ ಪಟ್ಟಕ್ಕೇರುವುದು ಖಚಿತ ಎಂದು ಮೂಲಗಳು ಹೇಳಿವೆ.

ಮಮತಾ ಭೂಸ್ವಾಧೀನ ವಿರೋಧಿಸಿ ಹೋರಾಟ ಮಾಡುತ್ತಿದ್ದಾಗ ಖಡಕ್ಕಾಗಿ ನಿಂತಿದ್ದು ಸುವೇಂದು ಅಧಿಕಾರಿ. ಅದೇ ವ್ಯಕ್ತಿ ಈಗ ಪ.ಬಂಗಾಳದಲ್ಲಿ ಮಮತಾ ಅವರ ಎಲ್ಲ ಸವಾಲುಗಳಿಗೂ ಎದೆಯೊಡ್ಡಿ ನಿಂತಿದ್ದಾರೆ. ವಿರೋಧಪಕ್ಷದ ನಾಯಕರಾಗಿ ಪ್ರಬಲವಾಗಿ ಕಾರ್ಯನಿರ್ವಹಿಸಿದರು. ಇದೇ ಹಿನ್ನೆಲೆಯಲ್ಲಿ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ಬಹುತೇಕ ಅವಿರೋಧ ಆಯ್ಕೆಯಾಗಿದ್ದಾರೆ.

ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಸುವೇಂದು ಅಧಿಕಾರಿ ಅವರನ್ನು ಎಲ್ಲಿಯೂ ಪಕ್ಷವು ಮುಖ್ಯಮಂತ್ರಿ ಅಭ್ಯರ್ಥಿ ಎಂದು ಬಿಂಬಿಸಿರಲಿಲ್ಲ. ಸಾಮೂಹಿಕ ನಾಯಕತ್ವದಲ್ಲೇ ಚುನಾವಣೆ ಎಂದು ಬಿಜೆಪಿ ಬಿಂಬಿಸಿತ್ತು. ಮಮತಾ ಬ್ಯಾನರ್ಜಿ ಸರ್ಕಾರದ ವಿರುದ್ಧ ಬೀದಿಗಿಳಿದು ಹೋರಾಟ ನಡೆಸಿ ಕಾರ್ಯಕರ್ತರನ್ನು ಹುರಿದುಂಬಿಸಿದ್ದರು. 2007ರ ನಂದಿಗ್ರಾಮ ಹೋರಾಟದಲ್ಲಿ ಅಂದು ಮಮತಾ ಬ್ಯಾನರ್ಜಿ ಪರವಾಗಿ ನಿಂತು ರಾಜ್ಯದಲ್ಲಿ ಕಮ್ಯೂನಿಸ್ಟ್ ಸರ್ಕಾರವನ್ನು ಕೆಡವಿ ಮೊದಲ ಬಾರಿಗೆ ಟಿಎಂಸಿ ಅಧಿಕಾರಕ್ಕೆ ಬರುವಲ್ಲಿ ಇವರ ಪಾತ್ರ ಬಹಳ ದೊಡ್ಡದಿತ್ತು.

ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವುದರಲ್ಲಿ ದೀದಿ ಇವರ ಮಾತಿಗೆ ಪ್ರಾಶಸ್ತ್ಯ ನೀಡುತ್ತಿದ್ದರು. ಆದರೆ ಪಕ್ಷದಲ್ಲಿ ಮಮತಾ ಅವರ ಸಹೋದರ ಸಂಬಂಧಿ ಅಭಿಷೇಕ್ ಬ್ಯಾನರ್ಜಿಗೆ ಹೆಚ್ಚಿನ ಮನ್ನಣೆ ದೊರೆತ್ತಿದ್ದರಿಂದ ಸುವೇಂದು ಬಿಜೆಪಿಯತ್ತ ಮುಖ ಮಾಡಿದರು.

ಸಮಿಕ್ ಭಟ್ಟಾಚಾರ್ಯ: ಬಂಗಾಳದ ಬಿಜೆಪಿ ರಾಜ್ಯಾಧ್ಯಕ್ಷರಾಗಿರುವ ಸಮಿಕ್ ಭಟ್ಟಾಚಾರ್ಯ ಅವರ ಹೆಸರು ಈಗ ಸಿಎಂ ರೇಸ್‌ನಲ್ಲಿ ಇದೆ. ಆರ್‌ಎಸ್‌ಎಸ್‌ನಲ್ಲೂ ಪ್ರಮುಖವಾಗಿ ಗುರುತಿಸಿಕೊಂಡಿರುವ ಸಮಿಕ್, ವಿವಿಧ ಸಮುದಾಯಗಳಲ್ಲಿ ಪಕ್ಷದ ನೆಲೆಯನ್ನು ವಿಸ್ತರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ದಿಲೀಪ್ ಘೋಷ್: ಬಿಜೆಪಿ ರಾಜ್ಯ ಘಟಕದ ಮಾಜಿ ಅಧ್ಯಕ್ಷ ದಿಲೀಪ್ ಘೋಷ್ ತಳಮಟ್ಟದಿಂದ ಕಾರ್ಯಕರ್ತರನ್ನು ಸಂಘಟಿಸಿದ್ದಾರೆ. ಇವರ ನಾಯಕತ್ವದಲ್ಲೇ ಬಿಜೆಪಿ 2019ರ ಲೋಕಸಭೆ ಮತ್ತು 2021ರ ವಿಧಾನಸಭಾ ಚುನಾವಣೆಗಳಲ್ಲಿ ಮುನ್ನಡೆ ಸಾಧಿಸಿತ್ತು.

ಆಡಳಿತ ವಿರೋಧಿ ಅಲೆ, ಬಿಜೆಪಿಯ ಆಕ್ರಮಣಕಾರಿ ಪ್ರಚಾರದಿಂದ ಟಿಎಂಸಿಗೆ ಸೋಲು

ಬಂಗಾಳಿಗರ ಮಮತೆ ಕಳೆದುಕೊಂಡರು ಬ್ಯಾನರ್ಜಿ

ಭಾರೀ ಮುನ್ನಡೆ ಸಾಧಿಸುತ್ತಿದ್ದಂತೆ ಬಂಗಾಳದಲ್ಲಿ ಬಿಜೆಪಿ ಕಾರ್ಯಕರ್ತರು ಕುಣಿದು ಸಂಭ್ರಮಿಸಿದರು.

ಪ.ಬಂಗಾಳದಲ್ಲಿ ಸತತ 15 ವರ್ಷಗಳ ಟಿಎಂಸಿ ಆಡಳಿತವನ್ನು ಕೊನೆಗೊಳಿಸಿ ಬಿಜೆಪಿ ಅಧಿಕಾರಕ್ಕೇರಿದೆ. 2021ರ ಚುನಾವಣೆಯಲ್ಲಿ ಬಿಜೆಪಿಯ ಸಂಪೂರ್ಣ ಪ್ರತಿರೋಧವನ್ನು ಎದುರಿಸಿಯೂ 223 ಸ್ಥಾನಗಳನ್ನು ಗೆದ್ದಿದ್ದ ಟಿಎಂಸಿ ಈ ಬಾರಿ ಮಂಡಿಯೂರಿದೆ. ಬಂಗಾಳದ ಮತದಾರರನ್ನೇ ಗಮನಿಸಿದರೆ ಈ ಸೋಲನ್ನು ಒಪ್ಪಿಕೊಳ್ಳುವುದು ಟಿಎಂಸಿಗೆ ಅನಿವಾರ್ಯವಾಗಿತ್ತು. ಇದಕ್ಕೂ ಮುನ್ನ ಸಿಪಿಎಂ ಪಕ್ಷವೂ ಸತತವಾಗಿ ಬಂಗಾಳವನ್ನು ಆಳಿದ ನಂತರ ಅಲ್ಲಿನ ಜನರು ಬೇಸತ್ತು ಹೋಗಿದ್ದರು. ನಿಲುವುಗಳು ಬದಲಾಗದೇ ಇರುವುದು, ಅಭಿವೃದ್ಧಿಯ ಕೊರತೆ, ಬರೀ ಸೈದ್ಧಾಂತಿಕ ಚರ್ಚೆಗಳು, ನಿರುದ್ಯೋಗ, ಆರ್ಥಿಕ ದುಸ್ಥಿತಿ ಇವೆಲ್ಲ ಬಂಗಾಳವನ್ನು ಕಾಡಿದ್ದರಿಂದ ಟಿಎಂಸಿಯತ್ತ 2011ರಲ್ಲಿ ಬಂಗಾಳಿಗರು ಮುಖ ಮಾಡಿದ್ದರು.

ಅದಾದ ಮೇಲೆ ಮಮತಾ ಬ್ಯಾನರ್ಜಿ ಪಟ್ಟು ಹಿಡಿದು ಬಂಗಾಳವನ್ನು ಆಳಿದರು. ಅವರ ಮೇಲೆ ಬಂಗಾಳಿಗರಿಗೆ ಭಾರೀ ನಿರೀಕ್ಷೆಯಿತ್ತು. ಆದರೆ ಬಂಗಾಳದಲ್ಲಿ ಜನರು ಬಯಸಿದಂತಹ ಯಾವ ಬದಲಾವಣೆಯಾಗಲಿಲ್ಲ ಎಂಬ ಮಾತುಗಳಿವೆ. ಜೊತೆಗೆ ಟಿಎಂಸಿ ಕಾರ್ಯಕರ್ತರು ಗೂಂಡಾಗಳಂತೆ ವರ್ತಿಸಲು ಶುರು ಮಾಡಿದರು. ಎದುರಾಳಿಗಳನ್ನು ನಿರ್ದಯವಾಗಿ ಹೊಸಕಿಹಾಕುವುದು, ಅತ್ಯಾಚಾರ ಮಾಡುವುದು... ಇಂತಹ ಸಂಗತಿಗಳು ಎಗ್ಗಿಲ್ಲದೇ ನಡೆಯತೊಡಗಿದವು. ಇತ್ತೀಚೆಗೆ ಏ.23, 29ರಂದು ಬಂಗಾಳದಲ್ಲಿ 2 ಹಂತದ ಮತದಾನವಾಗಿದ್ದಾಗಲೂ ಬಿಜೆಪಿ ನಾಯಕರ ಮೇಲೆ ಟಿಎಂಸಿ ಕಾರ್ಯಕರ್ತರು ಎಗ್ಗಿಲ್ಲದೇ ದಾಳಿ ನಡೆಸಿದ್ದರು. ಮತಗಟ್ಟೆಯಲ್ಲಿ ಅಕ್ರಮ ನಡೆಯುತ್ತಿವೆ ಎಂಬ ಆರೋಪ ಬಂದ ಹಿನ್ನೆಲೆಯಲ್ಲಿ ಬಿಜೆಪಿ ಅಭ್ಯರ್ಥಿಯೊಬ್ಬರು ಸ್ಥಳಕ್ಕೆ ತೆರಳಿದ್ದಾಗ, ಅವರ ಮೇಲೆ ಜನರು ಹಿಗ್ಗಾಮುಗ್ಗಾ ದಾಳಿ ಮಾಡಿದ್ದರು. ಅವರನ್ನು ರಕ್ಷಿಸಲು ಇದ್ದ ಒಬ್ಬನೇ ಒಬ್ಬ ಭದ್ರತಾ ಸಿಬ್ಬಂದಿ ಪರದಾಡಿದರು.

ಇಡೀ ರಾಜ್ಯದಲ್ಲಿ ಟಿಎಂಸಿ ಕಾರ್ಯಕರ್ತರು ಈ ಮಟ್ಟದಲ್ಲಿ ಗೂಂಡಾಗಿರಿ ನಡೆಸಿದ್ದಾರೆ ಎಂಬ ಮಾತುಗಳು ನಿಧಾನಕ್ಕೆ ಇಡೀ ದೇಶಕ್ಕೆ ಗೊತ್ತಾಗಿದೆ. ಪ.ಬಂಗಾಳದಲ್ಲಿ ಜನರು ರೋಸಿಹೋಗಿದ್ದರು. ಸಹಜವಾಗಿ ಬದಲಾವಣೆ ಬಯಸಿದ್ದು, ಬಿಜೆಪಿಯ ಗೆಲುವಾಗಿ ಪರಿವರ್ತನೆಯಾಗಿದೆ. ಇನ್ನೊಂದು ಕಡೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಬಂಗಾಳದಲ್ಲಿ ಕಳೆದ ಚುನಾವಣೆಯಲ್ಲಿ ಬಿಜೆಪಿ ಆಕ್ರಮಣಕಾರಿಯಾಗಿ ಪ್ರಚಾರ ನಡೆಸಿತ್ತು. ಆ ವೇಳೆ ಸವಾಲು ಗೆದ್ದಿದ್ದ ಮಮತಾ ವಿರುದ್ಧ ಈ ಬಾರಿ ಬಿಜೆಪಿ ದಾಳಿಯನ್ನು ಇನ್ನೂ ಜೋರು ಮಾಡಿತು. ಕಲ್ಲಿದ್ದಲು ಹಗರಣದ ಆರೋಪಿ, ಐಪ್ಯಾಕ್ ಮುಖ್ಯಸ್ಥರ ಬಂಧನವೂ ಆಯಿತು. ಬಂಗಾಳದಲ್ಲಿ ಇಡಿ ದಾಳಿ ಮಾಡಲು ತೆರಳಿದ್ದಾಗ, ಸ್ವತಃ ಕೇಂದ್ರಕ್ಕೆ ಹೋದ ಮಮತಾ ದತ್ತಾಂಶವನ್ನೇ ಹೊತ್ತುಕೊಂಡು ಹೋಗಿದ್ದರು. ಅದು ಇಡೀ ದೇಶದಲ್ಲಿ ಸದ್ದು ಮಾಡಿತ್ತು.

ಈ ಎಲ್ಲ ಹೋರಾಟಗಳ ಪರಿಣಾಮ ಬಂಗಾಳದಲ್ಲಿ ಮಮತಾ ವಿರುದ್ಧ ಒಂದು ಜನಾಕ್ರೋಶ ನಿರ್ಮಾಣವಾಯಿತು. ಇದರ ನಡುವೆ ಬಿಜೆಪಿ ಮಾಡಿದ ತಂತ್ರಗಾರಿಕೆ ಮಮತಾರನ್ನು ಕಟ್ಟಿ ಹಾಕಲು ಯಶಸ್ವಿಯಾಗಿತ್ತು. ಕಳೆದ ಬಾರಿ ಮಮತಾ ಬ್ಯಾನರ್ಜಿ ನಂದಿಗ್ರಾಮದಲ್ಲಿ ಸ್ಪರ್ಧಿಸಿ ಸುವೇಂದು ಅಧಿಕಾರಿ ವಿರುದ್ಧ ಸೋತುಹೋಗಿದ್ದರು. ಈ ಬಾರಿ ಬ್ಯಾನರ್ಜಿ ಭವಾನಿಪುರದಲ್ಲಿ ಸ್ಪರ್ಧಿಸಿದರು. ಅಲ್ಲೂ ಸುವೇಂದು ಎದುರಾಳಿಯಾಗಿ ಸ್ಪರ್ಧಿಸಿದರು. ಇದು ಮಮತಾರನ್ನು ಕಟ್ಟಿಹಾಕಿತು. ಬಿಜೆಪಿಯ ಹತ್ತಾರು ತಂತ್ರಗಾರಿಕೆಗಳು, ಆಕ್ರಮಣಕಾರಿ ಧೋರಣೆಗಳು ಟಿಎಂಸಿಯನ್ನು ಇಕ್ಕಟ್ಟಿಗೆ ಸಿಲುಕಿಸಿ ಸೋಲೊಪ್ಪಿಕೊಳ್ಳುವಂತೆ ಮಾಡಿದೆ.

ಭರ್ಜರಿ ಜಯ ದಾಖಲಿಸಿದರೂ ಬಹುಮತಕ್ಕೆ ಅಲ್ಪ ಕೊರತೆ | 2021ರಲ್ಲಿ 113 ಕ್ಷೇತ್ರ ಗೆದ್ದಿದ್ದ ಡಿಎಂಕೆ ಪಕ್ಷಕ್ಕೆ ಭಾರೀ ಹೊಡೆತ

ಮೊದಲ ಯತ್ನದಲ್ಲೇ ವಿಜಯದ ಶತಕ

ಸರಕಾರ ರಚನೆಗೆ ಮೈತ್ರಿ: ಕಾಂಗ್ರೆಸ್‌ಗೆ ವಿಜಯ್ ತಂದೆ ಆಹ್ವಾನ

ಚೆನ್ನೈ: ಎಂಜಿ ರಾಮಚಂದ್ರನ್, ಎಂ.ಕರುಣಾನಿಧಿ, ಕುಮಾರಿ ಜಯಲಲಿತಾ... ಹೀಗೆ ಚಲನಚಿತ್ರ ರಂಗದ ನಟ-ನಟಿ, ಚಿತ್ರಸಾಹಿತಿಗೆ ಸಾಲಾಗಿ ಅಧಿಕಾರ ನೀಡುತ್ತಾ ಬಂದಿದ್ದ ತಮಿಳುನಾಡು ಮತದಾರರು, ಈ ಬಾರಿಯೂ ಚಲನಚಿತ್ರ ನಾಯಕ ನಟನಿಗೇ ರಾಜ್ಯದ ಆಡಳಿತದ ಚುಕ್ಕಾಣಿ ಹಿಡಿದಿದ್ದಾರೆ. ಪರಿಣಾಮ ನಾಯಕ ನಟ ವಿಜಯ್(ಸಿ. ಜೋಸೆಫ್ ವಿಜಯ್) ಅವರು ತಮಿಳಗ ವೆಟ್ರಿ ಕಳಗಂ ಪಕ್ಷ ಅಧಿಕಾರದ ಗದ್ದುಗೆಗೆ ಹತ್ತಿರವಾಗಿದೆ.

ತಮಿಳಗ ವೆಟ್ರಿ ಕಳಗಂ(ಟಿವಿಕೆ) ಪಕ್ಷ ಹೊಸದಾಗಿಯಷ್ಟೇ ಸ್ಥಾಪನೆ ಆಗಿದ್ದರೂ, ಕರೂರು ಬಳಿ ಕಾಲ್ತುಳಿತವಾಗಿ 41 ಜನ ಬಲಿಯಾದರೂ, ಪಕ್ಷದ ನಾಯಕ ಪತ್ನಿ ಚುನಾವಣೆ ಸಂದರ್ಭ ವಿಚ್ಛೇದನಕ್ಕೆ ಕೋರ್ಟ್‌ಗೆ ಅರ್ಜಿ ಹಾಕಿದರೂ ತಮಿಳುನಾಡಿನ ಮತದಾರ ಇದಾವುದಕ್ಕೂ ಗಮನ ಕೊಟ್ಟಿಲ್ಲ.

- ವಿಧಾನಸಭೆ ಕ್ಷೇತ್ರ 234
- ಮತದಾರರು 5.73 ಕೋಟಿ
- ಅಭ್ಯರ್ಥಿಗಳ ಸಂಖ್ಯೆ 4,023
- ಮತದಾನ ಪ್ರಮಾಣ ಶೇ.84.80

ನಾಯಕ ನಟ ವಿಜಯ್ ಅವರಿಗೆ ಮತ್ತು ಅವರ ಟಿವಿಕೆ ಪಕ್ಷಕ್ಕೆ ಮತ ನೀಡಿದ್ದಾರೆ. ನೀವೇ ನಮ್ಮ 'ಜನನಾಯಗನ್' ಎಂದಿದ್ದಾರೆ.

ಸಿಎಂಗೇ ಸೋಲು: 2021ರ ವಿಧಾನಸಭೆ ಚುನಾವಣೆಯಲ್ಲಿ ದ್ರಾವಿಡ ಮುನ್ನೇತ್ರ ಕಳಗಂ (ಡಿಎಂಕೆ) ಪಕ್ಷಕ್ಕೆ 133 ಶಾಸಕ ಬಲವನ್ನು ನೀಡಿದ್ದ ತಮಿಳುನಾಡು ಮತದಾರ, ಈ ಬಾರಿ 'ಆಡಳಿತ ವಿರೋಧದ ಅಲೆ' ಸೃಷ್ಟಿಸಿದ್ದಾನೆ. ಪರಿಣಾಮ, ಪಕ್ಷ 59 ಕ್ಷೇತ್ರ ಗಳಿಗೆ ಸೀಮಿತವಾಗಿದೆ. ಖುದ್ದು ಮುಖ್ಯ ಮಂತ್ರಿ ಎಂ.ಕೆ.ಸ್ಟಾಲಿನ್ ಅವರೇ ಸೋಲು ಕಾಣುವಂತಾಗಿದೆ. ಕೊಳತ್ತೂರು ಕ್ಷೇತ್ರದಲ್ಲಿ ಟಿವಿಕೆ ಪಕ್ಷದ ವಿ.ಎಸ್.ಬಾಬು ಎಂಬವರ ವಿರುದ್ಧ 9 ಸಾವಿರ ಮತಗಳ ಅಂತರದಿಂದ ಸ್ಟಾಲಿನ್ ಸೋಲು ಅನುಭವಿಸಿದ್ದಾರೆ.

ಪಳನಿಸ್ವಾಮಿಗೆ ಗುದ್ದು: ಎಐಎಡಿಎಂಕೆ ಮತ್ತು ಬಿಜೆಪಿ ಮೈತ್ರಿ ಮಾಡಿಕೊಂಡರೂ ಪ್ರಯೋಜನವಾಗಿಲ್ಲ. ಒಂದರ್ಥದಲ್ಲಿ ಎರಡೂ ಪಕ್ಷಗಳಿಗೂ ಶಾಸಕ ಬಲ ವಿಚಾರ ದಲ್ಲಿ ಸ್ವಲ್ಪ ನಷ್ಟವೇ ಆಗಿದೆ. 2021ರ ಚುನಾ ವಣೆಯಲ್ಲಿ 66 ಶಾಸಕ ಬಲ ಹೊಂದಿದ್ದ ಎಐಎಡಿಎಂಕೆ ಪಕ್ಷ ಈ ಬಾರಿಯ ಚುನಾವಣೆ ಯಲ್ಲಿ 11 ಕ್ಷೇತ್ರಗಳನ್ನು ಕಳೆದುಕೊಂಡು ತನ್ನ ಶಾಸಕ ಬಲವನ್ನು 45ಕ್ಕೆ ಕುಗ್ಗಿಸಿ ಕೊಂಡಿದೆ.

ಕಮಲ ಕೆಸರಿಗೆ: ಬಿಜೆಪಿ ಕೂಡಾ ಈ ಬಾರಿಯ ಚುನಾವಣೆಯಲ್ಲಿ ಗಳಿಸಿದ್ದಕ್ಕಿಂತ ಕಳೆದುಕೊಂಡಿದ್ದೇ ಹೆಚ್ಚು. ಎಐಎಡಿಎಂಕೆ ಪಕ್ಷದ ಜತೆ ಮೈತ್ರಿ ಮಾಡಿಕೊಳ್ಳುವ ಸಲುವಾಗಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಅಣ್ಣಾ ಮಲೈ ಅವರನ್ನೇ ಪದಚ್ಯುತಗೊಳಿಸಿದ ಬಿಜೆಪಿ, ಆ ತಪ್ಪಿಗೆ ತಕ್ಕ ದಂಡನೆ ಅನುಭವಿಸಿದೆ. ಬರಿಗಾಲಲ್ಲಿ ನಡಿಗೆ, ಪ್ರಾಮಾಣಿಕ-ನೇರ ನಡೆನುಡಿಯ ರಾಜಕಾರಣ ಮಾಡಿಕೊಂಡಿದ್ದ ಮಾಜಿ ಐಪಿಎಸ್ ಅಧಿಕಾರಿ ಅಣ್ಣಾಮಲೈ ಅವರನ್ನು ಪಕ್ಷ ಮೂಲೆಗುಂಪು ಮಾಡಿದ್ದನ್ನು ಕಂಡು ಮತ ದಾರರೂ ಬೇಸರಗೊಂಡರು ಎಂಬುದು ಈ ಬಾರಿಯ ಫಲಿತಾಂಶದಿಂದಲೇ ಸ್ಪಷ್ಟವಾಗಿದೆ.

2021ರ ಚುನಾವಣೆಯಲ್ಲಿ ಏಕಾಂಗಿಯಾಗಿ ಸ್ಪರ್ಧೆ ಮಾಡಿ 5 ಶಾಸಕ ಬಲ ಹೊಂದಿದ್ದ ಭಾರತೀಯ ಜನತಾ ಪಕ್ಷ, ಈ ಬಾರಿ ಪ್ರಮುಖ ವಿರೋಧ ಪಕ್ಷ ಎಐಎಡಿಎಂಕೆ ಜತೆ ಮೈತ್ರಿ ಮಾಡಿಕೊಂಡರೂ ಲಾಭವಾಗಿಲ್ಲ. ಬದಲಾಗಿ 4 ಸ್ಥಾನಗಳ ನಷ್ಟ ಅನುಭವಿಸುವಂತಾಗಿದೆ.

ಈ ಬಾರಿ ಬಿಜೆಪಿ 1 ಕ್ಷೇತ್ರದಲ್ಲಷ್ಟೇ ಗೆಲವು ಕಂಡಿದೆ. ಆ ಮಟ್ಟಿಗೆ ತಮಿಳುನಾಡು ಮತದಾರ ಬಿಜೆಪಿಯ ಕಮಲವನ್ನು ಮತ್ತೆ ಕೆಸರಿಗೇ ಎಸೆದಿದ್ದಾನೆ. ಕಾಂಗ್ರೆಸ್ ಮತ್ತು ಪಟ್ಟಾಳಿ ಮಕ್ಕಳ್ ಕಚ್ಚಿ(ಪಿಎಂಕೆ) ಪಕ್ಷಗಳು ತಲಾ 5 ಕ್ಷೇತ್ರಗಳಲ್ಲಿ ಜಯ ಸಾಧಿಸಿವೆ.

ಪಕ್ಷ	2026	ಹಿಂದಿನ ಬಾರಿ
ಟಿವಿಕೆ	107	------
ಡಿಎಂಕೆ+	74	{159}
ಎಡಿಎಂಕೆ+	52	{75}
ಇತರೆ	01	------

ಚಂದ್ರಶೇಖರ್

ಸರಕಾರ ರಚನೆಗೆ ಕಾಂಗ್ರೆಸ್ ಬೆಂಬಲ ಕೋರಿದ ಟಿವಿಕೆ

ತಮಿಳುನಾಡಿನ ವಿಧಾನಸಭಾ ಚುನಾವಣೆಯಲ್ಲಿ ಚಿತ್ರನಟ-ರಾಜಕಾರಣಿ ವಿಜಯ್ ಅವರ ತಮಿಳಗ ವೆಟ್ರಿ ಕಳಗಂ(ಟಿವಿಕೆ) ಮೊದಲ ಯತ್ನದಲ್ಲೇ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ರಾಜ್ಯದಲ್ಲಿ ಸರಕಾರ ರಚನೆಗೆ ಹತ್ತಿರವಾಗಿದೆ. ಆದರೆ, ವಿಧಾನಸಭೆಯಲ್ಲಿ ಬಹುಮತ ಸಾಬೀತಿಗೆ ಕೆಲವೇ ಸ್ಥಾನಗಳ ಕೊರತೆ ಎದುರಾಗಿದೆ. 234 ಸದಸ್ಯ ಬಲದ ತಮಿಳುನಾಡು ವಿಧಾನಸಭೆಗೆ ಸರ್ಕಾರ ರಚಿಸಲು 118 ಶಾಸಕರ ಬೆಂಬಲ ಬೇಕಿದೆ. ಆದರೆ ಟಿವಿಕೆ ಪಕ್ಷ 108 ಸ್ಥಾನ ಗಳಿಸಿರುವುದರಿಂದ ಸರಕಾರ ರಚನೆಗೆ ಶಾಸಕ ಬಲದ ಕೊರತೆ ಎದುರಾಗಿದೆ. ಹಾಗಾಗಿ, ಸೂಕ್ತ ಮಿತ್ರಪಕ್ಷಗಳಿಗಾಗಿ ಟಿವಿಕೆ ನಾಯಕರು ಶೋಧ ನಡೆಸಿದ್ದಾರೆ. ಪಕ್ಷದ ಸಂಸ್ಥಾಪಕ ನಾಯಕ ವಿಜಯ್ ಅವರ ತಂದೆ ಎಸ್.ಎ. ಚಂದ್ರಶೇಖರ್ ಅವರು, 5 ಸದಸ್ಯ ಬಲ ಹೊಂದಿರುವ ಕಾಂಗ್ರೆಸ್ ಜತೆಗೆ ಮೈತ್ರಿ ಮಾಡಿಕೊಳ್ಳಲು ಮನಸ್ಸು ಮಾಡಿದ್ದಾರೆ. ಈ ಸಂಬಂಧ ಕಾಂಗ್ರೆಸ್ ಪಕ್ಷವನ್ನು ವಿಜಯ್ ಅವರ ತಂದೆ ಮಾತುಕತೆಗೆ ಆಹ್ವಾನಿಸಿದ್ದಾರೆ. ಟಿವಿಕೆ ಪಕ್ಷವು ಕಾಂಗ್ರೆಸ್ ಜತೆ ಅಧಿಕಾರವನ್ನು ಹಂಚಿಕೊಳ್ಳಲು ಸಿದ್ಧವಾಗಿದೆ ಎಂದೂ ಹೇಳಿದ್ದಾರೆ. ಕಾಂಗ್ರೆಸ್ ಈ ಮೊದಲು ಬೇರೆ ಪಕ್ಷಗಳನ್ನು ಬೆಂಬಲಿಸುವ ಮೂಲಕ ರಾಜ್ಯ ದಲ್ಲಿ ತನ್ನ ರಾಜಕೀಯ ಪ್ರಭಾವವನ್ನು ಕಳೆದುಕೊಂಡಿದೆ. ಈಗ ಹೊಸ ಪಕ್ಷ ಟಿವಿಕೆ ಜತೆ ಮೈತ್ರಿ ಮೂಲಕ ಅಧಿಕಾರವನ್ನು ಮರಳಿ ಪಡೆಯುವ ಅವಕಾಶವಿದೆ ಎಂದು ವಿಜಯ್ ಅವರ ತಂದೆ ಹೇಳಿರುವುದಾಗಿ ವರದಿಯಾಗಿದೆ. ಆದರೆ, ಡಿಎಂಕೆ ಜತೆ ಗೂಡಿ ಚುನಾವಣೆ ಎದುರಿಸಿರುವ ಕಾಂಗ್ರೆಸ್ ಈ ವಿಚಾರವಾಗಿ ತಕ್ಷಣಕ್ಕೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಋಣ ತೀರಿಸುವೆ

'ನಾನು 2 ಕ್ಷೇತ್ರಗಳಿಂದ ಸ್ಪರ್ಧಿಸುತ್ತೇನೆ. ಲಕ್ಷುರಿ ಜೀವನ ಶೈಲಿ ಕೈಬಿಟ್ಟು, ನೋವುಗಳನ್ನು ಸಹಿಸಿಕೊಂಡು ನಿಮ್ಮ ಋಣ ತೀರಿಸಲು ಬಂದಿದ್ದೇನೆ, ಒಂದು ಬಾರಿ ಅವಕಾಶ ನೀಡಿ' ಎಂದು ಚಿತ್ರನಟ, ಟಿವಿಕೆ ಪಕ್ಷದ ಸಂಸ್ಥಾಪಕ ಸಿ.ಜೋಸೆಫ್ ವಿಜಯ್, ಚೆನ್ನೈನ ಪೆರಂಬೂರು ಮತ್ತು ತಿರುಚಿರಾಪಳ್ಳಿ ಪೂರ್ವ ವಿಧಾನಸಭಾ ಕ್ಷೇತ್ರಗಳಿಂದ ನಾಮಪತ್ರ ಸಲ್ಲಿಸಿದಾಗ ರಾಜ್ಯದ ಮತದಾರರಲ್ಲಿ ಮನವಿ ಮಾಡಿದ್ದರು. ಯುವಕರಿಗಾಗಿ ಗ್ಯಾರಂಟಿ ಎಂಬ ಕಾರ್ಯಯೋಜನೆ ಪ್ರಕಟಿಸಿದ್ದ ವಿಜಯ್, ಟಿವಿಕೆ ಪಕ್ಷ ಅಧಿಕಾರಕ್ಕೆ ಬಂದರೆ, 29 ವರ್ಷ ಮೇಲ್ಪಟ್ಟ ನಿರುದ್ಯೋಗಿ ಪದವೀಧರರಿಗೆ ಮಾಸಿಕ 4,000 ರು. ನೆರವು ನೀಡಲಾಗುವುದು. ಮಾದಕ ವಸ್ತುಗಳಿಲ್ಲದ ತಮಿಳುನಾಡು ನಿರ್ಮಾಣ, 12ನೇ ತರಗತಿಯಿಂದ ಪಿಎಚ್‌ಡಿ ವರೆಗಿನ ವಿದ್ಯಾಭ್ಯಾಸಕ್ಕಾಗಿ 20 ಲಕ್ಷ ರು.ವರೆಗೆ ಜಾಮೀನು ಬೇಕಿಲ್ಲದ ಸಾಲ ಸೌಲಭ್ಯದ ಭರವಸೆ ನೀಡಿದ್ದರು.

ಗೆಲುವಿಗೆ ಕಾರಣ

1. ನಾಯಕ ನಟ ವಿಜಯ್ ಅಪಾರ ಜನಪ್ರಿಯತೆ, ನೂತನ ಪಕ್ಷದ ಸ್ಥಾಪನೆ, ಹೊಸ ಮುಖವೆಂಬ ಆಕರ್ಷಣೆ
2. ಮಹಿಳೆಯರಿಗೆ ಆರ್ಥಿಕ ನೆರವು, ಮದುವೆಗೆ ಒಡವೆ, ಯುವಜನರಿಗೆ ಉದ್ಯೋಗ, ರೈತ ಸಾಲ ಮನ್ನಾ ಪ್ರಣಾಳಿಕೆ
3. ಕರೂರು ಕಾಲ್ತುಳಿತ ದುರಂತಕ್ಕೆ 41 ಜೀವಬಲಿಯಾದರೂ, ಸಂತ್ರಸ್ತರ ಭೇಟಿ-ಸಂತೈಕೆ ಮತ್ತು ಪರಿಹಾರ ಧನ ವಿತರಣೆ
4. ಋಣ ತೀರಿಸಲು ಬಂದಿರುವ. 1 ಅವಕಾಶ ಕೊಡಿ ಎಂಬ ಭಾವೋದ್ವೇಗದ ಭಾಷಣ, ಜನಾಕರ್ಷಕ ರೋಡ್ ಷೋ, ರ‍್ಯಾಲಿ.
5. ಯಾವುದೇ ಪಕ್ಷದ ಜತೆ ಮೈತ್ರಿ ಮಾಡಿಕೊಳ್ಳದೇ ಏಕಾಂಗಿಯಾಗಿ 'ಟಿವಿಕೆ' ಪಕ್ಷ ಕಣದಲ್ಲಿರುವಂತೆ ನೋಡಿಕೊಂಡಿದ್ದು.

ಸೋಲಿಗೆ ಕಾರಣ

1. ಪ್ರಬಲ ಆಡಳಿತ ವಿರೋಧಿ ಅಲೆಯು ಈ ಬಾರಿ ದ್ರಾವಿಡ ಮುನ್ನೇತ್ರ ಕಳಗಂ ಪಕ್ಷದ ಸೋಲಿಗೆ ಕಾರಣ.
2. ತಂದೆ ಕರುಣಾನಿಧಿ, ಮಗ ಸ್ಟಾಲಿನ್ ಸಿಎಂ, ಕನಿಮೊಳಿ ಸಂಸದೆ, ಮೊಮ್ಮಗ ಉದಯನಿಧಿ ಡಿಸಿಎಂ. ವಂಶಪಾರಂಪರ್ಯ ಆಡಳಿತ ಅಪಖ್ಯಾತಿ.
3. ಸಾರ್ವಜನಿಕ ವೇದಿಕೆಗಳಲ್ಲಿ ಸನಾತನ ಹಿಂದೂ ಧರ್ಮ, ದೇವತೆಗಳ ಅವಹೇಳನ, ಹಿಂದೂ ಧರ್ಮದ ಆಚರಣೆಗಳಿಗೆ ಅಪಮಾನ
4. ವಿವಿ ವಿದ್ಯಾರ್ಥಿನಿ ಅತ್ಯಾಚಾರ ಪ್ರಕರಣ, ಆರೋಪಿ ಡಿಎಂಕೆ ಯುವ ಘಟಕ ಪದಾಧಿಕಾರಿ. ಕಾನೂನು-ಸುವ್ಯವಸ್ಥೆ ವಿಫಲತೆಗೆ ಸಾಕ್ಷಿ.
5. ಪ್ರಮುಖ ಸಾರ್ವಜನಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಡದಿದ್ದುದು, ಕೇಂದ್ರದ ಯೋಜನೆ ಜಾರಿಗೆ ಅವಕಾಶ ನೀಡದಿದ್ದುದು.

ಪ್ರಮುಖ ಪಕ್ಷಗಳು: ಟಿವಿಕೆ, ಎಐಎಡಿಎಂಕೆ, ಡಿಎಂಕೆ, ಬಿಜೆಪಿ, ಪಿಎಂಕೆ, ಕಾಂಗ್ರೆಸ್, ಸಿಪಿಐ, ಸಿಪಿಐ-ಎಂ, ಐಯುಎಂಎಲ್, ವಿಸಿಕೆ, ಅಮ್ಮ ಮಕ್ಕಳ್ ಮುನ್ನೇತ್ರ ಕಳಗಂ, ಡಿಎಂಡಿಕೆ.

ಗೆದ್ದ ಪ್ರಮುಖರು

ವಿಜಯ್

ಪಕ್ಷ ಟಿವಿಕೆ
ಕ್ಷೇತ್ರ ಪೆರಂಬೂರು
ಎದುರಾಳಿ ಆರ್.ಡಿ.ಶೇಖರ್

ವಿ.ಎಸ್.ಬಾಬು

ಪಕ್ಷ ಟಿವಿಕೆ
ಕ್ಷೇತ್ರ ಕೊಳತ್ತೂರು
ಎದುರಾಳಿ ಎಂಕೆ ಸ್ಟಾಲಿನ್

ಉದಯನಿಧಿ ಸ್ಟಾಲಿನ್

ಪಕ್ಷ ಡಿಎಂಕೆ
ಕ್ಷೇತ್ರ ಚೆಪಾಕ್
ಎದುರಾಳಿ ಸೆಲ್ವಂ ಡಿ.

ಎಡಪ್ಪಾಡಿ ಪಳನಿಸ್ವಾಮಿ

ಪಕ್ಷ ಎಐಎಡಿಎಂಕೆ
ಕ್ಷೇತ್ರ ಎಡಪ್ಪಾಡಿ
ಎದುರಾಳಿ ಪ್ರೇಮ್‌ಕುಮಾರ್

ವಿ.ಸೆಂಥಿಲ್ ಬಾಲಾಜಿ

ಪಕ್ಷ ಡಿಎಂಕೆ
ಕ್ಷೇತ್ರ ಕೊಯಮತ್ತೂರು
ಎದುರಾಳಿ ಸೆಂಥಿಲ್‌ಕುಮಾರ್

ಸೋತ ಪ್ರಮುಖರು

ಎಂ.ಕೆ.ಸ್ಟಾಲಿನ್

ಪಕ್ಷ ಡಿಎಂಕೆ
ಕ್ಷೇತ್ರ ಕೊಳತ್ತೂರು
ಎದುರಾಳಿ ವಿ.ಎಸ್.ಬಾಬು

ನಯನಾರ್ ನಾಗೇಂದ್ರನ್

ಪಕ್ಷ ಬಿಜೆಪಿ
ಕ್ಷೇತ್ರ ಸತ್ತೂರು
ಎದುರಾಳಿ ಕಡರ್‌ಕೈರಾಜ್

ವನತಿ ಶ್ರೀನಿವಾಸನ್

ಪಕ್ಷ ಬಿಜೆಪಿ
ಕ್ಷೇತ್ರ ಕೊಯಮತ್ತೂರು (ಉ)
ಎದುರಾಳಿ 00000000000

ಡಾ.ತಮಿಳ್‌ಸಾಯಿ

ಪಕ್ಷ ಬಿಜೆಪಿ
ಕ್ಷೇತ್ರ ಮೈಲಾಪುರ್
ಎದುರಾಳಿ ವೆಂಕಟರಮಣನ್

ಇನಿಗೋ ಇರುದಯರಾಜ್

ಪಕ್ಷ ಡಿಎಂಕೆ
ಕ್ಷೇತ್ರ ತಿರುಚನಾಪಳ್ಳಿ (ಪೂ)
ಎದುರಾಳಿ ವಿಜಯ್


ತಮಿಳುನಾಡಿನ ಜನತೆ ತಮ್ಮದೇ ಆದ ನಿಲುವು ತೆಗೆದುಕೊಂಡಿರುವುದಕ್ಕೆ, ಯಾವುದೇ ಆಮಿಷಗಳಿಗೂ ಬಲಿಯಾಗದೇ ಮತದಾನ ಮಾಡಿರುವುದಕ್ಕೆ ತಮಿಳುನಾಡು ಮತದಾರರನ್ನು ಅಭಿನಂದಿಸುವೆ, ಆರಾಧಿಸುವೆ. ಹೊಸ ಸಿಎಂಗೆ ಅಭಿನಂದನೆ.
ವಿಜಯ್ ದೇವರಕೊಂಡ
ತೆಲುಗು ಚಿತ್ರನಟ

ಟಿವಿಕೆ ಪಕ್ಷ ಮೊದಲ ಚುನಾವಣೆಯಲ್ಲೇ ಅದ್ಭುತ ಜಯ ಸಾಧಿಸಿದೆ. ನಟ ವಿಜಯ್ ಗೆಲುವು ಅಭಿನಂದನಾರ್ಹ. ನನ್ನ ರಾಜ್ಯದ ಜನತೆ ಕಡೆಗೂ ವಂಶಪಾರಂಪರ್ಯ ಆಡಳಿತ ವನ್ನು ದೂರ ಮಾಡಿದ್ದಾರೆ. ಹಣ ಪಡೆಯದೇ ಮತದಾನ ಮಾಡಿ ಪ್ರಾಮಾಣಿಕತೆ ಮೆರೆದಿದ್ದಾರೆ.
ಅಣ್ಣಾಮಲೈ
ಬಿಜೆಪಿ ನಾಯಕ

ಪ್ರಜಾಪ್ರಭುತ್ವ ರಾಜಕೀಯದಲ್ಲಿ ಚುನಾವಣೆಗಳು ಕೇವಲ ಒಂದು ಭಾಗ. ನನ್ನ ಗೆಳೆಯ, ಡಿಎಂಕೆ ನಾಯಕ ಗೆಲುವಿನಲ್ಲಿ ಸಂತೋಷ ಪಡುವವನಲ್ಲ. ಸೋಲಿನಲ್ಲಿ ಕುಗ್ಗಿ ಹೋಗುವವನಲ್ಲ. ಅವನು ಮತ್ತೆ ಹೋರಾಡುತ್ತಾನೆ.
ಕಮಲ್ ಹಾಸನ್
ಚಿತ್ರನಟ

ತಮಿಳುನಾಡು ಚುನಾವಣೆ ಫಲಿತಾಂಶ ಅಚ್ಚರಿ ತಂದಿದೆ. ತಮಿಳುನಾಡಿನ ಚುನಾವಣಾ ಫಲಿತಾಂಶ ವಿಚಾರದಲ್ಲಿ ನಾವು ತಡಮಾಡದೆ ನಿರ್ಧಾರ ತೆಗೆದುಕೊಳ್ಳಬೇಕಾಗಿದೆ. ಟಿವಿಕೆ ಪಕ್ಷದ ಸಂಸ್ಥಾಪಕ ನಾಯಕ ವಿಜಯ್ ಅವರನ್ನು ಕಾಂಗ್ರೆಸ್ ಪ್ರಶಂಸಿಸುತ್ತದೆ.
ಕೆ.ಸಿ. ವೇಣುಗೋಪಾಲ್
ಕಾಂಗ್ರೆಸ್ ನಾಯಕ

ತಮಿಳುನಾಡು ಚುನಾವಣೆಯಲ್ಲಿ ಸಹೋದರ ವಿಜಯ್ ಅವರ ಪಕ್ಷ ಟಿವಿಕೆ ಭರ್ಜರಿ ಗೆಲುವು ಸಾಧಿಸಿದೆ. ಅದಕ್ಕಾಗಿ ವಿಜಯ್ ಅವರನ್ನು ಹೃದಯಪೂರ್ವಕ ಅಭಿನಂದಿಸುವೆ. ತಮಿಳುನಾಡಿನ ಜನತೆ ವಿಜಯ್ ಮೇಲಿಟ್ಟ ನಂಬಿಕೆಯನ್ನು ಈ ಫಲಿತಾಂಶ ತೋರಿಸುತ್ತದೆ.
ಮಹೇಶ್ ಬಾಬು
ತೆಲುಗು ಚಿತ್ರನಟ

ಚುನಾವಣಾ ಸ್ವಾರಸ್ಯ

ಟಿವಿಕೆ ಗೆಲುವಿಗೆ ಹರಕೆ ಪೂರೈಕೆ

ಪಕ್ಷದ ಗೆಲುವಿಗಾಗಿ ವೈಯಕ್ತಿಕವಾಗಿ ದೇವರಿಗೆ ಹೊತ್ತಿದ್ದ ಹರಕೆ ಟಿವಿಕೆ ಪಕ್ಷದ ಬೆಂಬಲಿಗ ಮಹಿಳೆ ಯೊಬ್ಬರು ಪಕ್ಷದ ಭರ್ಜರಿ ಗೆಲುವಿನಿಂದ ಹರ್ಷಗೊಂಡಿದ್ದಾರೆ. ಹರಕೆ ತೀರಿಸುವ ಸಲುವಾಗಿ ಚೆನ್ನೈ ನಗರದ ಇಸಿಆರ್ ರಸ್ತೆಯಿಂದ ಟಿವಿಕೆ ಪಕ್ಷದ ಪ್ರಧಾನ ಕಚೇರಿವರೆಗೆ(4 ಕಿಮೀ) ಮಂಡಿ ಯಲ್ಲೇ ಸೋಮವಾರ ಮಧ್ಯಾಹ್ನದ ಬಿಸಿನಲ್ಲೇ ನಡೆಯುತ್ತಾ ಸಾಗಿದ್ದಾರೆ. ಆ ಮೂಲಕ ಟಿವಿಕೆ ಪಕ್ಷ ಮತ್ತು ನಾಯಕ ವಿಜಯ್ ಅವರ ಮೇಲಿನ ಅಭಿಮಾನವನ್ನು ಪ್ರದರ್ಶಿಸಿದ್ದಾರೆ.

ತ.ನಾಡು: ಸುಳ್ಳಾದ ಸಮೀಕ್ಷೆಗಳು

ತಮಿಳುನಾಡು ವಿಧಾನಸಭೆ ಚುನಾವಣೆ ಮಟ್ಟಿಗೆ ಮತದಾನೋತ್ತರ ಸಮೀಕ್ಷೆಗಳೆಲ್ಲವೂ ಪೂರ್ಣ ಸುಳ್ಳಾಗಿವೆ. 'ರಾಜಕೀಯ ಅನುಭವವಿಲ್ಲದ ನಟ, ಮೊದಲ ಬಾರಿಗೆ ಸ್ಪರ್ಧಿಸುತ್ತಿರುವುದು, ಹಾಗಿದ್ದರೂ ಈ ಚುನಾವಣೆಯಲ್ಲಿ ಗಣನೀಯ ಸಾಧನೆ ಮಾಡಲಿದ್ದಾರೆ. ಟಿವಿಕೆ ಪಕ್ಷ 98ರಿಂದ 120 ಸ್ಥಾನ ಗೆಲ್ಲಬಹುದು' ಎಂದು ಸಮೀಕ್ಷೆ ನಡೆಸಿದವರೊಬ್ಬರು ಏ.29ರಂದು ಹೇಳಿದಾಗ, ಅನೇಕರು ಅಪಹಾಸ್ಯ ಮಾಡಿದ್ದರು.

'ಆಕ್ಸಿಸ್ ಮೈ ಇಂಡಿಯಾ' ಪ್ರಕಟಿಸಿದ ಮತದಾನೋತ್ತರ ಸಮೀಕ್ಷೆಯೂ ನಟ ವಿಜಯ್ ಜೋಸೆಫ್ ಅವರ ತಮಿಳಗ ವೆಟ್ರಿ ಕಳಗಂ(ಟಿವಿಕೆ) ಪಕ್ಷವು 63 ಸ್ಥಾನಗಳನ್ನು ಗೆಲ್ಲಬಹುದು ಮತ್ತು ಶೇ.30ರಷ್ಟು ಮತಗಳನ್ನು ಗಳಿಸಬಹುದು ಎಂದು ಹೇಳಿತ್ತು. ಉಳಿದ ಸಮೀಕ್ಷೆಗಳೆಲ್ಲವೂ ಟಿವಿಕೆ ಪಕ್ಷ ಹೆಚ್ಚೆಂದರೆ 7-8 ಕ್ಷೇತ್ರಗಳನ್ನಷ್ಟೇ ಗೆಲ್ಲಬಹುದು ಎಂದು ಹೇಳಿದ್ದವು. ಡಿಎಂಕೆ ಪಕ್ಷವೇ ಹೆಚ್ಚಿನ ಸ್ಥಾನ ಗಳಿಸಿ ಮರಳಿ ಅಧಿಕಾರಕ್ಕೇರಲಿದೆ ಎಂದೇ ಬಹಳಷ್ಟು ಸಮೀಕ್ಷೆಗಳು ಭವಿಷ್ಯ ನುಡಿದಿದ್ದವು. ಒಂದೆರಡು ಸಮೀಕ್ಷೆಗಳು ಮಾತ್ರ ಎಐಎಡಿಎಂಕೆ-ಬಿಜೆಪಿ ನೇತೃತ್ವದ ಮೈತ್ರಿಕೂಟಕ್ಕೆ ಹೆಚ್ಚಿನ ಸ್ಥಾನ ಸಿಗುವ ಸಾಧ್ಯತೆ ಇದೆ ಎಂದು ಅಂಕಿ ಅಂಶ ಪ್ರಕಟಿಸಿದ್ದವು. ಆದರೆ, ಈ ಎಲ್ಲಾ ಸಮೀಕ್ಷೆಗಳನ್ನೂ ತಮಿಳುನಾಡು ಮತದಾರರು ಸುಳ್ಳು ಮಾಡಿದ್ದಾರೆ.

ನಿಜವಾಯಿತು ಭವಿಷ್ಯ

ಪ್ರಶಾಂತ್ ಕಿಶೋರ್ ಅವರ ಕಾರ್ಯ ತಂತ್ರ

ಮತ್ತು ದಳಪತಿ ವಿಜಯ್ ಅವರ ನಾಯಕತ್ವದ ಶೈಲಿಗೆ ಸಂಬಂಧಿಸಿ ಹೇಳಿದ ಮಾತುಗಳು ಈಗ ಚರ್ಚೆಗೊಳಗಾಗಿವೆ. ಟಿವಿಕೆ ಪಕ್ಷ ಸ್ಥಾಪನೆಯಾದ 1 ವರ್ಷದ ನಂತರ(2025 ಮಾರ್ಚ್) ತಂತಿ ಟಿವಿಗೆ ರಾಜಕೀಯ ತಂತ್ರಜ್ಞ ಪ್ರಶಾಂತ್ ಕಿಶೋರ್ ಸಂದರ್ಶನ ನೀಡಿದ್ದರು. ಆಗ 'ತಮಿಳುನಾಡಿನಲ್ಲಿ ವಿಜಯ್ ಯಾವುದೇ ಪಕ್ಷದ ಜತೆ ಮೈತ್ರಿ ಮಾಡಿಕೊಳ್ಳದೇ ಏಕಾಂಗಿಯಾಗಿ ಪಕ್ಷವನ್ನು ಕಣಕ್ಕಿಳಿಸಿದರೆ ಅವರ ಪಕ್ಷಕ್ಕೆ ಹೆಚ್ಚು ಸ್ಥಾನ ಗೆಲ್ಲುವ ಉತ್ತಮ ಅವಕಾಶವಿದೆ' ಎಂದು ಹೇಳಿದ್ದರು.

ಷೇರುಪೇಟೆ

ಸನ್‌ಟಿವಿ ಷೇರು ಮೌಲ್ಯ ಕುಸಿತ

ತಮಿಳುನಾಡು ವಿಧಾನಸಭೆ ಚುನಾವಣೆಯಲ್ಲಿ ಆಡಳಿತಾರೂಢ ಪಕ್ಷವಾದ 'ದ್ರಾವಿಡ ಮುನ್ನೇತ್ರ ಕಳಗಂ'(ಡಿಎಂಕೆ) ಪಕ್ಷ ಸೋಲು ಕಂಡು ಎರಡನೇ ಸ್ಥಾನಕ್ಕೆ ಇಳಿದಿದೆ.

ಇದರ ಬೆನ್ನಲ್ಲೇ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಕುಟುಂಬದ ಜತೆ ನಂಟು ಹೊಂದಿರುವ ಮಾರನ್ ಕುಟುಂಬದ ಮಾಲೀಕತ್ವಕ್ಕೆ ಒಳ ಪಟ್ಟಿರುವ 'ಸನ್ ಟಿವಿ' ಮನರಂಜನೆ ಮತ್ತು ಮಾಧ್ಯಮ ಸಮೂಹದ ಕಂಪನಿಗಳ ಷೇರುಗಳ ಮೌಲ್ಯ ದೇಶದ ಪ್ರಮುಖ ಷೇರು ಪೇಟೆಯಲ್ಲಿ ಸೋಮವಾರದ ವಹಿವಾಟಿನಲ್ಲಿ ಭಾರೀ (ಶೇ.9.5ರಷ್ಟು) ಕುಸಿತ ಕಂಡಿವೆ. ಮುಂಬೈ ಷೇರು ವಿನಿಮಯ ಕೇಂದ್ರದಲ್ಲಿ 'ಸನ್ ಟಿವಿ' ಕಂಪನಿಯ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಸೋಮವಾರದ ವಹಿವಾಟಿನಲ್ಲಿ ಬೆಲೆ ಕಳೆದು ಕೊಂಡವು. 605.60 ರು.ಗಳ ಮಟ್ಟದಲ್ಲಿದ್ದ ಸನ್ ಟಿವಿಯ ಪ್ರತಿ ಷೇರಿನ ಬೆಲೆ 547.55 ರು.ಗೆ ಸೋಮವಾರ ಕುಸಿಯಿತು.

ಧುರಂಧರ್ ವಿಜಯ್: ಚರ್ಚೆ

ತಮಿಳುನಾಡು ರಾಜಕಾರಣದಲ್ಲಿ ದಶಕಗಳಿಂದಲೂ ಎರಡೇ ಪಕ್ಷಗಳದ್ದೇ ಮೇಲುಗೈ ಆಗಿತ್ತು. ಒಂದೋ ದ್ರಾವಿಡ ಮುನ್ನೇತ್ರ ಕಳಗಂ(ಡಿಎಂಕೆ) ರಾಜ್ಯವಾಳಬೇಕು, ಇಲ್ಲವೇ ಆಲ್ ಇಂಡಿಯ ಅಣ್ಣಾ ದ್ರಾವಿಡ ಮುನ್ನೇತ್ರ ಕಳಗಂ(ಎಐಎಡಿಎಂಕೆ) ಆಡಳಿತವಿರಬೇಕು ಎನ್ನುವಂತಾಗಿತ್ತು.

ಇವೆರಡೂ ದ್ರಾವಿಡ ಹಿನ್ನೆಲೆ ಪಕ್ಷಗಳಾಗಿದ್ದವು. 3ನೇ ರಾಜಕೀಯ ಪಕ್ಷವೊಂದು ಪ್ರಬಲವಾಗುವ ಸಾಧ್ಯತೆಯೇ ಇರಲಿಲ್ಲ. ಇಂತಹ ಸಂದರ್ಭದಲ್ಲಿ ಜನ್ಮತಾಳಿದ್ದೇ 'ತಮಿಳಗ ವೆಟ್ರಿ ಕಳಗಂ' ಪಕ್ಷ. ಇದು ತಮಿಳು ಹಿನ್ನೆಲೆಯಲ್ಲಿ ರುವುದು ವಿಶೇಷ. ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ನಟ ವಿಜಯ್ ಅವರ ನಾಯಕತ್ವದ 'ಟಿವಿಕೆ' ಪಕ್ಷ ಮುನ್ನಡೆ ಸಾಧಿಸಿದೆ. ಇದೇ ವೇಳೆ ಜಾಲತಾಣದಲ್ಲಿ 2014ರ ಲೋಕಸಭಾ ಚುನಾವಣೆಯಲ್ಲಿ ಪ್ರಧಾನಿ ಅಭ್ಯರ್ಥಿಯಾಗಿ ಬಿಂಬಿತರಾಗಿದ್ದ ನರೇಂದ್ರ ಮೋದಿ ಅವರನ್ನು ನಟ ವಿಜಯ್ ಅವರು 2014ರ ಏ.16ರಂದು ಕೊಯಮತ್ತೂರಿನಲ್ಲಿ ಭೇಟಿ ಮಾಡಿದ್ದ ಸಂದರ್ಭದ (12 ವರ್ಷ ಹಳೆಯ) ಫೋಟೊ ಹರಿದಾಡಲಾರಂಭಿಸಿದೆ. ಇದರ ಜತೆಗೇ ನಟ ವಿಜಯ್ ಭೇಟಿ ರಾಜಕೀಯ ಪ್ರವೇಶದ ಕಾರಣ ಮತ್ತು ಉದ್ದೇಶ ಕುರಿತು ಜಾಲತಾಣದಲ್ಲಿ ಚರ್ಚೆ ಶುರುವಾಗಿದೆ.

ತಮಿಳುನಾಡು ಚುನಾವಣೆಯಲ್ಲಿ ಅಚ್ಚರಿಯ ಜಯ ಸಾಧಿಸಿದ ಟಿವಿಕೆ ಪಕ್ಷದ ನಾಯಕ, ನಟ ವಿಜಯ್ ಅವರು ಮೇ 4ರ ರಾತ್ರಿ ತಮ್ಮ ನಿವಾಸದ ಮಂದೆ ಆಗಮಿಸಿದ್ದ ಜನ ಸಾಗರಕ್ಕೆ ಧನ್ಯವಾದ ಅರ್ಪಿಸಿದರು.

ಡಿಎಂಕೆಯಿಂದ ಅಧಿಕಾರ ಕಿತ್ತುಕೊಂಡ ಮತದಾರ | ಜನನಾಯಕ ನಟ ವಿಜಯ್‌ಗೆ ಜೈಕಾರ

ಆಡಳಿತ ವಿರೋಧಿ ಅಲೆ, ಜನನಾಯಕನ ಆಕರ್ಷಣೆ

ತಮಿಳುನಾಡು ವಿಧಾನಸಭೆಯ ಈಗಿನ ಚುನಾವಣೆಯ ಫಲಿತಾಂಶವನ್ನು ಅವಲೋಕಿಸಿದರೆ ರಾಜ್ಯದಲ್ಲಿ ಪ್ರಬಲ ಆಡಳಿತ ವಿರೋಧಿ ಅಲೆಯ ಪ್ರಭಾವ ಎದ್ದು ಕಾಣಿಸುತ್ತದೆ. ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, ಉಪ ಮುಖ್ಯಮಂತ್ರಿ ಉದಯನಿಧಿ ಸ್ಟಾಲಿನ್ ನೇತೃತ್ವದ ಪಕ್ಷ 'ಡಿಎಂಕೆ' ಫಲಿತಾಂಶ ಪಟ್ಟಿಯಲ್ಲಿ 2ನೇ ಸ್ಥಾನಕ್ಕೆ ಕುಸಿದಿರುವುದೇ 'ಆಡಳಿತ ವಿರೋಧಿ ಅಲೆ'ಗೆ ಸ್ಪಷ್ಟ ಸಾಕ್ಷಿಯಾಗಿದೆ. ಗಮನಾರ್ಹ ಸಂಗತಿ ಎಂದರೆ ಎಐಎಡಿಎಂಕೆ ಮತ್ತು ಬಿಜೆಪಿ ಮೈತ್ರಿ ಮಾಡಿಕೊಂಡಿರುವುದೇನೂ ಈ ಬಾರಿ ಪರಿಣಾಮ ಬೀರಿಲ್ಲ. ಬದಲಾಗಿ ಎರಡೂ ಪಕ್ಷಗಳಿಗೂ 2021ರ ಚುನಾವಣಾ ಫಲಿತಾಂಶಕ್ಕೆ ಹೋಲಿಸಿದರೆ ಮತ್ತಷ್ಟು ನಷ್ಟವೇ ಆಗಿದೆ. ಇಲ್ಲಿ ಅಣ್ಣಾಮಲೈ ಅವರ ಗೈರು ಹಾಜರಿಯೂ ಎದ್ದು ಕಾಣುತ್ತದೆ.

ನಟ ವಿಜಯ್ ಜೋಸೆಫ್ ಅವರ ಟಿವಿಕೆ ಪಕ್ಷದ ಗೆಲುವಿನಲ್ಲಿ ನಾಯಕ ನಟನ ಜನಪ್ರಿಯತೆ ಕೆಲಸ ಮಾಡಿದೆ. ಯುವಜನರು, ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿ ನಟ ವಿಜಯ್‌ಗಾಗಿ ಮತ ಚಲಾಯಿಸಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಅದಕ್ಕೆ ಟಿವಿಕೆ ಪಕ್ಷದ ಆಕರ್ಷಕ ಪ್ರಣಾಳಿಕೆಯೂ ಕಾರಣವಾಗಿದೆ. ತಮಿಳುನಾಡಿನ ಮತದಾರರು ಮೊದಲಿನಿಂದಲೂ ಚಲನಚಿತ್ರ ರಂಗದವರ ಬಗ್ಗೆ ಭಾರೀ ಅಭಿಮಾನ, ಪ್ರೀತಿ, ಭಕ್ತಿ ತೋರಿಸುವವರಾಗಿದ್ದಾರೆ. ಅದಕ್ಕೆ ಚಿತ್ರ ಸಾಹಿತಿಯಾಗಿದ್ದ ಎಂ.ಕರುಣಾನಿಧಿ ಅವರನ್ನು ಮೆಚ್ಚಿಕೊಂಡಿದ್ದು, ಖ್ಯಾತ ಚಿತ್ರನಟರಾಗಿದ್ದ ಎಂ.ಜಿ. ರಾಮಚಂದ್ರನ್ ಅವರನ್ನು ಆರಾಧಿಸುತ್ತಿದ್ದುದು, ಚಿತ್ರನಟಿ ಜಯಲಲಿತಾ ಅವರನ್ನೂ 'ಅಮ್ಮಾ' ಎಂದೇ ಕರೆಯುತ್ತಿದ್ದುದು, ಹಲವು ಬಾರಿ ಅವರನ್ನು ಗೆಲ್ಲಿಸಿದ್ದು ಪ್ರಮುಖವಾಗಿ ಕಾಣುತ್ತದೆ. ಉದಯನಿಧಿ ಸ್ಟಾಲಿನ್ ಅವರನ್ನೂ ಉಪ ಮುಖ್ಯಮಂತ್ರಿಯಾಗಿ ಜನರು ಒಪ್ಪಿಕೊಳ್ಳಲು ಅವರ ಸಿನಿಮಾ ನಂಟು ಕಾರಣವಾಗಿದೆ. ಇದೇ ಬಗೆಯ ಜನಪ್ರೀತಿ ಈಗ ಹೆಸರಾಂತ ನಾಯಕ ನಟ ವಿಜಯ್ ಅವರ ವಿಚಾರದಲ್ಲಿಯೂ ಕಾಣಬಂದಿದೆ. ಹಾಗಾಗಿಯೇ ವಿಜಯ್ ಅವರು ರಾಜಕೀಯಕ್ಕೆ ಹೊಸಬರಾಗಿದ್ದರೂ, ಆಡಳಿತ ವಿಚಾರದಲ್ಲಿ ಅನನುಭವಿಯಾಗಿದ್ದರೂ ತಮಿಳು ಜನತೆ ಗೆಲ್ಲಿಸಿ ಅಧಿಕಾರದ ಗದ್ದುಗೆಗೇರಿಸಿದ್ದಾರೆ.



ಇನ್ನೊಂದೆಡೆ, ಹಿಂದೂ ಮತದಾರರು ಡಿಎಂಕೆ ಪಕ್ಷದಿಂದ ದೂರವಾಗಿ ಎಐಎಡಿಎಂಕೆ ಮತ್ತು ಬಿಜೆಪಿ ಪಕ್ಷಗಳ ಎನ್‌ಡಿಎ ಒಕ್ಕೂಟದತ್ತ ಆಕರ್ಷಿತವಾಗಿರುವುದು ಕೂಡಾ ಈಗಿನ ಫಲಿತಾಂಶದಲ್ಲಿ ಕಾಣಬರುತ್ತದೆ.

ಡಿಎಂಕೆ ಮಿತ್ರಪಕ್ಷವಾಗಿ 28 ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡಿದ್ದ ಕಾಂಗ್ರೆಸ್ ಪಕ್ಷವೂ ಹೆಚ್ಚಿನ ಸಾಧನೆ ಮಾಡಲಾಗಿಲ್ಲ. 5 ಕ್ಷೇತ್ರಗಳಲ್ಲಿಯಷ್ಟೇ ಗೆಲ್ಲಲು ಕಾಂಗ್ರೆಸ್ ಅಭ್ಯರ್ಥಿಗಳಿಗೆ ಸಾಧ್ಯವಾಗಿದೆ.

ಟಿವಿಕೆ ಆಕರ್ಷಕ ಪ್ರಣಾಳಿಕೆ: ಸರಕಾರದ ಗ್ರಾಮೀಣ ಭಾಗದ ಇಲಾಖೆಗಳಲ್ಲಿ ಮಾಸಿಕ 18 ಸಾವಿರ ರು. ವೇತನದ 5 ಲಕ್ಷ ಉದ್ಯೋಗ ಸೃಷ್ಟಿ, 30 ವರ್ಷದ ನಿರುದ್ಯೋಗಿ ಪದವೀಧರರಿಗೆ ಮಾಸಿಕ 4000 ರು., ಡಿಪ್ಲೊಮಾದಾರರಿಗೆ 2,500 ರು. ನಿರುದ್ಯೋಗ ಭತ್ಯೆ, ಪಿಯುಸಿಯಿಂದ ಪಿಎಚ್‌ಡಿ ವರೆಗಿನ ವ್ಯಾಸಂಗಕ್ಕೆ ಬೇಕಾದ ವೆಚ್ಚ ಭರಿಸಲು ಜಾಮೀನು ರಹಿತವಾಗಿ 20 ಲಕ್ಷ ರು. ಶೈಕ್ಷಣಿಕ ಸಾಲ ಸೌಲಭ್ಯ. ಅರ್ಹ ಗೃಹಿಣಿಯರಿಗೆ ಮಾಸಿಕ 2500 ರು. ಆರ್ಥಿಕ ನೆರವು. ವಾರ್ಷಿಕ 5 ಲಕ್ಷ ರು.ಗಿಂತ ಕಡಿಮೆ ಆದಾಯವಿರುವ ಕುಟುಂಬಗಳ ಹೆಣ್ಣು ಮಕ್ಕಳ ಮದುವೆಗೆ 8 ಗ್ರಾಂ ಚಿನ್ನದ ಆಭರಣ, ರೇಷ್ಮೆ ಸೀರೆ ಉಡುಗೊರೆ, ಬಡಕುಟುಂಬದ ನವಜಾತ ಶಿಶುವಿಗೆ ಚಿನ್ನದುಂಗರ ಸಹಿತ 'ಶಿಶು ಚೀಲ' ಕೊಡುಗೆ, ಸರಕಾರಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ, ವರ್ಷಕ್ಕೆ 6 ಉಚಿತ ಎಲ್‌ಪಿಜಿ ಸಿಲಿಂಡರ್ ಭರವಸೆಗಳನ್ನು ಟಿವಿಕೆ ಪಕ್ಷ ನೀಡಿರುವುದರಿಂದ ಮಹಿಳೆ ಮತ್ತು ಯುವಜನರ ಮತಗಳನ್ನು ಸೆಳೆಯಲು ಅವಕಾಶ ಮಾಡಿಕೊಟ್ಟಿದೆ ಎಂದು ವಿಶ್ಲೇಷಣೆ ಮಾಡಲಾಗಿದೆ.

ಸನಾತನ ನಿಂದನೆ: ಡಿಎಂಕೆಗೆ ಪೆಟ್ಟು

ಕಳೆದ ಐದು ವರ್ಷಗಳಿಂದ, ಹಿಂದಿಗೆ ವಿರೋಧ, ವೈದ್ಯಕೀಯ ಶಿಕ್ಷಣದ 'ನೀಟ್'ಗೆ(ಪ್ರವೇಶ ಪರೀಕ್ಷೆಗೆ) ವಿರೋಧ, ಹಿಂದೂ ದೇವತೆಗಳ ಅವಹೇಳನ, ಸನಾತನ ಧರ್ಮಕ್ಕೆ ಸಾರ್ವಜನಿಕ ವೇದಿಕೆಗಳಲ್ಲಿಯೇ ಅಪಮಾನ ಮಾಡುತ್ತಿದ್ದ 'ಅಪ್ಪ-ಮಕ್ಕಳ'(ಡಿಎಂಕೆ) ಪಕ್ಷವನ್ನು ತಮಿಳುನಾಡು ಮತದಾರರು ಅಧಿಕಾರದಿಂದ ಕೆಳಕ್ಕಿಳಿಸಿ, 2ನೇ ಸ್ಥಾನಕ್ಕೆ ದೂಡಿದ್ದಾರೆ.

ಕರೂರು ಕಾಲ್ತುಳಿತ, ವಿಚ್ಛೇದನ ಅರ್ಜಿ

ಕರೂರು ಬಳಿ ರೋಡ್ ಷೋ ನಡೆಸಿದ್ದಾಗ ನಡೆದ ಕಾಲ್ತುಳಿತದಲ್ಲಿ 41 ಮಂದಿ ಸಾವಿಗೀಡಾಗಿದ್ದ ಘಟನೆಯೇನೂ ಚುನಾವಣೆಯಲ್ಲಿ ನಕಾರಾತ್ಮಕ ಪರಿಣಾಮವನ್ನೇನೂ ಬೀರಿಲ್ಲ. ವರ್ಷಗಳ ಹಿಂದೆಯೇ ದೂರವಾಗಿದ್ದ ವಿಜಯ್ ಪತ್ನಿ ಚುನಾವಣೆ ಸಂದರ್ಭ ದಲ್ಲೇ ವಿಚ್ಛೇದನಕ್ಕೆ ಕೋರ್ಟ್‌ನಲ್ಲಿ ದಾವೆ ಹೂಡಿರುವುದು ಕೂಡಾ ವಿಜಯ್ ಚುನಾವಣೆ ಮೇಲೆ ಪ್ರತಿಕೂಲ ಪರಿಣಾಮ ಬೀರಿಲ್ಲ.

ಗೆದ್ದ ಪ್ರಮುಖರು

ವಿ.ಡಿ ಸತೀಶನ್

ಪಕ್ಷ: ಕಾಂಗ್ರೆಸ್
ಕ್ಷೇತ್ರ: ಪರವೂರ್
ಎದುರಾಳಿ: ಟೈಸನ್ ಮಾಸ್ಟರ್

ರಮೇಶ್ ಚೆನ್ನಿತ್ತಲ

ಪಕ್ಷ: ಕಾಂಗ್ರೆಸ್
ಕ್ಷೇತ್ರ: ಹರಿಪ್ಪಾಡ್
ಎದುರಾಳಿ: ಟಿ.ಟಿ ಜಿಸ್ಮೋನ್

ಪಿಣರಾಯಿ ವಿಜಯನ್

ಪಕ್ಷ: ಸಿಪಿಐಎಂ
ಕ್ಷೇತ್ರ: ಧರ್ಮಡಂ
ಎದುರಾಳಿ: ಅಬ್ದುಲ್ ರಶೀದ್

ರಾಜೀವ್ ಚಂದ್ರಶೇಖರ್

ಪಕ್ಷ: ಬಿಜೆಪಿ
ಕ್ಷೇತ್ರ: ನೇಮಂ
ಎದುರಾಳಿ: ಶಿವನ್ ಕುಟ್ಟಿ

ರಂಗಸ್ವಾಮಿ

ಪಕ್ಷ: ಎನ್ಆರ್ ಕಾಂಗ್ರೆಸ್
ಕ್ಷೇತ್ರ: ತಟ್ಟಂಚಾವಡಿ
ಎದುರಾಳಿ: ವಿನಾಯಗಮ್

ಸೋತ ಪ್ರಮುಖರು

ವೀಣಾ ಜಾರ್ಜ್

ಪಕ್ಷ: ಸಿಪಿಐಎಂ
ಕ್ಷೇತ್ರ: ಆರನ್ಮುಳ
ಎದುರಾಳಿ: ಅಭಿನ್ ವರ್ಕಿ

ಕೆ.ಕೆ. ಶೈಲಜಾ

ಪಕ್ಷ: ಸಿಪಿಐಎಂ
ಕ್ಷೇತ್ರ: ಪೇರವೂರ್
ಎದುರಾಳಿ: ಸನ್ನಿ ಜೋಸೆಫ್

ಪಿವಿ ಅನ್ವರ್

ಪಕ್ಷ: ಸ್ವತಂತ್ರ ಅಭ್ಯರ್ಥಿ
ಕ್ಷೇತ್ರ: ಬೇಪೂರ್
ಎದುರಾಳಿ: ಮೊಹಮ್ಮದ್ ರಿಯಾಸ್

ಕೆ. ಸುರೇಂದ್ರನ್

ಪಕ್ಷ: ಬಿಜೆಪಿ
ಕ್ಷೇತ್ರ: ಮಂಜೇಶ್ವರ
ಎದುರಾಳಿ: ಕೆಎಂ. ಅಶ್ರಫ್

ವಿಎನ್ ವಾಸವನ್

ಪಕ್ಷ: ಸಿಪಿಐಎಂ
ಕ್ಷೇತ್ರ: ಏಟುಮಾನ್ನೂರ್
ಎದುರಾಳಿ: ನಾಟಕ್ಕಂ ಸುರೇಶ್

ಪುದುಚೇರಿಯ ತಟ್ಟಂಚವಡಿ ಕ್ಷೇತ್ರದ ಚುನಾವಣೆಯಲ್ಲಿ ಜಯಶಾಲಿಯಾದ ಹಾಲಿ ಸಿಎಂ ಎನ್ ರಂಗಸ್ವಾಮಿ ಅವರನ್ನು ಪಕ್ಷದ ಮುಖಂಡರು ಶಾಲು ಹೊದಿಸಿ ಅಭಿನಂದಿಸಿದರು.

ಕೇರಳಂನಲ್ಲಿ ಯುಡಿಎಫ್‌ಗೆ ಭರ್ಜರಿ ಜಯ | ಆಡಳಿತ ವಿರೋಧಿ ಅಲೆಗೆ ಕೊಚ್ಚಿಹೋದ ಪಿಣರಾಯಿ ಪಡೆ | ಎಲ್‌ಡಿಎಫ್‌ಗೆ ಮರ್ಮಾಘಾತ | ಮೊದಲ ಬಾರಿಗೆ ಮೂರು ಸ್ಥಾನಗಳಲ್ಲಿ ಅರಳಿದ ಕಮಲ

ದೇವರನಾಡಲ್ಲಿ ಛಿದ್ರವಾದ ಕೆಂಪು ಕೋಟೆ

ತಿರುವನಂತಪುರಂ: ದೇವರನಾಡು ಕೇರಳಂನಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಪಿಣರಾಯಿ ವಿಜಯನ್ ನಾಯಕತ್ವದ ಎಲ್‌ಡಿಎಫ್ ಹೀನಾಯವಾಗಿ ಸೋಲುವ ಮೂಲಕ ಭಾರತದಲ್ಲಿ ಅಧಿಕಾರದಲ್ಲಿದ್ದ ಏಕೈಕ ಕಮ್ಯೂನಿಸ್ಟ್ ಸರಕಾರ ಕೂಡಾ ಅಧಿಕಾರ ಕಳೆದು ಕೊಂಡಂತಾಗಿದೆ. ಆಡಳಿತ ವಿರೋಧಿ ಅಲೆ ಮತ್ತು ಗ್ಯಾರಂಟಿ ಘೋಷಣೆಗಳು ಕಾಂಗ್ರೆಸ್ ನಾಯಕತ್ವದ ಯುಡಿಎಫ್ ಪಾಲಿಗೆ ವರ ವಾದುದಂತೂ ಸುಳ್ಳಲ್ಲ.

ಕಳೆದ ನಲುವತ್ತು ವರ್ಷಗಳ ಕೇರಳ ವಿಧಾನಸಭಾ ಚುನಾವಣೆಯನ್ನು ಅವಲೋಕಿಸಿದರೆ, ಒಂದು ಚುನಾವಣೆಯಲ್ಲಿ ಕೇರಳದ ಮತದಾರರು ಯುಡಿಎಫ್ ಕೈ ಹಿಡಿದರೆ, ಆ ನಂತರದ ಚುನಾವಣೆಯಲ್ಲಿ ಎಲ್‌ಡಿಎಫ್ ಅನ್ನು ಅಧಿಕಾರಕ್ಕೇರಿಸುತ್ತಿತ್ತು. 2016ರಲ್ಲಿ 91 ಸ್ಥಾನಗಳೊಂದಿಗೆ ಅಧಿಕಾರಕ್ಕೆ ಎಲ್‌ಡಿಎಫ್‌ಗೆ ಅಧಿಕಾರಕ್ಕೆ ಬಂದಿತ್ತು, ಮತ್ತೆ ಎಲ್‌ಡಿಎಫ್ 99 ಸ್ಥಾನಗಳೊಂದಿಗೆ 2021ರಲ್ಲೂ ಎಲ್‌ಡಿಎಫ್ ಅಧಿಕಾರಕ್ಕೆ ಬಂದಿತ್ತು. ಆದರೆ ಹತ್ತು ವರ್ಷಗಳ ಬಳಿದ ನಡೆದ ಈ ಚುನಾವಣೆಯಲ್ಲಿ ಎಲ್‌ಡಿಎಫ್‌ಗೆ ಎದುರಾಗಿರುವುದು ನಿಜಕ್ಕೂ ಅನಿರೀಕ್ಷಿತ ಮರ್ಮಾಘಾತ.

ಎಲ್‌ಡಿಎಫ್ ಸೋಲಿಗೆ ಪ್ರಮುಖ ಕಾರಣ: ಕಳೆದ 5 ವರ್ಷಗಳಲ್ಲಿ ಪಿಣರಾಯಿ ಸರಕಾರದ ಹಲವಾರು ಸ್ವಯಂ ಕೃತ ಅಪರಾಧಗಳೇ ಕೇರಳಂನಲ್ಲಿ ಪಕ್ಷಕ್ಕೆ ಎದುರಾದ ಹೀನಾಯ ಸೋಲಿಗೆ ಪ್ರಮುಖ ಕಾರಣ. ಸರಕಾರದ ಜನವಿರೋಧಿ ನಿರ್ಧಾರಗಳು, ರಾಜ್ಯದಲ್ಲಿ ಏರುತ್ತಿದ್ದ ನಿರುದ್ಯೋಗ ಸಮಸ್ಯೆಗಳಿಗೆ ಸೂಕ್ತ ಪರಿಹಾರದ ಕೊರತೆ ಮತ್ತು ಶಬರಿಮಲೆಯಂತಹ ಹಲವಾರು ಮಹತ್ವದ ವಿಷಯಗಳಲ್ಲಿ ಭಕ್ತರ ಭಾವನೆಗಳಿಗೆ ವಿರುದ್ಧವಾದ ನಿರ್ಣಯಗಳು ಎಲ್‌ಡಿಎಫ್ ಸೋಲಿಗೆ ಪ್ರಮುಖ ಕಾರಣ ಎನಿಸಿವೆ. ಕೇರಳವು ಹಿಂದೆಂದೂ ಕಾಣದ ಅಭಿವೃದ್ಧಿ ಪತದತ್ತ ಸಾಗುತ್ತಿದೆ ಎಂದು ಎಲ್‌ಡಿಎಫ್ ಎಲ್ಲೆಡೆ ಜಾಹೀರಾತನ್ನು ನೀಡಿದರೂ ಮತದಾರರು ಅಂತಹ ಮಾತನ್ನು ಸಾರಾಸಗಟಾಗಿ ತಿರಸ್ಕರಿಸಿರುವುದು ಅಲ್ಲಿನ ವಾಸ್ತವ ಫಲಿತಾಂಶ. ಪಿಣರಾಯಿ ವಿಜಯನ್ ಅವರ ಜನವಿರೋಧಿ ಏಕಸ್ವಾಮ್ಯ ನಿರ್ಣಯಗಳೂ ಕೂಡಾ ಈ ಸಲ ಕೆಂಪುಕೋಟೆಗಳು ಕೇರಳದೆಲ್ಲೆಡೆ ಛಿದ್ರವಾಗಲು ಮತ್ತೊಂದು ಪ್ರಮುಖ ಕಾರಣ ಎಂಬುದು ಸಾರ್ವತ್ರಿಕ ಅಭಿಪ್ರಾಯ.

ಯುಡಿಎಫ್ ಮೇಲುಗೈಗೆ ಕಾರಣ: ಕಳೆದ ಐದು ವರ್ಷಗಳಿಂದ ಕಾಂಗ್ರೆಸ್ ನಾಯಕತ್ವದ ಯುಡಿಎಫ್ ಕೇರಳಂನಲ್ಲಿ ಪರಿಣಾಮಕಾರಿ ವಿರೋಧ ಪಕ್ಷವಾಗಿ ಯಶಸ್ವಿಯಾಗಿದ್ದಂತೂ ಸುಳ್ಳಲ್ಲ. 2016ರಿಂದ 2021ರ ವರೆಗೆ ಕಾಂಗ್ರೆಸ್‌ನ ಹಿರಿಯ ನಾಯಕ, ವಿರೋಧಪಕ್ಷದ ನಾಯಕರಾಗಿದ್ದ ರಮೇಶ್ ಚೆನ್ನಿತ್ತಲ ಅವರು ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ಯಶಸ್ವಿಯಾಗಿಲ್ಲ ಎಂಬ ಕಾರಣಕ್ಕೆ ವಿ.ಡಿ ಸತೀಶನ್ ಅವರು 2021ರಲ್ಲಿ ವಿಪಕ್ಷ ನಾಯಕನಾದ ಬಳಿಕ ಮತ್ತೆ ಒಕ್ಕೂಟದ ವಿವಿಧ ಪಕ್ಷಗಳ ನಡುವೆ ಚೈತನ್ಯ ತುಂಬಿದರು. ಅದೇ ರೀತಿ ನಮ್ಮ ರಾಜ್ಯದಲ್ಲಿ 2024ರಲ್ಲಿ ಕಾಂಗ್ರೆಸ್ ಸರಕಾರದ ಗೆಲುವಿಗೆ ಒಂದು ಕಾರಣವಾಗಿದ್ದ ಗ್ಯಾರಂಟಿಗಳ ಘೋಷಣೆಯೂ ಈ ಸಲದ ಕೇರಳದಲ್ಲಿ ಯುಡಿಎಫ್ ಯಶಸ್ವಿಗೂ ಒಂದು ಕಾರಣ. ಮಹಿಳೆಯರಿಗೆ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಉಚಿತ ಪ್ರಯಾಣ, ಕಾಲೇಜು ವಿದ್ಯಾರ್ಥಿನಿಯರಿಗೆ ಮಾಸಿಕ ರು 1,000, ಹಿರಿಯರ ಮಾಸಿಕ ಪಿಂಚಣಿ ರು.3,000ಕ್ಕೆ ಏರಿಕೆ, ಪ್ರತೀ ಮನೆಗೆ ರು.25 ಲಕ್ಷ ಆರೋಗ್ಯ ಇನ್ಶುರೆನ್ಸ್, ಹಿರಿಯ ನಾಗರಿಕರ ಕ್ಷೇಮಾಭಿವೃದ್ಧಿಗೆ ವಿಶೇಷ ಇಲಾಖೆಯ ಗ್ಯಾರಂಟಿಗಳು ಅಲ್ಲೂ ಕೂಡಾ ಯುಡಿಎಫ್ ಕೈ ಹಿಡಿದಿವೆ.

ಸಿಎಂ ಯಾರಾಗಬಹುದು?



ಕೇರಳದಲ್ಲಿ ಮುಂದಿನ ಸಿಎಂ ಯಾರು ಎನ್ನುವ ಕುರಿತು ಚರ್ಚೆಗಳು ಆರಂಭವಾಗಿದೆ. ಸಿಎಂ ಸ್ಥಾನಕ್ಕೆ ಮೂವರು ಹಿರಿಯ ಕಾಂಗ್ರೆಸ್ ನಾಯಕರು ಸ್ಪರ್ಧೆ ಯಲ್ಲಿ ದ್ದಾರೆ. ಕೇರಳದಲ್ಲಿ ವಿರೋಧ ಪಕ್ಷದ ನಾಯಕ ವಿ.ಡಿ. ಸತೀಶನ್, ಮಾಜಿ ವಿರೋಧ ಪಕ್ಷದ ನಾಯಕ ರಮೇಶ್ ಚೆನ್ನಿತ್ತಲ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ. ಸಿ. ವೇಣುಗೋಪಾಲ್ ಸಿಎಂ ಸ್ಥಾನದ ಸ್ಪರ್ಧೆಯಲ್ಲಿದ್ದಾರೆ. ಈ ಪೈಕಿ ವಿ.ಡಿ. ಸತೀಶನ್ ಅವರಿಗೇ ಪಟ್ಟ ಒಲಿಯುವ ಸಾಧ್ಯತೆ ಹೆಚ್ಚಿದೆ ಎಂದು ಹೇಳಲಾಗುತ್ತಿದೆ.

ಬಿಜೆಪಿಗೆ ಭವಿಷ್ಯದ ನಿರೀಕ್ಷೆ



ಕೇರಳಂನ ಈ ವಿಧಾನಸಭಾ ಚುನಾವಣೆಯಲ್ಲಿ ಐದೆಂಟು ಸ್ಥಾನಗಳನ್ನು ಗೆದ್ದು ರಾಜ್ಯದಲ್ಲಿ 3ನೇ ಶಕ್ತಿಯಾಗಿ ಉದ ಯಿಸುವ ಪ್ರಯತ್ನ ಬಿಜೆಪಿ ಯಿಂದ ಸಾಗಿತ್ತು. ಆದರೆ ಶೇಕಡ ವಾರು ಮತ ಏರಿಕೆಯಾಗಿದ್ದರೂ ಅದನ್ನು ನಿರೀಕ್ಷಿತ ಪ್ರಮಾಣದಲ್ಲಿ ಸ್ಥಾನಗಳಾಗಿ ಪರಿವರ್ತಿಸುವಲ್ಲಿ ಬಿಜೆಪಿ ನಾಯಕತ್ವದ ಎನ್‌ಡಿಎ ಈ ಸಲ ಸ್ವಲ್ಪ ಹಿನ್ನಡೆ ಕಂಡಿದೆ. ಆದರೂ ತಿರುವನಂತಪುರಂನಲ್ಲಿ 2 ಮತ್ತು ಕೊಲ್ಲಂ ಜಿಲ್ಲೆಯಲ್ಲಿ ಒಂದು ಸೀಟು ಪಡೆದು ಒಟ್ಟು 3 ಸ್ಥಾನ ಗಳಿಸುವ ಮೂಲಕ ಭವಿಷ್ಯದಲ್ಲಿ ರಾಜ್ಯದಲ್ಲಿ ಪಕ್ಷಕ್ಕೆ ಉಜ್ವಲ ಭವಿಷ್ಯ ಇರಲಿದೆ ಎಂದು ಸಮಾಧಾನಪಟ್ಟಿದೆ.

ಗೆಲುವಿಗೆ ಕಾರಣ

1. ಕಾಂಗ್ರೆಸ್ ನೇತೃತ್ವದ ಸರಕಾರಗಳು ಘೋಷಿಸಿದಂತೆ, ಅಧಿಕಾರಕ್ಕೆ ಬಂದರೆ ಕೇರಳದಲ್ಲೂ ಯುಡಿಎಫ್‌ನಿಂದ ವಿವಿಧ ರೀತಿಯ ಆರು ಗ್ಯಾರಂಟಿ ಘೋಷಣೆ.
2. ಕೇರಳದಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಯುಡಿಎಫ್ ಐತಿಹಾಸಿಕ ಸಾಧನೆಗೆ ಕಾರಣವಾಗಿರುವ ಪ್ರಮುಖ ಅಂಶವೆಂದರೆ ಒಕ್ಕೂಟದ ಎಲ್ಲಾ ಪಕ್ಷಗಳ ರಾಜ್ಯಾದ್ಯಂತ ಸಂಘಟಿತ ಪ್ರಚಾರ ವ್ಯವಸ್ಥೆ.
3. ಚುನಾವಣೆಯಲ್ಲಿ ಸ್ಪರ್ಧಿಸಲು ಸಮರ್ಥ ಅಭ್ಯರ್ಥಿಗಳ ಆಯ್ಕೆ ಮತ್ತು ಸೋಲುವ ಅಭ್ಯರ್ಥಿಗಳಿಗೆ ಕ್ಷೇತ್ರ ಬದಲಾವಣೆಯ ತಂತ್ರಗಾರಿಕೆಯ ಮೂಲಕ ಯಶಸ್ಸು ಗಳಿಕೆ.
4. ಚುನಾವಣಾ ಪ್ರಚಾರ ರ್‍ಯಾಲಿಗಳಲ್ಲಿ ಯಾವುದೇ ರೀತಿಯ ವಿವಾದಾತ್ಮಕ ಹೇಳಿಕೆಗೆ ಆಸ್ಪದ ನೀಡದಿರುವುದು ಕೂಡಾ ಯುಡಿಎಫ್ ಗೆಲುವಿನ ಪ್ರಮುಖ ಅಸ್ತ್ರ.
5. ಚುನಾವಣಾ ಸಂದರ್ಭದಲ್ಲಿ ಎಲ್ಲಾ ಧರ್ಮ, ಜಾತಿಯ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಆಯಾ ಸಮಾಜಕ್ಕೆ ಒಗ್ಗಟ್ಟಿನ ಸಂದೇಶ ನೀಡುವ ಪ್ರಯತ್ನ.

ಸೋಲಿಗೆ ಕಾರಣ

1. ಕಳೆದ ಹತ್ತು ವರ್ಷಗಳಿಂದ ಕೇರಳದ ಮತದಾರರಲ್ಲಿ ಇದ್ದ ಆಡಳಿತ ವಿರೋಧಿ ಅಲೆಯು ಎಲ್‌ಡಿಎಫ್ ಸೋಲಿಗೆ ಪ್ರಮುಖ ಕಾರಣ ಎಂದೇ ಜನಜನಿತ.
2. ಶಬರಿಮಲೆ ಸೇರಿದಂತೆ ಹಲವು ಧಾರ್ಮಿಕ ವಿಷಯಗಳಲ್ಲಿ ಭಕ್ತರ ಭಾವನೆಗಳನ್ನು ಘಾಸಿಗೊಳಿಸಿ ಚಿನ್ನ ಕಳವು ಪ್ರಕರಣವನ್ನು ಸೂಕ್ತವಾಗಿ ನಿರ್ವಹಿಸುವಲ್ಲಿ ವೈಫಲ್ಯ.
3. ಎಲ್‌ಡಿಎಫ್‌ನ ವಿವಿಧ ಒಕ್ಕೂಟ ಪಕ್ಷಗಳ ನಡುವೆ ಸಮನ್ವಯದ ಕೊರತೆ ಮತ್ತು ಗೆಲ್ಲುವ ಅಭ್ಯರ್ಥಿಗಳನ್ನು ಚುನಾವಣಾ ಕಣದಿಂದ ದೂರ ಇರಿಸಿರುವ ನಿರ್ಧಾರ.
4. ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಸ್ವಜನ ಪಕ್ಷಪಾತ ಎಸಗಿ ತಮಗೆ ಅಗತ್ಯವಿರುವವರನ್ನು ಆಯಕಟ್ಟಿನ ಹುದ್ದೆಗಳಲ್ಲಿ ಕೂರಿಸಿರುವ ಆರೋಪ.
5. ವಿವಿಧ ಇಲಾಖೆಗಳಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದ್ದರೂ ಮುಖ್ಯಮಂತ್ರಿ ಜಾಣಮೌನವಹಿಸಿದ ಕಾರಣ ಜನ ರೋಸಿ ಹೋಗಿದ್ದಾರೆಂಬ ಪ್ರತಿಪಕ್ಷದ ಪ್ರಚಾರ.

ಕಮ್ಯೂನಿಸ್ಟರಿಗೆ ಅಧಿಕಾರ ಶೂನ್ಯ

ಪಿಣರಾಯಿ ವಿಜಯನ್ ನೇತೃತ್ವದ ಸರಕಾರ ಅಧಿಕಾರ ಕಳೆದುಕೊಳ್ಳುವ ಮೂಲಕ ಐದು ದಶಕಗಳಲ್ಲಿ ಭಾರತದಲ್ಲಿ ಮೊದಲ ಬಾರಿಗೆ ಕಮ್ಯುನಿಸ್ಟ್ ಅಧಿಕಾರ ಕಳೆದುಕೊಂಡ ತಾದರು. 1970ರ ಬಳಿಕ ಎಡ ಪಂಥೀಯರು ಯಾವುದೇ ರಾಜ್ಯದಲ್ಲಿ ಅಧಿಕಾರದಲ್ಲಿಲ್ಲದಿರುವುದು ಇದೇ ಮೊದಲು.

1957ರಲ್ಲಿ, ಕೇರಳವು ವಿಶ್ವದ ಮೊದಲ ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಕಮ್ಯುನಿಸ್ಟ್ ಸರ್ಕಾರ ರಚನೆಯನ್ನು ಕಂಡಿತು ಪಶ್ಚಿಮ ಬಂಗಾಳದಲ್ಲಿ, ಕಮ್ಯುನಿಸ್ಟ್ ಪಕ್ಷ (ಸಿಪಿಐ-ಎಂ) ನೇತೃತ್ವದ ಎಡಪಂಥೀಯ ಪಕ್ಷವು 1977ರಲ್ಲಿ ಅಧಿಕಾರಕ್ಕೆ ಬಂದು 2011 ರವರೆಗೆ 34 ವರ್ಷಗಳ ಕಾಲ ನಿರಂತರವಾಗಿ ಆಳ್ವಿಕೆ ನಡೆಸಿತು.

ತ್ರಿಪುರಾದಲ್ಲಿ ಎಡಪಕ್ಷಗಳು 1993ರಿಂದ 2018ರ ವರೆಗೆ ಆಳ್ವಿಕೆ ನಡೆಸಿದವು. 2011ರಲ್ಲಿ ಮಮತಾ ಬ್ಯಾನರ್ಜಿ ಮತ್ತು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಶ್ಚಿಮ ಬಂಗಾಳದಲ್ಲಿ ಎಡರಂಗದ 34 ವರ್ಷಗಳ ಆಳ್ವಿಕೆಯನ್ನು ಕೊನೆಗೊಳಿಸಿತು. 2006ರಲ್ಲಿ 235 ಸ್ಥಾನಗಳಿಂದ ಅದನ್ನು ಕೇವಲ 62 ಕ್ಕೆ ಇಳಿಸಿತು. ತ್ರಿಪುರ 2018ರಲ್ಲಿ ಭಾರತೀಯ ಜನತಾ ಪಕ್ಷ (ಬಿಜೆಪಿ) ಎಡಪಕ್ಷಗಳನ್ನು ಸೋಲಿಸಿದಾಗ, ಅದರ ಸಂಖ್ಯೆಯನ್ನು ತೀವ್ರವಾಗಿ ಕಡಿಮೆಯಾಯಿತು. ಬಿಜೆಪಿ 2023ರಲ್ಲಿ ತನ್ನ ವಿಜಯವನ್ನು ಅಲ್ಲಿ ಪುನರಾವರ್ತಿಸಿ ತನ್ನ ಪ್ರಭುತ್ವವನ್ನು ಮತ್ತಷ್ಟು ಭದ್ರಪಡಿಸಿತು.

ಕೇರಳದಲ್ಲಿ ಉಳಿದುಕೊಂಡಿದ್ದ ಎಡಪಕ್ಷ: ಪಶ್ಚಿಮ ಬಂಗಾಳ ಮತ್ತು ತ್ರಿಪುರವನ್ನು ಕಳೆದುಕೊಂಡ ನಂತರ, ಕೇರಳವು ಎಡಪಕ್ಷಗಳ ಏಕೈಕ ಪ್ರಮುಖ ಭದ್ರಕೋಟೆಯಾಗಿ ಉಳಿಯಿತು. ದೇಶದ ಕೊನೆಯ ಕಮ್ಯುನಿಸ್ಟ್ ನೆಲೆ ಎನಿಸಿಕೊಂಡಿತು. 2016ರಲ್ಲಿ ಪಿಣರಾಯಿ ವಿಜಯನ್ ನೇತೃತ್ವದಲ್ಲಿ ಎಲ್‌ಡಿಎಫ್ ಮತ್ತೆ ಅಧಿಕಾರಕ್ಕೆ ಬಂದಿತು. 2021ರಲ್ಲಿ ಸತತ ಅವಧಿಗೆ ಗೆಲ್ಲುವ ಮೂಲಕ ಕೇರಳ ರಾಜ್ಯದ ದೀರ್ಘಕಾಲೀನ ಪರ್ಯಾಯ ಸರಕಾರಗಳ ಮಾದರಿಯನ್ನು ಮುರಿಯಿತು. ಆದರೆ ಈ ಬಾರಿ ಸೋಲು ಕಾಣುವ ಮೂಲಕ ಕಮ್ಯುನಿಸ್ಟ್ ಸರಕಾರದ ಒಂದು ಯುಗಾಂತ್ಯ ಆದಂತಾಗಿದೆ.

ಸಾಲು ಸಾಲು ಸಚಿವರಿಗೆ ಸೋಲು

ಕೇರಳದಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಪಿಣರಾಯಿ ವಿಜಯನ್ ನಾಯಕತ್ವದ ಎಲ್‌ಡಿಎಫ್ ಸರಕಾರದ ಸಾಲು ಸಾಲು ಸಚಿವರು ಸೋಲುಂಡಿದ್ದಾರೆ. ಒಟ್ಟು 21 ಸಚಿವರ ಪೈಕಿ 15 ಮಂದಿಗೆ ಸೋಲಾಗಿದೆ.

ಆದರೆ ಧರ್ಮಾಡಂನಲ್ಲಿ ಪಿಣರಾಯಿ ವಿಜಯನ್ , ಕೆ. ರಾಜನ್ (ಕಂದಾಯ ಸಚಿವ), ಜಿ. ಆರ್ ಅನಿಲ್ (ಆಹಾರ, ನಾಗರಿಕ ಸರಬರಾಜು ಸಚಿವ), ಕೆಎನ್ ಬಾಲಗೋಪಾಲ (ಹಣಕಾಸು ಸಚಿವ), ಪಿ ಪ್ರಸಾದ್ (ಕೃಷಿ ಸಚಿವ) ಮತ್ತು ಸಜಿ ಚೆರಿಯಾನ್ (ಸಾಂಸ್ಕೃತಿಕ ಸಚಿವರು) ಚುನಾವಣೆಯಲ್ಲಿ ಗೆದ್ದ ಪ್ರಮುಖರು.

ಸೋತ ಪ್ರಮುಖರಲ್ಲಿ ಆರೋಗ್ಯ ಸಚಿವೆ ವೀಣಾ ಜಾಜ್, ದೇವಸ್ವಂ ಸಚಿವ ವಿಎನ್ ವಾಸವನ್, ಶಿಕ್ಷಣ ಸಚಿವ ವಿ ಶಿವನ್‌ಕುಟ್ಟಿ, ಸಾರಿಗೆ ಸಚಿವ ಬಿ ಗಣೇಶ್ ಕುಮಾರ್, ಜಲ ಸಂಪನ್ಮೂಲ ಸಚಿವ ರೋಶಿ ಆಗಸ್ಟಿನ್, ಕೈಗಾರಿಕಾ ಸಚಿವ ಪಿ ರಾಜೀವ್, ಹೈನುಗಾರಿಕ ಸಚಿವೆ ಚಿಂಚು ರಾಣಿ, ಬಂದರು ಸಚಿವ ಕಡನಪಳ್ಳಿ ರಾಮಚಂದ್ರನ್, ಹಿಂದುಳಿದ ಅಭಿವೃದ್ಧಿ ಖಾತೆ ಸಚಿವ ಒಆರ್ ಕೇಳು, ಅರಣ್ಯ ಸಚಿವ ಶಶೀಂದ್ರನ್, ಸ್ಥಳಿಯಾಡಳಿತ ಸಚಿವ ಎಂಬಿ ರಾಜೇಶ್, ಉನ್ನತ ಶಿಕ್ಷಣ ಸಚಿವೆ ಆರ್ ಬಿಂದು, ಕ್ರೀಡಾ ಖಾತೆ ಸಚಿವ ವಿ ಅಬ್ದುರಹಿಮಾನ್ ಸೋತ ಪ್ರಮುಖ ಸಚಿವರಾಗಿದ್ದಾರೆ.

ಪಿಣರಾಯಿ ರಾಜೀನಾಮೆ

ಕೇರಳಂ ವಿಧಾನಸಭಾ ಚುನಾವಣೆಯಲ್ಲಿ ಎಲ್‌ಡಿಎಫ್ ಒಕ್ಕೂಟ ನೆಲಕಚ್ಚಿ, ಯುಡಿಎಫ್ ಭರ್ಜರಿಯಾಗಿ ಗೆಲುವನ್ನು ಪಡೆದಿರುವ ಹಿನ್ನೆಲೆಯಲ್ಲಿ ಪಿಣರಾಯಿ ವಿಜಯನ್ ಸೋಮವಾರ ಸಂಜೆ ರಾಜ್ಯಪಾಲರಾದ ವಿಶ್ವನಾಥ್ ರಾಜೇಂದ್ರ ಅರ್ಲೇಕರ್ ಅವರಿಗೆ ತಮ್ಮ ರಾಜೀನಾಮೆ ಸಲ್ಲಿಸಿದ್ದಾರೆ.



ಮೋದಿ ಜಿ ನೇತೃತ್ವದ ಎನ್ಡಿಎಗೆ ಹೆಚ್ಚಿನ ಮತ ಹಂಚಿಕೆಯೊಂದಿಗೆ ಆಶೀರ್ವದಿಸಿದ್ದಕ್ಕಾಗಿ ಕೇರಳದ ನಮ್ಮ ಸಹೋದರ ಸಹೋದರಿ ಯರಿಗೆ ಕೃತಜ್ಞತೆಗಳು. ಮೋದಿ ಸರ್ಕಾರವು ವಿಕಾಸಿತ ಕೇರಳದ ದೃಷ್ಟಿಕೋನಕ್ಕೆ ಬದ್ಧವಾಗಿದೆ. ಅದರ ಕಡೆಗೆ ಕೆಲಸವನ್ನು ಮುಂದುವರಿಸುತ್ತದೆ.

ಅಮಿತ್ ಶಾ
ಕೇಂದ್ರ ಗೃಹ ಸಚಿವ

ನೇಮಂ ವಿಧಾನಸಭಾ ಕ್ಷೇತ್ರದಲ್ಲಿ ನನ್ನನ್ನು ಆಶೀರ್ವದಿಸಿದ ಜನತೆಗೆ ನಾನು ಚಿರಋಣಿ. ನನ್ನ ಈ ಜವಾಬ್ದಾರಿಯನ್ನು ನಾನು ಅತ್ಯುತ್ತಮವಾಗಿ ನಿರ್ವಹಿಸುತ್ತೇನೆ. ಇದೇ ದೇಶದ ಜನತೆಯು ಮೋದಿಯವರ ನಾಯಕತ್ವದ ಮೇಲೆ ಇಟ್ಟಿರುವ ನಂಬಿಕೆ ಖುಷಿ ಕೊಟ್ಟಿದೆ.

ರಾಜೀವ್ ಚಂದ್ರಶೇಖರ್
ಕೇರಳ ಬಿಜೆಪಿ ರಾಜ್ಯಾಧ್ಯಕ್ಷ

ಯಾರು ಹಿಂದೆ ನಮ್ಮನ್ನು ಖಂಡಿಸಿದ್ದರೋ, ಯಾರು ನಮ್ಮನ್ನು ಟೀಕಿಸಿದ್ದರೋ ಆ ಎಲ್ಲರಿಗೆ ನಾವು - ಯುಡಿಎಫ್ ತಂಡದ ಮೂಲಕ ಉತ್ತರ ಕೊಟ್ಟಿದ್ದೇವೆ. ನಮ್ಮಲ್ಲಿ ನಂಬಿಕೆಯಿಟ್ಟ ಕೇರಳಿಗರಿಗೆ ಧನ್ಯವಾದ.

ವಿ.ಡಿ. ಸತೀಶ್
ಕಾಂಗ್ರೆಸ್ ನಾಯಕ



ಕೇರಳದ ನನ್ನ ಎಲ್ಲಾ ಸಹೋದರ ಸಹೋದರಿಯರೇ, ನಿಮ್ಮ ನಂಬಿಕೆ ಮತ್ತು ಅಗಾಧ ಬೆಂಬಲಕ್ಕಾಗಿ ಧನ್ಯವಾದಗಳು. ಉತ್ತಮ ಭವಿಷ್ಯವನ್ನು ನಿರ್ಮಿಸಲು ನಾವು ಶ್ರಮಿಸುತ್ತಿರುವಾಗ, ನೀವು ನಮ್ಮ ಮೇಲೆ ಇಟ್ಟಿರುವ ನಂಬಿಕೆ ಯುಡಿಎಫ್‌ನ ಶಕ್ತಿಯಾಗಲಿದೆ.

ಪ್ರಿಯಾಂಕಾ ಗಾಂಧಿ ವಾದ್ರಾ
ವಯನಾಡ್ ಸಂಸದೆ

ಪುದುಚೇರಿಯಲ್ಲಿ ಸ್ಪಷ್ಟ ಮತ್ತು ನಿರ್ಣಾಯಕ ಜನಾದೇಶ ಬಂದಿದ್ದು, ಅದು ಅಲ್ಲಿನ ಜನತೆಯು ಮಾನ್ಯ ಪ್ರಧಾನ ಮಂತ್ರಿ ನರೇಂದ್ರ ಮೋದಿ ಜೀ ಅವರ ನೇತೃತ್ವದಲ್ಲಿ ಭಾರತ ಹಾಗೂ ಪುದುಚೇರಿ ಸಾಧಿಸುತ್ತಿರುವ ಅಭಿವೃದ್ಧಿಯ ಮೇಲಿಟ್ಟ ನಂಬಿಕೆ.

ಧರ್ಮೇಂದ್ರ ಪ್ರಧಾನ್
ಕೇಂದ್ರ ಸಚಿವ

ಮೂರನೇ ಬಾರಿ ಕೇಂದ್ರಾಡಳಿತ ಪ್ರದೇಶದಲ್ಲಿ ಮುಖ್ಯಮಂತ್ರಿ ಗಾದಿಗೇರಲಿರುವ ರಂಗಸ್ವಾಮಿ

ಪುದುಚೇರಿಯಲ್ಲಿ ಮತ್ತೆ ಎನ್‌ಡಿಎಗೆ ಜನಾಶೀರ್ವಾದ

ಪುದುಚೇರಿ: ನಿರೀಕ್ಷೆಯಂತೆ, ಈ ಬಾರಿಯ ಪುದುಚೇರಿ ಕೇಂದ್ರಾಡಳಿತ ಪ್ರದೇಶದ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಜಯಭೇರಿ ಬಾರಿಸಿದೆ. ಅಲ್ಲಿನ ಮುಖ್ಯಮಂತ್ರಿ ಎನ್. ರಂಗಸ್ವಾಮಿಯವರು 3ನೇ ಬಾರಿಗೆ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳುವುದು ಖಚಿತವಾಗಿದೆ.

ಆ ಕೇಂದ್ರಾಡಳಿತ ಪ್ರದೇಶದಲ್ಲಿ ಬಿಜೆಪಿ ಹಾಗೂ ರಂಗಸ್ವಾಮಿಯವರ ಪಕ್ಷವಾದ ಆಲ್ ಇಂಡಿಯಾ ಎನ್.ಆರ್. ಕಾಂಗ್ರೆಸ್ (ಎಐಎನ್‌ಆರ್‌ಸಿ) ಹೊಂದಾಣಿಕೆ ಮಾಡಿಕೊಂಡೇ ಪ್ರತಿ ಚುನಾವಣೆಯನ್ನು ಎದುರಿಸುತ್ತಿವೆ. ಈ ಮೈತ್ರಿಯ ಪ್ರಮುಖ ಎದುರಾಳಿಯೆಂದರೆ ಅದು ಎಸ್‌ಪಿಎ ಒಕ್ಕೂಟ. ಅದರಲ್ಲಿ ಕಾಂಗ್ರೆಸ್, ಡಿಎಂಕೆ, ವಿಡುದಲೈ ಚಿರುತಗಳ್ ಕಚ್ಚಿ (ವಿಸಿಕೆ) ಪಕ್ಷಗಳಿವೆ.

ಈ ಬಾರಿಯ ಚುನಾವಣೆಯ ವಿಶೇಷವೇನೆಂದರೆ, ತಮಿಳು ಚಿತ್ರನಟ ವಿಜಯ್ ಅವರ ತಮಿಳಿಗ ವೆಟ್ರಿ ಕಳಗಂ (ಟಿವಿಕೆ) ಅಖಾಡಕ್ಕೆ ಕಾಲಿಟ್ಟಿದ್ದು. ಈ ಬಾರಿಯ ತಮಿಳುನಾಡು ಚುನಾವಣೆಯಲ್ಲಿ ಹಾಗೂ ಪುದುಚ್ಚೇರಿ ಚುನಾವಣೆಯಲ್ಲಿ ಏಕಕಾಲಕ್ಕೆ ಕಾಲಿಟ್ಟ ಟಿವಿಕೆ, ಪುದುಚೇರಿಯಲ್ಲಿ ಮಾತ್ರ ನೇಯಂ ಮಕ್ಕಳ್ ಕಳಗಂ (ಎನ್‌ಎಂಕೆ) ಪಕ್ಷದ ಜೊತೆಗೆ ಮೈತ್ರಿ ಮಾಡಿಕೊಂಡಿದೆ.

ಇವಿಷ್ಟೇ ಅಲ್ಲ... ಪುದುಚೇರಿಯಲ್ಲಿ ಮತ್ತೊಂದು ಮೈತ್ರಿಕೂಟವಿದೆ. ಅದು ಸೆಂಗೋಲ್ ನೀತಿ ಮಕ್ಕಳ್ ಮುನೇತ್ರ ಕಳಗಂ (ಎಸ್‌ಎನ್‌ಎಂಎಂಕೆ) ಹಾಗೂ ಆಲ್ ಇಂಡಿಯಾ ಪುರಚ್ಚಿ ತಲೈವರ್ ಮಕ್ಕಳ್ ಮುನೇತ್ರ ಕಳಗಂ (ಎಐಪಿ ಟಿಎಂಎಂಕೆ) ಮೈತ್ರಿ.

ಈ ಎಲ್ಲಾ ಮೈತ್ರಿಗಳ ಜೊತೆಗೆ, ನಾಮ್ ತಮಿಳರ್ ಕಚ್ಚಿ, ಕಮ್ಯೂನಿಸಂ ಪಾರ್ಟಿ ಆಫ್ ಇಂಡಿಯಾ- ಎಂ (ಸಿಪಿಎಂ), ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಸಿಪಿಐ) ಪಕ್ಷಗಳಿವೆ. ಇಷ್ಟೆಲ್ಲಾ ಪಕ್ಷಗಳಿದ್ದರೂ ಅಲ್ಲಿ ಅಲೆಯಿದ್ದಿದ್ದು ರಂಗಸ್ವಾಮಿ ನೇತೃತ್ವದ ಆಲ್ ಇಂಡಿಯಾ ಎನ್.ಆರ್. ಕಾಂಗ್ರೆಸ್ (ಎಐಎನ್‌ಸಿ) ಹಾಗೂ ಬಿಜೆಪಿ ಮೈತ್ರಿಗೆ. ಈ ಮೈತ್ರಿಯ ನಾಯಕರಾದ ಎನ್. ರಂಗಸ್ವಾಮಿಯವರೇ ಅಲ್ಲಿ ಎನ್‌ಡಿಎ ಸರಕಾರದ ಮುಖ್ಯಸ್ಥರಾಗಿರುವುದು. ಕೇಂದ್ರದಲ್ಲಿ ಬಿಜೆಪಿ ಇರುವುದು, ಮೋದಿಯವರ ಜನಪ್ರಿಯತೆ ಹಾಗೂ ರಂಗಸ್ವಾಮಿ ಸರಕಾರದ ಜನಪ್ರಿಯತೆಯೇ ಅಲ್ಲಿ ಮತ್ತೆ ಎನ್‌ಡಿಎ ಅಧಿಕಾರಕ್ಕೆ ಬರಲು ಕಾರಣ.

ಐದನೇ ಬಾರಿ ಸಿಎಂ ಗಾದಿ: ಈ ಹಿಂದೆ ನಾಲ್ಕು ಬಾರಿ ಸಿಎಂ ಆಗಿರುವ ರಂಗಸ್ವಾಮಿ, ಈಗ ಐದನೇ ಬಾರಿಗೆ ಆ ಹುದ್ದೆಯೇರುತ್ತಿದ್ದಾರೆ. ಹಿಂದೆ ಕಾಂಗ್ರೆಸ್ಸಿನಲ್ಲಿದ್ದ ರಂಗಸ್ವಾಮಿ 2001ರಲ್ಲಿ ಪುದುಚೇರಿಯ ಮುಖ್ಯಮಂತ್ರಿಯಾದರು. 2006ರ ಚುನಾವಣೆಯಲ್ಲಿ ಮತ್ತೆ ಕಾಂಗ್ರೆಸ್ ಗೆದ್ದ ನಂತರ ಆ ಹುದ್ದೆಗೆ ನೇಮಕಗೊಂಡರು. ಆದಾಗ್ಯೂ, ಪಕ್ಷದೊಂದಿಗಿನ ಭಿನ್ನಾಭಿಪ್ರಾಯಗಳಿಂದಾಗಿ ಅವರು 200ರಲ್ಲಿ ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿಯ ಬೇಕಾಯಿತು. 2011ರ ವಿಧಾನಸಭಾ ಚುನಾವಣೆಗೂ ಮುನ್ನ ಅವರು ಕಾಂಗ್ರೆಸ್ ತೊರೆದು ತಮ್ಮದೇ ಆಲ್ ಇಂಡಿಯಾ ಎನ್ ಆರ್ ಕಾಂಗ್ರೆಸ್ (ಎಐಎನ್ ಆರ್) ಪ್ರಾರಂಭಿಸಿದರು.

ಹೊಸ ಪಕ್ಷವಾದ್ದರಿಂದ ತಮಿಳುನಾಡಿನ ಮಾಜಿ ಸಿಎಂ ಜಯಲಲಿತಾ ನೇತೃತ್ವದ ಎಐಎಡಿಎಂಕೆ ಜೊತೆಗೆ ಮೈತ್ರಿ ಮಾಡಿಕೊಂಡು ಚುನಾವಣೆಗಿಳಿದರು. ಆ ಚುನಾವಣೆಯಲ್ಲಿ ಅವರ ಮೈತ್ರಿ ಅಧಿಕಾರಕ್ಕೆ ಬಂದು ಅವರೇ ಸಿಎಂ ಆದರು. 2016ರವರೆಗೆ ಅವರು ಆ ಹುದ್ದೆಯಲ್ಲಿ ಸೇವೆ ಸಲ್ಲಿಸಿದರು. 2016ರ ಚುನಾವಣೆಯಲ್ಲಿ ಅವರು ವೈಯಕ್ತಿಕವಾಗಿ ವಿಜಯಿಯಾದರೂ ಅವರ ಪಕ್ಷ ಸೋತಿತು. ಹಾಗಾಗಿ, 2021ರವರೆಗೆ ವಿರೋಧ ಪಕ್ಷದ ನಾಯಕರಾಗಿ ಸೇವೆ ಸಲ್ಲಿಸಿದರು. 2021ರ ವಿಧಾನಸಭಾ ಚುನಾವಣೆಗೆ ಮುಂಚಿತವಾಗಿ, ತಮ್ಮ ಪಕ್ಷವನ್ನು ಎನ್‌ಡಿಎ ಒಕ್ಕೂಟಕ್ಕೆ ಸೇರಿಸಿದ ರಂಗಸ್ವಾಮಿ, ಆ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಯೊಂದಿಗೆ ಸ್ಪರ್ಧಿಸಿ ತಮ್ಮ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತಂದರು. ಆಗ ನಾಲ್ಕನೇ ಬಾರಿಗೆ ಮುಖ್ಯಮಂತ್ರಿಯಾಗಿ ಅವರು ನೇಮಕವಾದರು.



ಫಲಿತಾಂಶ ಹೋಲಿಕೆ

ಪಕ್ಷ	2026	2021	ವ್ಯತ್ಯಾಸ
ಎನ್‌ಡಿಎ	18	16	+2
ಕಾಂಗ್ರೆಸ್	6	8	-2
ಟಿವಿಕೆ	3	0	+3
ಇತರೆ	3	6	-3

ರಂಗಸ್ವಾಮಿ ಗೆಲುವು ಮಹತ್ವ ಏಕೆ?

ಪುದುಚೇರಿ ಅಸ್ಥಿರ ರಾಜಕೀಯದ ಇತಿಹಾಸವನ್ನು ಹೊಂದಿದೆ. ಸರಕಾರಗಳು ಮಧ್ಯದಲ್ಲಿ ಕುಸಿದು ಬೀಳುವುದು, ಮೈತ್ರಿಗಳು ಮುರಿದು ಬೀಳುವುದು ಮತ್ತು ಮುಖ್ಯಮಂತ್ರಿ ಕಚೇರಿ ಮತ್ತು ಕೇಂದ್ರದಿಂದ ನೇಮಕಗೊಂಡ ಲೆಫ್ಟಿನೆಂಟ್-ಗವರ್ನರ್ ನಡುವೆ ಜಗಳಗಳು ಏರ್ಪಡುವುದು, ಅದರ ಪರಿಣಾಮವಾಗಿ ಸಾಂವಿಧಾನಿಕ ಬಿಕ್ಕಟ್ಟುಗಳು ಸೃಷ್ಟಿಯಾಗುವುದು - ಹೀಗೆ ಒಂದಿಲ್ಲೊಂದು ಅವಾಂತರಗಳು ನಡೆದುಬಂದಿವೆ.ರಂಗಸ್ವಾಮಿ ಈ ಸವಾಲನ್ನು ಒಪ್ಪಿಕೊಂಡು, ಕೇಂದ್ರ ಮತ್ತು ಕೇಂದ್ರಾಡಳಿತ ಪ್ರದೇಶದ ನಡುವೆ ಒಂದು ಬಾಂಧವ್ಯಕ್ಕೆ ಹೊಸ ಭಾಷ್ಯ ಬರೆದರು. ಒಂದು ಕಾಲದಲ್ಲಿ ಕಾಂಗ್ರೆಸ್ ಭದ್ರಕೋಟೆಯಾಗಿದ್ದ ಈ ಕೇಂದ್ರಾಡಳಿತ ಪ್ರದೇಶದಲ್ಲಿ ಸತತವಾಗಿ ಸರಕಾರಗಳನ್ನು ರಚಿಸುತ್ತಿರುವ ಹಿರಿಮೆ ಅವರದ್ದಾಗಿದೆ. ಈಗ ಐದನೇ ಬಾರಿಗೆ ರಂಗಸ್ವಾಮಿ ಮುಖ್ಯಮಂತ್ರಿಯಾಗಿ ಮರಳುವುದರಿಂದ ದಕ್ಷಿಣ ಭಾರತದಲ್ಲಿ ಎನ್‌ಡಿಗೆ ಒಂದು ಭದ್ರಕೋಟೆಯಾಗಿ ಪುದುಚ್ಚೇರಿ ಹೊರಹೊಮ್ಮಿಂದಾಗಿದೆ.

ಪಕ್ಷ	2026	ಹಿಂದಿನ ಬಾರಿ
ಯುಡಿಎಫ್	89	{40}
ಎಲ್‌ಡಿಎಫ್	35	{92}
ಎನ್‌ಡಿಎ	03	{00}
ಇತರೆ	13	{08}

ಯಮಹ ಆರ್‌ಎಕ್ಸ್ 100 ಬೈಕ್ ಸವಾರ ಮತ್ತೆ ಸಿಎಂ

ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಮತ್ತು ಕಾಂಗ್ರೆಸ್ಸಿನ ಮಾಜಿ ನಾಯಕ ಕೆ.ಕಾಮರಾಜ್ ಅವರಿಂದ ಪ್ರೇರಿತರಾಗಿದ್ದ ಎನ್. ರಂಗಸ್ವಾಮಿ, ಅದೇ ಪ್ರೇರಣೆ ಯಿಂದಲೇ ರಾಜಕೀಯಕ್ಕೆ ಬಂದವರು. ಹಿಂದೆ ಕಾನೂನು ಪದವಿ ಮಾಡುತ್ತಿರು ವಾಗಲೇ ರಾಜಕೀಯಕ್ಕೆ ಧುಮುಕಿದ ಅವರು ಮತ್ತೆ ಓದಿನ ಕಡೆ ಹಿಂದಿರುಗಲಿಲ್ಲ. ತಮ್ಮ ಸರಳ ಜೀವನ, ಉನ್ನತ ಚಿಂತನೆಗಳಿಂದಾಗಿ ಅವರು ಹೆಚ್ಚು ಜನಪ್ರಿಯ. ಬೈಕ್ ನಡೆಸುವದೆಂದರೆ ಅವರಿಗೆ ಇಷ್ಟ. ಅವರ ಅಚ್ಚುಮೆಚ್ಚಿನ ಬೈಕ್ ಎಂದರೆ - 'ಯಮಹ ಕಂಪನಿಯ ಆರ್‌ಎಕ್ಸ್ 100'. ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೂ ಆ ಬೈಕ್ ಬಗ್ಗೆ ಅವರಿಗೆ ಕ್ರೇಜ್ ಇತ್ತು. ಪುದುಚ್ಚೇರಿಯ 2016 ಹಾಗೂ 2021ರ ಚುನಾವಣೆಗಳಲ್ಲಿ ಅದೇ ಬೈಕ್ ಮೇಲೇರಿ ಮತಯಾಚನೆಗೆ ಹೊರಟಿದ್ದು ಜನ ರನ್ನು ವಿಶೇಷವಾಗಿ ಆಕರ್ಷಿಸಿತ್ತು. ತಮ್ಮನ್ನು ತಾವು ರಾಜಕೀಯ ವ್ಯಕ್ತಿ ಎನ್ನುವುದಕ್ಕಿಂತ ಜನಸ್ನೇಹಿ ವ್ಯಕ್ತಿ ಎಂಬಂತೆ ರೂಪಿಸಿಕೊಂಡಿ ರುವುದೇ ಅವರ ಯಶಸ್ಸಿನ ನಿಜವಾದ ಗುಟ್ಟು ಎಂದು ಅವರ ಪಕ್ಷದ ಕಾರ್ಯಕರ್ತರು ಹೇಳುತ್ತಾರೆ.

ಕಲ್ಯಾಣ ಯೋಜನೆಗಳೇ ಶ್ರೀರಕ್ಷೆ: ರಂಗಸ್ವಾಮಿ ಸರಕಾರ ಹಲವಾರು ಜನಕಲ್ಯಾಣ ಯೋಜನೆಗಳನ್ನು ಜಾರಿಗೆ ತಂದಿದ್ದು ಅವುಗಳಲ್ಲಿ ಹಲವು ಜನಪ್ರಿಯವಾಗಿವೆ. ವೃದ್ಧರಿಗೆ 2,500-4,000 ರೂ. ಪಾವತಿಸುವ ಪಿಂಚಣಿ ಯೋಜನೆಗಳು ಮತ್ತು ಮನೆಯೊಡತಿಗೆ ಮಾಸಿಕ 2,500 ರೂ. ನಗದು ನೆರವು ಇತ್ಯಾದಿ ಸೇವೆಗಳು ಅವರ ಜನಪ್ರಿಯತೆಯನ್ನು ಹೆಚ್ಚಿಸಿವೆ. ಅವರ ಸರಕಾರವು ಪುದುಚೇರಿಯಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಗೆ (ಪಿಡಿಎಸ್) ಹೊಸ ಸ್ಪರ್ಶ ನೀಡಿ ಸಮಾಜದ ಕಟ್ಟಕಡೆಯ ಬಡವರಿಗೂ ಪಡಿತರ ದೊರೆಯುವಂತೆ ಮಾಡಿದ್ದು, ಯುವಜನರಿಗೆ ಉದ್ಯೋಗ ಸೃಷ್ಟಿ ಮಾಡಿದ್ದು ಅವರ ಕಡೆಗೆ ಜನರು ವಿಶ್ವಾಸವಿಡಲು ಕಾರಣ ಎಂದು ವಿಶ್ಲೇಷಣೆಗಳು ಹೇಳುತ್ತವೆ.

ಗೆದ್ದ ಪ್ರಮುಖರು

ಹಿಮಂತ ಬಿಸ್ವಾ ಶರ್ಮಾ

ಪಕ್ಷ ಬಿಜೆಪಿ
ಕ್ಷೇತ್ರ ಜಾಲೂಕ್‌ಬಾರಿ
ಎದುರಾಳಿ ಬಿದಿಶಾ ನಿಯೋಗ್

ಪೀಜೂಷ್ ಹಜಾರಿಕಾ

ಪಕ್ಷ ಬಿಜೆಪಿ
ಕ್ಷೇತ್ರ ಜಗಿರೋಡ್
ಎದುರಾಳಿ ಶ್ರೀಬಾಬುಲ್ ದಾಸ್

ಅಜಂತಾ ನಿಯೋಗ್

ಪಕ್ಷ ಬಿಜೆಪಿ
ಕ್ಷೇತ್ರ ಗೋಲಾಘಾಟ್
ಎದುರಾಳಿ ಬಿಟುಪನ್ ಸೈಕಿಯಾ

ಸೋತ ಪ್ರಮುಖರು

ಗೌರವ್ ಗೊಗೊಯ್

ಪಕ್ಷ ಕಾಂಗ್ರೆಸ್
ಕ್ಷೇತ್ರ ಜೋರ್ಹತ್
ಎದುರಾಳಿ ಹಿತೇಂದ್ರನಾಥ್ ಗೋಸ್ವಾಮಿ

ಅಖಿಲ್ ಗೊಗೊಯ್

ಪಕ್ಷ ರೈಜೋರ್ ದಳ
ಕ್ಷೇತ್ರ ಶಿವಸಾಗರ
ಎದುರಾಳಿ ಕುಶಾಲ್ ದೋವರಿ

ಲೂರಿಂಜ್ಯೋತಿ

ಪಕ್ಷ ಎಜೆಪಿ
ಕ್ಷೇತ್ರ ಖೋವಾಂಗ್
ಎದುರಾಳಿ ಚಕ್ರಧರ್

ಈಶಾನ್ಯದ ಹೆಬ್ಬಾಗಿಲಲ್ಲಿ ಬಿಜೆಪಿ ದಿಗ್ವಿಜಯ

ಅಸ್ಸಾಂನಲ್ಲಿ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದ ಬಿಜೆಪಿ, ಸತತ ಮೂರನೇ ಬಾರಿ ಗೆಲುವು
ಬ್ರಹ್ಮಪುತ್ರ ನದಿ ತೀರದಲ್ಲಿ ಬಿಜೆಪಿಯ ಅಬ್ಬರಕ್ಕೆ ಪ್ರತಿಪಕ್ಷಗಳ ತಂತ್ರಗಾರಿಕೆ ಧೂಳೀಪಟ

ಗುವಾಹಟಿ: ಅಸ್ಸಾಂನ 126 ಕ್ಷೇತ್ರಗಳಿಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ 102 ಸ್ಥಾನಗಳಲ್ಲಿ ಜಯ ಸಾಧಿಸುವ ಮೂಲಕ ಬಿಜೆಪಿ ಹ್ಯಾಟ್ರಿಕ್ ಗೆಲುವು ಸಾಧಿಸಿದ್ದು, ಕಾಂಗ್ರೆಸ್‌ನ ಅಧಿಕಾರಕ್ಕೇರುವ ಬಹುದೊಡ್ಡ ಕನಸು ಕನಸಾಗಿಯೇ ಉಳಿದಿದೆ.

2016ರಲ್ಲಿ ಮೊದಲ ಬಾರಿಗೆ ಅಧಿಕಾರದ ಚುಕ್ಕಾಣಿ ಹಿಡಿದಿದ್ದ ಬಿಜೆಪಿ, ಸರ್ಬಾನಂದ ಸೋನೋವಾಲ್ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿತ್ತು. 2021ರಲ್ಲಿ ಗೆದ್ದ ಬಳಿಕ ಹಿಮಂತ ಬಿಸ್ವಾ ಶರ್ಮಾ ಸಿಎಂ ಆಗಿ ಅಧಿಕಾರ ಸ್ವೀಕರಿಸಿದ್ದರು. ಸಿಎಂ ಹಿಮಂತ ಶರ್ಮಾ ಅವರ ಆಡಳಿತಾತ್ಮಕ ಚಾಕಚಕ್ಯತೆ, ಧೈರ್ಯಶಾಲಿ ನಿರ್ಧಾರ ಮತ್ತು ಈಶಾನ್ಯ ಭಾರತದ ರಾಜಕೀಯದ ಮೇಲಿನ ಅವರ ಹಿಡಿತ ಬಿಜೆಪಿಗೆ ದೊಡ್ಡ ಲಾಭ ತಂದುಕೊಟ್ಟಿದೆ. ಅಭಿವೃದ್ಧಿ ಮತ್ತು ಮೂಲಸೌಕರ್ಯಗಳ ಅಭಿವೃದ್ಧಿ, ಕಲ್ಯಾಣ ಯೋಜನೆಗಳು, ಉಗ್ರಗಾಮಿ ಚಟುವಟಿಕೆಗಳ ನಿಯಂತ್ರಣ ಸೇರಿದಂತೆ ಜನಪರ ಕೆಲಸಗಳನ್ನು ಮಾಡಿಕೊಂಡೇ ಬಂದಿದ್ದ ಹಿಮಂತ ಶರ್ಮಾ ಜನರ ಮನ ಗೆಲ್ಲುವಲ್ಲಿ ಯಶಸ್ವಿಯಾಗಿದ್ದಾರೆ. ಅಭಿವೃದ್ಧಿ ಮತ್ತು ಪ್ರಾದೇಶಿಕ ಭಾವನೆಗಳಿಗೆ ಧಕ್ಕೆಯಾಗದಂತೆ ಆಡಳಿತ ನಡೆಸಿಕೊಂಡು ಬಂದಿರುವುದು ಬಿಜೆಪಿ ಗೆಲುವಿಗೆ ಪ್ರಮುಖ ಕಾರಣವಾಗಿದೆ. ಕಳೆದ ಐದು ವರ್ಷಗಳಿಂದ ಮುಖ್ಯಮಂತ್ರಿಯಾಗಿ ಹಿಮಂತ ಬಿಸ್ವಾ ಶರ್ಮಾ ಅಸ್ಸಾಮಿಗರ ನಂಬಿಕೆ ಮತ್ತು ಅಭಿವೃದ್ಧಿ ಮೂಲಮಂತ್ರ ಎನ್ನುತ್ತಲೇ ಆಡಳಿತ ನಡೆಸಿದ್ದಾರೆ. ಮುಖ್ಯಮಂತ್ರಿಯಾಗಿ, ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿ ನಾಯಕತ್ವ ನಿರ್ವಹಿಸಿ, ಆಡಳಿತದ ಮೇಲೆ ಬಿಗಿ ಹಿಡಿತ ಹೊಂದಿದ್ದರು. ಅಭಿವೃದ್ಧಿ ಕೆಲಸಗಳ ಜತೆಗೆ ಹಿಂದುತ್ವದ ವಿಚಾರಗಳನ್ನು ಸಮರ್ಥವಾಗಿ ಪ್ರತಿಪಾದಿಸುತ್ತ ಮತದಾರರನ್ನು ಸೆಳೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಬಾಂಗ್ಲಾದೇಶದಿಂದ ರಾಜ್ಯಕ್ಕೆ ಬರುವ ಅಕ್ರಮ ವಲಸಿಗರ ವಿರುದ್ಧದ ಕಠಿಣ ನಿಲುವು ಮತ್ತು ಸ್ಥಳೀಯ ಅಸ್ಸಾಮಿ ಜನರ ಭೂಮಿ, ಭಾಷೆ ಮತ್ತು ಸಂಸ್ಕೃತಿಯನ್ನು ರಕ್ಷಿಸುವ ಭರವಸೆಯು ಜನರಲ್ಲಿ ವಿಶ್ವಾಸ ಮೂಡಿಸಲು ಕಾರಣವಾಗಿದೆ. ಅಲ್ಲದೆ ಅಸ್ಸಾಂ 'ಬಿಹು' ನೃತ್ಯ ಗಿನ್ನೆಸ್ ದಾಖಲೆ ನಿರ್ಮಿಸಲು ಸರಕಾರದ ಪ್ರೋತ್ಸಾಹ, ಚರೈಡಿಯೋ ಮೈದಾನವನ್ನು ಯುನೆಸ್ಕೋ ವಿಶ್ವ ಪರಂಪರೆ ತಾಣವಾಗಿ ಘೋಷಿಸಿರುವುದು ಜನರಲ್ಲಿ ಸಂಸ್ಕೃತಿಯ ರಕ್ಷಣೆಗೆ ಸರಕಾರ ಬದ್ಧವಾಗಿದೆ ಎನ್ನುವ ನಿಲುವಿಗೆ ಬರುವಂತೆ ಮಾಡಿದೆ.

ಗುವಾಹಟಿಯಲ್ಲಿರುವ ಬಿಜೆಪಿ ಪ್ರಧಾನ ಕಚೇರಿಯಲ್ಲಿ ನಡೆದ ವಿಜಯೋತ್ಸವ ಆಚರಣೆಯಲ್ಲಿ ರಾಜ್ಯ ಬಿಜೆಪಿ ಅಧ್ಯಕ್ಷ ದಿಲೀಪ್ ಸೈಕಿಯಾ, ಸಿಎಂ ಹಿಮಂತ್ ಬಿಸ್ವಾ ಶರ್ಮಾ ಅವರು ಪಾಲ್ಗೊಂಡಿದ್ದರು.

ಕೈ ಹಿಡಿದ ಕಲ್ಯಾಣ ಯೋಜನೆಗಳು

ಮಹಿಳೆಯರನ್ನೇ ಗುರಿಯಾಗಿಸಿಕೊಂಡು ಜಾರಿಗೆ ತಂದ ಕಲ್ಯಾಣ ಯೋಜನೆಗಳು ಬಿಜೆಪಿ ಗೆಲುವಿಗೆ ನೆರವಾಗಿದೆ. ಉದಾಹರಣೆಗೆ 'ಅರುಣೋದೋಯ್' ಯೋಜನೆ. ಬಡ ಕುಟುಂಬಗಳ ಮಹಿಳೆಯರಿಗೆ ನೇರವಾಗಿ ನಗದು ವರ್ಗಾವಣೆ ಮಾಡುವ ಯೋಜನೆ ಇದಾಗಿದ್ದು, ಮಹಿಳಾ ಮತದಾರರ ದೊಡ್ಡ ವೋಟ್ ಬ್ಯಾಂಕ್ ಸೃಷ್ಟಿಸಿತ್ತು. 'ನಿಜುತ್ ಮೊಯಿನಾ' ಯೋಜನೆ ಮೂಲಕ ಹೆಣ್ಣು ಮಕ್ಕಳ ಉನ್ನತ ಶಿಕ್ಷಣವನ್ನು ಪ್ರೋತ್ಸಾಹಿಸಲು 5.5 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿನಿಯರಿಗೆ ಆರ್ಥಿಕ ನೆರವು ನೀಡಲಾಗುತ್ತಿದೆ. ಇವು ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿ ಗೆಲುವಿಗೆ ಭಾರೀ ಕೊಡುಗೆ ನೀಡಿವೆ.

- ಸತತ ಮೂರನೇ ಬಾರಿಗೆ ಸರಕಾರ ರಚಿಸಲು ಭಾರತೀಯ ಜನತಾ ಪಕ್ಷ ಸಜ್ಜು
- ಹತ್ತು ವರ್ಷಗಳ ಬಳಿಕ ಅಧಿಕಾರಕ್ಕೇರುವ ಕಾಂಗ್ರೆಸ್ ಪಕ್ಷದ ಕನಸು ಭಗ್ನ
- ಕಾಂಗ್ರೆಸ್ ಅಧ್ಯಕ್ಷ ಗೌರವ್ ಗೊಗೊಯ್‌ಗೆ ಅವರಿಗೆ ಹೀನಾಯ ಸೋಲು
- ಮತ್ತೆ ಮುಖ್ಯಮಂತ್ರಿ ಗಾದಿಗೆ ಏರಲು ಹಿಮಂತ ಬಿಸ್ವಾ ಶರ್ಮಾ ತಯಾರಿ

ಇನ್ನು, ಬ್ರಹ್ಮಪುತ್ರ ನದಿಯ ಮೇಲೆ ನಿರ್ಮಿಸಲಾದ ಬೃಹತ್ ಸೇತುವೆಗಳು, ರಾಷ್ಟ್ರೀಯ ಹೆದ್ದಾರಿಗಳ ವಿಸ್ತರಣೆ ಮತ್ತು ಹೊಸ ರೈಲ್ವೆ ಸಂಪರ್ಕಗಳು ಅಸ್ಸಾಂನ ಚಿತ್ರಣವನ್ನೇ ಬದಲಿಸಿವೆ. ಪ್ರತಿ ಜಿಲ್ಲೆಯಲ್ಲೂ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸುವ ಗುರಿ ಮತ್ತು ಗುವಾಹಟಿಯಲ್ಲಿ ಏಮ್ಸ್ ಆರಂಭಿಸಿರುವುದು ಆರೋಗ್ಯ ಕ್ಷೇತ್ರದಲ್ಲಿ ದೊಡ್ಡ ಬದಲಾವಣೆ ತಂದಿದೆ. ಇದು ಮಧ್ಯಮ ವರ್ಗದ ಜನರ ಬೆಂಬಲಕ್ಕೆ ಕಾರಣವಾಗಿದೆ. ಅಲ್ಲದೆ, ದಶಕಗಳಿಂದ ಅಸ್ಸಾಂನಲ್ಲಿ ನಡೆಯುತ್ತಿದ್ದ ಬೋಡೋಲ್ಯಾಂಡ್ ಮತ್ತು ಉಲ್ಫಾ ಸೇರಿದಂತೆ ಹಲವು ಬಂಡುಕೋರ ಗುಂಪುಗಳೊಂದಿಗೆ ಶಾಂತಿ ಒಪ್ಪಂದ ಮಾಡಿಕೊಳ್ಳುವಲ್ಲಿ ಸರಕಾರ ಯಶಸ್ವಿಯಾಗಿದೆ. ಇದಲ್ಲದೆ ಅರುಣಾಚಲ ಪ್ರದೇಶ ಮತ್ತು ಮೇಘಾಲಯ ರಾಜ್ಯಗಳೊಂದಿಗೆ ದಶಕಗಳಿಂದ ಇದ್ದ ಗಡಿ ವಿವಾದಗಳನ್ನು ಮಾತುಕತೆಯ ಮೂಲಕ ಬಗೆಹರಿಸಲು ಎನ್‌ಡಿಎ ಮುಂದಾಗಿದೆ. ಇದು ರಾಜ್ಯದ ಜನರಲ್ಲಿ ಧೈರ್ಯ ಮೂಡಿಸಿದೆ.

ಅಸ್ಸಾಂ ಗಣ ಪರಿಷತ್ ಮತ್ತು ಯುನೈಟೆಡ್ ಪೀಪಲ್ಸ್ ಪಾರ್ಟಿ ಲಿಬರಲ್ ಜತೆಗಿನ ಬಿಜೆಪಿಯ ಮೈತ್ರಿಯಲ್ಲಿ ಯಾವುದೇ ಸಮಸ್ಯೆಯಿಲ್ಲ. ಹೀಗಾಗಿ ಇದು ಬುಡಕಟ್ಟು ಮತಗಳು ಮತ್ತು ಸ್ಥಳೀಯ ಅಸ್ಸಾಮಿ ಮತಗಳು ಚದುರದಂತೆ ನೋಡಿಕೊಂಡಿದೆ. ಅಷ್ಟೇ ಅಲ್ಲದೆ, ದೇಶದಾದ್ಯಂತ ಯುವ ಜನತೆ ನಿರುದ್ಯೋಗದ ಸುಳಿಯಲ್ಲಿ ಸಿಲುಕಿರುವ ಹೊತ್ತಿನಲ್ಲಿ ಅಸ್ಸಾಂ ಬಿಜೆಪಿ ಸರಕಾರವು ಕಳೆದ ಐದು ವರ್ಷಗಳಲ್ಲಿ ಸುಮಾರು 1.65 ಲಕ್ಷ ಸರಕಾರಿ ಉದ್ಯೋಗಗಳನ್ನು ಅತ್ಯಂತ ಪಾರದರ್ಶಕವಾಗಿ ನೀಡಿದೆ ಎಂದು ಹೇಳಿಕೊಂಡಿದೆ. ಇದು ಜನರಲ್ಲಿ ಹೊಸ ಭರವಸೆ ಮೂಡಲು ಕಾರಣವಾಯಿತು.

ಅಸ್ಸಾಂನ ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರಗಳಾದ ಸತ್ರ'ಗಳ ಭೂಮಿಯನ್ನು ಅಕ್ರಮವಾಗಿ ವಶಪಡಿಸಿಕೊಂಡಿದ್ದವರಿಂದ ಮುಕ್ತಗೊಳಿಸುವ ಸರಕಾರದ ಕ್ರಮವು ಧಾರ್ಮಿಕ ಮತಗಳ ಧ್ರುವೀಕರಣಕ್ಕೆ ನೆರವಾಗಿದ್ದಲ್ಲದೆ, ಬೂತ್ ಮಟ್ಟದಲ್ಲಿ ಬಿಜೆಪಿಯ ಸಂಘಟನೆ ಅತ್ಯಂತ ಪ್ರಬಲವಾಗಿದೆ.

ಆರ್‌ಎಸ್‌ಎಸ್ ಮತ್ತು ಇತರ ಸಂಘಟನೆಗಳ ತಳಮಟ್ಟದ ಕೆಲಸವು ಚುನಾವಣೆ ಸಮಯದಲ್ಲಿ ಜನರು ಬಿಜೆಪಿಗೆ ಮತ ಹಾಕುವಂತೆ ಮಾಡಿದೆ. ಇದೆಲ್ಲಕ್ಕಿಂತ ಮುಖ್ಯವಾಗಿ ಕಾಂಗ್ರೆಸ್ ಮತ್ತು ಬೋಡೋಲ್ಯಾಂಡ್ ನಡುವಿನ ಗೊಂದಲ ಹಾಗೂ ವಿರೋಧ ಪಕ್ಷಗಳಲ್ಲಿ ಬಲವಾದ, ಸರ್ವಸಮ್ಮತ ನಾಯಕನ ಕೊರತೆ ಎನ್‌ಡಿಎ ಗೆಲುವಿನ ಹಾದಿಯನ್ನು ಸುಗಮಗೊಳಿಸಿದೆ.

ಗೆಲುವಿಗೆ ಕಾರಣ

1. ಮಹಿಳೆಯರನ್ನೇ ಗುರಿಯಾಗಿಸಿಕೊಂಡು ಜಾರಿಗೆ ತಂದ 'ಅರುಣೋದೋಯ್' 'ನಿಜುತ್ ಮೊಯಿನಾ' ಯೋಜನೆಗಳು ಬಿಜೆಪಿ ಗೆಲುವಿಗೆ ನೆರವಾಗಿದೆ.
2. ಬಾಂಗ್ಲಾದೇಶದಿಂದ ರಾಜ್ಯಕ್ಕೆ ಬರುವ ಅಕ್ರಮ ವಲಸಿಗರ ವಿರುದ್ಧದ ಕಠಿಣ ನಿಲುವು ಮತ್ತು ಸ್ಥಳೀಯ ಅಸ್ಸಾಮಿ ಜನರ ಭೂಮಿ, ಭಾಷೆ, ಸಂಸ್ಕೃತಿಯನ್ನು ರಕ್ಷಿಸುವ ಭರವಸೆಯು ಜನರಲ್ಲಿ ವಿಶ್ವಾಸ ಮೂಡಿಸಲು ಕಾರಣವಾಗಿದೆ.
3. ಬ್ರಹ್ಮಪುತ್ರ ನದಿಯ ಮೇಲೆ ನಿರ್ಮಿಸಲಾದ ಬೃಹತ್ ಸೇತುವೆ ಗಳು, ರಾಷ್ಟ್ರೀಯ ಹೆದ್ದಾರಿಗಳ ವಿಸ್ತರಣೆ ಮತ್ತು ಹೊಸ ರೈಲ್ವೆ ಸಂಪರ್ಕಗಳು ಅಸ್ಸಾಂನ ಚಿತ್ರಣವನ್ನೇ ಬದಲಿಸಿವೆ.
4. ದಶಕಗಳಿಂದ ಅಸ್ಸಾಂನಲ್ಲಿ ನಡೆಯುತ್ತಿದ್ದ ಬೋಡೋಲ್ಯಾಂಡ್ ಮತ್ತು ಉಲ್ಫಾ ಸೇರಿ ಹಲವು ಬಂಡುಕೋರ ಗುಂಪುಗಳೊಂದಿಗೆ ಶಾಂತಿ ಒಪ್ಪಂದ ಮಾಡಿಕೊಳ್ಳುವಲ್ಲಿ ಸರಕಾರ ಯಶಸ್ವಿಯಾಗಿದೆ.
5. ಅಸ್ಸಾಂ ಗಣ ಪರಿಷತ್ ಮತ್ತು ಯುನೈಟೆಡ್ ಪೀಪಲ್ಸ್ ಪಾರ್ಟಿ ಲಿಬರಲ್ ಜತೆಗಿನ ಬಿಜೆಪಿಯ ಮೈತ್ರಿಯಲ್ಲಿ ಯಾವುದೇ ಸಮಸ್ಯೆಯಿಲ್ಲ. ಹೀಗಾಗಿ ಇದು ಬುಡಕಟ್ಟು ಮತಗಳು, ಸ್ಥಳೀಯ ಅಸ್ಸಾಮಿ ಮತಗಳು ಚದುರದಂತೆ ನೋಡಿಕೊಂಡಿದೆ.

ಸೋಲಿಗೆ ಕಾರಣ

1. ಕಾಂಗ್ರೆಸ್ ಮತ್ತು ಬೋಡೋಲ್ಯಾಂಡ್ ನಡುವಿನ ಗೊಂದಲ ಹಾಗೂ ವಿರೋಧ ಪಕ್ಷಗಳಲ್ಲಿ ಬಲವಾದ, ಸರ್ವಸಮ್ಮತ ನಾಯಕನ ಕೊರತೆ ಇತ್ತು.
2. ಬಿಜೆಪಿ ಮತ್ತು ಆರ್‌ಎಸ್‌ಎಸ್ ಕಾರ್ಯಕರ್ತರು ಬೂತ್ ಮಟ್ಟದಲ್ಲಿ ಕೆಲಸ ಮಾಡಿದರೆ, ಕಾಂಗ್ರೆಸ್ ಸಂಘಟನೆ ದುರ್ಬಲವಾಗಿತ್ತು.
3. ಚುನಾವಣೆಗೂ ಮುನ್ನ ಹಲವು ಪ್ರಮುಖ ನಾಯಕರು ಕಾಂಗ್ರೆಸ್ ತೊರೆದಿದ್ದು ಪಕ್ಷಕ್ಕೆ ಭಾರಿ ಆಘಾತ ನೀಡಿತು.
4. ಬಿಜೆಪಿ ಸಿಎಂ ಹಿಮಂತ ಬಿಸ್ವಾ ಶರ್ಮಾ ಅವರ ಆಡಳಿತಾವಧಿ ಮತ್ತು ಅಭಿವೃದ್ಧಿ ಆಧಾರಿತ ವರ್ಚಸ್ಸು ಕಾಂಗ್ರೆಸ್‌ಗೆ ದೊಡ್ಡ ಸವಾಲಾಯಿತು.
5. ತರುಣ್ ಗೊಗೊಯ್ ಅವರಂತಹ ಪ್ರಭಾವಿ ನಾಯಕರ ನಿರ್ಗಮನದ ನಂತರ, ಇಡೀ ರಾಜ್ಯವನ್ನು ಒಗ್ಗೂಡಿಸಿ ಮುನ್ನಡೆಸಬಲ್ಲ ವರ್ಚಸ್ವಿ ನಾಯಕನ ಕೊರತೆ ಕಾಂಗ್ರೆಸ್‌ನಲ್ಲಿ ಎದ್ದು ಕಾಣುತ್ತಿತ್ತು.


ಈ ಫಲಿತಾಂಶ ರಾಜ್ಯದ ರಾಜಕೀಯ ಇತಿಹಾಸದಲ್ಲಿ ಒಂದು ಮಹತ್ವದ ಕ್ಷಣ. ಅಸ್ಸಾಂನಲ್ಲಿ ಎನ್‌ಡಿಎ ಮತ್ತು ಬಿಜೆಪಿ ಇಂತಹ ಇತಿಹಾಸವನ್ನು ಸೃಷ್ಟಿಸುತ್ತಿರುವುದು ಇದೇ ಮೊದಲು. ಪ್ರಧಾನಿ ಮೋದಿ ನೇತೃತ್ವದ ಅಭಿವೃದ್ಧಿ ಪ್ರಯತ್ನವೇ ಈ ಗೆಲುವಿನ ಪ್ರಮಾಣಕ್ಕೆ ಕಾರಣ.
ಹಿಮಂತ ಬಿಸ್ವಾ ಶರ್ಮಾ
ಅಸ್ಸಾಂ ಮುಖ್ಯಮಂತ್ರಿ

ಫಲಿತಾಂಶದ ಕುರಿತು ನಮಗೆ ತೀವ್ರ ಅಸಮಾಧಾನವಿದೆ. ಚುನಾವಣಾ ಪ್ರಕ್ರಿಯೆ ಮತ್ತು ಇವಿಎಂ ನಿರ್ವಹಣೆಯಲ್ಲಿ ಕೆಲವು ಅಕ್ರಮಗಳು ನಡೆದಿವೆ ಎಂಬ ಸಂಶಯ ನಮಗಿದೆ. ಆದರೂ ನಾವು ಜನಾದೇಶವನ್ನು ಗೌರವಿಸುತ್ತೇವೆ, ವಿರೋಧ ಪಕ್ಷವಾಗಿ ಕೆಲಸ ಮುಂದುವರಿಸುತ್ತೇವೆ.
ಗೌರವ್ ಗೊಗೊಯ್
ಅಸ್ಸಾಂ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ

ನಾವು ಇನ್ನೂ ಹೆಚ್ಚಿನ ಸ್ಥಾನಗಳನ್ನು ನಿರೀಕ್ಷಿಸಿದ್ದೆವು. ಕೆಲವು ಕ್ಷೇತ್ರಗಳಲ್ಲಿ ಅಲ್ಪ ಅಂತರದ ಸೋಲು ನಮಗೆ ಹಿನ್ನಡೆಯಾಗಿದೆ. ಕಾಂಗ್ರೆಸ್ ಮೈತ್ರಿಕೂಟದ ಸೋಲಿನ ಬಗ್ಗೆ ನಾವು ಆತ್ಮಾವಲೋಕನ ಮಾಡಿಕೊಳ್ಳುತ್ತೇವೆ.
ದೇಬಬ್ರತ ಸೈಕಿಯಾ
ಪ್ರತಿಪಕ್ಷದ ನಾಯಕ

ಮತಗಳ ವಿಭಜನೆಯೇ ಬಿಜೆಪಿಗೆ ಲಾಭ ತಂದು ಕೊಟ್ಟಿದೆ. ಮಹಾಘಟಬಂಧನ ಸರಿಯಾಗಿ ಕೆಲಸ ಮಾಡಿದ್ದರೆ ಫಲಿತಾಂಶ ಬೇರೆಯೇ ಇರುತ್ತಿತ್ತು. ಇದು ಪ್ರಜಾಪ್ರಭುತ್ವದ ಫಲಿತಾಂಶವಾಗಿದ್ದರೂ, ಸಮಾಜದ ಕೆಲವು ವರ್ಗಗಳಲ್ಲಿ ಈ ಫಲಿತಾಂಶ ಆತಂಕ ಮೂಡಿಸಿದೆ.
ಬದ್ರುದ್ದೀನ್ ಅಜ್ಮಲ್
ಎಐಯುಡಿಎಫ್ ಮುಖ್ಯಸ್ಥ

ಕಾರ್ಯಕರ್ತರ ಪರಿಶ್ರಮಕ್ಕೆ ಸಿಕ್ಕ ಫಲವಿದು. ನಾವು ಪ್ರತಿ ಮನೆಗೂ ತಲುಪಿ ಸರಕಾರದ ಸಾಧನೆಗಳನ್ನು ವಿವರಿಸಿದ್ದೆವು. ಜನರನ್ನು ದಾರಿ ತಪ್ಪಿಸಲು ವಿರೋಧ ಪಕ್ಷಗಳು ಮಾಡಿದ ಕುತಂತ್ರಗಳು ಈ ಬಾರಿ ನಡೆಯಲಿಲ್ಲ.
ಭಬೇಶ್ ಕಲಿತಾ
ಅಸ್ಸಾಂ ಬಿಜೆಪಿ ಮಾಜಿ ರಾಜ್ಯಾಧ್ಯಕ್ಷ

ಮಮತಾ ಭದ್ರಕೋಟೆ ಭೇದಿಸಿದ ಕೇಸರಿಪಡೆ, ಮೌನವಾಗಿದ್ದುಕೊಂಡೇ ತೃಣಮೂಲ ಕಾಂಗ್ರೆಸ್‌ಗೆ ಗುದ್ದಿದ ಬಂಗಾಳಿ ಮತದಾರ

ದೀದಿಗೆ ಗುಡ್‌ಬೈ, ಮೋದಿಗೆ ಹಾಯ್ ಹಾಯ್..!

ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಅಧಿಪತ್ಯ ಕೊನೆಗೊಳಿಸಿ, ಕೇಸರಿಪಡೆ ದಿಗ್ವಿಜಯ ಸಾಧಿಸುವ ಮೂಲಕ ಗಡಿ ರಾಜ್ಯದಲ್ಲಿ ಹೊಸ ರಾಜಕೀಯ ಇತಿಹಾಸವೊಂದು ಸೃಷ್ಟಿಯಾಗಿದೆ. ಟಿಎಂಸಿ ನಾಯಕಿ, ಸಿಎಂ ಮಮತಾ ಬ್ಯಾನರ್ಜಿ ಹಿಂದೆಂದೂ ಕಾಣದ ರೀತಿಯಲ್ಲಿ ಮುಗ್ಗರಿಸಿದ್ದು, ಟಿಎಂಸಿಯ ಹಿಂಸಾಚಾರದ ರಾಜಕಾರಣವನ್ನು ಮತದಾರರು ತಿರಸ್ಕರಿಸಿದ್ದಾರೆ. ದೀದಿ ಪಕ್ಷದ ರಾಜಕೀಯ ಕುಸಿತ ಹಾಗೂ ಬಿಜೆಪಿಯ ಐತಿಹಾಸಿಕ ಗೆಲುವಿಗೆ ಕಾರಣವಾದ 16 ಪ್ರಮುಖ ಅಂಶಗಳನ್ನು ವಿಶ್ವವಾಣಿ ವಿಶೇಷ ಪ್ರತಿನಿಧಿ ರಾಘವ ಶರ್ಮ ನಿಡ್ಲೆ ಇಲ್ಲಿ ದಾಖಲಿಸಿದ್ದಾರೆ

ಗ್ರೌಂಡ್ ರಿಪೋರ್ಟ್
ರಾಘವಶರ್ಮ ನಿಡ್ಲೆ

1. ಹಿಂದುಗಳ ಕ್ರೋಢೀಕರಣ: ಐತಿಹಾಸಿಕವಾಗಿ ಬಂಗಾಳದ ಮತದಾರರು ಹಿಂದು-ಮುಸ್ಲಿಂ ಎಂಬ ಪ್ರತ್ಯೇಕ ಭಾವನೆಯಿಂದ ಮತದಾನ ಮಾಡಿದ್ದು ಕಡಿಮೆ. ಆದರೆ, ಮೊದಲ ಬಾರಿಗೆ ಬಿಜೆಪಿ ಹಿಂದು ಮತಗಳ ಕ್ರೋಢೀಕರಣ ಮಾಡುವಲ್ಲಿ ಯಶಸ್ವಿಯಾಗಿದೆ. ಬಂಗಾಳದಲ್ಲಿ ಹಿಂದುಗಳು ಅಪಾಯದಲ್ಲಿದ್ದಾರೆ, ಟಿಎಂಸಿ ಮುಸ್ಲಿಂ ತುಷ್ಟೀಕರಣ ರಾಜಕೀಯ ಮಾಡುತ್ತಿದೆ ಎಂಬ ನರೇಟಿವ್ ಅನ್ನು ವ್ಯವಸ್ಥಿತವಾಗಿ ಹಬ್ಬಿಸಿದ ಬಿಜೆಪಿ, ಹಿಂದುಗಳ ಹಬ್ಬಗಳನ್ನು ಸಂಘ ಮತ್ತು ಪಕ್ಷದ ಕಾರ್ಯಕರ್ತರ ಮೂಲಕ ರಾಜ್ಯಾದ್ಯಂತ ಆಚರಿಸುತ್ತಾ ಮನೆ-ಮನಗಳನ್ನು ತಲುಪಿತು. ಬಂಗಾಳಿ ಅಸ್ಮಿತೆ ಜತೆಗೆ ಹಿಂದು ಅಸ್ಮಿತೆಯೂ ನಿಧಾನವಾಗಿ ಬೇರೂರುವಂತೆ ಬಿಜೆಪಿ ಮಾಡಿತು.

2. ಹತ್ಯೆಗಳ ಸಂಚಲನ: ಬಾಂಗ್ಲಾದೇಶದಲ್ಲಿ ಹಿಂದುಗಳ ಮಾರಣಹೋಮ ನಡೆದ ಘಟನೆಗಳು ಬಂಗಾಳದ ಹಿಂದುಗಳಲ್ಲಿ ಆತಂಕ ಸೃಷ್ಟಿ ಮಾಡಿದ್ದಾಗಲೇ 2026 ಬಂಗಾಳ ಚುನಾವಣೆಯಲ್ಲಿ ಬಿಜೆಪಿಗೆ ಅವಕಾಶವಿದೆ ಎನ್ನುವುದನ್ನು ದಿಲ್ಲಿ ನಾಯಕರು ಆಗ್ರಹಿಸಿದ್ದರು. ಹಿಂದುಗಳ ಹತ್ಯೆಯಾದಾಗ ಅದನ್ನು ಬಾಂಗ್ಲಾದೇಶದ ಮುಸ್ಲಿಮರು ಸಂಭ್ರಮಿಸಿದ ವಿಚಾರಗಳು ಬಂಗಾಳದ ಹಿಂದುಗಳನ್ನು ವಿಚಲಿತಗೊಳಿಸಿದ್ದರಿಂದ, ಬಿಜೆಪಿ ಕಾರ್ಯಕರ್ತರು ಬಂಗಾಳದ ಹಿಂದುಗಳ ಮಧ್ಯೆ ರಾಷ್ಟ್ರ ಜಾಗೃತಿಯ ಅಭಿಯಾನ ನಡೆಸಿದರು. ಚುನಾವಣೆ ಆರಂಭವಾಗುತ್ತಿದ್ದಂತೆ ಪ್ರಧಾನಿ ಮೋದಿ ಮತ್ತು ಅಮಿತ್ ಶಾ ಮತ್ತು ಬಿಜೆಪಿ ಸ್ಥಳೀಯ ಮುಖಂಡ ಸುವೇಂದು ಅಧಿಕಾರಿ 'ಅಕ್ರಮ ನುಸುಳುಕೋರರಿಂದ ಬಂಗಾಳವನ್ನು ರಕ್ಷಿಸಿ' ಎಂಬ ಕರೆ ಕೊಡಲು ಆರಂಭಿಸಿದರು.

3. ಮೋದಿ-ಶಾ ಚರಿಷ್ಮಾ: ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಚುನಾವಣೆಯುದ್ದಕ್ಕೂ ರಾಜ್ಯದ ಉದ್ದಗಲ ಪ್ರವಾಸ ಮಾಡಿ ಪ್ರಚಾರ ಮಾಡಿದ್ದಲ್ಲದೆ, ಶ್ರೀಸಾಮಾನ್ಯರೊಂದಿಗೆ ನೇರ ಸಂಪರ್ಕ ಸಾಧಿಸಿದರು. ಡಬಲ್ ಎಂಜಿನ್ ಸರಕಾರದಿಂದ ಮಾತ್ರ ಅರಾಜಕತೆ ಮುಕ್ತ ಬಂಗಾಳದ ಅಭಿವೃದ್ಧಿ ಸಾಧ್ಯ ಎನ್ನುತ್ತಾ ಜನರ ಮನವೊಲಿಸಿದರು. 2021ರ ಚುನಾವಣೆ 7 ಹಂತಗಳಲ್ಲಿ ನಡೆದಿದ್ದರಿಂದ ಟಿಎಂಸಿಗೆ ತನ್ನ ತಪ್ಪುಗಳನ್ನು ಸರಿಪಡಿಸಿಕೊಳ್ಳಲು ಕಾಲವಕಾಶ ದೊರೆತಿತ್ತು. ಆದರೆ, ಹಾಲಿ ಚುನಾವಣೆ ಕೇವಲ 2 ಹಂತಗಳಲ್ಲಿ ನಡೆದದ್ದು ಕೂಡ ಬಿಜೆಪಿಗೆ ಲಾಭವಾಗಿ ಪರಿಣಮಿಸಿತು.

4. ಗೂಂಡಾಗಿರಿಯ ತಿರಸ್ಕಾರ: ರಾಜಕೀಯ ಹಿಂಸಾಚಾರದ ಕರಾಳ ಇತಿಹಾಸವುಳ್ಳ ಬಂಗಾಳದಲ್ಲಿ ಜನರು ಗೂಂಡಾ ಸಂಸ್ಕೃತಿಯಿಂದ ಬೇಸತ್ತಿದ್ದರು. ಟಿಎಂಸಿ ಪ್ರೇರಿತ ಗೂಂಡಾಗಿರಿಯಿಂದಾಗಿ ಸಂತ್ರಸ್ತ ಕುಟುಂಬಗಳ ರೋದನ ತಟಸ್ಥ ಮತದಾರರನ್ನೂ ವಿಚಲಿತಗೊಳಿಸಿತ್ತು. ಹಿಂಸಾಚಾರದ ರಾಜಕಾರಣದ ಪರಿಣಾಮ ಮತದಾರರು ಮುಕ್ತ ಮನಸ್ಸಿನಿಂದ ಮಾತನಾಡುವ ವಾತಾವರಣ ಇರಲಿಲ್ಲ. ಟಿಎಂಸಿ ಹೊರತುಪಡಿಸಿದ ಪಕ್ಷಗಳನ್ನು ಬೆಂಬಲಿಸುವವರನ್ನು ಗುರುತಿಸಿ ದಾಳಿ ಮಾಡಲಾಗುತ್ತಿತ್ತು. ಈ ಘಟನೆಗಳಿಂದ ಜನ ರೋಸಿ ಹೋಗಿದ್ದರು ಮತ್ತು ಸಂತ್ರಸ್ತರು ಒಂದು ಕಡೆಯಿಂದ ಮತ್ತೊಂದು ಕಡೆಗೆ ಅನಿವಾರ್ಯವಾಗಿ ವಲಸೆ ಹೋಗಬೇಕಾಗಿತ್ತು. ಈ ಬಾರಿ ಹಿಂಸಾಚಾರ ರಾಜಕೀಯ ತಿರಸ್ಕರಿಸಿದ ಮತದಾರರು, ರಾಜ್ಯದಲ್ಲಿ ಶಾಂತಿ ನೆಲೆಸಲು ಬಿಜೆಪಿ ಶ್ರಮಿಸಬೇಕು ಎಂಬ ಸಂದೇಶವನ್ನು ಮತದಾನದ ಮೂಲಕ ನೀಡಿ, ಟಿಎಂಸಿಯನ್ನು ತಿರಸ್ಕರಿಸಿದರು.

5. ಕೇಸರಿಗೆ ಮಹಿಳೆಯರ ಶ್ರೀರಕ್ಷೆ: ಟಿಎಂಸಿ ಸರಕಾರ ರಾಜ್ಯದ 25-65 ವಯಸ್ಸಿನ ಮಹಿಳೆಯರಿಗೆ ಲಕ್ಷ್ಮಿ ಭಂಡಾರ್ ಯೋಜನೆ ಅಡಿಯಲ್ಲಿ ಮಾಸಿಕ ರು. 1500 ನೀಡುತ್ತಿದ್ದುದರಿಂದ ಬಿಜೆಪಿ ಅದಕ್ಕೆ ಪರ್ಯಾಯವಾಗಿ ರು. 3000 ನೀಡುವ ಯೋಜನೆಯನ್ನು ಪ್ರಣಾಳಿಕೆಯಲ್ಲಿ ಪ್ರಕಟಿಸಿತು. ಆದರೆ, ಮಾಸಿಕ ನೆರವಿನಾಚೆ ಯೋಚನೆ ಮಾಡಿದ ಬಹುಪಾಲು ಮಹಿಳಾ ಮತದಾರರಲ್ಲಿ, ರಾಜ್ಯದ ಬಾಲಕಿ, ಯುವತಿ, ಮಹಿಳೆಯರಿಗೆ ಕಿಡಿಗೇಡಿಗಳಿಂದ ಭದ್ರತೆ ಬೇಕಿದೆ. ಅವರಿಗೆ ಭದ್ರತೆ ಒದಗಿಸುವಲ್ಲಿ ಟಿಎಂಸಿ ವಿಫಲವಾಗಿದೆ ಎಂಬ ಭಾವನೆ ಬಲವಾಗಿ ಬೇರೂರಿತ್ತು. ಲಕ್ಷ್ಮಿ ಭಂಡಾರ್ ಯೋಜನೆ ಕಾರಣಕ್ಕಾಗಿ ಒಂದಿಷ್ಟು ಮಹಿಳಾ ಮತವರ್ಗ ದೀದಿಯನ್ನು ಬೆಂಬಲಿಸಿದ್ದರೂ, ಬಹುಪಾಲು ಮಹಿಳೆಯರಿಗೆ ಭದ್ರತೆಯ ವಿಷಯದಲ್ಲಿ (ಮುಖ್ಯವಾಗಿ ವಿದ್ಯಾವಂತ ವರ್ಗ) ಪರಿವರ್ತನೆ ಅನಿವಾರ್ಯವಾಗಿತ್ತು ಎನ್ನುವುದು ಫಲಿತಾಂಶದಲ್ಲಿ ಕಂಡಿದೆ.

6. ಸುವೇಂದು ಆಕ್ರಮಣಕಾರಿತ್ವ: 2021ರ ವಿಧಾನಸಭೆ ಚುನಾವಣೆಯಲ್ಲಿ ನಂದಿಗ್ರಾಮ ವಿಧಾನಸಭೆ ಕ್ಷೇತ್ರದಲ್ಲಿ ಸಿಎಂ ಮಮತಾ ಬ್ಯಾನರ್ಜಿ ಅವರನ್ನು ಸೋಲಿಸಿ ಪರಾಕ್ರಮ ಮೆರೆದಿದ್ದ ಸುವೇಂದು ಅಧಿಕಾರಿ, ಈ ಚುನಾವಣೆಯಲ್ಲಿ ನಂದಿಗ್ರಾಮದಲ್ಲಿ ಸ್ಪರ್ಧಿಸುವ ಜತೆಗೆ ಭವಾನಿಪುರದಲ್ಲೂ ಸ್ಪರ್ಧಿಸಿದ್ದರಿಂದ ಮಮತಾ ದೀದಿ ರಾಜಕೀಯ ಒತ್ತಡಕ್ಕೆ ಸಿಲುಕಿದ್ದರು. ದೀದಿ ರಾಜ್ಯಾದ್ಯಂತ ಪ್ರವಾಸ ಮಾಡಿದರೂ, ಅವರ ಒಳಮನಸ್ಸು ಭವಾನಿಪುರದ ಬಗ್ಗೆಯೇ ಯೋಚಿಸುತ್ತಿತ್ತು. ಮೇಲಾಗಿ, ಮಮತಾ ಬ್ಯಾನರ್ಜಿ ಮತ್ತು ಟಿಎಂಸಿ ಸರಕಾರವನ್ನು ಸುವೇಂದು ತಮ್ಮ ಆಕ್ರಮಣಕಾರಿ ಧೋರಣೆಯಿಂದಲೇ ಎದುರಿಸಿ, ವಾಗ್ಬಾಣಗಳ ಮೂಲಕ ಬಿಜೆಪಿ ಕಾರ್ಯಕರ್ತರ ಮನೋಬಲ ವೃದ್ಧಿಸಿದರು. ಒಂದೊಮ್ಮೆ ಟಿಎಂಸಿಯಲ್ಲಿದ್ದುಕೊಂಡು ಜಾತ್ಯತೀತ ಮಂತ್ರ ಜಪಿಸಿದ್ದ ಸುವೇಂದು, ತಮ್ಮ ಸೈದ್ಧಾಂತಿಕ ರೂಪಾಂತರದೊಂದಿಗೆ ಕೇಸರಿ ಕಾರ್ಯಕರ್ತರಿಗೂ ಹತ್ತಿರವಾಗಿದ್ದರು.

7. ದಿಕ್ಕು ಬದಲಿಸಿದ ಆರ್‌ಜಿ ಕರ್ ಘಟನೆ: 15 ವರ್ಷಗಳ ಆಡಳಿತಾವಧಿಯಲ್ಲಿ ಸಿಎಂ ಮಮತಾ ಬ್ಯಾನರ್ಜಿ ಅವರ ವರ್ಚಸ್ಸಿಗೆ ತೀವ್ರವಾಗಿ ಹಾನಿ ಮಾಡಿದ್ದು ಕೋಲ್ಕತ್ತಾದ ಆರ್‌ಜಿ ಕರ್ ಆಸ್ಪತ್ರೆಯಲ್ಲಿ ವೈದ್ಯ ವಿದ್ಯಾರ್ಥಿನಿಯ ಅತ್ಯಾಚಾರ-ಕೊಲೆ ಪ್ರಕರಣ. ವಿದ್ಯಾರ್ಥಿನಿ ಹತ್ಯೆ-ಅತ್ಯಾಚಾರ ಮಾಡಿದ ವ್ಯಕ್ತಿಯನ್ನು ಸರಕಾರ ರಕ್ಷಣೆ ಮಾಡುತ್ತಿದೆಯೇ ಎಂಬಷ್ಟರ ಮಟ್ಟಿಗೆ ರಾಜ್ಯದಲ್ಲಿ ಚರ್ಚೆಗಳು ನಡೆದು, ಸರಕಾರದ ಬಗ್ಗೆ ಮತ್ತು ಮುಖ್ಯವಾಗಿ ಸಿಎಂ ಮಮತಾ ಬಗ್ಗೆ ಜನರಲ್ಲಿ ಆಕ್ರೋಶ ದುಪ್ಪಟ್ಟಾಗಿತ್ತು. ಈ ಪ್ರಕರಣವನ್ನು ರಾಜಕೀಯ ವಿಸ್ತರಣೆಗೆ ಬಳಸಿಕೊಂಡ ಬಿಜೆಪಿ, ಸಂತ್ರಸ್ತೆಯ ತಾಯಿ ರತ್ನಾ ದೇಬನಾಥ್ ಅವರಿಗೆ ಪಾಣಿಹಾಟಿ ವಿಧಾನಸಭೆ ಕ್ಷೇತ್ರದಿಂದ ಟಿಕೆಟ್ ನೀಡಿ, ಅವರ ಹೋರಾಟಕ್ಕೆ ರಾಜಕೀಯ ಬಲ ನೀಡಿತು. ಈ ಪ್ರಕರಣವನ್ನು ಬಿಜೆಪಿ ರಾಜಕೀಯಗೊಳಿಸಿದೆ ಎಂಬ ಅಪಸ್ವರಗಳು ಪಾಣಿಹಾಟಿಯಲ್ಲಿ ಕೇಳಿಬಂದರೂ, ರತ್ನಾ ದೇಬನಾಥ್ ಅವರ ಗೆಲುವಿಗೆ ಇದು ಅಡ್ಡಿ ಮಾಡಲಿಲ್ಲ. ರತ್ನಾ ದೇಬನಾಥ್ ಅವರ ಚಿತ್ರ ಮುಂದಿಟ್ಟುಕೊಂಡೇ ಬಿಜೆಪಿ ಮಹಿಳಾ ಪರ ರಣನೀತಿ ಅನುಸರಿಸಿತು.

8. ಬಾಂಗ್ಲಾದೇಶಿಯರ ಭಯ: ಬಂಗಾಳದಲ್ಲಿ ಬಾಂಗ್ಲಾದೇಶೀಯರಿಗಿರುವಷ್ಟು ಮಾನ್ಯತೆ ಮೂಲ ನಿವಾಸಿಗಳಿಗೆ ಇಲ್ಲ ಎಂಬ ಆಕ್ರೋಶವೂ ಟಿಎಂಸಿ ಕುಸಿತಕ್ಕೆ ಕಾರಣ. ಇಂತಹ ಆಕ್ರೋಶ ತುಂಬಿದ ಮಾತುಗಳು ರಾಜ್ಯದ ಹಲವು ಜಿಲ್ಲೆಗಳಲ್ಲಿ ಕೇಳಿಬಂದವು. ಇದೇ ಕಾರಣಕ್ಕೆ ಗಡಿ ಭಾಗದ ಕ್ಷೇತ್ರಗಳಲ್ಲಿ ಬಿಜೆಪಿ ಅಮೋಘ ವಿಜಯ ದಾಖಲಿಸಿತು. ಬಾಂಗ್ಲಾದೇಶಿಯರನ್ನು ಭಾರತದಿಂದ ಓಡಿಸಬೇಕು ಎಂಬ ಬಿಜೆಪಿಯ ಪೊಲಿಟಿಕಲ್ ನರೇಟಿವ್ ರಾಜ್ಯದ ಜನರನ್ನು ತಲುಪಿತು ಮತ್ತು ಅಕ್ರಮ ನುಸುಳುಕೋರರು ರಾಜ್ಯ ಮತ್ತು ದೇಶದ ಸಂಪನ್ಮೂಲಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಆದರೆ, ಮೂಲ ನಿವಾಸಿಗಳು ಸಂತ್ರಸ್ತರಾಗಿದ್ದಾರೆ ಎಂಬ ಮತದಾರನ ಬೇಸರ ಟಿಎಂಸಿ ವಿರೋಧಿ ಮತಗಳಾಗಿ ಬದಲಾದವು.

9. ಯುವ ಜನಾಂಗದ ಬೆಂಬಲ: ಪಶ್ಚಿಮ ಬಂಗಾಳವನ್ನು ಕರ್ನಾಟಕ, ತ.ನಾಡು, ಮಹಾರಾಷ್ಟ್ರ, ಗುಜರಾತ್, ಆಂಧ್ರಪ್ರದೇಶದಂತಹ ರಾಜ್ಯಗಳಿಗೆ ಹೋಲಿಸಿದ ಯುವ ಮತದಾರರು, ನಮ್ಮ ರಾಜ್ಯ ಏಕೆ ಅಭಿವೃದ್ಧಿಯಲ್ಲಿ ಹಿಂದೆ ಬಿದ್ದಿದೆ ಎಂಬುದನ್ನೇ ಪ್ರಶ್ನೆ ಮಾಡುತ್ತಿದ್ದರು. ಕಂಪನಿ, ಫ್ಯಾಕ್ಟರಿ, ಉದ್ಯಮ ಸಂಸ್ಥೆಗಳ ಕೊರತೆಯಿಂದಾಗಿ ಯುವಕರು ಬೇರೆ ರಾಜ್ಯಕ್ಕೆ ವಲಸೆ ಹೋಗುತ್ತಿರುವುದು ಜನರನ್ನು ಚಿಂತೆಗೀಡು ಮಾಡಿತ್ತು. ಬೇರೆ ರಾಜ್ಯಗಳಿಂದ ಮತದಾನಕ್ಕಾಗಿ ಬಂಗಾಳಕ್ಕೆ ಬಂದಿದ್ದ ವಲಸಿಗ ಮತವರ್ಗ ಕೂಡ ಬಂಗಾಳದಲ್ಲಿ ಪರಿವರ್ತನೆ ಅನಿವಾರ್ಯ ಎಂಬ ಮಾತುಗಳನ್ನಾಡುತ್ತಿತ್ತು. ವಿದ್ಯಾವಂತ ಯುವಕರ ಮಧ್ಯೆ ಉದ್ಯೋಗ ಸ್ನೇಹಿ ವಾತಾವರಣಕ್ಕಾಗಿ ಬದಲಾವಣೆ ಅನಿವಾರ್ಯ ಎಂಬ ಚರ್ಚೆಗಳಾಗುತ್ತಿದ್ದುದನ್ನು ಬಿಜೆಪಿ ತನ್ನ ಪರವಾದ ಅಲೆ ವೃದ್ಧಿಸಲು ಬಳಸಿಕೊಂಡಿತು.

10. ಎಸ್‌ಐಆರ್ ಪರಿಣಾಮ: ಮತದಾರ ಪಟ್ಟಿಯ ತೀವ್ರ ಪರಿಷ್ಕರಣೆಯಿಂದಾಗಿ (ಎಸ್‌ಐಆರ್) 94 ಲಕ್ಷ ಮತದಾರರ ಹೆಸರನ್ನು ಅಳಿಸಿಹಾಕಲಾಯಿತು. ಇದರಲ್ಲಿ 27 ಲಕ್ಷ ಮಂದಿ ಪಟ್ಟಿಯಲ್ಲಿ ಮರು ಸೇರ್ಪಡೆಗಾಗಿ ಅರ್ಜಿ ಸಲ್ಲಿಸಿದ್ದು, ವಿಚಾರಣೆ ನಡೆಯುತ್ತಿದೆ. ಆದರೆ, ಉಳಿದ 67 ಲಕ್ಷ ನಕಲಿ ಮತದಾರರ ಹೆಸರನ್ನು ಶಾಶ್ವತವಾಗಿ ಅಳಿಸಿ ಹಾಕಲಾಯಿತು. ಇದರಿಂದಾಗಿ ಹಲವು ಕ್ಷೇತ್ರಗಳ ರಾಜಕೀಯ ಚಿತ್ರಣವೇ ಬದಲಾಯಿತು. ಮತದಾನ ಪ್ರಮಾಣದಲ್ಲೂ ಏರಿಕೆಯಾಯಿತು. ಎಸ್‌ಐಆರ್ ಪ್ರಕ್ರಿಯೆ ಆರಂಭವಾಗುತ್ತಿದ್ದಂತೆ ಸರಕಾರಿ ದಾಖಲೆಗಳಿಲ್ಲದೆ ಬಂಗಾಳದಲ್ಲಿ ನೆಲೆಸಿದ್ದ ಅನೇಕ ಬಾಂಗ್ಲಾದೇಶಿ ಪ್ರಜೆಗಳು ಗಡಿ ಮೂಲಕ ಬಾಂಗ್ಲಾದೇಶಕ್ಕೆ ವಾಪಸ್ ತೆರಳಿದರು. ಎಸ್‌ಐಆರ್ ಪ್ರಕ್ರಿಯೆ ವಿರೋಧಿಸಿ, ನ್ಯಾಯಾಲಯದ ಆದೇಶಗಳಿಗೂ ಬಗ್ಗದೆ ಟಿಎಂಸಿ ಮುಖಂಡರು ನಡೆಸಿದ ಹೈಡ್ರಾಮಗಳೂ ಮತದಾರರ ಮನಸ್ಸಿನ ಮೇಲೆ ವ್ಯಾಪಕ ಪರಿಣಾಮ ಬೀರಿದವು.

11. ಬಂಗಾಳಿ ಅಸ್ಮಿತೆಯಾಚೆ ಮತ: ಮೂರು ಅವಧಿಗಳಿಂದ ತನ್ನನ್ನು ಬಂಗಾಳಿ ಅಸ್ಮಿತೆಯ ಪ್ರತಿನಿಧಿ ಎಂದು ಬಿಂಬಿಸಿಕೊಳ್ಳುತ್ತಿದ್ದ ಸಿಎಂ ಮಮತಾ, ಈ ಬಾರಿ ಕೂಡ ಬಿಜೆಪಿಯನ್ನು ಉತ್ತರ ಭಾರತದ ಪೊಲಿಟಿಕಲ್ ಪಾರ್ಟಿ ಎಂದು ಬಿಂಬಿಸಿ, ಬಂಗಾಳಿ ಸಂಸ್ಕೃತಿ, ಪರಂಪರೆ ಮತ್ತು ಗುರುತನ್ನು ಇವರು ಹಾಳು ಮಾಡಲಿದ್ದಾರೆ ಎಂದು ಪ್ರಚಾರ ನಡೆಸಿದರು. ಮೋದಿ-ಅಮಿತ್ ಶಾ ಬಂಗಾಳವನ್ನು ಹತ್ತಿಕ್ಕಲಿದ್ದಾರೆ ಎಂದೂ ಎಚ್ಚರಿಸಲಾಯಿತು. ಆದರೆ, ದೀದಿಯ ಈ ತಂತ್ರಗಾರಿಕೆಯನ್ನು ಜನ ಈ ಬಾರಿ ಒಪ್ಪಲಿಲ್ಲ. ಬಂಗಾಳಿಗರನ್ನು ಕಾಪಾಡುವುದು ಬಂಗಾಳಿ ಅಸ್ಮಿತೆ ಒಂದೇ ಅಲ್ಲ, ಅಭಿವೃದ್ಧಿ ಮತ್ತು ರಕ್ಷಣೆಗೆ ಅಸ್ಮಿತೆಯಾಚೆಗೂ ಯೋಚಿಸುವುದು ಅನಿವಾರ್ಯ ಎನ್ನುವುದನ್ನು ಚುನಾವಣಾ ತೀರ್ಪಿನಲ್ಲಿ ಮತದಾರ ಸ್ಪಷ್ಟಪಡಿಸಿದ್ದಾನೆ.

12. ಸೈಲೆಂಟ್ ವೋಟರ್ಸ್: ನನ್ನಂತೆ ಅನೇಕ ಪತ್ರಕರ್ತರು ಬಂಗಾಳಿ ಮತದಾರರನ್ನು ಮಾತನಾಡಿಸಿ, ಅವರ ಮನದಾಳ ಅರಿಯುವ ಯತ್ನ ಮಾಡಿದ್ದರು. 10 ಮಂದಿ ಜತೆ ಮಾತಾಡಿದರೆ ಅವರಲ್ಲಿ 2-3 ಮಂದಿ ಮಾತ್ರ ರಾಜಕೀಯ ಒಲವು-ನಿಲುವುಗಳ ಬಗ್ಗೆ ಹೇಳುತ್ತಿದ್ದರು. ಉಳಿದವರದ್ದು ಗಾಢ ಮೌನ. ಹೀಗಾಗಿ, ಯಾರೆಲ್ಲ ಮೌನವಾಗಿದ್ದರೋ ಅವರು ಬದಲಾವಣೆಗೆ ಮತ ಹಾಕುವ ಬಗ್ಗೆ ನಿರ್ಣಯಿಸಿದ್ದರು ಎನ್ನುವುದು ಈಗ ದೃಢವಾಗಿದೆ. ಟಿಎಂಸಿ ಗೂಂಡಾ ರಾಜಕಾರಣದ ಭಯ, ಆತಂಕದಿಂದಾಗಿ ಅವರು ತಮ್ಮ ಮನಸ್ಸಿನ ಆಶಯಗಳನ್ನು ಹಂಚಿಕೊಳ್ಳಲಿಲ್ಲ. ಜನರು ಮುಕ್ತವಾಗಿ ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳದ್ದರಿಂದ ಮತದಾರನ ಮನದೊಳಗೇನಿದೆ ಎನ್ನುವುದು ಸುಲಭದಲ್ಲಿ ಅರ್ಥವಾಗುತ್ತಿರಲಿಲ್ಲ. ಆದರೆ, ಮತದಾರರು ತಮ್ಮ ಮೌನದ ಮೂಲಕವೇ ಟಿಎಂಸಿಗೆ ಸಂದೇಶ ರವಾನಿಸಿದರು ಎನ್ನುವುದನ್ನು ಫಲಿತಾಂಶ ತೋರಿಸಿದೆ.

13. ಎಡ-ಕಾಂಗ್ರೆಸ್ ವೋಟುಗಳ ಶಿಫ್ಟ್: ಟಿಎಂಸಿ ದಬ್ಬಾಳಿಕೆ ರಾಜಕಾರಣದಿಂದ ಬೇಸತ್ತಿದ್ದ ಎಡಪಕ್ಷಗಳ ಮತ್ತು ಕಾಂಗ್ರೆಸ್‌ನ ಕೆಲವೊಂದಿಷ್ಟು ಮತದಾರರು ಈ ಸಲ ಟಿಎಂಸಿ ಸೋಲಲೇಬೇಕು ಎಂಬ ಕಾರಣಕ್ಕಾಗಿ ಬಿಜೆಪಿಗೆ ಮತ ಹಾಕಿದ್ದಾರೆ ಎಂದು ಹೇಳಲಾಗುತ್ತಿದೆ. ಕೆಲ ಮತದಾರರು ಟಿಎಂಸಿಯನ್ನು ಸೋಲಿಸುವ ರಾಜಕೀಯ ಸಾಮರ್ಥ್ಯ ಕಾಂಗ್ರೆಸ್ ಅಥವಾ ಎಡಪಕ್ಷಗಳಲ್ಲಿ ಇಲ್ಲ ಎಂಬ ವಾಸ್ತವ ಒಪ್ಪಿಕೊಂಡು, ತಾವು ಬಿಜೆಪಿ ತತ್ವ-ಸಿದ್ಧಾಂತದ ವಿರೋಧಿಗಳಾಗಿದ್ದರೂ, ಟಿಎಂಸಿಯನ್ನು ಹತ್ತಿಕ್ಕಲು ಬಿಜೆಪಿಗೆ ಮತ ಹಾಕುವುದು ಅನಿವಾರ್ಯ ಎಂದು ಆಲೋಚಿಸಿದ್ದರು. ಇದು ಬಿಜೆಪಿಯ ಸಂಖ್ಯಾಬಲ ಮತ್ತಷ್ಟು ಹೆಚ್ಚಿಸಿತು.

14. ಚುನಾವಣೆ ಆಯೋಗದ ಸಾಹಸ: ರಾಜ್ಯದಲ್ಲಿ ಮೊದಲ ಬಾರಿಗೆ ಮುಕ್ತ, ನ್ಯಾಯಸಮ್ಮತ ಚುನಾವಣೆ ನಡೆಸಲು ಕೇಂದ್ರ ಚುನಾವಣಾ ಆಯೋಗ ಬಿಗಿ ನಿಯಮಗಳನ್ನು ಜಾರಿ ಮಾಡಿತು. ಇದುವರೆಗಿನ ಚುನಾವಣೆಗಳು ಹಿಂಸಾಚಾರವಿಲ್ಲದೆ ನಡೆದ ಉದಾಹರಣೆಯೇ ಇಲ್ಲ. ಆದರೆ, ಪಕ್ಷಪಾತ ಧೋರಣೆಯುಳ್ಳ ಅಧಿಕಾರಿಗಳನ್ನು ನಿರ್ದಾಕ್ಷಿಣ್ಯವಾಗಿ ಅಮಾನತುಗೊಳಿಸಿದ ಚುನಾವಣಾ ಆಯೋಗ, ಬೂತ್‌ಗಳಲ್ಲಿ ಮತದಾರರ ಮೇಲೆ ರಾಜಕೀಯ ಪಕ್ಷಗಳ ಪ್ರಭಾವ ಬೀರದಂತೆ ಎಚ್ಚರಿಕೆ ವಹಿಸಿತು. ಬೂತ್‌ಗಳ 100 ಮೀಟರ್ ಅಂತರದಲ್ಲಿ ಮತದಾರ, ಪ್ರಿಸೈಡಿಂಗ್ ಆಫಿಸರ್ ಮತ್ತು ಸೇನಾ ಸಿಬ್ಬಂದಿ ಬಿಟ್ಟು ಬೇರೆ ಯಾರೂ ಬರುವಂತಿರಲಿಲ್ಲ. 100 ಮೀಟರ್ ದೂರದಲ್ಲಿ ವೋಟರ್ ಕಾರ್ಡು ಪರಿಶೀಲನೆಗಾಗಿ ಬಿಎಲ್‌ಒಗಳು ಕುಳಿತಿದ್ದರು. ಇವೆಲ್ಲವೂ ನ್ಯಾಯಯುತ ಚುನಾವಣೆ ನಡೆಸಲು ಸಹಕಾರಿಯಾದವು.

15. ಧೈರ್ಯ ತುಂಬಿದ ಸೇನೆ: ಮತದಾನಕ್ಕೆ ಮುನ್ನ ಸಿಆರ್‌ಪಿಎಫ್ ಸೇರಿ ವಿವಿಧ ಭದ್ರತಾ ಪಡೆಗಳ ಸೇನಾ ಸಿಬ್ಬಂದಿ ಗ್ರಾಮ, ಪಟ್ಟಣಗಳಲ್ಲಿ ಜನರು, ಸಮುದಾಯಗಳನ್ನು ತಲುಪಿ ಅವರಲ್ಲಿ ಧೈರ್ಯ ತುಂಬುವ ಕೆಲಸ ಮಾಡಿದರು. ಯಾವ ಭಯವಿಲ್ಲದೆ ಮತದಾನಕ್ಕೆ ಬನ್ನಿ, ನಿಮ್ಮ ಮಕ್ಕಳಂತೆ ನಾವು ರಕ್ಷಣೆ ನೀಡುತ್ತೇವೆ ಎಂದು ಮನೋಬಲ ವೃದ್ಧಿಸಿದರು. ಹೀಗಾಗಿ, ಜನರು ಭಯಮುಕ್ತ ಪರಿಸರದಲ್ಲಿ ಮತದಾನ ಮಾಡಲು ಸಾಧ್ಯವಾಯಿತು. ಭಯಮುಕ್ತ ವಾತಾವರಣ ಕೂಡ ಜನ ಪರಿವರ್ತನೆಗೆ ಮತ ಹಾಕಲು ಪ್ರೇರೇಪಣೆಯಾಯಿತು..! ರಾಜ್ಯವೊಂದರ ಚುನಾವಣೆಗೆ 2.5 ಲಕ್ಷ ಸೇನಾ ಸಿಬ್ಬಂದಿ ರಕ್ಷಣೆಗಾಗಿ ನಿಯೋಜನೆಗೊಂಡ ಮೇಲೂ ಸಣ್ಣಪುಟ್ಟ ಹಿಂಸಾಚಾರ ಘಟನೆಗಳು ಸಂಭವಿಸಿದವು ಎಂದರೆ ಈ ಹಿಂದಿನ ಚುನಾವಣೆಗಳು ಹೇಗೆ ನಡೆಯುತ್ತಿದ್ದವು ಎನ್ನುವುದನ್ನು ನೀವು ಊಹಿಸಬಹುದು..!

16. ಆರ್‌ಎಸ್‌ಎಸ್ ಗ್ರೌಂಡ್‌ವರ್ಕ್: 2021ರ ವಿಧಾನಸಭೆ ಚುನಾವಣೆ ಸೋಲಿನ ಹೊರತಾಗಿಯೂ ಆರ್‌ಎಸ್‌ಎಸ್ ತನ್ನ ಗ್ರೌಂಡ್ ವರ್ಕ್ ಅನ್ನು ಬಂಗಾಳದಲ್ಲಿ ವಿಸ್ತರಿಸುತ್ತಲೇ ಇತ್ತು. ರಾಜ್ಯದ ವಿವಿಧೆಡೆ ಹಿಂದು ಜಾಗೃತಿ ಸಭೆ, ಅಭಿಯಾನ, ಜಾಗರಣೆಗಳನ್ನು ನಡೆಸುತ್ತಾ ರಾಷ್ಟ್ರೀಯ ವಿಚಾರಧಾರೆಗಳ ಬೀಜಗಳನ್ನು ಬಿತ್ತುತ್ತಾ ಜನರನ್ನು ತಲುಪಿತು. ಬಿಜೆಪಿ ಮತ್ತು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸುದೀರ್ಘ ಕಾರ್ಯಾಚರಣೆ ಮತ್ತು ಕಾರ್ಯಕರ್ತರ ತಾಳ್ಮೆಯ ಫಲವಾಗಿ ಬಂಗಾಳವನ್ನು ಗೆಲ್ಲಲು ಕೇಸರಿಪಡೆಗೆ ಸಾಧ್ಯವಾಗಿದೆ.

ರಾಜ್ಯದಲ್ಲಿ ಅತೀ ಹೆಚ್ಚು ಹೋರಾಟ ಸಂಘಟಿಸಿದ ಅಪರೂಪದ ನಾಯಕ | ರೈತರು, ಮಹಿಳಾ ಸಮುದಾಯದ ಧ್ವನಿ

ಯಡಿಯೂರಪ್ಪ ಎಂದರೆ ಹೋರಾಟ

ಯಡಿಯೂರಪ್ಪ ಅವರಂತಹ ವಿಭಿನ್ನ ವ್ಯಕ್ತಿತ್ವ, ಬದ್ಧತೆ, ಸ್ಪಷ್ಟ ರಾಜಕೀಯ ನಿಲುವು, ಅಭಿವೃದ್ಧಿ ವಿಚಾರವುಳ್ಳ ಮತ್ತೊಬ್ಬ ರಾಜಕಾರಣಿ ನಮಗೆ ಹುಡುಕಿದರೂ ಸಿಗಲಾರರು. ಯಡಿಯೂರಪ್ಪ ಅವರು ಕರ್ನಾಟಕದ ಯಶಸ್ವಿ ಮುಖ್ಯಮಂತ್ರಿ ಎನಿಸಿಕೊಂಡಿದ್ದರೂ, ಅವರಲ್ಲೊಬ್ಬ ಕಾರ್ಯಕರ್ತನಿದ್ದ. ಸಮಾಜದಲ್ಲಿನ ವಾಸ್ತವಿಕತೆಯನ್ನು ಸಂಪೂರ್ಣವಾಗಿ ಅರಿತ ಜವಾಬ್ದಾರಿಯುತ ನಾಯಕರು. ಕಾರ್ಯಕರ್ತರು ಮತ್ತು ಯಡಿಯೂರಪ್ಪ ಅವರ ಸಂಬಂಧ ಹೃದಯಸ್ಪರ್ಶಿ.

ಸಾಮಾನ್ಯ ಕಾರ್ಯಕರ್ತನಿಂದ ಸಿಎಂ ಗಾದಿಗೆ: ಯಡಿಯೂರಪ್ಪ ಅವರ ಪ್ರತಿಯೊಂದು ಹೆಜ್ಜೆಯಲ್ಲೂ ನಮಗೆ ಪರಿಶ್ರಮದ ಸುಗಂಧ ಅನುಭವಿಸಲು ಸಾಧ್ಯ. ಏಕೆಂದರೆ ಅವರು ತಳಮಟ್ಟದಿಂದ ಬೆಳೆದು ಬಂದವರು. ಶಿಕಾರಿಪುರ ಪುರಸಭೆ ಸದಸ್ಯರಾಗಿ ಆರಂಭಗೊಂಡ ಸಾರ್ವಜನಿಕ ಜೀವನ ಅವರನ್ನು ರಾಜ್ಯದ ಮುಖ್ಯಮಂತ್ರಿ ಗಾದಿಯವರೆಗೆ ಕರೆದುಕೊಂಡು ಬಂದಿದೆ. ಕಾರ್ಯಕರ್ತನಿಂದ ಪ್ರಾರಂಭವಾದ ಅವರ ರಾಜಕೀಯ ಯಾತ್ರೆ ಪ್ರತಿಯೊಬ್ಬರಿಗೂ ಪ್ರೇರಣೆಯಾಗಿದೆ. ಸಾಮಾಜಿಕ ಬದುಕಿನ ಪರಿಶ್ರಮ, ಸಮರ್ಪಣೆ, ಎಲ್ಲರೊಂದಿಗೆ ಬೆರೆಯುವ ರೀತಿ, ಪಕ್ಷದ ಬಗೆಗಿನ ಕಾಳಜಿ, ದೇಶಭಕ್ತಿ ಇವು ಇಂದಿನ ಕಾರ್ಯಕರ್ತರು, ಪೀಳಿಗೆಗೆ ಅನುಕರಣೀಯ. ಬಿಜೆಪಿಯ ಅಧ್ಯಕ್ಷರಾಗಿ ಪಕ್ಷವನ್ನು ಬಲಪಡಿಸಿದ ಕೀರ್ತಿಯೂ ಯಡಿಯೂರಪ್ಪ ಅವರಿಗೆ ಸಲ್ಲುತ್ತದೆ. ಜನಸಂಘದ ಕಾಲದಿಂದ ಇಂದಿನ ತನಕ ಪಕ್ಷದ ಬೆಳವಣಿಗೆಗೆ ದೊಡ್ಡ ಕೊಡುಗೆ ನೀಡಿದ್ದಾರೆ. ದಕ್ಷಿಣ ಭಾರತದ ಬಿಜೆಪಿಯ ಹೆಬ್ಬಾಗಿಲು ಎಂದು ಕರ್ನಾಟಕ ಕರೆಸಿಕೊಳ್ಳುವಲ್ಲಿ ಯಡಿಯೂರಪ್ಪನವರ ಕೊಡುಗೆ ಮಹತ್ವದ್ದಾಗಿದೆ.

ಜನರಿಗಾಗಿ ನಿರಂತರ ಹೋರಾಟ: ಯಡಿಯೂರಪ್ಪ ಅವರು ಸಾಮಾಜಿಕ ಹೋರಾಟಗಳನ್ನು ಎಂದಿಗೂ ತಮ್ಮ ವೈಯುಕ್ತಿಕ ಜೀವನದ ಲಾಭಕ್ಕೆ ಬಳಸಿಕೊಂಡಿಲ್ಲ. ಜನಪರ ಕಾಳಜಿ ಹೊತ್ತೇ ಹೋರಾಟಕ್ಕಿಳಿಯುತ್ತಿದ್ದರು, ಜನಪರವಾಗಿಯೇ ಹೋರಾಡುತ್ತಿದ್ದರು. ಅನೇಕ ಹೋರಾಟಗಳು ಯಡಿಯೂರಪ್ಪ ಅವರ ವೈಯುಕ್ತಿಕ ಜೀವನಕ್ಕೆ ಕೆಟ್ಟ ಪರಿಣಾಮ ಬೀರಿದೆ. ಆಗಲೂ ಕೂಡಾ ಬಿಎಸ್‌ವೈ ಅವರು ಹೋರಾಟದ ಬದುಕಿನ ಬಗ್ಗೆ ಎರಡು ಮಾತು ಆಡುತ್ತಿರಲಿಲ್ಲ. ವೈಯಕ್ತಿಕ ಲಾಭಕ್ಕಾಗಿ ಯಾವುದನ್ನೂ ತೆಗೆದುಕೊಳ್ಳದೆ ಸಮಾಜದ ಹಿತಕ್ಕಾಗಿ ಹೋರಾಟ ಮಾಡುವ ಗುಣ ಸ್ವಭಾವ ಅವರದ್ದು. ಸಾಮಾನ್ಯ ಜನರಿಗೆ ನ್ಯಾಯ ಒದಗಿಸಲು ಅನೇಕ ಜನರ ದ್ವೇಷ ಕಟ್ಟಿಕೊಂಡ ಉದಾರಣೆಗಳಿವೆ. ಯಡಿಯೂರಪ್ಪ ಅವರು ತಮ್ಮ ಬದುಕಿನಲ್ಲಿ ಎಲ್ಲವನ್ನೂ ಕಂಡಿದ್ದಾರೆ. ಎಲ್ಲವನ್ನೂ ಅನುಭವಿಸಿದ್ದಾರೆ. ಹೊಗಳಿಕೆ, ತೆಗಳಿಕೆ, ಅವಮಾನ, ಅನುಮಾನ, ಸನ್ಮಾನ ಇವೆಲ್ಲವನ್ನೂ ನೋಡಿದ್ದಾರೆ. ಯಡಿಯೂರಪ್ಪ ಗುಡುಗಿದರೆ ವಿಧಾನಸೌಧ ನಡುಗುವುದು ಎಂಬ ಮಾತು ಜನಜನಿತವಾಗಿದೆ. ಈ ಮಾತು ಸುಮ್ಮನೆ ಹುಟ್ಟಿಕೊಂಡಿಲ್ಲ, ಯಡಿಯೂರಪ್ಪ ಅವರ ನಡೆ ಅಕ್ಷರಶಃ ಅದೇ ರೀತಿ ಇತ್ತು.

ಅಂತಃಕರಣವುಳ್ಳ ವ್ಯಕ್ತಿತ್ವ: ಈ ಘಟನೆ ನಡೆದು ನಾಲ್ಕು ಐದು ವರ್ಷಗಳ ನಂತರ ರಾಮಚಂದ್ರಗೌಡ ಮತ್ತು ಯಡಿಯೂರಪ್ಪನವರು ಕಾರಲ್ಲಿ ಹೋಗುತ್ತಿರುವಾಗ ರಸ್ತೆ ಬದಿಯ ಒಂದು ಹೋಟೆಲ್ ಬಳಿ ನಿಲ್ಲಿಸಿ, ಚಹಾ ಕುಡಿಯುತ್ತಿರುತ್ತಾರೆ. ಆ ಹೋಟೆಲ್ ಬಾಗಿಲ ಬಳಿ ನಿಂತ ರಾಮಚಂದ್ರಗೌಡ ಅವರು ಯಡಿಯೂರಪ್ಪನವರನ್ನು ತೋರಿಸಿ ಇವರು ಯಾರು ಗೊತ್ತಾ ಎಂದಾಗ, ಹೊಟೇಲ್‌ನಲ್ಲಿದ್ದ ಇಬ್ಬರು ಕೈ ಮುಗಿದು ಯಾಕೆ ಸ್ವಾಮಿ ಹಾಗೆ ಕೇಳುತ್ತೀರಿ, ಇವರು ನಮ್ಮ ಜಮೀನು ಉಳಿಸಿಕೊಟ್ಟ ದೇವರೆಂದು ಎರಡು ಕೈ ಎತ್ತಿ ನಮಸ್ಕರಿಸುತ್ತಾರೆ. ಇದು ಹೋರಾಟಗಾರನೊಬ್ಬ ಜನಮಾನಸದಲ್ಲಿ ಅಚ್ಚಳಿಯದೆ ಉಳಿದ ಕಥೆ.

ಯಡಿಯೂರಪ್ಪ ಅವರು ಯಾವುದೇ ರೀತಿಯ ಸಮಸ್ಯೆಯನ್ನು ಬೇಗ ಗ್ರಹಿಸಬಲ್ಲರು ಮತ್ತು ಅದಕ್ಕೆ ಸರಿಯಾದ ತೀರ್ಮಾನವನ್ನು ಅತಿಶೀಘ್ರವಾಗಿ ತೆಗೆದುಕೊಳ್ಳುತ್ತಿದ್ದರು. ಕರ್ನಾಟಕದ ಗರಿಷ್ಠ ಸಂಖ್ಯೆಯ ಹಳ್ಳಿಗಳಿಗೆ ಭೇಟಿ ನೀಡಿರುವ ಏಕೈಕ ರಾಜಕಾರಣಿ ನಮ್ಮ ಯಡಿಯೂರಪ್ಪ. ಯಡಿಯೂರಪ್ಪ ಅವರು ಹಳ್ಳಿ ಪ್ರವಾಸ ಮಾಡುತ್ತಾರೆ ಎಂದರೆ ಅಲ್ಲಿ ಹಬ್ಬದ ವಾತಾವರಣವೇ ನಿರ್ಮಾಣ ಆಗಿರುತ್ತದೆ. ಇದನ್ನು ನಾನು ಸ್ವತಃ ನೋಡಿದ್ದೇನೆ.

ಭಾರತಿ ಶೆಟ್ಟಿ
ವಿಧಾನ ಪರಿಷತ್ ಸದಸ್ಯೆ

ಮಹಿಳಾ ಪರ ಚಿಂತಕರು ಬಿಎಸ್‌ವೈ: ಬಿ.ಎಸ್.ಯಡಿಯೂರಪ್ಪ ಅವರು ಮಹಿಳಾ ಸಮುದಾಯಕ್ಕೆ ವಿಶೇಷ ಒತ್ತು ನೀಡುತ್ತಿದ್ದರು. ರಾಮಕೃಷ್ಣ ಹೆಗಡೆ ಅವರು ಮೊದಲ ಬಾರಿಗೆ ಕರ್ನಾಟಕದ ಮುಖ್ಯಮಂತ್ರಿ ಆಗಿದ್ದಾಗ ಅವರಿಗೆ ಬಿಜೆಪಿ ಬಾಹ್ಯ ಬೆಂಬಲ ನೀಡಿತ್ತು. ಆ ಸಂದರ್ಭದಲ್ಲಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಬಿಜೆಪಿ ಕಡೆಯಿಂದ ಸಲಹೆ ಸೂಚನೆಗಳನ್ನು ಕೇಳಿದಾಗ, ಯಡಿಯೂರಪ್ಪ ಅವರು ಬಡ ಹೆಣ್ಣು ಮಕ್ಕಳ ಕೊರಳಿನಲ್ಲೂ ಬಂಗಾರ ಇರಬೇಕು, ಅದಕ್ಕಾಗಿ ಬಡಹೆಣ್ಣು ಮಕ್ಕಳಿಗೆ ತಾಳಿಭಾಗ್ಯ ಯೋಜನೆ ಜಾರಿಗೊಳಿಸಿ ಎಂದು, ಕೋರಿಕೊಂಡಿದ್ದರು. ಅದರಂತೆ ಯೋಜನೆ ಜಾರಿಯಾಯಿತು, ತಾಳಿ ಭಾಗ್ಯ ಯೋಜನೆಯು ಯಡಿಯೂರಪ್ಪ ಅವರು ಹೆಣ್ಣು ಮಕ್ಕಳಿಗೆ ನೀಡಿದ ಮೊದಲ ಯೋಜನೆಯಾಗಿದೆ ಎನ್ನುವುದನ್ನು ನಾವು ಈ ಸಂದರ್ಭದಲ್ಲಿ ನೆನಪಿಸಕೊಳ್ಳಬೇಕು. ನಾರಿಯರ ಸಬಲೀಕರಣಕ್ಕಾಗಿ ಹಲವಾರು ಉಪಕ್ರಮ, ಯೋಜನೆ ಜಾರಿಗೊಳಿಸಿದ್ದಾರೆ. ಗರ್ಭಿಣಿ ಹೆಣ್ಣು ಮಗಳಿಗೆ ತವರಿನ ಆತಿಥ್ಯವನ್ನು ನೆನಪು ಮಾಡಿಸುವಂತಹ ಮಡಿಲು ಯೋಜನೆ ಜಾರಿಗೊಳಿಸಿದರು. ಮಡಿಲು ಯೋಜನೆ ಮೂಲಕ ತವರು ಮನೆಯಲ್ಲಿ ನೀಡುವ ವಸ್ತುಗಳನ್ನು ಸರಕಾರವೇ ಮಡಿಲು ಕಿಟ್ ಮಾದರಿ ನೀಡಲಾಗುತ್ತಿತ್ತು. ಗರ್ಭಿಣಿಯ ಹೊಟ್ಟೆಯಿಂದ ಮಗು ಹೆಣ್ಣಾಗಿ ಹೊರಬಂದರೆ ಆ ಮಗುವನ್ನು ಭಾಗ್ಯಲಕ್ಷ್ಮಿ ಮೂಲಕ ಸ್ವಾಗತಿಸಲು ಭಾಗ್ಯಲಕ್ಷ್ಮಿ ಯೋಜನೆ ಜಾರಿಗೊಳಿಸಿದರು. ಆ ಯೋಜನೆ ಇಂದು ಲಕ್ಷಾಂತರ ಹೆಣ್ಣು ಮಕ್ಕಳ ಶಿಕ್ಷಣ, ವೈವಾಹಿಕ ಜೀವನಕ್ಕೆ ನೆರವಾಗಿದೆ. ಅಲ್ಲದೆ ಭಾಗ್ಯಲಕ್ಷ್ಮಿ ಫಲಾನುಭವಿಗೆ ಉಚಿತ ಆರೋಗ್ಯ ತಪಾಸಣಾ ಕಾರ್ಯಕ್ರಮ ರೂಪಿಸಿದ್ದರು. ಹೆಣ್ಣು ಮಕ್ಕಳು ಸುಶಿಕ್ಷತರಾಗಬೇಕು, ಶಾಲೆಯಿಂದ ದೂರ ಇರಬಾರದು, ಹೈಸ್ಕೂಲ್ ಹಂತವನ್ನು ದಾಟಬೇಕು ಎಂದು ಹೆಣ್ಣುಮಕ್ಕಳಿಗೆ ಸೈಕಲ್ ವಿತರಿಸಿದರು, ಅದನ್ನು ಗಂಡು ಮಕ್ಕಳಿಗೂ ವಿಸ್ತರಿಸಿದರು. ಕಾರ್ಯಕ್ರಮ ಒಂದರಲ್ಲಿ ವಿಧವೆಯೊಬ್ಬರು ಯಡಿಯೂರಪ್ಪರ ಮುಂದೆ ಜೀವನದ ಸಂಕಷ್ಟ ಹೇಳಿಕೊಂಡು ಕಣ್ಣೀರು ಸುರಿಸಿದಾಗ ಅವಳಿಗೆ ಒಂದು ಆಕಳು ತೆಗೆದುಕೊಟ್ಟು ಜೀವನ ನಿರ್ವಹಣೆಯ ಹಾದಿ ಕಲ್ಪಿಸಿದ್ರು. ಸ್ತ್ರೀ ಶಕ್ತಿ ಗುಂಪುಗಳಿಗೆ ಬಡ್ಡಿ ರಹಿತ ಸಾಲ ನೀಡಿದ್ದೂ ಇದೇ ಯಡಿಯೂರಪ್ಪ. ದೇವದಾಸಿಯರಿಗೆ ಮಾಸಾಶನ ನೀಡುವ ಮೂಲಕ ಅವರ ಬದುಕನ್ನು ಭದ್ರಗೊಳಿಸಿದರು.

ಬಿಎಸ್‌ವೈ ಬಜೆಟ್ ಜೋಳಿಗೆ, ಯೋಜನೆಗಳ ಹೋಳಿಗೆ ರೈತರ ಸಾಲ ಮನ್ನಾ ಮಾಡುವ ಮೂಲಕ ರೈತರಿಗೆ ನೆರವಾಗಿದ್ದಾರೆ. ಜನಮನದಲ್ಲಿ ಒಂದು ಮಾತಿದೆ. ಯಡಿಯೂರಪ್ಪನವರ ಬಜೆಟ್ ಜೋಳಿಗೆ, ಯೋಜನೆಗಳ ಹೋಳಿಗೆ. ಇದರ ಹಿಂದೆ ಎಲ್ಲರಿಗೂ ಸಮಾಧಾನ ಪಡಿಸುವಂತಹ ಬಜೆಟ್ ನೀಡುತ್ತಿದ್ದ ಕಾರಣವಿದೆ. ಯಡಿಯೂರಪ್ಪ ಅವರು ಯಾರಿಗೂ ನಿರಾಸೆ ಮಾಡುತ್ತಿರಲಿಲ್ಲ. ಜನಮಾನಸದಲ್ಲಿ ಯಡಿಯೂರಪ್ಪ ಇಂದಿಗೂ ಹಿಂದಿನಷ್ಟೇ ಜನಪ್ರಿಯರಾಗಿದ್ದಾರೆ.

ಬಡವರಿಗೆ ಮನೆ ನಿರ್ಮಿಸಿ, ಅದನ್ನು ಮನೆಯೊಡತಿಯ ಹೆಸರಿನಲ್ಲಿ ನೋಂದಾಯಿಸುವ ಕಾನೂನು ಜಾರಿಗೊಳಿಸಿದ್ದರು. ವಿಧವಾ ವೇತನ ಹೆಚ್ಚಳ, ಸಂಧ್ಯಾಸುರಕ್ಷಾ ಯೋಜನೆಯಲ್ಲಿ ಗಂಡಹೆಂಡತಿಯರಿಬ್ಬರಿಗೂ ಅವಕಾಶ, ಒಂದು ಮನೆಗೆ ಒಂದೇ ಯೋಜನೆ ಎಂಬ ಸರಕಾರಿ ನಿಯಮ ಬದಲಾಯಿಸಿ ಅನೇಕ ಯೋಜನೆಗಳನ್ನು ಒಂದೇ ಮನೆಗೆ ಸಿಗುಂತೆ ಮಾಡಿದ್ದು, ಮದುವೆಯಾಗದೆ ಉಳಿದು 50 ವರ್ಷ ಮೇಲ್ಪಟ್ಟ ಹೆಣ್ಣು ಮಕ್ಕಳಿಗೂ ಮಾಸಾಶನ ವ್ಯವಸ್ಥೆ ಮಾಡಿದ್ದರು. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಸಹಾಯವಾಗಲೆಂದು ವಿದ್ಯಾಸಿರಿ ಯೋಜನೆ ಜಾರಿಗೊಳಿಸಿ, ಯೋಜನೆ ಮೂಲಕ ಹಾಸ್ಟೆಲ್ ಸೌಲಭ್ಯ ಇಲ್ಲದ ವಿದ್ಯಾರ್ಥಿನಿಯರಿಗೆ ಆಹಾರ/ಸ್ಟೈಪೆಂಡ್ ನೀಡುವ ಉಪಕ್ರಮ ಜಾರಿಗೊಳಿಸಿದ್ದರು.

ಮಹಿಳೆಯರಿಗೆ ಶೇ.50ರಷ್ಟು ಮೀಸಲು: ಆಡಳಿತಾತ್ಮಕವಾಗಿ ಮಹಿಳೆಯರು ಬಲಾಢ್ಯರಾಗಬೇಕೆಂದು ಕೇಂದ್ರ ಸರಕಾರ ಸ್ಥಳೀಯ ಸಂಸ್ಥೆಗಳಲ್ಲಿ 33% ಮೀಸಲಾತಿ ಒದಗಿಸಿದ್ದರೆ, ಬಿ.ಎಸ್. ಯಡಿಯೂರಪ್ಪ ಅವರು ರಾಜ್ಯದಲ್ಲಿ ಅದನ್ನು 50%ಕ್ಕೆ ಏರಿಸಿ ಮಹಿಳೆಯರನ್ನು ಗ್ರಾಮ, ತಾಲೂಕು, ಜಿಲ್ಲಾ ಪಂಚಾಯತ್, ಪಟ್ಟಣ ಪಂಚಾಯತ್, ನಗರ ಸಭೆ, ಪರಸಭೆಗಳ ನೀತಿ ನಿರೂಪಣೆಯಲ್ಲಿ ಮಹಿಳೆಯರ ಪಾಲನ್ನು ಹೆಚ್ಚಿಸಿದ್ದು ನಮ್ಮ ಬಿಎಸ್‌ವೈ, ಇದಕ್ಕೆ ಮಹಿಳಾ ಸಮುದಾಯ ಯಡಿಯೂರಪ್ಪ ಅವರನ್ನು ಮೆಚ್ಚಲೇಬೇಕು.

ದಣಿವಾಗದ ಸಿಎಂ: ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ಎಲ್ಲರಿಗೂ ಲಭ್ಯವಿರುತ್ತಿದ್ದ ಏಕೈಕ ಮುಖ್ಯಮಂತ್ರಿ ಎಂಬ ಖ್ಯಾತಿಗೆ ಭಾಜನರಾಗಿದ್ದರು. ಬೆಳಗ್ಗೆ 4.30 ಗೆ ಅವರ ದಿನಚರಿ ಪ್ರಾರಂಭವಾಗುತ್ತಿತ್ತು. ರಾತ್ರಿಯ ಸಮಯದಲ್ಲೂ ಫೋನ್ ಬಂದರೂ ಸ್ವೀಕರಿಸುತ್ತಿದ್ದರು. ಬಜೆಟ್ ಮಂಡಿಸುವ ಮುನ್ನ ಎಲ್ಲಾ ಇಲಾಖೆಗಳ, ಸಾಮಾಜಿಕ ಸಂಸ್ಥೆಗಳ ಅಭಿಪ್ರಾಯ ಪಡೆಯುತ್ತಿದ್ದರು. ಮಹಿಳೆಯರ ಬಗ್ಗೆಯಂತೂ ಬಜೆಟ್ ಪೂರ್ವದಲ್ಲಿ ವಿಶೇಷವಾಗಿ ಚಿಂತನೆ ನಡೆಸುತ್ತಿದ್ದರು. ಮಹಿಳಾ ಅಧಿಕಾರಿ, ಚಿಂತಕರು, ರಾಜಕೀಯ ಪ್ರತಿನಿಧಿ, ಮಹಿಳಾ ಸಂಘಟಕರನ್ನು ಕರೆದು ಅಭಿಪ್ರಾಯ ಸಂಗ್ರಹಿಸಿ ಅದಕ್ಕೆ ಪೂರಕವಾಗಿ ಬಜೆಟ್‌ನಲ್ಲಿ ವಿಶೇಷ ಕಾರ್ಯಕ್ರಮ ರೂಪಿಸುತ್ತಿದ್ದರು. ಇದಕ್ಕೆಲ್ಲಾ ನಾನು ಸಾಕ್ಷಿಯಾಗಿದ್ದು ನನ್ನ ಸೌಭಾಗ್ಯ. ಇನ್ನು ಯಾವುದೇ ಕಾರ್ಯಕ್ರಮದ ವೇದಿಕೆಗಳಲ್ಲಿ ಮಹಿಳೆಯರ ಉಪಸ್ಥಿತಿಯನ್ನು ಖಚಿತಪಡಿಸಿಕೊಳ್ಳುತ್ತಿದ್ದರು, ಹಿಂದಿನ ಆಸನದಲ್ಲಿದ್ದರೆ ಮುಂದಿನ ಸಾಲಿಗೆ ಕರೆದು ಗೌರವ ನೀಡುತ್ತಿದ್ದರು. ಕಾರ್ಯಕ್ರಮ ಮುಗಿದ ಬಳಿಕವೂ ಮಹಿಳೆಯರ ಸುರಕ್ಷತೆಯ ಬಗ್ಗೆ ವಿಶೇಷ ಕಾಳಜಿ ವಹಿಸುತ್ತಿದ್ದರು. ಮಹಿಳೆಯರು ಸಾಮಾಜಿಕವಾಗಿ ಮುಂದುವರೆಯುವ ಬಗ್ಗೆ ಮಾರ್ಗದರ್ಶನ ಕೂಡಾ ಮಾಡುತ್ತಿದ್ದರು. ಸಣ್ಣಪುಟ್ಟ ಸಂಗತಿಗಳ ಬಗ್ಗೆಯೂ ವಿಶೇಷ ಆಸಕ್ತಿ ವಹಿಸುತ್ತಿದ್ದರು, ಸಿಡುಕುತನ ಮೂಲ ಸ್ವಭಾವವಾಗಿದ್ದರೂ ಅಷ್ಟೇ ತಾಳ್ಮೆ ಕೂಡಾ ಹೊಂದಿದ್ದರು. ಕ್ಷಮಾಮಯಿ ಕೂಡಾ ಆಗಿದ್ದರು. ಮಾತು ತಪ್ಪುವ ವ್ಯಕ್ತಿತ್ವ ಕೂಡಾ ಅವರದ್ದಲ್ಲ.

ಬದುಕಿನ ಹೆಚ್ಚಿನ ಸಮಯವನ್ನು ಸಮಾಜಕ್ಕೆ ಮೀಸಲಿರಿಸಿದ ಪರಿಣಾಮ ಕುಟುಂಬಕ್ಕೆ ಹೆಚ್ಚಿನ ಸಮಯ ನೀಡಲು ಸಾಧ್ಯವಾಗಿಲ್ಲ. ಆದರೂ ಧರ್ಮಪತ್ನಿ ಮೈತ್ರಾದೇವಿ ಅವರು ಯಡಿಯೂರಪ್ಪ ಅವರಿಗೆ ಬೆಂಗಾವಲಾಗಿ ನಿಂತಿದ್ದರು. ಇದರಿಂದ ಯಡಿಯೂರಪ್ಪ ಅವರಿಗೆ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಅನುಕೂಲವಾಯಿತು. ಈ ಕ್ಷಣದಲ್ಲಿ ಮೈತ್ರಾದೇವಿ ಅವರನ್ನೂ ಕೂಡಾ ನೆನಪಿಸಿಕೊಳ್ಳುವುದು ನಮ್ಮ ಧರ್ಮ.

ರೈತರ ಪರ ಮೊದಲ ಹೋರಾಟದಲ್ಲೇ ಯಶಸ್ವಿ: ಬಿಲ್ ವಾಪಸ್

ರಾಜಕೀಯ ಜೀವನದಲ್ಲಿ ಅಧಿಕಾರದಲ್ಲಿದ್ದಾಗಲೂ, ಅಧಿಕಾರ ಇಲ್ಲದಿದ್ದಾಗಲೂ ಮಾಜಿ ಸಿಎಂ ಯಡಿಯೂರಪ್ಪ ಅವರು ರೈತರ ಬಗ್ಗೆ ವಿಶೇಷ ಒಲವು ಹೊಂದಿದ್ದರು.ದೇಶದ ಇತಿಹಾಸದಲ್ಲೇ ಮೊದಲ ಬಾರಿಗೆ ರೈತ ಬಜೆಟ್ ಮಂಡಿಸಿದ ಕೀರ್ತಿ ಯಡಿಯೂರಪ್ಪ ಅವರಿಗೆ ಸಲ್ಲುತ್ತದೆ. ಒಂದೊಮ್ಮೆ ರಾಮಕೃಷ್ಣ ಹೆಗಡೆ ಅವರು ಮುಖ್ಯಮಂತ್ರಿ ಆಗಿದ್ದಾಗ ಕಂದಾಯ ಸಚಿವರಾದ ರಾಚಯ್ಯನವರು ಮಸೂದೆಯೊಂದನ್ನು ಮಂಡಿಸುತ್ತಾರೆ. ಈ ಮಸೂದೆ ರೈತರಿಗೆ ಮಾರಕವಾಗಲಿದೆ ಎಂದು ಅರಿತುಕೊಂಡ ಅಂದು ಸಾಮಾನ್ಯ ಶಾಸಕರಾಗಿದ್ದ ಯಡಿಯೂರಪ್ಪ ಅವರು ಸದನದಲ್ಲಿ ರೈತರ ಪರವಾಗಿ ಹೋರಾಟ ಮಾಡಿ ಬಿಲ್ ಹಿಂಪಡೆಯುವಂತೆ ಆಗ್ರಹಿಸುತ್ತಾರೆ. ಸರಕಾರ ಯಡಿಯೂರಪ್ಪ ಅವರ ಮನವಿಗೆ ಒಪ್ಪದಿದ್ದಾಗ, ಕಣ್ಣೀರು ಹಾಕಿ ಆಸನದ ಕೆಳಗಡೆ ಕೂತು ಬಿಲ್ ಅನ್ನು ವಿರೋಧಿಸುತ್ತಾರೆ. ಮೌನವಾಗಿ ಪ್ರತಿಭಟಿಸುತ್ತಾರೆ. ಕೊನೆಗೆ ಅವರ ಹೋರಾಟಕ್ಕೆ ಮಣಿದ ಕಂದಾಯ ಸಚಿವ ರಾಚಯ್ಯ ಅವರು ತಮ್ಮ ಮಸೂದೆಯನ್ನು ಹಿಂಪಡೆಯುತ್ತಾರೆ. ಮರುದಿನ ಪತ್ರಿಕೆಗಳ ಮುಖಪುಟದಲ್ಲಿ ಯಡಿಯೂರಪ್ಪನವರ ಏಕಾಂಗಿ ಹೋರಾಟವೇ ಸುದ್ದಿ. ಏಕಾಂಗಿ ಹೋರಾಟಕ್ಕೆ ಸಿಕ್ಕ ಜಯ ಎಂದು ಎಲ್ಲ ಪತ್ರಿಕೆಯಲ್ಲಿ ಮುಖಪುಟದಲ್ಲಿ ರಾರಾಜಿಸಿತು. ಜನಪ್ರತಿನಿಧಿಗಳು ಹೇಗೆ, ಯಾವ ರೀತಿ ಹೋರಾಟ ಮಾಡಬಹುದೆನ್ನುವುದಕ್ಕೆ ಇದೊಂದು ನಿದರ್ಶನವಷ್ಟೇ. ಯಡಿಯೂರಪ್ಪನವರ ಇಂತಹ ನೂರಾರು ನಿದರ್ಶನಗಳು ನನ್ನ ಸ್ಮೃತಿಪಟಲದಲ್ಲಿದೆ.

ಸ್ತ್ರೀ ಶಕ್ತಿ ಸ್ವ-ಸಹಾಯ ಸಂಘಗಳಿಗೆ ಶಕ್ತಿ

ವಿದ್ಯಾರ್ಥಿನಿಯರ ಉನ್ನತ ಶಿಕ್ಷಣದ ಕನಸಿಗೆ ಪೂರಕವಾಗಿ ಕರ್ನಾಟಕ ಉಚಿತ ಲ್ಯಾಪ್‌ಟಾಪ್ ವಿತರಣೆ ಯೋಜನೆ ಜಾರಿಗೊಳಿಸಿದ್ದರು. ಮಹಿಳೆಯರಿಗೆ ಆರ್ಥಿಕ ಸಹಾಯ ಮತ್ತು ಸ್ವಾವಲಂಬಿ ಜೀವನ ನಡೆಸಲು ಸ್ತ್ರೀ ಶಕ್ತಿ ಸ್ವ-ಸಹಾಯ ಗುಂಪುಗಳಿಗೆ ಸಾಲ, ಸಬ್ಸಿಡಿ ನೀಡಿ ತರಬೇತಿ ಒದಗಿಸುವ ಕಾರ್ಯಕ್ರಮ ರೂಪಿಸಿದ್ದರು. ಸ್ವ-ಸಹಾಯ ಸಂಘಗಳಿಗೆ ಬ್ಯಾಂಕ್ ಲಿಂಕೇಜ್ ಮತ್ತು ಮಾರ್ಕೆಟಿಂಗ್ ಸಪೋರ್ಟ್ ಹೆಚ್ಚಿಸಿದರು. ಬಡ ಮಹಿಳೆಯರಿಗೆ ಮನೆ ನಿರ್ಮಾಣಕ್ಕಾಗಿ ಬಸವ ವಸತಿ ಯೋಜನೆ ಜಾರಿಗೊಳಿಸಿದ್ದರು ಮತ್ತು ನಗರ ಪ್ರದೇಶಗಳಲ್ಲಿ ಮಹಿಳಾ ಸುರಕ್ಷತೆಗೆ ಹೆಚ್ಚುವರಿ ಕ್ರಮ ಅನುಸರಿಸಲು ಕಟ್ಟುನಿಟ್ಟಿನ ಕ್ರಮ ಜಾರಿಗೊಳಿಸಿದ್ದರು. ಮಹಿಳೆಯರಿಗೆ ಕೌಶಲ ಅಭಿವೃದ್ಧಿ ಯೋಜನೆ ಮತ್ತು ಸಣ್ಣ ಉದ್ಯಮ ಕೈಗೊಳ್ಳಲು ಆರ್ಥಿಕ ಸಹಾಯ ನೀಡಲು ಯೋಜನೆ ರೂಪಿಸಿದ್ದರು. ಗರ್ಭಿಣಿ ಮಹಿಳೆಯರಿಗೆ ಪೌಷ್ಟಿಕ ಆಹಾರ ಒದಗಿಸಲು ಮಾತೃ ಪೂರ್ಣ ಯೋಜನೆ ಜಾರಿಗೊಳಿಸಿದ್ದರು.

ಜನಸ್ನೇಹಿ ಬಜೆಟ್ ಮಂಡನೆ

ಬಜೆಟ್ ಎಂದಕೂಡಲೇ ಮರುದಿನದ ಪತ್ರಿಕೆಗಳಲ್ಲಿ ಹಾಲಿನ ಬೆಲೆ ಏರಿಕೆ, ಕಾರು, ಚಿನ್ನದ ಬೆಲೆ ಏರಿಕೆ, ಸಿಮೆಂಟ್ ತುಟ್ಟಿ, ಕೈಗೆಟುಕದ ಟಿವಿ ಎಂದು ಸುದ್ದಿಯಾಗುತ್ತಿದ್ದವು. ಅಂದರೆ ಬಜೆಟ್ ಜನರಿಗೆ ಹೊರೆ ಎಂಬ ರೀತಿಯ ವಾತಾವರಣವಿತ್ತು. ಅದನ್ನು ಸಂಪೂರ್ಣವಾಗಿ ಬದಲಾಯಿಸಿದ್ದೇ ಬಿಎಸ್‌ವೈ. ಅರ್ಥ ಸಚಿವರಾಗಿದ್ದಾಗ ಯಡಿಯೂರಪ್ಪ ಅವರು ನೀಡಿದ ಬಜೆಟ್ ಜನಸಾಮಾನ್ಯರಲ್ಲಿ ಜೀವನದ ಭರವಸೆ ಹೆಚ್ಚಿಸಿತು.

ಸಮಾಚಾರ ಸಣ್ಣದಲ್ಲ

ಚಿಕ್ಕಮಗಳೂರು: ನಾಲ್ವರು ಮಕ್ಕಳು ನೀರುಪಾಲು

ಚಿಕ್ಕಮಗಳೂರು: ತಾಲೂಕಿನ ಅರಳಗುಪ್ಪೆ ಗ್ರಾಮದ ಕಾರಂಜಿ ಕೆರೆಯಲ್ಲಿ ಬಾತುಕೋಳಿ ಹಿಡಿಯಲು ಹೋದ ನಾಲ್ವರು ಮಕ್ಕಳು ನೀರು ಪಾಲಾದ ದಾರುಣ ಘಟನೆ ಸೋಮವಾರ ನಡೆದಿದೆ. ಮೃತ ದುರ್ದೈವಿ ಮಕ್ಕಳು 5 ರಿಂದ 14 ವರ್ಷದೊಳಗಿನವರಾಗಿದ್ದು, ಮಹಾದಿಯಾ, ಅರುನುಸ್, ನಾಯುಸ್, ಅಬ್ದುಲ್ ರೆಹಮಾನ್ ಎಂದು ತಿಳಿದು ಬಂದಿದೆ. ಸಂಬಂಧಿಕರ ಮನೆಗೆ ಬಂದಾಗ ದುರ್ಘಟನೆ ನಡೆದಿದೆ. ನಾಲ್ಕು ಮಕ್ಕಳು ನೀರುಪಾಲಾಗಿದ್ದರೆ, ನಾಲ್ಕು ವರ್ಷದ ಬಾಲಕ ಅರ್ಮಾನ್ ಪ್ರಾಣಾಪಾಯದಿಂದ ಪಾರಾಗಿದ್ದಾನೆ ಎಂದು ತಿಳಿದು ಬಂದಿದೆ. ಬಾತುಕೋಳಿ ಕೆರೆಗೆ ಹೋಯಿತು ಎಂದು ಹಿಡಿಯಲು ಹೋಗಿ ಮಕ್ಕಳು ಪ್ರಾಣ ಕಳೆದುಕೊಂಡಿದ್ದಾರೆ. ಸ್ಥಳಕ್ಕೆ ಗ್ರಾಮಾಂತರ ಪೊಲೀಸರ ಭೇಟಿ, ಪರಿಶೀಲನೆ ನಡೆಸಿ ಪ್ರಕರಣ ದಾಖಲು ಮಾಡಿಕೊಂಡಿದ್ದಾರೆ. ಆಸ್ಪತ್ರೆ ಮುಂಭಾಗ ಮೃತ ಮಕ್ಕಳ ಪೋಷಕರ ಆಕ್ರಂದನ ಮುಗಿಲು ಮುಟ್ಟಿದೆ.

1 ಲಕ್ಷ ಮೌಲ್ಯದ ಗಾಂಜಾ ವಶ: ಇಬ್ಬರ ಬಂಧನ

ಶಿವಮೊಗ್ಗ: ನಗರದ ಕೋಟೆ ಠಾಣಾ ವ್ಯಾಪ್ತಿಯಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ. ಪಿ.ಅಶೋಕ (28) ರಾಕೇಶ್ (20) ಬಂಧಿತರು. ರಾಜೀವ್ ಗಾಂಧಿ ಬಡಾವಣೆಯ ಕಂಟ್ರಿ ಕ್ಲಬ್ ರಸ್ತೆಯ ಬಳಿ ಇಬ್ಬರು ಮಾದಕ ವಸ್ತು ಗಾಂಜಾ ಮಾರಾಟ ಮಾಡುತ್ತಿದ್ದರು. ಆರೋಪಿಗಳಿಂದ 1 ಲಕ್ಷ ಮೌಲ್ಯದ 1.67 ಕೆ.ಜಿ ಗಾಂಜಾ, ಕೃತ್ಯಕ್ಕೆ ಬಳಸಲಾಗಿದ್ದ ಒಂದು ಕಾರು, 3,290 ನಗದು ವಶಪಡಿಸಿಕೊಳ್ಳಲಾಗಿದೆ.

ಅಧಿಕಾರ ಇರಲಿ, ಬಿಡಲಿ ರೈತರು, ಜನಸಾಮಾನ್ಯರ ಪರ ಪ್ರಾಮಾಣಿಕವಾಗಿ ಬಿಎಸ್‌ವೈ ಕೆಲಸ

ಬಿಎಸ್‌ವೈ ಅವರನ್ನು ಗೌರವಿಸುವುದೇ ಅಭಿಮಾನೋತ್ಸವ

ಚಿತ್ರದುರ್ಗ: ಸುದೀರ್ಘ ಐವತ್ತು ವರ್ಷಗಳ ರಾಜಕೀಯ ಪಯಣದಲ್ಲಿ ಯಡಿಯೂರಪ್ಪ 45 ವರ್ಷಗಳ ಕಾಲ ನಿರಂತರ ಹೋರಾಟ ನಡೆಸಿ ಐದು ವರ್ಷಗಳು ಮಾತ್ರ ಅಧಿಕಾರ ಅನುಭವಿಸಿದ್ದಾರೆ. ಜನರ ಸೇವೆಗಾಗಿಯೇ ತಮ್ಮ ಜೀವನವನ್ನು ಮುಡಿಪಿಟ್ಟ ಹಿರಿಯರನ್ನು ಗೌರವಿಸುವುದೇ ಅಭಿಮಾನೋತ್ಸವ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ಸುದೀರ್ಘ ಐವತ್ತು ವರ್ಷಗಳ ರಾಜಕೀಯ ಪ್ರಯಾಣದ ನೆನಪಿಗೆ ಚಿತ್ರದುರ್ಗದ ಮಾದಾರ ಚನ್ನಯ್ಯ ಗುರುಪೀಠದ ಹತ್ತಿರದ ಮೈದಾನದಲ್ಲಿ ಮೇ9 ರಂದು ಹಮ್ಮಿಕೊಂಡ ಬೃಹತ್ ಅಭಿಮಾನೋತ್ಸವದ ನಿಮಿತ್ತ ಭರಮಸಾಗರ ಮಂಡಲದಲ್ಲಿ ನಡೆದ ಪೂರ್ವಭಾವಿ ಸಭೆ ಉದ್ಘಾಟಿಸಿ ಅವರು ಮಾತನಾಡಿದರು. ಅಧಿಕಾರ ಇರಲಿ, ಬಿಡಲಿ ರೈತರು, ಜನಸಾಮಾನ್ಯರ ಪರ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದಾರೆ. ಎಲ್ಲಿ ಯಾರಿಗೆ ಅನ್ಯಾಯವಾಗುತ್ತದೋ ಅಲ್ಲಿ ಇರುತ್ತಿದ್ದರು. ಮುಖ್ಯಮಂತ್ರಿಯಾಗಿದ್ದಾಗ ರಾಜ್ಯದಲ್ಲಿ ನೆರೆ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಮನೆಗಳನ್ನು ಕಳೆದುಕೊಂಡವರಿಗೆ ಕೇಂದ್ರ ಸರಕಾರ ನೀಡಿದ ಒಂದು ಲಕ್ಷ ರು.ಗಳ ಜತೆಗೆ ರಾಜ್ಯದಿಂದ ನಾಲ್ಕು ಲಕ್ಷ ರು.ಗಳನ್ನು ಸೇರಿಸಿ ಮನೆ ಕಟ್ಟಿಸಿಕೊಳ್ಳಲು ನೆರವಾಗಿದ್ದನ್ನು ಜನ ಮರೆತಿಲ್ಲ ಎಂದು ಹೇಳಿದರು.

ರಾಜ್ಯದ ಜನರ ಪ್ರೀತಿ ವಿಶ್ವಾಸ ಗಳಿಸಿರುವ ಯಡಿಯೂರಪ್ಪನವರ ಅಭಿಮಾನೋತ್ಸವದಲ್ಲಿ ಜಿಲ್ಲೆಯಿಂದ ಹತ್ತು ಸಾವಿರ ಭಾಗ್ಯಲಕ್ಷ್ಮಿ ಫಲಾನುಭವಿಗಳು ಭಾಗವಹಿಸಲಿದ್ದಾರೆ. ಎಂಟನೆ ತಾರೀಖು ಸಂಜೆ ಯಡಿಯೂರಪ್ಪನವರನ್ನು ಭವ್ಯವಾಗಿ ಸ್ವಾಗತಿಸಲಾಗುವುದು. 9 ರಂದು ನಡೆಯುವ ಕಾರ್ಯಕ್ರಮಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ, ಮಠಾಧೀಶರು, ರಾಜಕಾರಣಿಗಳು ಆಗಮಿಸಲಿದ್ದಾರೆಂದು ತಿಳಿಸಿದರು.

ಈ ವೇಳೆ ಸಂಸದ ಗೋವಿಂದ ಎಂ.ಕಾರಜೋಳ, ಮಾಜಿ ಸಚಿವ ಹರತಾಳ ಹಾಲಪ್ಪ, ಮಾಜಿ ಶಾಸಕ ಪ್ರೀತಂಗೌಡ, ಬಿಜೆಪಿ.ಜಿಲ್ಲಾಧ್ಯಕ್ಷ ಕೆ.ಟಿ.ಕುಮಾರಸ್ವಾಮಿ, ಯುವ ಮುಖಂಡ ಎಂ.ಸಿ.ರಘುಚಂದನ್, ಹನುಮಂತೆಗೌಡ, ಹೊಳಲ್ಕೆರೆ ಬಿಜೆಪಿ.ಮಂಡಲ ಅಧ್ಯಕ್ಷ ಕುಮಾರಣ್ಣ, ಭರಮಸಾಗರ ಮಂಡಲ ಅಧ್ಯಕ್ಷ ಎನ್.ಟಿ.ಬಸವರಾಜ್, ಸಿದ್ದೇಶ್, ಬಿಜೆಪಿ.ಜಿಲ್ಲಾ ಉಪಾಧ್ಯಕ್ಷ ಶೈಲೇಂದ್ರಕುಮಾರ್, ಮಾಧುಸ್ವಾಮಿ, ಪ್ರಧಾನ ಕಾರ್ಯದರ್ಶಿ ಗಿರೀಶ್, ಮಂಜುನಾಥ್ ಸೇರಿ ಹಲವರು ಪಾಲ್ಗೊಂಡಿದ್ದರು.

ಬಿಎಸ್‌ವೈ ಅಭಿಮಾನೋತ್ಸವದ ಹಿನ್ನೆಲೆ ಹೊಳಲ್ಕೆರೆ ಕ್ಷೇತ್ರದ ಭರಮಸಾಗರ ಮಂಡಲದಲ್ಲಿ ನಡೆದ ಪೂರ್ವಭಾವಿ ಸಭೆಯನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಉದ್ಘಾಟಿಸಿದರು. ಈ ವೇಳೆ ಸಂಸದ ಗೋವಿಂದ ಕಾರಜೋಳ, ಹೊಳಲ್ಕೆರೆ ಶಾಸಕ ಡಾ.ಎಂ.ಚಂದ್ರಪ್ಪ ಸೇರಿ ಹಲವರಿದ್ದರು.

ಹೊಳಲ್ಕೆರೆ ಮಾದರಿ ಕ್ಷೇತ್ರವಾಗಲು ಬಿಎಸ್‌ವೈ ಕಾರಣ

ಅಭಿವೃದ್ಧಿ ಕಾಣದೆ ಸಣ್ಣ ಹಳ್ಳಿಯಂತಿದ್ದ ಹೊಳಲ್ಕೆರೆಯನ್ನು ಚಿತ್ರದುರ್ಗ ಜಿಲ್ಲೆಯಲ್ಲಿಯೇ ಮಾದರಿ ಕ್ಷೇತ್ರವನ್ನಾಗಿ ಅಭಿವೃದ್ಧಿ ಮಾಡಲಾಗಿದೆ. ಮಾದರಿ ಕ್ಷೇತ್ರವಾಗಲು ಬಿ.ಎಸ್.ಯಡಿಯೂರಪ್ಪ ಅವರ ಕೊಡುಗೆಗಳೇ ಕಾರಣ ಎಂದು ಶಾಸಕ ಡಾ.ಎಂ.ಚಂದ್ರಪ್ಪ ಸ್ಮರಿಸಿದರು. ನಾನು ಬೂಟಾಟಿಕೆ ಮಾತುಗಳನ್ನಾಡುವ ರಾಜಕಾರಣಿಯಲ್ಲ. ಬಿ.ಎಸ್.ಯಡಿಯೂರಪ್ಪನವರು ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ಅತಿ ಹೆಚ್ಚು ಅನುದಾನ ನೀಡಿದ್ದಾರೆ. ಅದೇ ರೀತಿ ಬಸವರಾಜ್ ಬೊಮ್ಮಾಯಿಯವರು ಮುಖ್ಯಮಂತ್ರಿಯಾಗಿದ್ದಾಗಲು ಕೋಟ್ಯಂತರ ರು. ಅನುದಾನ ಮಂಜೂರು ಮಾಡಿಸಿಕೊಂಡು ಬಂದಿರುವೆ. ಇದರ ಪರಿಣಾಮ ಕ್ಷೇತ್ರದಲ್ಲಿ ಈಗಲೂ ದಿನನಿತ್ಯ ಒಂದಲ್ಲ ಒಂದು ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿರುತ್ತವೆ. ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಭರಮಸಾಗರ ಕ್ಷೇತ್ರದಿಂದ ಐವತ್ತು ಸಾವಿರಕ್ಕೂ ಹೆಚ್ಚು ಜನ ಪಾಲ್ಗೊಳ್ಳುವಂತೆ ಶಾಸಕ ಡಾ.ಎಂ.ಚಂದ್ರಪ್ಪ ಮನವಿ ಮಾಡಿದರು.

---

400 ಹೊಸ ಬಸ್‌ಗಳಿಗೆ ಟೆಂಡರ್

ಕಲಬುರಗಿ: ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವ್ಯಾಪ್ತಿಯಲ್ಲಿ ಸಾರಿಗೆ ವ್ಯವಸ್ಥೆಯನ್ನು ಬಲಪಡಿಸಲು ಈಗಾಗಲೇ 400 ಹೊಸ ಬಸ್‌ಗಳ ಖರೀದಿಗೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಇವುಗಳನ್ನು ವಿಶೇಷವಾಗಿ ಗ್ರಾಮೀಣ ಭಾಗದ ಸಂಚಾರಕ್ಕೆ ಮೀಸಲಿಡಲಾಗುವುದು ಎಂದು ಕೆಕೆಆರ್‌ಟಿಸಿ ಅಧ್ಯಕ್ಷ ಅರುಣ್ ಪಾಟೀಲ್ ಅವರು ತಿಳಿಸಿದರು.ನಗರದ ಸಾರಿಗೆ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೊಸ ಬಸ್‌ಗಳ ಖರೀದಿಗೆ ರಾಜ್ಯ ಬಜೆಟ್‌ನಿಂದ ಅಥವಾ ಕೆಕೆಆರ್‌ಡಿಬಿ ಅನುದಾನ ಒದಗಿಸುವಂತೆ ಸರಕಾರಕ್ಕೆ ಕೋರಲಾಗಿದೆ. ಈಗಾಗಲೇ ರಾಜ್ಯದ ಇತರೆ ನಿಗಮಗಳಿಗೆ ಅನುದಾನ ಲಭ್ಯವಾಗಿದ್ದು, ನಮಗೂ ಆರ್ಥಿಕ ನೆರವು ಸಿಗುವ ಭರವಸೆ ಇದೆ. ಗುರುವಾರ ಬೆಂಗಳೂರಿನಲ್ಲಿ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಮಹತ್ವದ ತೀರ್ಮಾನವಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.



ನೇಮಕಾತಿ ಪ್ರಕ್ರಿಯೆ ಅಂತಿಮ ಹಂತಕ್ಕೆ: ಸಾರಿಗೆ ನಿಗಮದಲ್ಲಿ ಖಾಲಿ ಇರುವ 300 ನಿರ್ವಾಹಕ ಹಾಗೂ 13 ಕ್ಲರ್ಕ್ ಹುದ್ದೆಗಳು ಸೇರಿದಂತೆ ಒಟ್ಟು 313 ಹುದ್ದೆಗಳ ಭರ್ತಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪರೀಕ್ಷೆ ನಡೆಸಿದೆ. ಪ್ರಸ್ತುತ ಪರಿಶೀಲನಾ ಕಾರ್ಯ ನಡೆಯುತ್ತಿದ್ದು, ಶೀಘ್ರದಲ್ಲಿಯೇ ಈ ಹುದ್ದೆಗಳ ಭರ್ತಿ ಕಾರ್ಯ ಪೂರ್ಣಗೊಳ್ಳಲಿದೆ ಎಂದು ಅರುಣಕುಮಾರ್ ಪಾಟೀಲ್ ಮಾಹಿತಿ ನೀಡಿದರು. ಈ ವೇಳೆ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಬಿ. ಸುಶೀಲ ಇದ್ದರು.

ವಾರದೊಳಗೆ ವರದಿ ಸಲ್ಲಿಸಲು ಸುಪ್ರೀಂ ನಿರ್ದೇಶನ

ಜೈಲಲ್ಲಿ ದರ್ಶನ್‌ಗೆ ಮೂಲಸೌಕರ್ಯ

ಬೆಂಗಳೂರು: ಆರೋಪಿ ದರ್ಶನ್ ಜೈಲಿನಲ್ಲಿ ಮೂಲಸೌಕರ್ಯ ಒದಗಿಸಲಾಗಿದೆಯೇ ಎಂಬ ಬಗ್ಗೆ ವರದಿ ಸಲ್ಲಿಸುವಂತೆ ರಾಜ್ಯ ಸರಕಾರಕ್ಕೆ ಸುಪ್ರೀಂಕೋರ್ಟ್ ನಿರ್ದೇಶನ ನೀಡಿದೆ.

ಜಾಮೀನು ಕೋರಿ ಸುಪ್ರೀಂಕೋರ್ಟ್‌ಗೆ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ ನ್ಯಾ.ಜೆ.ಬಿ. ಪಾರ್ದಿವಾಲಾ ನೇತೃತ್ವದ ಪೀಠ, ರಾಜ್ಯ ಸರಕಾರಕ್ಕೆ ಹಾಗೂ ವಿಚಾರಣಾಧೀನ ನ್ಯಾಯಾಲಯಕ್ಕೆ 1 ವಾರದೊಳಗೆ ವರದಿ ಸಲ್ಲಿಸಲು ಸೂಚಿಸಿದೆ. ಜೈಲಿನಲ್ಲಿ ಮೂಲಸೌಕರ್ಯ ಒದಗಿಸ ಲಾಗಿದೆಯೇ ಎಂದು ರಾಜ್ಯ ಸರಕಾರಕ್ಕೆ ಹಾಗೂ ಸಾಕ್ಷಿಗಳ ವಿಚಾರಣೆ ಪ್ರಗತಿ ಬಗ್ಗೆ ವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶನ ನೀಡಿದೆ. ದರ್ಶನ್‌ಗೆ ಜೈಲಿನಲ್ಲಿ ಮೂಲಸೌಕರ್ಯ ನೀಡಿಲ್ಲ. ದರ್ಶನ್ ಅವರನ್ನು ಬೆಳಕು ಇಲ್ಲದ ಸೆಲ್‌ನಲ್ಲಿ ಇರಿಸಲಾಗಿದೆ ಎಂದು ಹಿರಿಯ ವಕೀಲ ಮುಕುಲ್ ರೋಹಟಗಿ ವಾದಿಸಿದ್ದರು. ವಾದ ಆಲಿಸಿದ ನ್ಯಾಯಾಲಯ ಒಂದು ವಾರದಲ್ಲಿ ವರದಿ ನೀಡುವಂತೆ ಸೂಚನೆ ನೀಡಿದೆ.

ಅರ್ಜಿಯಲ್ಲೇನಿದೆ ?

ಕೊಲೆ ಪ್ರಕರಣದಲ್ಲಿ ಒಟ್ಟು 273 ಸಾಕ್ಷಿಗಳಿದ್ದು, ಈವರೆಗೆ ಕೇವಲ 15 ಜನರ ವಿಚಾರಣೆ ಮಾತ್ರ ಪೂರ್ಣಗೊಂಡಿದೆ. ಇದೇ ವೇಗದಲ್ಲಿ ವಿಚಾರಣೆ ನಡೆದರೆ ಪ್ರಕರಣ ಮುಗಿಯಲು ಹಲವು ವರ್ಷಗಳೇ ಬೇಕಾಗಬಹುದು ಎಂಬ ಆತಂಕವನ್ನು ಅರ್ಜಿಯಲ್ಲಿ ವ್ಯಕ್ತಪಡಿಸಲಾಗಿದೆ. ದರ್ಶನ್ ಬೆನ್ನು ನೋವಿನಿಂದ ಬಳಲುತ್ತಿದ್ದು, ಜೈಲಿನಲ್ಲಿ ಸೂಕ್ತ ಚಿಕಿತ್ಸೆ ಮತ್ತು ಸೌಲಭ್ಯಗಳ ಕೊರತೆಯಿದೆ. ದೀರ್ಘಕಾಲದ ಜೈಲುವಾಸದಿಂದ ಚಿತ್ರರಂಗದ ವೃತ್ತಿಜೀವನಕ್ಕೆ ನಷ್ಟವಾಗುತ್ತಿದೆ ಎಂದು ಅಳಲು ತೋಡಿಕೊಂಡಿದ್ದಾರೆ. ಅರ್ಜಿಯನ್ನು ಸುಪ್ರೀಂ ಗಂಭೀರವಾಗಿ ಪರಿಗಣಿಸಿ ವರದಿಗೆ ಸೂಚಿಸಿದೆ.

ಅಂಚೆಮತ ಮರು ಎಣಿಕೆ ವೇಳೆ ಮತ ತಿದ್ದಿರುವ ಆರೋಪ

ಜೀವರಾಜ್ ವಿರುದ್ಧ ಎಫ್‌ಐಆರ್

ಚಿಕ್ಕಮಗಳೂರು: ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆಮತಗಳ ಮರು ಎಣಿಕೆ ವೇಳೆ ಮತಗಳನ್ನು ತಿದ್ದಿದ್ದಾರೆಂಬ ಆರೋಪದ ಹಿನ್ನೆಲೆ ಶಾಸಕ ಡಿ.ಎನ್.ಜೀವರಾಜ್ ಸೇರಿದಂತೆ ಮೂವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.ಕಾಂಗ್ರೆಸ್ ಅಭ್ಯರ್ಥಿ ಟಿ.ಡಿ. ರಾಜೇಗೌಡ ಅವರ ಅಂಚೆ ಮತದ ಏಜೆಂಟ್, ವಕೀಲರು ಹಾಗೂ ಕಾಂಗ್ರೆಸ್ ಮುಖಂಡರಾದ ಸುಧೀರ್ ಕುಮಾರ್ ಮುರೊಳ್ಳಿ ಅವರು ನೀಡಿದ ದೂರಿನ ಮೇರೆಗೆ ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯಲ್ಲಿ ಡಿ.ಎನ್.ಜೀವರಾಜ್, ಅಂದಿನ ಜಿಲ್ಲಾಧಿಕಾರಿ ರಮೇಶ ಹಾಗೂ ಚುನಾವಣಾಧಿಕಾರಿ ವೇದಮೂರ್ತಿ ಅವರ ವಿರುದ್ಧ ಜನಪ್ರತಿನಿಧಿ ಕಾಯ್ದೆ 143, 465, 468, 471, 170 ಬಿ, 149 ಮತ್ತು 136 ಸೆಕ್ಷನ್ ಅಡಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ.



ಚುನಾವಣಾ ಪ್ರಕ್ರಿಯೆ ನಿರ್ಣಯ ಪುಸ್ತಕದಲ್ಲಿ ಬರೆದು ಎಲ್ಲರೂ ಒಪ್ಪಿ ಸಹಿ ಮಾಡಿರುವ ಸಂಗತಿಗಳೇ ಈಗ ವ್ಯತ್ಯಯವಾಗಿರುವುದನ್ನು ನೋಡಿದಲ್ಲಿ ಅಕ್ರಮ ಕೂಟ ಕಟ್ಟಿಕೊಂಡು ಒಳಸಂಚು ರೂಪಿಸಿ ಚುನಾವಣಾ ಅಕ್ರಮಗಳ ಮೂಲಕ ಬ್ಯಾಲೆಟ್‌ಗಳನ್ನು ವೈಯಕ್ತಿಕ ಲಾಭಕ್ಕಾಗಿ ತಿದ್ದಿದ್ದಾರೆಂದು ಸುಧೀರ್ ಕುಮಾರ್ ಮುರೊಳ್ಳಿ ದೂರಿನಲ್ಲಿ ಉಲ್ಲೇಖ ಮಾಡಿದ್ದರು.

ದೂರಿನಲ್ಲಿ ಉಲ್ಲೇಖಿಸಿದ್ದೇನು? : 2023ರ ಮೇ13 ರಂದು ನಡೆದ ಮತ ಎಣಿಕೆ ಸಂದರ್ಭದಲ್ಲಿ ಟಿ.ಡಿ.ರಾಜೇಗೌಡ ಅವರಿಗೆ ಸಂದಾಯವಾಗಿದ್ದ ಮತಗಳನ್ನು ಮಾತ್ರ ಒಂದು ಕಟ್ಟಿನ 170 ಮತಗಳನ್ನು ತಿದ್ದುಪಡಿ ಮಾಡಿದ್ದಾರೆಂದು ಸುಧೀರ್ ಕುಮಾರ್ ಮುರೊಳ್ಳಿ ತಮ್ಮ ದೂರಿನಲ್ಲಿ ಆರೋಪಿಸಿದ್ದರು.

ಮತ ಎಣಿಕೆ ನಂತರ ಅಂದಿನ ಚುನಾವಣಾಧಿಕಾರಿ ವೇದಮೂರ್ತಿ ಅಭ್ಯರ್ಥಿ ಡಿ.ಎನ್.ಜೀವರಾಜ್ ಹಾಗೂ ಜಿಲ್ಲಾಧಿಕಾರಿ ರಮೇಶ ಹಾಗೂ ಇತರರು ಸಂಚು ರೂಪಿಸಿ ಪೆಟ್ಟಿಗೆಗಳ ಸೀಲುಗಳನ್ನು ತೆಗೆದು ಅಕ್ರಮ ಎಸಗಿರುವುದರಿಂದ ಅವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ದೂರಿನಲ್ಲಿ ಕಾಂಗ್ರೆಸ್ ಮುಖಂಡ ಸುಧೀರ್ ಕುಮಾರ್ ಮುರೊಳ್ಳಿ ದೂರಿನಲ್ಲಿ ಉಲ್ಲೇಖ ಮಾಡಿದ್ದರು. ಈ ಹಿನ್ನೆಲೆ ಶಾಸಕ ಜೀವರಾಜ್ ವಿರುದ್ಧ ಪ್ರಕರಣ ದಾಖಲಾಗಿದೆ.

ಜೀವರಾಜ್‌ಗೆ ಪ್ರಮಾಣ ಪತ್ರ

ಶೃಂಗೇರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಿ.ಎನ್ ಜೀವರಾಜ್ ಅವರಿಗೆ ಚುನಾವಣಾ ಅಧಿಕಾರಿ ಗೌರವ್ ಕುಮಾರ್ ಶೆಟ್ಟಿ ಪ್ರಮಾಣ ಪತ್ರ ನೀಡಿದರು.

ಚಿಕ್ಕಮಗಳೂರು: ಶೃಂಗೇರಿ ಅಂಚೆ ಮತ ಮರು ಎಣಿಕೆಯಲ್ಲಿ ಗೆಲುವು ಸಾಧಿಸಿರುವ ಬಿಜೆಪಿ ಅಭ್ಯರ್ಥಿ ಡಿ.ಎನ್ ಜೀವರಾಜ್ ಅವರಿಗೆ ಚುನಾವಣಾ ಅಧಿಕಾರಿ ಗೌರವ್ ಕುಮಾರ್ ಶೆಟ್ಟಿ ಪ್ರಮಾಣ ಪತ್ರ ನೀಡಿದರು.

ನಂತರ ಸುದ್ದಿಗಾರರ ಜತೆ ಮಾತನಾಡಿದ ಅವರು, ಜನ ನನ್ನನ್ನು ಗೆಲ್ಲಿಸಿದ್ದರು. ಆದರೆ ಇಲ್ಲಿ ಕೆಲವರು ಸೋಲಿಸಿದ್ದರು. ಕಾನೂನಿನ ಹೋರಾಟದ ಮೂಲಕ ನನಗೆ ಜಯಸಿಕ್ಕಿದೆ ಎಂದರು. ವೋಟ್ ಟ್ಯಾಂಪರಿಂಗ್ ಆರೋಪಕ್ಕೆ ಸ್ಪಷ್ಟನೆ ಕೊಟ್ಟ ಅವರು, ಟ್ಯಾಂಪರಿಂಗ್ ಆರೋಪದಡಿ ತಮ್ಮ ವಿರುದ್ಧ ದಾಖಲಾದ ಪ್ರಕರಣ ಠಾಣ ವ್ಯಾಪ್ತಿಗೆ ಬರುವುದಿಲ್ಲ. ಆಯೋಗ ಮಾಡಬೇಕಾದ ಕೆಲಸವನ್ನು ಕಾಂಗ್ರೆಸ್‌ನವರೆ ಮಾಡಿದ್ದಾರೆ. ಇವರ ಸರಕಾರದಲ್ಲೇ ಇದ್ದ ಮತಗಳು ಟ್ಯಾಂಪರಿಂಗ್ ಆಗೋಕೆ ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು. 2023ರ ಎಣಿಕೆಯಲ್ಲಿ ಬಿಜೆಪಿ ಅಭ್ಯರ್ಥಿ ಜೀವರಾಜ್‌ಗೆ 692 ಅಂಚೆ ಮತ, ಕಾಂಗ್ರೆಸ್ ಅಭ್ಯರ್ಥಿ ರಾಜೇಗೌಡ 569 ಅಂಚೆ ಮತ ಬಿದ್ದಿತ್ತು. ಈಗ ನಡೆದ ಮರು ಎಣಿಕೆಯಲ್ಲಿ ಜೀವ ರಾಜ್ 690 ಮತ (2 ಮತ ಕಡಿಮೆ) ರಾಜೇ ಗೌಡ 314 ಮತ (251 ಮತ ಕಡಿಮೆ) ಪಡೆದಿದ್ದಾರೆ. ರಾಜೇಗೌಡರಿಗೆ ಬಿದ್ದ 318 ಮತಗಳು ಮರು ಎಣಿಕೆಯಲ್ಲಿ ಅಸಿಂಧು ಎಂದು ಘೋಷಿಸಲಾಗಿದೆ. ಈ ಮೂಲಕ ಅಂಚೆ ಮತಗಳ ಮರು ಎಣಿಕೆಯಲ್ಲಿ 52 ಮತಗಳಿಂದ ಬಿಜೆಪಿ ಅಭ್ಯರ್ಥಿ ಜೀವರಾಜ್ ಮೇಲುಗೈ ಸಾಧಿಸಿದ್ದಾರೆ.

ಸಂಪಾದಕೀಯ

ಬಿಜೆಪಿ ತ್ರಿವಿಕ್ರಮ, ದ್ರಾವಿಡ ಗರ್ವಭಂಗ

ಪಂಚರಾಜ್ಯಗಳ ವಿಧಾನಸಭೆ ಚುನಾವಣೆ ಫಲಿತಾಂಶ ಕೆಲವು ನಿರೀಕ್ಷಿತ, ಜತೆಗೆ ಅನಿರೀಕ್ಷಿತ ಫಲಗಳನ್ನೂ ನೀಡಿದೆ. ಮೂರು ರಾಜ್ಯಗಳಲ್ಲಿ ಬಿಜೆಪಿ ಜಯಭೇರಿ ಬಾರಿಸಿದೆ. ಪಶ್ಚಿಮ ಬಂಗಾಳದಲ್ಲಿ, ಹದಿನೈದು ವರ್ಷಗಳಿಂದ ಬಿಗಿಹಿಡಿತ ಇಟ್ಟುಕೊಂಡಿದ್ದ ದೀದಿಯನ್ನು ಬಿಜೆಪಿ ಮಣಿಸಿದೆ. ಜನಸಂಘದ ಮೂಲಪುರುಷರಾದ ಶ್ಯಾಮಪ್ರಸಾದ ಮುಖರ್ಜಿ ಅವರ ನೆಲದಲ್ಲಿ ಬಿಜೆಪಿ ಅಧಿಕಾರಕ್ಕೇರಿದೆ. ಮೂರು ಅವಧಿಗಳಿಂದ ಆಡಳಿತದಲ್ಲಿದ್ದ ಮಮತಾ ಬ್ಯಾನರ್ಜಿ ಅವರು ಮೊದಲ ಅವಧಿಯಲ್ಲಿ ಅಭಿವೃದ್ಧಿ ಮಂತ್ರ ಪಠಿಸಿದರೂ ನಂತರದ ಎರಡು ಅವಧಿಗಳಲ್ಲಿ ಅದನ್ನು ಪೂರ್ತಿ ಕೈಬಿಟ್ಟು ಪಕ್ಷದ ಕಾರ್ಯಕರ್ತರ ಗೂಂಡಾಗಿರಿ, ಒಕ್ಕೂಟ ಸರ್ಕಾರದ ಜೊತೆಗೆ ನಿರಂತರ ಸಂಘರ್ಷಗಳಲ್ಲಿ ತೊಡಗಿಕೊಂಡು, ಮತಎಣಿಕೆ-ಮತದಾರರ ಯಾದಿ ತಿದ್ದುಪಡಿಯಲ್ಲಿ ಸುಪ್ರೀಂ ಕೋರ್ಟ್ ನಿರ್ದೇಶನವನ್ನೂ ಧಿಕ್ಕರಿಸುವ ಉದ್ಧಟತನ ತೋರಿದರು. ಜೊತೆಗೆ ಬಾಂಗ್ಲಾ ನಿರಾಶ್ರಿತರ ಓಲೈಕೆ. ಇವೆಲ್ಲವನ್ನೂ ಮತದಾರ ಗ್ರಹಿಸಿ ಚೆನ್ನಾಗಿಯೇ ಪಾಠ ಕಲಿಸಿದ್ದಾನೆ. ಇದರ ಜೊತೆಗೆ ಆಡಳಿತ ವಿರೋಧಿ ಅಲೆ, ಬಿಜೆಪಿಯ ತಂತ್ರಗಾರಿಕೆ, ಬಾಂಗ್ಲಾ ನಿರಾಶ್ರಿತರನ್ನು ಮತದಾರರ ಯಾದಿಯಿಂದ ಹೊರಗಿಟ್ಟಿರುವುದು ಕೂಡ ಫಲ ನೀಡಿದಂತಿದೆ. ಇನ್ನು ತಮಿಳುನಾಡಿನ ಫಲಿತಾಂಶ ತುಸು ಅಚ್ಚರಿ ತರುವಂಥದ್ದು. ಇಲ್ಲಿ ದ್ರಾವಿಡ ಪಕ್ಷಗಳ ರಾಜಕಾರಣವನ್ನು ಮತದಾರ ತಿರಸ್ಕರಿಸಿದ್ದಾನೆ. ಟಿವಿಕೆ ಪಕ್ಷವನ್ನು ಸ್ಥಾಪಿಸಿದ ಸಿನಿಮಾ ನಟ ವಿಜಯ ಅವರ ಗೆಲುವು, ಪಡೆದ ಸ್ಥಾನಗಳ ಸಂಖ್ಯೆ ಗಮನಾರ್ಹ. ಜೆನ್ ಝೀ ಮತದಾರರನ್ನು ವಿಜಯ್ ಸೆಳೆದಂತಿದೆ. ಕೇರಳದ ಮತದಾರರು ಅಧಿಕಾರಸ್ಥರನ್ನು ಬದಲಿಸುವ ಜಾಣತನ ತೋರಿಸಿದ್ದಾರೆ. ಪಿಣರಾಯಿ ವಿಜಯನ್ ವರ್ಚಸ್ಸು ಮಂಕಾಗಿದ್ದು, ಕಾಂಗ್ರೆಸ್ ನೇತೃತ್ವದ ಯುಡಿಎಫ್‌ನ್ನು ಆರಿಸಿಕೊಂಡಿದ್ದಾನೆ. ಇದರೊಂದಿಗೆ ಭಾರತದಲ್ಲಿದ್ದ ಕೊನೆಯ ಕಮ್ಯುನಿಸ್ಟ್ ಪಕ್ಷವನ್ನೂ ಮತದಾರ ಕೆಳಗಿಳಿಸಿದ್ದಾನೆ. ಪುದುಚೇರಿ ಹಾಗೂ ಅಸ್ಸಾಂಗಳ ಫಲಿತಾಂಶ ನಿರೀಕ್ಷಿತವೇ. ಯಾಕೆಂದರೆ ಅಲ್ಲಿ ಎನ್‌ಡಿಎಗೆ ಪ್ರಬಲವಾದ ಪ್ರತಿರೋಧ ಇರಲಿಲ್ಲ. ಅಧಿಕಾರದ ದುರುಪಯೋಗ, ಧ್ರುವೀಕರಣ ರಾಜಕೀಯದಿಂದ ಮತದಾರರು ಬೇಸತ್ತಿರುವುದು ಪ.ಬಂಗಾಳ, ತಮಿಳುನಾಡು, ಕೇರಳಗಳಲ್ಲಿ ದಾಖಲಾಗಿದೆ. ಕರ್ನಾಟಕದ 2 ವಿಧಾನಸಭೆ ಕ್ಷೇತ್ರ ಉಪಚುನಾವಣೆಯಲ್ಲಿ ಆಡಳಿತ ಕಾಂಗ್ರೆಸ್‌ಗೆ ಮತದಾರ ಜೈ ಎಂದಿದ್ದು, ಅದರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಾಯಕತ್ವ ಅಬಾಧಿತವಾಗಿದೆ.

ಸೊಂಪಾದಕೀಯ

ತಮಿಳುನಾಡಿನ ವಿಜಯ ಲಲಿತ

ಸಿನಿಮಾ ನಟರ ಬಗ್ಗೆ ತಮಿಳು ಜನರ ಹುಚ್ಚು ಅಭಿಮಾನದ ಅರಿವು ಇರುವವರಿಗೆ ಇಲ್ಲಿ ಹಳೆಯ ದಳಪತಿಗಳು ಮಣ್ಣು ಮುಕ್ಕಿರುವುದು, ಇಳೆಯ ದಳಪತಿ ಜಯಭೇರಿ ಬಾರಿಸಿರುವುದು ಅಚ್ಚರಿ ಅಲ್ಲ. ತಮಿಳುನಾಡಿನಲ್ಲಿ ಸಿಎಂಗಳಾದ ನಟರಿಗೆ ಕೊರತೆಯಿಲ್ಲ. ಈ ನಿಟ್ಟಿನಲ್ಲಿ ಕಮಲ್, ರಜನಿಗೆ ಒಲಿಯದ ಅದೃಷ್ಟ ಈತನಿಗೆ ಒಲಿದಿದೆ. ಒಂದು ದಶಕದಿಂದ ವಿಜಯ್ ತನ್ನ ಫಿಲಂಗಳಲ್ಲೆಲ್ಲಾ ಜನನಾಯಕನಾಗುವ ಆಸೆಯನ್ನು ವ್ಯಕ್ತಪಡಿಸುತ್ತಲೇ ಬಂದಿದ್ದ. ಇತ್ತೀಚಿನ ಜನನಾಯಗನ್ ಸಿನಿಮಾದ ಟ್ರೇಲರ್‌ನಲ್ಲಿ, ಪಂಚೆ ಉಟ್ಟುಕೊಂಡ ತಮಿಳುನಾಡಿನ ಒಂದಷ್ಟು ರಾಜಕಾರಣಿಗಳನ್ನು ಕೂಡಿಹಾಕಿ ಚಾಟಿಯಿಂದ ಬಾರಿಸುವ ದೃಶ್ಯವಿತ್ತು. ಈಗ ಡಿಎಂಕೆ, ಎಐಎಡಿಎಂಕೆಯ ನಾಯಕರ ಪಂಚೆಗೇ ಕುತ್ತು ಬಂದಿದೆ. ಇಂಥ ಧೀರೋದಾತ್ತ ನಾಯಕ ಇತ್ತೀಚೆಗೆ ಒಂದು ರ್ಯಾಲಿಯಲ್ಲಿ, ಅಭಿಮಾನಿಯೊಬ್ಬ ಎಸೆದ ಹೂವಿನ ಚೆಂಡನ್ನು ಬಾಂಬ್ ಎಂದು ತಿಳಿದು ಸೈಕಲನ್ನು ಅಲ್ಲೇ ಬಿಸಾಕಿ ಬದುಕಿದರೆ ಬೇಡಿ ತಿಂದೇನು ಎಂದು ಪರಾರಿಯಾಗಿ ಹೀರೋಗಿರಿ ಪ್ರದರ್ಶಿಸಿದ್ದು ಮಾತ್ರ ಮಜವಾದ ದೃಶ್ಯವಾಗಿತ್ತು. ಅದಿರಲಿ, ವಿಜಯ್ ಆಗಮನದೊಂದಿಗೆ ತಮಿಳುನಾಡಿನಲ್ಲಿ ಇತಿಹಾಸ ಮರುಕಳಿಸುತ್ತಿರುವಂತಿದೆ. ಮುಖ್ಯಮಂತ್ರಿಯಾಗಿದ್ದ ಎಂಜಿಆರ್ ಮತ್ತು ಅವರ ಆಪ್ತೆಯಾಗಿದ್ದ ಜಯಲಲಿತಾರನ್ನು ನೆನಪಿಸಿಕೊಳ್ಳಿ. ಎಂಜಿಆರ್ ಮೊದಲ ಪತ್ನಿಯನ್ನು ಹಿಂದಕ್ಕೆ ತಳ್ಳಿ ಸಿಎಂ ಆದವರು ಜಯಲಲಿತಾ. ಇದೀಗ ವಿಜಯ್ ಹಾಗೂ ತ್ರಿಶಾ ಸಂಬಂಧವೂ ಹಾಗೇ ಇದೆ. ವಿಜಯ್ ಸಿಎಂ ಆದರೆ, ತ್ರಿಶಾರನ್ನು ಉತ್ತರಾಧಿಕಾರಿ ಆಗಿಸಿದರೆ, ತಮಿಳರು ಆಕೆಯನ್ನೂ ಹೊತ್ತು ಮೆರೆಸಿದರೆ ಯಾರೂ ಆಶ್ಚರ್ಯಪಡಬೇಕಿಲ್ಲ.

ಸಂಪಾದಕರ ಸದ್ಯಶೋಧನೆ

ಒಂದು ಗಾದೆಯ ಕುರಿತು

ಚೀನಾದಲ್ಲಿ ಒಂದು ಸುಪ್ರಸಿದ್ಧ ಗಾದೆಯಿದೆ. 'ಒಂದು ಮರವನ್ನು ನೆಡಲು ಅತ್ಯಂತ ಸೂಕ್ತವಾದ ಸಮಯ 20 ವರ್ಷಗಳ ಹಿಂದೆ ಆಗಿತ್ತು. ಎರಡನೇ ಅತ್ಯಂತ ಸೂಕ್ತ ಸಮಯ ಈಗ'. ಈ ಸಾಲುಗಳು ಕೇವಲ ಗಿಡ-ಮರಗಳ ಬಗ್ಗೆ ಮಾತ್ರವಲ್ಲ, ನಮ್ಮ ಜೀವನದ ಪ್ರತಿಯೊಂದು ನಿರ್ಧಾರ ಮತ್ತು ಗುರಿಗಳ ಬಗ್ಗೆಯೂ ಬೆಳಕು ಚೆಲ್ಲುತ್ತವೆ. ನಾವೆಲ್ಲರೂ ಆಗಾಗ 'ಅಯ್ಯೋ, ನಾನು ಈ ಕೆಲಸವನ್ನು ಮೊದಲೇ ಮಾಡಬೇಕಿತ್ತು' ಎಂದು ಪಶ್ಚಾತ್ತಾಪ ಪಡುತ್ತೇವೆ. ಇಪ್ಪತ್ತು ವರ್ಷಗಳ ಹಿಂದೆ ಒಂದು ಮರವನ್ನು ನೆಟ್ಟಿದ್ದರೆ, ಇಂದು ಅದು ನಮಗೆ ನೆರಳು, ತಂಪುಗಾಳಿ ಮತ್ತು ಹಣ್ಣುಗಳನ್ನು ನೀಡುತ್ತಿತ್ತು. ಹಾಗೆಯೇ, ಬಾಲ್ಯದಲ್ಲಿ ಒಂದು ಕಲೆಯನ್ನು ಕಲಿತಿದ್ದರೆ ಅಥವಾ ಯೌವನದಲ್ಲಿ ಒಂದು ಉಳಿತಾಯದ ಯೋಜನೆಯನ್ನು ಆರಂಭಿಸಿದ್ದರೆ, ಇಂದು ನಾವು ಅದರ ಫಲವನ್ನು ಉಣ್ಣಬಹುದಿತ್ತು. ಆದರೆ ಕಳೆದುಹೋದ ಕಾಲ ಮರಳಿ ಬಾರದು. ಕಳೆದುಹೋದ ಸಮಯದ ಬಗ್ಗೆ ಚಿಂತಿಸುತ್ತಾ ಕುಳಿತುಕೊಳ್ಳುವುದು ವ್ಯರ್ಥ. ನಾವು ಇಪ್ಪತ್ತು ವರ್ಷಗಳ ಹಿಂದೆ ಆ ಕೆಲಸವನ್ನು ಮಾಡಲಿಲ್ಲ ಎಂಬ ಕಾರಣಕ್ಕೆ, ಇಂದೂ ಕೂಡ ಮಾಡದೇ ಬಿಟ್ಟರೆ, ಮುಂದಿನ ಇಪ್ಪತ್ತು ವರ್ಷಗಳ ನಂತರವೂ ನಾವು ಇದೇ ಪಶ್ಚಾತ್ತಾಪವನ್ನು ಪಡಬೇಕಾಗುತ್ತದೆ. ಹೊಸದನ್ನು ಕಲಿಯಲು ಅಥವಾ ಒಳ್ಳೆಯದನ್ನು ಮಾಡಲು ಇಂದೇ ಮೊದಲ ದಿನ. ನಮ್ಮ ಕೈಯಲ್ಲಿರುವುದು ಇಂದಿನ ಈ ಕ್ಷಣ ಮಾತ್ರ. ನಾಳೆ ಎಂಬುದು ಅನಿಶ್ಚಿತ, ನಿನ್ನೆ ಎಂಬುದು ಇತಿಹಾಸ. ಈ ಗಾದೆಯಲ್ಲಿ ಮರವನ್ನು ಉದಾಹರಣೆಯಾಗಿ ನೀಡಿರುವುದು ಅರ್ಥಪೂರ್ಣವಾಗಿದೆ. ಒಂದು ಮರ ಬೆಳೆದು ಹೆಮ್ಮರವಾಗಲು ಸಮಯ ಬೇಕು. ಹಾಗೆಯೇ ನಮ್ಮ ಯಶಸ್ಸು ಕೂಡ ರಾತ್ರೋರಾತ್ರಿ ಸಿಗುವಂಥದ್ದಲ್ಲ. ಅದಕ್ಕೆ ತಾಳ್ಮೆ ಮತ್ತು ನಿರಂತರ ಪ್ರಯತ್ನದ ಅಗತ್ಯವಿದೆ. ಇಂದು ನೀವು ಹಾಕುವ ಒಂದು ಸಣ್ಣ ಹೆಜ್ಜೆ ಅಥವಾ ನೀವು ಬಿತ್ತುವ ಒಂದು ಬೀಜ, ಭವಿಷ್ಯದಲ್ಲಿ ದೊಡ್ಡ ಬದಲಾವಣೆಗೆ ಕಾರಣವಾಗುತ್ತದೆ. 'ನಾಳೆ ಮಾಡೋಣ' ಎನ್ನುವ ಮನೋಭಾವವೇ ಪ್ರಗತಿಗೆ ದೊಡ್ಡ ಶತ್ರು. ಹಿಂದೆ ಮಾಡದ ತಪ್ಪನ್ನು ಈಗ ತಿದ್ದಿಕೊಳ್ಳಲು ಅವಕಾಶವಿದೆ. ಇಂದು ಮಾಡುವ ಸಣ್ಣ ಹೂಡಿಕೆ ಅಥವಾ ಓದು ಭವಿಷ್ಯದ ಬದುಕನ್ನು ಹಸನುಗೊಳಿಸುತ್ತದೆ. ಹಳೆಯ ಕಾಲದ ಬಗ್ಗೆ ವ್ಯಥೆ ಪಡುವುದಕ್ಕಿಂತ, ಭವಿಷ್ಯದ ಇಪ್ಪತ್ತು ವರ್ಷಗಳ ನಂತರ 'ಅಂದು ನಾನು ಸರಿಯಾದ ನಿರ್ಧಾರ ತಳೆದೆ' ಎಂದು ಹೆಮ್ಮೆಯಿಂದ ಹೇಳಿಕೊಳ್ಳುವಂತೆ ಇಂದು ಕೆಲಸ ಮಾಡುವುದು ಜಾಣತನ. ಸಮಯ ಯಾರೊಬ್ಬರಿಗೂ ಕಾಯುವುದಿಲ್ಲ, ನದಿ ಹರಿದು ಹೋದಂತೆ ಕಾಲವೂ ಉರುಳುತ್ತದೆ. ಆದರೆ ಆ ಹರಿವಿನಲ್ಲಿ ನಾವು ಹೇಗೆ ಈಜುತ್ತೇವೆ ಎಂಬುದು ಮುಖ್ಯ. ಆದ್ದರಿಂದ, ನೀವು ಯಾವುದನ್ನಾದರೂ ಸಾಧಿಸಬೇಕು ಎಂದುಕೊಂಡಿದ್ದರೆ, ಅದು ಓದಿರಲಿ, ಬರವಣಿಗೆಯಿರಲಿ ಅಥವಾ ಪರಿಸರ ಸೇವೆಯಿರಲಿ... ಅದಕ್ಕೆ ಸಕಾಲ 'ಈಗ'. ಇಂದೇ ಮರ ನೆಡಿ, ಇಂದೇ ಕನಸಿನತ್ತ ಹೆಜ್ಜೆ ಹಾಕಿ. ನಾವು ಇಂದು ಯಾವುದನ್ನು 'ಈಗ' ಎಂದು ಕರೆಯುತ್ತಿದ್ದೇವೆಯೋ, ಅದು ಇನ್ನು 20 ವರ್ಷಗಳ ನಂತರ 'ಹಿಂದಿನ ಕಾಲ' ಎಂದೆನಿಸಿಕೊಳ್ಳುತ್ತದೆ. ಇಂದು ನಾವು ಸೋಮಾರಿತನದಿಂದ ಕಾಲಹರಣ ಮಾಡಿದರೆ, 2046ರಲ್ಲಿ ಕುಳಿತು '2026ರಲ್ಲಿ ನಾನು ಆ ಕೆಲಸ ಮಾಡಬೇಕಿತ್ತು' ಎಂದು ಮತ್ತೆ ಇದೇ ಗಾದೆಯನ್ನು ನೆನಪಿಸಿಕೊಳ್ಳಬೇಕಾಗುತ್ತದೆ. ಆ ಚಕ್ರವನ್ನು ಮುರಿಯಲು ಇಂದೇ ಶುಭ ಮುಹೂರ್ತ. ಯಾವುದೇ ಶುಭ ಕಾರ್ಯಕ್ಕೆ ಅಥವಾ ಪ್ರಗತಿಗೆ 'ಈ ಕ್ಷಣ'ಕ್ಕಿಂತ ಉತ್ತಮವಾದ ಸಮಯ ಬೇರೊಂದಿಲ್ಲ. 'ಇಂದಿನ ನಿರ್ಧಾರವೇ ನಾಳೆಯ ನೆರಳು' ಎಂಬುದು ಬದುಕಿನ ಕರ್ಮ ಸಿದ್ಧಾಂತದ ಪ್ರತಿಫಲನ. ನಾವು ಇಂದು ತೆಗೆದುಕೊಳ್ಳುವ ಪ್ರತಿಯೊಂದು ಸಣ್ಣ ನಿರ್ಧಾರವೂ ನಮ್ಮ ಭವಿಷ್ಯದ ಆಕೃತಿಯನ್ನು ಕೆತ್ತುತ್ತದೆ. ನಾವು ಇಂದು ಯಾವ ಬೀಜ ಬಿತ್ತುತ್ತೇವೆಯೋ, ನಾಳೆ ಅದೇ ಮರವಾಗಿ ಬೆಳೆದು ನಮಗೆ ನೆರಳು ನೀಡುತ್ತದೆ. ನೀವು ಬೇವಿನ ಬೀಜ ಬಿತ್ತಿ ಮಾವಿನ ಹಣ್ಣನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಹಾಗೆಯೇ ಇಂದು ನೀವು ಕಷ್ಟಪಟ್ಟು ಓದುವ ನಿರ್ಧಾರ ಮಾಡಿದರೆ, ನಾಳೆ ಜ್ಞಾನದ ನೆರಳು ಸಿಗುತ್ತದೆ. ಇಂದು ಸೋಮಾರಿತನ ಆರಿಸಿಕೊಂಡರೆ, ನಾಳೆ ಬಿಸಿಲಿಲ್ಲಿ (ಕಷ್ಟದಲ್ಲಿ) ನಿಲ್ಲಬೇಕಾಗುತ್ತದೆ. ನಮ್ಮ ಜೀವನ ನಾವು ಮಾಡುವ ಆಯ್ಕೆಗಳ ಮೊತ್ತ. ಬೆಳಗ್ಗೆ ಎದ್ದ ಕ್ಷಣದಿಂದ ರಾತ್ರಿ ಮಲಗುವವರೆಗೆ ನಾವು ತೆಗೆದುಕೊಳ್ಳುವ ಸಣ್ಣ ನಿರ್ಧಾರಗಳು (ಏನು ತಿನ್ನಬೇಕು, ಯಾರ ಜತೆ ಇರಬೇಕು, ಸಮಯವನ್ನು ಹೇಗೆ ಬಳಸಬೇಕು) ನಮ್ಮ ವ್ಯಕ್ತಿತ್ವವನ್ನು ರೂಪಿಸುತ್ತವೆ. ಇಂದು ವ್ಯಾಯಾಮ ಮಾಡುವ ನಿರ್ಧಾರ, ವೃದ್ಧಾಪ್ಯದಲ್ಲಿ ಲವಲವಿಕೆಯ ಬದುಕನ್ನು ನೀಡುತ್ತದೆ. ಇಂದು ಅನಗತ್ಯ ಖರ್ಚು ಕಡಿಮೆ ಮಾಡುವ ನಿರ್ಧಾರ, ಭವಿಷ್ಯದ ಆರ್ಥಿಕ ಸಂಕಷ್ಟದ ಸಮಯದಲ್ಲಿ ಆಸರೆಯಾಗುತ್ತದೆ.

ಕೈ ಮೌನದಾಟದ ಹಿಂದಿನ ಗುಟ್ಟೇನು?

ಅಶ್ವತ್ಥಕಟ್ಟೆ

ರಂಜಿತ್ ಎಚ್. ಅಶ್ವತ್ಥ
vveditoped@gmail.com

'ಮಾತು ಬೆಳ್ಳಿ-ಮೌನ ಬಂಗಾರ' ಎನ್ನುವುದು ನಾಣ್ನುಡಿಯಿದ್ದರೂ, ರಾಜಕೀಯದಲ್ಲಿರುವವರಿಗೆ ಮಾತ್ರ ಮಾತೇ ಬಂಡವಾಳ. ಮಾತೊಂದಿದ್ದರೆ ಯಾರನ್ನಾದರೂ ಗೆಲ್ಲಬಹುದು, ರಾಜಕೀಯವಾಗಿ ಯಾವ ಹಂತಕ್ಕಾದರೂ ಹೋಗಬಹುದು ಎನ್ನುವುದಕ್ಕೆ ಹಲವು ಉದಾಹರಣೆಗಳಿವೆ. ಈ ಮಾತು ಎನ್ನುವುದು ಸಾರ್ವಜನಿಕ ಜೀವನದಲ್ಲಿ ಅಸ್ತ್ರ ಎನ್ನುವುದು ಎಷ್ಟು ದಿಟವೋ, ಅದೇ ಮಾತು ಅನೇಕ ಸಮಯದಲ್ಲಿ ತಿರುಗುಬಾಣವಾಗಿರುವುದನ್ನು ನೋಡಿದ್ದೇವೆ.

ತಮ್ಮ ಮಾತಿನಿಂದಲೇ ರಾಜಕೀಯವನ್ನು ಹಾಳು ಮಾಡಿಕೊಂಡಿರುವ ಅನೇಕ ನಾಯಕರನ್ನು ನೋಡಿದ್ದೇವೆ. ಆದರೆ ಮಾತನ್ನು ಎಲ್ಲಿ ಎಷ್ಟರ ಮಟ್ಟಿಗೆ ಆಡಬೇಕು? ಯಾವ ಸಮಯದಲ್ಲಿ ಮೌನವಾಗಿರಬೇಕು ಎನ್ನುವುದೇ ರಾಜಕೀಯ ಪಠ್ಯದ ಮೊದಲ ಪಾಠ. ಮಾತು-ಮೌನ ಎನ್ನುವ ಅಸ್ತ್ರ-ಪ್ರತ್ಯಸ್ತ್ರದ ನಡುವೆ ಇರುವ ಸಣ್ಣ ಅಂತರವನ್ನು ಅರಿಯುವುದೇ ಮುತ್ಸದ್ದಿ ರಾಜಕಾರಣಿಯ ಮೊದಲ ಗುಣ ಎನ್ನುವುದು ರಾಜಕೀಯ ಮೊಗಸಾಲೆಯಲ್ಲಿರುವ ಮಾತು.

ಸದ್ಯ ನಾಯಕನ ಬದಲಾವಣೆ, ಸಚಿವ ಸಂಪುಟ ಪುನಾರಚನೆ, ಮುಖ್ಯಮಂತ್ರಿ ಬದಲಾವಣೆ ಸೇರಿದಂತೆ ಹತ್ತು ಹಲವು ಗೊಂದಲದ ಗೂಡಾಗಿರುವ ಕರ್ನಾಟಕ ಕಾಂಗ್ರೆಸ್‌ನಲ್ಲಿಯೂ ಇದೇ ಮಾತು-ಮೌನದ ನಡುವೆ ಗುದ್ದಾಟ ನಡೆಯುತ್ತಿದೆ. ನಾಯಕತ್ವ ಬದಲಾವಣೆಯ ಆರಂಭದಲ್ಲಿ 'ಮಾತಿಗೆ-ಪ್ರತಿಮಾತು' ನಡೆಯುತ್ತಿತ್ತು. ಆದರೀಗ ಮಾತಿಗೆ ಮೌನದ ಉತ್ತರ, ಮೌನವಾಗಿದ್ದರೆ ಮಾತಿನಿಂದ ತಿವಿಯುವ ತಂತ್ರಗಾರಿಕೆ ನಡೆಯುತ್ತಿರುವುದನ್ನು ನೋಡಬಹುದಾಗಿದೆ. ನಾಯಕತ್ವ ಬದಲಾವಣೆಯ ವಿಷಯ ಮುನ್ನಲೆಗೆ ಬಂದ ಸಮಯದಲ್ಲಿ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಆಪ್ತರ ನಡುವಿನ ಮಾತಿನ ಮೇಲಾಟ, ಕಳೆದ ಒಂದು ತಿಂಗಳಿಂದ ತಕ್ಕಮಟ್ಟಿಗೆ ತಗ್ಗಿದೆ. ಅದರಲ್ಲಿಯೂ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಇಬ್ಬರೂ ನಾಯಕತ್ವ ಬದಲಾವಣೆ ವಿಷಯದಲ್ಲಿ 'ಮೌನ'ಕ್ಕೆ ಶರಣಾಗಿರುವ ಹಿಂದಿನ ಗುಟ್ಟೇನು ಎನ್ನುವುದೇ ಈಗಿರುವ ಬಹುದೊಡ್ಡ ಪ್ರಶ್ನೆಯಾಗಿದೆ.

ಸಿದ್ದರಾಮಯ್ಯ ನೇತೃತ್ವದಲ್ಲಿ ಅಧಿಕಾರಕ್ಕೆ ಏರಿದ ರಾಜ್ಯ ಕಾಂಗ್ರೆಸ್ ಸರಕಾರಕ್ಕೆ ಎರಡುವರೆ ವರ್ಷ ತುಂಬು ಹೊಸ್ತಿಲಿನಲ್ಲಿ ಡಿ.ಕೆ.ಶಿವಕುಮಾರ್ ಹಾಗೂ ಆಪ್ತರಿಂದ ಈ ಗೊಂದಲ ಶುರುವಾಗಿತ್ತು. ಮಾಡಿದ್ದ ಕೆಲಸಕ್ಕೆ ಕೂಲಿ ಕೇಳುತ್ತೇವೆ ಎನ್ನುವ ಮಾತು ಆ ಕಡೆಯಿಂದ ಬರುತ್ತಿದ್ದಂತೆ ಸಿದ್ದರಾಮಯ್ಯ ಆಪ್ತರು, ದಲಿತ ಸಿಎಂ, ಸಿದ್ದರಾಮಯ್ಯ ಪೂರ್ಣಾವಧಿ ಮುಖ್ಯಮಂತ್ರಿ ಎನ್ನುವ ಹೇಳಿಕೆಯನ್ನು ಶುರುಮಾಡಿದ್ದರು. ಈ ವಿಷಯದಲ್ಲಿ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಕೆ.ಸಿ. ವೇಣುಗೋಪಾಲ್ ಆದಾದ ಬಳಿಕ ಸ್ವತಃ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೇ ಮೌನವಾಗಿರಿ ಎನ್ನುವ ಸಂದೇಶ ನೀಡಿದ್ದರೂ ಮಾತಿನ ಮೇಲಾಟಕ್ಕೆ ಬ್ರೇಕ್ ಬಿದ್ದಿರಲಿಲ್ಲ. ಸುಮಾರು ನಾಲ್ಕೈದು ತಿಂಗಳಿನಿಂದ ಶುರುವಾದ ಮುಖ್ಯಮಂತ್ರಿ ಬದಲಾವಣೆಯ ಚರ್ಚೆ ಅಲ್ಲಿಂದ ಮುಂದಕ್ಕೆ ಹೋಗಿಲ್ಲ ಎನ್ನುವುದು ವಾಸ್ತವ. ಆದರೆ ಈ ಅವಧಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, 'ನಾನೇ ಐದು ವರ್ಷ ಮುಖ್ಯಮಂತ್ರಿ' ಎನ್ನುವ ಹೇಳಿಕೆಯಿಂದ 'ಹೈಕಮಾಂಡ್ ಹೇಳಿದ ಕ್ಷಣವೇ ರಾಜೀನಾಮೆ ನೀಡುವ' ಎನ್ನುವ ತನಕ ಬಂದು ನಿಂತರೆ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ದಿನಕ್ಕೊಂದು ಗೂಢಾರ್ಥದ ಹೇಳಿಕೆಗಳನ್ನು ನೀಡುತ್ತಾ ವಿಷಯ ಜೀವಂತವಾಗಿಡುವ ಪ್ರಯತ್ನ ನಿರಂತರವಾಗಿ ಮಾಡಿಕೊಂಡು ಬಂದಿದ್ದಾರೆ.

ಈ ನಡುವೆ ಪಂಚರಾಜ್ಯ ಚುನಾವಣೆಯ ನೆಪದಲ್ಲಿ ಈ ಎಲ್ಲವನ್ನು ಬದಿಗಿಟ್ಟು ಚುನಾವಣೆ ಕೆಲಸ ಮಾಡಿ ಎನ್ನುವ ಸಂದೇಶವನ್ನು ಹೈಕಮಾಂಡ್ ನೀಡಿದ ಬಳಿಕ ಮೌನಕ್ಕೆ ನಾಯಕರಿಬ್ಬರು ಶರಣಾದರು. ನಾಯಕರು ಮೌನಕ್ಕೆ ಶರಣಾದರೂ ಅವರ ಬೆಂಬಲಿಗರು, ಆಪ್ತರು ವಿವಾದವನ್ನು ಜೀವಂತವಾಗಿಡಲು ದಿನಕ್ಕೊಂದು ಹೇಳಿಕೆ ನೀಡಿಕೊಂಡೇ ಬಂದಿದ್ದಾರೆ. ಡಿ.ಕೆ.ಶಿವಕುಮಾರ್ ಆಪ್ತರು, ಡಿಕೆ ಜನ್ಮದಿನಕ್ಕೆ ಬರ್ತ್‌ಡೇ 'ಗಿಫ್ಟ್' ಸಿಗಲಿದೆ ಎಂದು ಹೇಳಿಕೊಳ್ಳುತ್ತಿದ್ದರೆ, ಇನ್ನೊಂದೆಡೆ ಸಿದ್ದರಾಮಯ್ಯ ಅವರು ಅಹಿಂದ ಯಾತ್ರೆ, ಸರಕಾರಕ್ಕೆ ಮೂರು ವರ್ಷ ಎನ್ನುವ ಸಂಭ್ರಮಾಚರಣೆಗೆ ಸಕಲ ಸಿದ್ಧತೆ ಆರಂಭಿಸಿದ್ದಾರೆ. ಎರಡೂ ಕಡೆಯಿಂದ ದಿನಕ್ಕೊಂದು ಹೇಳಿಕೆ ನೀಡುತ್ತಿದ್ದರೂ, ಸಿದ್ದು-ಡಿಕೆ ಮಾತ್ರ ಇದಕ್ಕೂ ನಮಗೂ ಸಂಬಂಧವಿಲ್ಲ ಎನ್ನುವ ರೀತಿಯಲ್ಲಿ ವರ್ತಿಸುತ್ತಿದ್ದಾರೆ. ಸಿದ್ದರಾಮಯ್ಯನವರಂತೂ ಕಳೆದೊಂದು ವಾರದಿಂದ ಯಾವುದೇ ಪ್ರತಿಕ್ರಿಯೆ ನೀಡದೇ 'ಮೌನ'ವಾಗಿದ್ದುಕೊಂಡೇ ತಮ್ಮ ದಾಳವನ್ನು ಉರುಳಿಸುವಲ್ಲಿ ನಿರತರಾಗಿದ್ದಾರೆ. ಆದರೆ ಈಗ ಹೂಡಿರುವ ದಾಳ ಯಾರಿಗೆ ಲಾಭ ಎನ್ನುವುದು ಮಾತ್ರ ತಿಳಿಯುತ್ತಿಲ್ಲ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಥವಾ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಬ್ಬರೂ ತಮ್ಮ ತಮ್ಮ ನಡೆಯ ಗುಟ್ಟನ್ನು ಬಿಟ್ಟುಕೊಡುತ್ತಿಲ್ಲ. ತಮ್ಮ ಆಪ್ತರ ಮೂಲಕ ದಾಳಗಳನ್ನು ಉರುಳಿಸುತ್ತಿದ್ದರೂ, ಆ ದಾಳಗಳು ಸರಿಯಾದ ದಾರಿಯಲ್ಲಿಯೇ ಸಾಗುತ್ತಿವೆಯೇ ಎನ್ನುವ ಬಗ್ಗೆ ಸ್ಪಷ್ಟನೆ ಆಪ್ತರಿಗೂ ನೀಡುತ್ತಿಲ್ಲ. ಅದರಲ್ಲಿಯೂ ಕಳೆದ ವಾರ ದೆಹಲಿಗೆ ತೆರಳಿದ್ದ ಡಿ.ಕೆ. ಶಿವಕುಮಾರ್, ತಮ್ಮೊಂದಿಗೆ ತಮ್ಮ ಸಹೋದರ ಡಿ.ಕೆ.ಸುರೇಶ್ ಅವರ ಹೊರತಾಗಿಯೂ ಇನ್ಯಾರನ್ನು ಕರೆದುಕೊಂಡು ಹೋಗದೇ ಇರುವುದು, ಅಲ್ಲಿ ಯಾವ ನಾಯಕರನ್ನು ಭೇಟಿಯಾಗಿದ್ದಾರೆ ಎನ್ನುವ ಬಗ್ಗೆ ಸ್ಪಷ್ಟನೆ ನೀಡದೇ ಇರುವುದರ ಹಿಂದೆ ರಾಜಕೀಯ ಲೆಕ್ಕಾಚಾರಗಳಿವೆ ಎನ್ನುವುದು ಸ್ಪಷ್ಟ.

ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಅವರನ್ನು ಭೇಟಿಯಾಗುವ ಕಾರಣಕ್ಕೆ ದೆಹಲಿಗೆ ತೆರಳುತ್ತಿರುವುದಾಗಿ ಡಿ.ಕೆ. ಶಿವಕುಮಾರ್ ತಮ್ಮ ಆಪ್ತರ ಬಳಿ ಹೇಳಿಕೊಂಡು ಹೋಗುವಾಗಲೇ ಅವರಿಗೆ ಅಲ್ಲಿ ರಾಹುಲ್ ಸಿಗುವುದಿಲ್ಲ ಎನ್ನುವ ಖಾತ್ರಿ ಇತ್ತು. ಆದರೂ ದೆಹಲಿಗೆ ಹೋಗಿದ್ದು, ಎರಡು ದಿನ ಅಲ್ಲಿಯೇ ಉಳಿದುಕೊಳ್ಳುವುದರ ಹಿಂದಿನ ಕಾರಣವೇ ಮೌನವಾಗಿಯೇ 'ಸಂದೇಶ' ರವಾನೆ ಮಾಡುವುದಾಗಿತ್ತು. ಪಂಚರಾಜ್ಯ ಚುನಾವಣಾ ಫಲಿತಾಂಶದ ಹೊಸ್ತಿಲಿನಲ್ಲಿ ಕರ್ನಾಟಕ ನಾಯಕತ್ವದ ಬಗ್ಗೆ ಚರ್ಚಿಸಿದರೆ ಅದು ಪಕ್ಷದ ನಾಯಕರ ಮನಸ್ಸಿಗೆ ನಾಟುವುದಿಲ್ಲ ಎನ್ನುವುದು ಡಿಕೆಶಿಗೆ ತಿಳಿದಿರಲಿಲ್ಲ ಎಂದೇನಿಲ್ಲ. ಆದರೂ ದೆಹಲಿ ಭೇಟಿಯ ಹಿಂದೆ ನೀಡಬೇಕಾಗಿರುವ ಸಂದೇಶವನ್ನು ನೀಡಿ ವಾಪಸಾಗುವುದಷ್ಟೇ ಆಗಿತ್ತು. ದೆಹಲಿಯಲ್ಲಿ ಮಲ್ಲಿಕಾರ್ಜುನ ಖರ್ಗೆ, ಕೆ.ಸಿ. ವೇಣುಗೋಪಾಲ್ ಭೇಟಿಯ ಹಿಂದೆ ಇದೇ ರಣತಂತ್ರವಿತ್ತು ಎನ್ನುವುದನ್ನು ಬಿಡಿಸಿ ಹೇಳಬೇಕಿಲ್ಲ.

ಡಿಕೆ ಸಹೋದರರು ಮಲ್ಲಿಕಾರ್ಜುನ ಖರ್ಗೆ ಅವರೊಂದಿಗೆ ಚರ್ಚಿಸುವ ವೇಳೆ, 2023ರ ಚುನಾವಣೆಯ ಬಳಿಕ ಖರ್ಗೆ ನಿವಾಸದಲ್ಲಿ ನಡೆದ ಗೌಪ್ಯ ಸಭೆಯ ವೇಳೆ ನೀಡಿದ್ದ 'ಭರವಸೆ'ಗಳನ್ನು ಪ್ರಸ್ತಾಪಿಸಿದ್ದಾರೆ ಎನ್ನಲಾಗಿದೆ. ಮುಖ್ಯಮಂತ್ರಿ ಸ್ಥಾನದ ಮೇಲೆ ಕ್ಲೇಮ್ ಮಾಡುತ್ತಿರುವ ಡಿ.ಕೆ.ಶಿವಕುಮಾರ್ ಅವರು, ರಾಹುಲ್ ಗಾಂಧಿ ಅವರು ಮೈಸೂರಿಗೆ ಆಗಮಿಸಿದಾಗ ವಿಷಯ ಪ್ರಸ್ತಾಪಿಸಿದ್ದು, 'ವಿಲ್ ಕಾಲ್ ಯೂ ಸೂನ್' ಎನ್ನುವ ಭರವಸೆಯನ್ನು ರಾಹುಲ್ ನೀಡಿದ್ದು ಸಾರ್ವಜನಿಕ ವಲಯದಲ್ಲಿರುವ ವಿಷಯ. ಆದರೆ ದೆಹಲಿ ಮೂಲಗಳ ಪ್ರಕಾರ, ರಾಹುಲ್ ಗಾಂಧಿ ಅವರ ಮಟ್ಟದಲ್ಲಿ ಈವರೆಗೆ ನಾಯಕತ್ವ ಬದಲಾವಣೆ ವಿಷಯದ ಬಗ್ಗೆ ಗಂಭೀರ ಚರ್ಚೆಗಳೇ ನಡೆದಿಲ್ಲ. ನನ್ನ ಬಳಿ ಯಾವುದೇ ಚರ್ಚೆಗಳು ನಡೆಯದೇ ಇರುವಾಗ ಅದರ ಬಗ್ಗೆ ನಾನೇಕೆ ತಲೆಕೆಡಿಸಿಕೊಳ್ಳಲಿ ಎನ್ನುವ ಮನಸ್ಥಿತಿಯಲ್ಲಿ ರಾಹುಲ್ ಗಾಂಧಿ ಇದ್ದರಂತೆ.

ಇದಕ್ಕೆ ಪೂರಕ ಎನ್ನುವಂತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು 'ಸಿಎಂ ಬದಲಾವಣೆ ಪ್ರಸ್ತಾಪವೇ ಇಲ್ಲ' ಎಂದು ಕಲಬುರಗಿಯಲ್ಲಿ ಹೇಳಿದ್ದಾರೆ. ಶಾಸಕ, ಸಚಿವರ ಪರೇಡ್, ಡಿಕೆಶಿ-ಸಿದ್ದರಾಮಯ್ಯ ಮೌನದಾಟದ ನಡುವೆ ಮುಖ್ಯಮಂತ್ರಿ ಬದಲಾವಣೆ ವಿಷಯದಲ್ಲಿ ಹೈಕಮಾಂಡ್ ನಿಲುವೇನು ಎನ್ನುವ ಕುತೂಹಲ ಅನೇಕರಲ್ಲಿತ್ತು. ಆದರೆ ಈ ಎಲ್ಲ ಕುತೂಹಲಗಳಿಗೆ ಕಲಬುರಗಿಯಿಂದಲೇ ಸ್ಪಷ್ಟನೆ ನೀಡಿದ್ದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಮುಖ್ಯಮಂತ್ರಿ ಬದಲಾವಣೆ ವಿಷಯದಲ್ಲಿ ಯಾವುದೇ ಚರ್ಚೆಗಳು ನಡೆದಿಲ್ಲ ಎಂದಿದ್ದರು. ಅದಾದ ಮರುದಿನವೇ 'ರಾಜ್ಯದಲ್ಲಿ ನಾಯಕತ್ವ ಬದಲಾವಣೆಯ ಬಗ್ಗೆ ಸದ್ಯಕ್ಕೆ ಯಾವುದೇ ದಿನಾಂಕ ನಿಗದಿಯಾಗಿಲ್ಲ. ಈ ಕುರಿತ ಅಂತಿಮ ನಿರ್ಧಾರವನ್ನು ಪಕ್ಷದ ಹೈಕಮಾಂಡ್ ತೆಗೆದುಕೊಳ್ಳಲಿದೆ' ಎನ್ನುವ ಮೂಲಕ ಈ ವಿಷಯ ಸದ್ಯಕ್ಕೆ ಅಪ್ರಸ್ತುತ ಎನ್ನುವ ಸಂದೇಶ ರವಾನಿಸಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ ಅವರು ಈ ಹೇಳಿಕೆ ನೀಡುವ ಮೊದಲು ಡಿ.ಕೆ.ಶಿವಕುಮಾರ್ ಅವರು ದೆಹಲಿಯಲ್ಲಿ ನಿಂತು 'ನಾನು ಇಲ್ಲಿ ಗಾಳಿ ಕುಡಿಯಲು ಬಂದಿಲ್ಲ. ಪಕ್ಷದ ನಾಯಕರನ್ನು ಭೇಟಿಯಾಗಲು ಬಂದಿದ್ದೇನೆ. ಯಾರನ್ನು ಭೇಟಿಯಾದೆ ಎನ್ನುವುದನ್ನು ಬಹಿರಂಗಪಡಿಸುವುದಿಲ್ಲ' ಎನ್ನುವ ಮೂಲಕ ನಾಯಕತ್ವ ಬದಲಾವಣೆಯ ವಿಷಯ ಜೀವಂತವಾಗಿಡುವ ಪ್ರಯತ್ನವನ್ನು ಮಾಡಿದ್ದರು. ಇದರೊಂದಿಗೆ ಸಿದ್ದರಾಮಯ್ಯ ಬಣಕ್ಕಿಂತ ಒಂದು ಹೆಜ್ಜೆ ಮುಂದಿದ್ದೇವೆ ಎನ್ನುವ ಸಂದೇಶ ರವಾನಿಸಲು ಪ್ರಯತ್ನಿಸಿದ್ದರು. ಇದರ ಬೆನ್ನಲ್ಲೇ, ಸತೀಶ್ ಜಾರಕಿಹೊಳಿ, ಮಹದೇವಪ್ಪ ದೆಹಲಿ ಪರೇಡ್ ನಡೆಸಿ 'ಅಹಿಂದ' ವರ್ಗದವರನ್ನು ಪಕ್ಷದ ಕೆಪಿಸಿಸಿ ಅಧ್ಯಕ್ಷರನ್ನಾಗಿ ಮಾಡಿ ಎಂದರೆ, ಬೆಂಗಳೂರಿನಲ್ಲಿಯೇ ಕೂತು ಮಲ್ಲಿಕಾರ್ಜುನ ಖರ್ಗೆ ಅವರನ್ನು ಸಿಎಂ ಮಾಡಿದರೆ ಅಭ್ಯಂತರವಿಲ್ಲ ಎನ್ನುವ ಸಂದೇಶವನ್ನು ಗೃಹ ಸಚಿವ ಡಾ.ಜಿ. ಪರಮೇಶ್ವರ ಅವರ ಮೂಲಕ ಪಕ್ಷದ ಹೈಕಮಾಂಡ್‌ಗೆ ಕಳುಹಿಸುವ ಪ್ರಯತ್ನ ಮಾಡಿದರು. ಇಷ್ಟೆಲ್ಲ ಚರ್ಚೆಗಳ ಹೊರತಾಗಿಯೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೌನಕ್ಕೆ ಶರಣಾಗಿರುವುದು ಹಲವು ರೀತಿಯ ವಿಶ್ಲೇಷಣೆಗೆ ಮುನ್ನುಡಿ ಬರೆದಿದೆ ಎಂದರೆ ತಪ್ಪಾಗುವುದಿಲ್ಲ.

ಈ ಎಲ್ಲದರ ಹೊರತಾಗಿಯೂ ಪಂಚರಾಜ್ಯ ಚುನಾವಣೆಯಲ್ಲಿ ತಕ್ಕಮಟ್ಟಿಗೆ ಸೀಟುಗಳಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದ್ದರೆ ಆ ಖುಷಿಯಲ್ಲಿ ಯಾವುದಾದರೂ ತೀರ್ಮಾನ ಕೈಗೊಳ್ಳುವ ರಿಸ್ಕ್ ತೆಗೆದುಕೊಳ್ಳುವ ಸಾಧ್ಯತೆಯಿತ್ತು. ಅದರಲ್ಲಿಯೂ ಅಸ್ಸಾಂ ವಿಧಾನಸಭಾ ಚುನಾವಣಾ ಉಸ್ತುವಾರಿಯಾಗಿದ್ದ ಡಿ.ಕೆ. ಶಿವಕುಮಾರ್, ಆ ಗೆಲುವನ್ನೇ ಮುಂದಿಟ್ಟುಕೊಂಡು ಮತ್ತೊಮ್ಮೆ ಕೂಲಿ ಕೇಳುವ ಮಹತ್ವಾಕಾಂಕ್ಷೆ ಹೊಂದಿದ್ದರು. ಆದರೆ ಅಸ್ಸಾಂನಲ್ಲಿ 16-17ರ ಆಸುಪಾಸಿಗೆ ಬಂದು ನಿಂತಿರುವುದರಿಂದ ಆ ಕೂಲಿಯನ್ನು ಕೇಳಲು ಸಾಧ್ಯವಿಲ್ಲ. ಪಂಚರಾಜ್ಯ ಚುನಾವಣೆಯ ಫಲಿತಾಂಶದ ಬಗ್ಗೆ ಕಾಂಗ್ರೆಸ್ ನಾಯಕರು ಯಾವುದೇ ಹೇಳಿಕೆ ನೀಡಲಿ, ಪಶ್ಚಿಮ ಬಂಗಾಳ, ಅಸ್ಸಾಂ ಪುದುಚೇರಿಯಲ್ಲಿ ಕಾಂಗ್ರೆಸ್ ಯಾವುದೇ ನಿರೀಕ್ಷೆಯನ್ನಿಟ್ಟುಕೊಂಡಿರಲಿಲ್ಲ. ಇನ್ನು ಕೇರಳದಲ್ಲಿ ನಿರೀಕ್ಷೆಯಂತೆ ಯುಡಿಎಫ್ ಮೈತ್ರಿಯಲ್ಲಿ ಅಧಿಕಾರದ ಗದ್ದುಗೆ ಹಿಡಿದಿದೆ. ತಮಿಳುನಾಡಿನಲ್ಲಿ ಎಲ್ಲರ ನಿರೀಕ್ಷೆ ಮೀರಿ ವಿಜಯ್ ಪಕ್ಷ ಅಧಿಕಾರದ ಗದ್ದುಗೆ ಹಿಡಿದಿರುವುದರಿಂದ ಕಾಂಗ್ರೆಸ್‌ಗೆ ಬಹುದೊಡ್ಡ ಲಾಸ್ ಎನ್ನುವುದೇನು ಆಗಿಲ್ಲ. ಆದರೆ ಈ ಚುನಾವಣೆಯ ಫಲಿತಾಂಶವನ್ನು ಮುಂದಿಟ್ಟುಕೊಂಡು ಕರ್ನಾಟಕ ರಾಜಕೀಯ ವಿಷಯದಲ್ಲಿ ಹೈಕಮಾಂಡ್ ಕೆಲ ದಿನಗಳ 'ಮೌನ' ಮುಂದುವರೆಸಿದರೂ ಅಚ್ಚರಿ ಪಡಬೇಕಿಲ್ಲ.

ಏಕೆಂದರೆ, ದೇಶದ ಬಹುಪಾಲು ರಾಜ್ಯಗಳಲ್ಲಿ ನೆಲೆ ಕಳೆದುಕೊಂಡಿರುವ ಕಾಂಗ್ರೆಸ್ ಪಾಲಿಗೆ ಕರ್ನಾಟಕ 'ಆಮ್ಲಜನಕ' ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ. ಕರ್ನಾಟಕ ಹೊರತುಪಡಿಸಿ ತೆಲಂಗಾಣ, ಹಿಮಾಚಲ ಪ್ರದೇಶದಲ್ಲಿ ಸ್ವತಂತ್ರವಾಗಿ ಅಧಿಕಾರದಲ್ಲಿದೆ. ಆದರೆ 'ಸಂಪನ್ಮೂಲ'ದ ಲೆಕ್ಕದಲ್ಲಿ ತೆಲಂಗಾಣ, ಹಿಮಾಚಲ ಪ್ರದೇಶ ರಾಜ್ಯಗಳು ಹೇಳಿಕೊಳ್ಳುವಷ್ಟು ಸ್ಥಿತಿಯಲ್ಲಿಲ್ಲ. ಆದ್ದರಿಂದ ಕರ್ನಾಟಕದಲ್ಲಿರುವ ಕಾಂಗ್ರೆಸ್ ಸರಕಾರಕ್ಕೆ ಸಣ್ಣ ಏರುಪೇರಾದರೂ ಅದರ ನೇರ ಹೊಡೆತ ಕಾಂಗ್ರೆಸ್‌ನ ಒಟ್ಟಾರೆ ಲೆಕ್ಕಾಚಾರದ ಮೇಲೆ ಆಗುತ್ತದೆ. ಸದ್ಯದ ಪರಿಸ್ಥಿತಿಯಲ್ಲಿ ಕಾಂಗ್ರೆಸ್‌ಗೆ ಪೂರಕವಾಗಿರುವ ಇನ್ನೊಂದು ರಾಜ್ಯ ಕಾಣಿಸುತ್ತಿಲ್ಲ. ಆದ್ದರಿಂದ ಕರ್ನಾಟಕದಲ್ಲಿ ನಾಯಕತ್ವ ಬದಲಾಯಿಸಿದರೂ, ಬದಲಾಯಿಸದಿದ್ದರೂ ಸಮಸ್ಯೆ. ಇದೇ ರೀತಿ ಸಂಪುಟ ಪುನಾರಚನೆ ಮಾಡಿದರೂ ಹೊಡೆತ, ಮಾಡದೇ ಮುಂದೂಡಿದರೂ ಹೊಡೆತ ಎನ್ನುವ ಅರಿವು ದೆಹಲಿ ನಾಯಕರಿಗೆ. ಅದರಿಂದ ಆಗಬಹುದಾದ ಲಾಭ-ನಷ್ಟವನ್ನು ಭರಿಸುವ, ನಿಭಾಯಿಸುವ ಶಕ್ತಿ ಇಂದಿನ ಹೈಕಮಾಂಡ್‌ಗೆ ಇದೆಯೇ? ಎನ್ನುವುದೇ ಈಗಿರುವ ಯಕ್ಷಪ್ರಶ್ನೆ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಪ್ರಗತಿ ಹಾಗೂ ಶಾಂತಿ ನೆಲೆಸಲಿ

ಬಂಗಾಳ ಸ್ವಾತಂತ್ರ್ಯ ಕಾಲದಿಂದಲೂ ಹೋರಾಟ, ಕ್ರಾಂತಿಗೆ ಒಂದು ಹೆಜ್ಜೆ ಮುಂದ. ಅಲ್ಲಿಯ ಸಾಹಿತ್ಯ, ಧಾರ್ಮಿಕತೆ, ಆಧ್ಯಾತ್ಮಿಕತೆ ಪ್ರತಿಯೊಂದೂ ಮುಂದು. ಆಧ್ಯಾತ್ಮಿಕತೆ ಹಾಗೂ ಸಮಾಜ ಸುಧಾರಣೆಯಲ್ಲಿ ಚೈತನ್ಯ ಮಹಾಪ್ರಭುಗಳು, ರಾಮಕೃಷ್ಣ ಪರಮಹಂಸರು, ಮಾತೆ ಶಾರದಾದೇವಿಯವರು, ಸ್ವಾಮಿ ವಿವೇಕಾನಂದರು ಅಗ್ರಗಣ್ಯರು. ನೊಬೆಲ್ ಪ್ರಶಸ್ತಿ ವಿಜೇತ ರವೀಂದ್ರನಾಥ್ ಠಾಗೋರ್ ಆಗಿರಬಹುದು, ವಂದೇಮಾತರಂ ಖ್ಯಾತಿಯ ಬಂಕಿಮಚಂದ್ರ ಚಟರ್ಜಿ ಆಗಿರಬಹುದು, ಸಮಾಜ ಸುಧಾರಕ ಕೇಶವ ಚಂದ್ರಸೇನ, ನಾಟಕಕಾರ ಗಿರೀಶ್ ಚಂದ್ರ ಘೋಷ್ ಹೀಗೆ ಅನೇಕರು ಬಂಗಾಳದಲ್ಲಿ ಜನಿಸಿ ತಮ್ಮ ಹೆಜ್ಜೆ ಗುರುತನ್ನು ಮೂಡಿಸಿದ್ದಾರೆ. ಕಳೆದ ಹಲವಾರು ದಶಕಗಳಿಂದ ಪಶ್ಚಿಮ ಬಂಗಾಳ ಬೆಂಕಿಯ ಉಂಡೆಯಂತಿತ್ತು. ನಕ್ಸಲಿಸಂ ಹುಟ್ಟಿದ್ದೇ ಬಂಗಾಳದಲ್ಲಿರುವ ನಕ್ಸಲ್‌ಬಾರಿ ಗ್ರಾಮದ ಬಳಿ. ಅಲ್ಲಿಯ ರಾಜಕೀಯ ಅಷ್ಟೇ ಪ್ರಚಂಡ ಬಿರುಗಾಳಿ ಥರ. ಬಂಗಾಳದಲ್ಲಿ ಈಗ ಬರುತ್ತಿರುವ ಹೊಸ ಸರ್ಕಾರ ಅಭಿವೃದ್ಧಿಗೆ ಆದ್ಯತೆ ಕೊಟ್ಟು ಜನರು ಶಾಂತಿ, ನೆಮ್ಮದಿಯಿಂದ ನೆಲೆಸುವಂತಾಗಲಿ. ಬಂಗಾಳದಲ್ಲಿ ಪ್ರಗತಿಯ ಕಾಂತಿ ಹೆಚ್ಚೆಚ್ಚು ಆಗಲಿ.

- ಎಂ.ಪರಮೇಶ್ವರ, ಮದ್ದಿಹಳ್ಳಿ, ಹಿರಿಯೂರು

ಬದಲಾವಣೆಯೇ ಉಸಿರು

ಪಂಚ ರಾಜ್ಯಗಳ ಚುನಾವಣೆ ಫಲಿತಾಂಶ ಗ್ರಹಿಸಿದಾಗ ಇದು ಪ್ರಜಾಪ್ರಭುತ್ವದ ಶಕ್ತಿಯನ್ನು ತೋರ್ಪಡಿಸುತ್ತದೆ. ಪ್ರತಿಯೊಬ್ಬರೂ ಆಡಳಿತ ಪಕ್ಷದ ವೈಖರಿಗೆ ರೋಸಿ ಹೋಗಿದ್ದರೆನಿಸುತ್ತದೆ. ಹೊಸ ನಾಯಕತ್ವದ ನಿರೀಕ್ಷೆಯಲ್ಲಿ ಪ್ರಜೆಗಳು ಮತ ಚಲಾಯಿಸಿದ್ದಾರೆ. ಮತದಾನ ಪ್ರಜಾಪ್ರಭುತ್ವದ ಪ್ರಬಲ ಅಸ್ತ್ರವೆಂದು ಮತ್ತೊಮ್ಮೆ ಸಾಬೀತಾಗಿದೆ. ಜನರು ಪೂರ್ಣ ಪ್ರಮಾಣದಲ್ಲಿ ಮತದಾನ ಮಾಡಿದರೆ ಬೇರು ಬಿಟ್ಟಿರುವ ರಾಜಕೀಯ ಪಕ್ಷಗಳಿಗೆ ನಡುಕ ಉಂಟಾದೀತು. ಹೊಸ ಪಕ್ಷಗಳ ಮೇಲೆ ಭರವಸೆ ಇಟ್ಟ ಜನರ ನಂಬಿಕೆಯನ್ನು ಉಳಿಸಿಕೊಂಡರಷ್ಟೇ ಗೆದ್ದವರಿಗೆ ಉಳಿಗಾಲ. ಚುನಾವಣೆ ಪ್ರತಿ ಸಲ ಏಕಮುಖವಾಗದೆ ವಿವಿಧ ಆಯಾಮಗಳಿಂದ ಹೊಸತನವನ್ನು ಹುಡುಕಿಕೊಳ್ಳಬೇಕೆಂಬುದಕ್ಕೆ ಈ ಚುನಾವಣೆ ಸಾಕ್ಷಿ ಆಯಿತು. ತಮಿಳುನಾಡಿನಲ್ಲಿ ಪ್ರಾದೇಶಿಕ ಪಕ್ಷ ಗೆಲುವು ಸಾಧಿಸಿದೆ. ಹೀಗೆ ಕರ್ನಾಟಕಕ್ಕೆ ಇಂಥದೊಂದು ಪ್ರಾದೇಶಿಕ ಪಕ್ಷದ ಕೊರತೆ ಬಹಳಷ್ಟು ಇದೆ. ಕನ್ನಡಿಗರ ಪ್ರೇಮ ಕೇವಲ ಸಾಹಿತ್ಯ, ಸಂಸ್ಕೃತಿಗೆ ಸೀಮಿತವಾಗದೆ ಕರ್ನಾಟಕದ ಹೊಸ ರಾಜಕೀಯ ಪ್ರಾದೇಶಿಕ ಪಕ್ಷಕ್ಕೂ ಕೂಡ ಜನ ಮನ್ನಣೆ ಕೊಡುವಂತಾಗಲಿ. ಬದಲಾವಣೆ ಪ್ರಜಾಪ್ರಭುತ್ವದ ಉಸಿರಾಗಿ ನಮ್ಮೆಲ್ಲರ ಬದುಕು ಹಸಿರಾಗಲಿ.

- ರಾಜೇಂದ್ರಕುಮಾರ್ ಮುದ್ನಾಳ್, ಯಾದಗಿರಿ

ಯುವ ನಾಯಕರಿಗೆ ಪಾಠ

ದಶಕದಿಂದ ರಾಜಕಾರಣದಲ್ಲಿದ್ದು ತಮ್ಮ ಛಾಪು ಮೂಡಿಸಲು ಯತ್ನಿಸುತ್ತಿರುವ ರಾಹುಲ ಗಾಂಧಿ ಅವರು ದೇಶಾದ್ಯಂತ ಸುತ್ತಾಡಿದರೂ ಪಾದಯಾತ್ರೆ ಮಾಡಿದರೂ ಯಾವುದೇ ಗೆಲುವನ್ನು ತಮ್ಮ ಪಕ್ಷಕ್ಕೆ ತಂದುಕೊಡಲು ಆಗಿಲ್ಲ. ಅದೇ ತಮಿಳುನಾಡಿನಲ್ಲಿ ನಟ ವಿಜಯ ಇನ್ನೂ ಪಕ್ಷ ರಾಜಕಾರಣಕ್ಕೆ ಇಳಿದು ಎರಡು ವರ್ಷವೂ ಆಗಿಲ್ಲ. ಆಗಲೇ ಸ್ವಂತ ಪಕ್ಷ ಗೆಲ್ಲಿಸಿ ಮುಖ್ಯ ಮಂತ್ರಿಯೂ ಆಗುವ ಮಟ್ಟಕ್ಕೇರಿದರು. ರಾಜಕೀಯಕ್ಕೆ ಇಳಿ ಯುವ ಯುವ ನಾಯಕರು ಇದರಿಂದ ಪಾಠ ಕಲಿಯಬೇಕಿದೆ.

- ನವರತ್ನ ಸೋಮು, ಬೈಲಹೊಂಗಲ

ಓದುಗರ ಓಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಶತಕವಂಚಿತ ರಾಹುಲ್ ಗಾಂಧಿಯೇ ಅಸಲಿ ಧುರಂಧರ್!

ಪದಸಾಗರ

ನವೀನ್ ಸಾಗರ್
vveditoped@gmail.com

ಪಂಚರಾಜ್ಯಗಳ ಚುನಾವಣೆಯ ಫಲಿತಾಂಶ ಹೊರಬಿದ್ದಿದೆ. ಕೆಲವು ಕಡೆ ನಿರೀಕ್ಷೆಗಳು ಫಲ ಕೊಟ್ಟಿದ್ದರೆ, ಕೆಲವು ಕಡೆ ನಿರೀಕ್ಷೆಯಂತೆ ನಡೆದಿದೆ. ಒಂದು ಕಡೆ ನಿರೀಕ್ಷೆ ತಲೆಕೆಳಗಾಗಿದೆ. ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ ಹಾಗೂ ಕಮ್ಯುನಿಸ್ಟರ ನಂತರ ಅತಿ ಹೆಚ್ಚು ವರ್ಷ ಅಧಿಕಾರ ನಡೆಸಿದ್ದ ಮಮತಾ ದೀದಿಯ ದುರಾಡಳಿತ ಕೊನೆಗೊಂಡಿದೆ. ತಮಿಳುನಾಡಿನಲ್ಲಿ ಹಿಂದೂ ಧರ್ಮ ವಿರೋಧಿ, ಭ್ರಷ್ಟ ಮತ್ತು ಗೂಂಡಾ ಸರಕಾರ ಎಂದೇ ಕೆಂಗಣ್ಣಿಗೆ ಗುರಿಯಾಗಿದ್ದ ಡಿಎಂಕೆ, ಆಡಳಿತ ವಿರೋಧಿ ಅಲೆಯ ಜತೆಗೆ ನಟ ವಿಜಯ್‌ನ ಅಬ್ಬರಕ್ಕೆ ತರಗೆಲೆಯಂತೆ ಉದುರಿಹೋಗಿದೆ.

ಈ ನಡುವೆ ಬಿಜೆಪಿ ಬೆಂಬಲಿಗರು, ವಿಜಯ್‌ರನ್ನು ಬಿಜೆಪಿಯ ಸೀಕ್ರೆಟ್ ಏಜೆಂಟ್, ಧುರಂಧರ್ ಎಂದು ಬಿಂಬಿಸುತ್ತಿದ್ದಾರೆ. ವಿಜಯ್ ರಾಜಕೀಯಕ್ಕೆ ಬರಲು, ಹೊಸ ಪಕ್ಷ ಕಟ್ಟಲು ಬಿಜೆಪಿಯ ತಂತ್ರಗಾರಿಕೆ ಇತ್ತು ಎಂದೆಲ್ಲ ಬಣ್ಣಿಸಲು ಪ್ರಾರಂಭಿಸಿದ್ದಾರೆ. ಆದರೆ ಅದು ತಲೆಬುಡವಿಲ್ಲದ ಕಥೆ. ವಿಜಯ್ ಎಂದಿಗೂ ಬಿಜೆಪಿಯ ಸಿದ್ಧಾಂತವನ್ನು ಪ್ರತಿಪಾದಿಸಿಲ್ಲ, ಬೆಂಬಲಿಸಿಯೂ ಇಲ್ಲ, ಆತನಿಂದ ಮುಂದೆಯೂ ಬಿಜೆಪಿ ಪರ ನಿಲುವು ಕಾಣುವುದು ಅನುಮಾನ. ರಾಜಕೀಯ ಕಾರಣಗಳಿಗೆ ತಾತ್ಕಾಲಿಕ ಮೈತ್ರಿ ಏರ್ಪಡಬಹುದೇ ಹೊರತು ಅದಕ್ಕಿಂತ ಹೆಚ್ಚು ವಿಜಯ್‌ನಿಂದ ಬಿಜೆಪಿ ಏನನ್ನೂ ನಿರೀಕ್ಷಿಸಲು ಸಾಧ್ಯವಿಲ್ಲ. ಆತನ ಪಕ್ಷ ತಮಿಳುನಾಡಿಗೆ ಸೀಮಿತಗೊಳ್ಳುವ ಪ್ರಬಲ ಪ್ರಾದೇಶಿಕ ಪಕ್ಷವಾಗಿ ಬೆಳೆಯುತ್ತದೆ, ರಾಷ್ಟ್ರ ರಾಜಕಾರಣದಲ್ಲಿ ನಿರ್ಣಾಯಕ ಪಾತ್ರ ವಹಿಸುವ ಪ್ರಯತ್ನ ಮಾಡುತ್ತದೆಯೇ ವಿನಾ, ಬಿಜೆಪಿ ಅಥವಾ ಕಾಂಗ್ರೆಸ್‌ನಂಥ ರಾಷ್ಟ್ರೀಯ ಪಕ್ಷಗಳ ಮರ್ಜಿಗೆ ಬೀಳುವುದಿಲ್ಲ.

ಏತನ್ಮಧ್ಯೆ ರಾಹುಲ್ ಗಾಂಧಿ ತಮ್ಮ ಚುನಾವಣಾ ಸೋಲಿನ ಸಂಖ್ಯೆ ಬರೋಬ್ಬರಿ ತೊಂಬತ್ತೊಂಬತ್ತಕ್ಕೆ ಏರಿಸಿಕೊಂಡು ಶತಕ ವಂಚಿತರಾಗಿದ್ದಾರೆ. ಕೇರಳದಲ್ಲೂ ಸೋಲು ಕಂಡುಬಿಟ್ಟಿದ್ದರೆ, ಇದೇ ಚುನಾವಣೆಯಲ್ಲಿ ಅವರು ಶತಸೋಲುಗಳ ಸರದಾರನಾಗಿ ದಾಖಲೆ ಬರೆಯುತ್ತಿದ್ದರು. ಬಿಜೆಪಿ ಪಾಲಿನ ಅಸಲಿ ಧುರಂಧರ್ ಯಾರು ಅಂದರೆ ರಾಹುಲ್ ಗಾಂಧಿ. ರಾಹುಲ್ ಗಾಂಧಿಯ ರಾಜಕೀಯ ಭಾಷಣಗಳು, ರಾಜತಾಂತ್ರಿಕ ನಡೆಗಳು, ಶತ್ರು ರಾಷ್ಟ್ರಗಳ ಜತೆಗಿನ ಗುಪ್ತ ಭೇಟಿ, ಮಾತುಕತೆಗಳು, ಹಾಸ್ಯಾಸ್ಪದವಾದ ಪ್ರತಿವಾದಗಳು, ತೀರಾ ಕೆಳಮಟ್ಟದ ನಾಯಕತ್ವ ಗುಣ ಎಲ್ಲವೂ ಬಿಜೆಪಿ ಪಾಲಿಗೆ ವರವಾಗುತ್ತಲೇ ಹೋಗುತ್ತಿದೆ. ರಾಹುಲ್ ಗಾಂಧಿ ಸಕ್ರಿಯ ರಾಜಕಾರಣದಲ್ಲಿ ಇರುವ ತನಕವೂ ಬಿಜೆಪಿಗೆ ಸೋಲಿನ ಭಯವೇ ಇಲ್ಲ ಎಂಬಂತಾಗಿ ಹೋಗಿದೆ.

ರಾಹುಲ್ ಗಾಂಧಿ ಪ್ರತಿಬಾರಿ ಚುನಾವಣೆಗಳ ನಂತರ ಅಥವಾ ರಿಸಲ್ಟಿನ ಆಸುಪಾಸಿನಲ್ಲಿ ಭಾರತ ಬಿಟ್ಟು ಹಾರುತ್ತಾರೆ. ಅಲ್ಲಿಂದ ಬರುವಾಗ ಹೊಸತೊಂದು ಟೂಲ್ ಕಿಟ್ ಹೊತ್ತು ತರುತ್ತಾರೆ ಅಥವಾ ಅಲ್ಲಿಂದಲೇ ಟೂಲ್ ಕಿಟ್ ಓಪನ್ ಮಾಡುತ್ತಾರೆ. ಪ್ರಸ್ತುತ ಚುನಾವಣಾ ಫಲಿತಾಂಶಗಳು ಹೊರಬೀಳುವ ಹೊತ್ತಲ್ಲಿ ರಾಹುಲ್ ಮಸ್ಕತ್‌ನಲ್ಲಿ ಕೂತು ಕತ್ತಿಮಸೆಯುತ್ತಿದ್ದಾರೆಂಬ ಸುದ್ದಿಯಿದೆ.

ಎರಡು ಮೂರು ದಿನಗಳ ಹಿಂದೆ ರಾಹುಲ್ ಗಾಂಧಿ, ನಿಕೋಬಾರ್ ದ್ವೀಪದಲ್ಲಿ ಕಾಣಿಸಿಕೊಂಡರು. ಏಕಾಏಕಿ ರಾಹುಲ್ ಗಾಂಧಿ ನಿಕೋಬಾರ್ ದ್ವೀಪ ಹೊಕ್ಕು ಭಾವಾವೇಶದಲ್ಲಿ ವಿಡಿಯೋ ಮಾಡಿದ್ದು ಯಾಕೆ? ಇಂಥವೆಲ್ಲ ರಾಹುಲ್ ಗಾಂಧಿಯ ತಲೆಗೆ ತುಂಬಿಸುವವರಾರು? ಹೊಸ ಹೊಸ ವಿಷಯ ಹೆಕ್ಕಿ ಕೊಡುವವರಾರು? ಇದ್ಯಾವುದೂ ರಾಹುಲ್ ಗಾಂಧಿಗೆ ಸ್ವಂತವಾಗಿ ಹೊಳೆಯುವ ವಿಷಯಗಳಂತೂ ಅಲ್ಲ. ರಾಹುಲ್ ಗಾಂಧಿಗೆ ಸ್ವಂತವಾಗಿ ಹೇಳಲು ಬರೋದು ಕೆಲವೇ ಮಾತುಗಳು. ಮೋದೀಜಿಗೆ ನಾನಂದರೆ ಭಯ, ನನ್ನ ಕಣ್ಣಲ್ಲಿ ಕಣ್ಣಿಟ್ಟು ನೋಡಲಾರರು. ಮೋದಿಜಿ ಅಂಬಾನಿಗೆ ಅದಾನಿಗೆ ದೇಶವನ್ನು ಮಾರಿದ್ದಾರೆ. ಮೋದೀಜಿಗೆ ಸಂವಿಧಾನದ ಮೇಲೆ ಗೌರವ ಇಲ್ಲ. ಇಂಥವು ಬಿಟ್ಟು ಇನ್ಯಾವುದೂ ರಾಹುಲ್ ಗಾಂಧಿಯ ಸ್ವಂತ ಮಾತುಗಳಲ್ಲ. ಹಾಗೊಮ್ಮೆ ಸ್ವಂತ ಮಾತಾಡಲು ಬಾಯಿಬಿಟ್ಟರೆ ಬಣ್ಣಗೇಡು ಖಚಿತ. ಹೀಗಿರುವಾಗ ರಾಹುಲ್ ಗಾಂಧಿಯನ್ನು ಆಪರೇಟ್ ಮಾಡುತ್ತಿರುವುದು ಚೀನಾ ಎಂಬ ಒಂದು ಅನುಮಾನ ಬಲಗೊಳ್ಳುತ್ತಿದೆ. ರಾಹುಲ್ ಗಾಂಧಿ ಬಿಜೆಪಿಯ ಧುರಂಧರ್ ಅಲ್ಲ, ಚೀನಾದ ಧುರಂಧರ್ ಎನ್ನಲಾಗುತ್ತಿದೆ. ರಾಹುಲ್ ಗಾಂಧಿಯನ್ನು ಗಂಭೀರವಾಗಿ ತೆಗೆದುಕೊಳ್ಳದಿರಬಹುದು, ಆದರೆ ಚೀನಾವನ್ನು ಗಂಭೀರವಾಗಿ ತೆಗೆದುಕೊಳ್ಳಲೇಬೇಕು.

ಇದಕ್ಕೆ ಪೂರಕವಾಗಿ ಸುಮಾರು ಹದಿನೇಳು ವರ್ಷಗಳ ಇತಿಹಾಸ ಕೆದಕಬೇಕಾಗುತ್ತದೆ. ರಾಹುಲ್ ಚೈನಾ ಕೈಗೊಂಬೆಯಾಗಿ ಭಾರತದ ವಿರುದ್ಧವೇ ಕೆಲಸ ಮಾಡುತ್ತಿದ್ದಾರೆ ಎಂದನಿಸುವುದಕ್ಕೆ ಹಲವು ಪುರಾವೆಗಳು ಕಾಣಸಿಗುತ್ತವೆ. 2008, ಆಗಸ್ಟ್ 7ರಂದು ಚೀನಾದ ಕಮ್ಯುನಿಸ್ಟ್ ಪಾರ್ಟಿಯೊಂದಿಗೆ ನಮ್ಮ ಕಾಂಗ್ರೆಸ್ ಒಂದು ಒಪ್ಪಂದಕ್ಕೆ ಸಹಿ ಹಾಕುತ್ತದೆ. ಅಂಥದ್ದೇನಿತ್ತು ಅವರು ಸಹಿ ಮಾಡಿದ MOUದಲ್ಲಿ ಎಂದು ಇಂದಿಗೂ ಯಾರಿಗೂ ಗೊತ್ತಿಲ್ಲ.

ಒಡಿಶಾದ ನಿಯಾಮಗಿರಿ ಪ್ರದೇಶದಲ್ಲಿ ವೇದಾಂತ ಕಂಪೆನಿ ಅಲ್ಯೂಮಿನಿಯಂ ರಿಫೈನರಿ ನಿರ್ಮಿಸಲು ಮುಂದಾಗಿತ್ತು. ಅಲ್ಯೂಮಿನಿಯಂ ರಕ್ಷಣಾ ಸಾಧನಗಳು ಮತ್ತು ವಿದ್ಯುತ್ ಕ್ಷೇತ್ರಕ್ಕೆ ಅತ್ಯಂತ ಮುಖ್ಯವಾದ ಲೋಹ. ಈ ಯೋಜನೆ ಭಾರತವನ್ನು ಸ್ವಾವಲಂಬಿಯಾಗಿಸಬಹುದಿತ್ತು. ಆದರೆ ರಾಹುಲ್ ಗಾಂಧಿ ಎನ್ಜಿಒಗಳನ್ನು ಮತ್ತು ಪರಿಸರವಾದಿಗಳನ್ನು ಎತ್ತಿಕಟ್ಟಿ ರಿಫೈನರಿ ಆಗದಂತೆ ತಡೆಯುತ್ತಾರೆ. ಚೀನಾದ ಮೇಲಿನ ಭಾರತದ ಅವಲಂಬನೆ ಮುಂದುವರಿಯುತ್ತದೆ. 2005. ಸೆಮಿಕಂಡಕ್ಟರ್ ಕ್ಷೇತ್ರ ಆಗಷ್ಟೇ ಕಣ್ಣುತೆರೆಯ ಲಾರಂಭಿಸಿತ್ತು. ಒಂದು ಪ್ರಮುಖ ಬಹುರಾಷ್ಟ್ರೀಯ ಕಂಪನಿ ಭಾರತದಲ್ಲಿ ಸೆಮಿಕಂಡಕ್ಟರ್ ಘಟಕ ಸ್ಥಾಪಿಸಲು ಮುಂದಾಗಿತ್ತು. ಆದರೆ ಅದಕ್ಕೆ ಮನಮೋಹನ್ ಸಿಂಗ್ ಅವರ ಹಿಂದಿದ್ದ ಅಸಲಿ ಕೈಗಳು ಅನೇಕ ಆಡಳಿತಾತ್ಮಕ ತೊಂದರೆಗಳನ್ನು ನೀಡತೊಡಗಿದವು. ಅಮೆರಿಕದಿಂದ ಆಮದು ಮಾಡಿಕೊಂಡ ಉಪಕರಣಗಳಿಗೆ ಭಾರಿ ಮೊತ್ತದ ಆಮದು ಶುಲ್ಕ, ಇನ್ನಿತರ ಶುಲ್ಕಗಳನ್ನು ಹಾಕಿ ಥರಥರದ ಕಾಟ ಕೊಡಲಾಯಿತು. ಭಾರತದ ಸಹವಾಸವೇ ಬೇಡ ಎನ್ನುವಂತಾದಾಗ, ಚೀನಾ ರೆಡ್ ಕಾರ್ಪೆಟ್ ಹಾಸಿ ಅವರನ್ನು ಕರೆದು ಪ್ರಾಜೆಕ್ಟ್ ಶುರುಮಾಡಿಸಿತು.

ಭಾರೀ ಆಮದು ಸುಂಕಗಳು, ವಿಳಂಬ ಶುಲ್ಕಗಳು ಮತ್ತು ಸರ್ಕಾರದ ಸಹಕಾರದ ಕೊರತೆಯಿಂದಾಗಿ ಕಂಪನಿ ಯೋಜನೆಯನ್ನು ಚೀನಾಕ್ಕೆ ಸ್ಥಳಾಂತರಿಸಿತು. ಇದರೊಂದಿಗೆ ಭಾರತ ಒಂದು ದೊಡ್ಡ ತಾಂತ್ರಿಕ ಅವಕಾಶವನ್ನು ಕಳೆದುಕೊಂಡಿತು. ಭಾರತದ ನಷ್ಟ, ಚೀನಾದ ಲಾಭವಾಯಿತು. ಹೀಗಾಗಲು ಕಾರಣವಾದ ಧುರಂಧರ್ ಯಾರು?

2017 ಜುಲೈ ಎಂಟು. ಭಾರತ ಮತ್ತು ಚೀನಾ ಸೇನೆಗಳು ಸಿಕ್ಕಿಂನ ಡೋಕ್ಲಾಂ ಪ್ರದೇಶದಲ್ಲಿ ಮುಖಾಮುಖಿಯಾದವು. ಸುಮಾರು ಮೂರು ದಿನಗಳ ಕಾಲ ನಡೆದ ಈ ಚಕಮಕಿಯ ಸಮಯದಲ್ಲಿ ರಾಹುಲ್ ಗಾಂಧಿ ದೇಶದ ಪರ ನಿಲ್ಲುವ ಬದಲು ಸರಕಾರದ ವಿರುದ್ಧ ಸತತ ವಾಗ್ದಾಳಿ ಮಾಡುತ್ತಿದ್ದರು. ಈ ಚಕಮಕಿಯ ಬಗ್ಗೆ ಪಾರದರ್ಶಕತೆ ಬೇಕು, ಚೀನಾ ಜತೆ ಸಂಬಂಧ ಕೆಡಿಸ್ಕೊಳ್ಳಬಾರದು ಅಂತೆಲ್ಲ ರಾಹುಲ್ ತಮ್ಮ ವಾಗ್ದಾಳಿಯಲ್ಲಿ ಬಡಬಡಿಸಿದ್ದಲ್ಲದೇ, ಜನರಿಗೆ ಸ್ಪಷ್ಟ ಚಿತ್ರಣ ಕೊಡಿ ಅಂತೆಲ್ಲ ಆಗ್ರಹ ಮಾಡಿದ್ದರು. ಇಲ್ಲಿ ಗಮನಿಸಬೇಕಾದ ವಿಷಯ ಏನೆಂದರೆ ರಾಹುಲ್, ಆ ಸಮಯದಲ್ಲಿ ಚೀನಾ ರಾಯಭಾರಿಯನ್ನು ರಹಸ್ಯವಾಗಿ ಭೇಟಿಯಾಗಿದ್ದರು. ಇದನ್ನು ಶತಾಯಗತಾಯ ಅಲ್ಲಗಳೆದಿದ್ದವರು, ನಂತರ ಅನ್ಯಮಾರ್ಗವಿಲ್ಲದೇ ಭೇಟಿ ಮಾಡಿ ಮಾತನಾಡಿದ್ದು ನಿಜ ಎಂದು ಒಪ್ಪಿಕೊಂಡರು.

ಮೇ 2018. ತಮಿಳುನಾಡಿನ ಸ್ಟೆರ್ಲೈಟ್ ಕಾರ್ಖಾನೆ ತನ್ನ ಸಾಮರ್ಥ್ಯವನ್ನು ವರ್ಷಕ್ಕೆ 400,000 ಟನ್‌ನಿಂದ 800,000 ಟನ್‌ಗೆ ಹೆಚ್ಚಿಸಲು ನಿರ್ಧರಿಸಿತು. ಆದರೆ ಇದಕ್ಕೆ ಭಾರೀ ವಿರೋಧ ಶುರುವಾಯಿತು. ಹದಿಮೂರು ಪ್ರತಿಭಟನಾಕಾರರ ಸಾವೂ ಆಯ್ತು. ಇದರ ಹಿಂದೆ ನಿಂತು ಬೆಂಬಲ ಕೊಡುತ್ತಿದ್ದ ರಾಹುಲ್ ನಂತರ ಮುಂದೆ ನಿಂತು ಪ್ರತಿಭಟಿಸಿದರು. ದೇಶದ ಅತ್ಯುತ್ತಮ ತಾಮ್ರದ ಕಾರ್ಖಾನೆ ಮುಚ್ಚಿಯೇ ಹೋಯ್ತು. ಅತಿ ದೊಡ್ಡ ರಫ್ತುದಾರನಾಗಿದ್ದ ಭಾರತ, ತಾಮ್ರ ಆಮದು ಮಾಡಿಕೊಳ್ಳುವ ಪರಿಸ್ಥಿತಿ ತಲುಪಿತು. ಅಂದಹಾಗೆ, ನಾವು ನಂತರ ತಾಮ್ರಕ್ಕೆ ಅವಲಂಬಿಸಿದ್ದು ಚೀನಾವನ್ನು. ಇವತ್ತಿಗೆ ತಾಮ್ರ ಶುದ್ಧೀಕರಣದಲ್ಲಿ ಚೀನಾ ನಂಬರ್ ಒನ್. ಚೀನಾಗೆ ನಮ್ಮ ತಾಮ್ರ ಪ್ರಾಬಲ್ಯವನ್ನು ಉಡುಗೊರೆ ಕೊಡಿಸಿದ್ದು ರಾಹುಲ್ ಗಾಂಧಿ.

ಇನ್ನು ರಫೇಲ್ ಯುದ್ಧ ವಿಮಾನ ಖರೀದಿಗೆ 2016ರಿಂದ ಯಾವ ಪರಿ ಸರಕಾರದ ವಿರುದ್ಧ ರಾಹುಲ್ ಮುಗಿಬಿದ್ದರು ಎಂಬುದು ಇಡೀ ದೇಶ ಕಂಡಿದೆ. ಚೀನಾ ಆಕ್ರಮಣಕ್ಕೆ ಉತ್ತರ ಕೊಡಲು ಅಥವಾ ಭವಿಷ್ಯದ ಯಾವುದೇ ನೆರೆ ದೇಶಗಳ ದಾಳಿಗೆ ಉತ್ತರಿಸಲು ರಫೇಲ್‌ನ ಅಗತ್ಯ ಭಾರತಕ್ಕಿತ್ತು. ಇಲ್ಲದ ಕಥೆ ಕಟ್ಟಿ ಅದನ್ನು ತಡೆಯಲು ಹೋಗಿ, ಮೋದಿ ಸರಕಾರದ ಇಮೇಜಿಗೆ ಮಸಿಬಳಿಯಲು ಪ್ರಯತ್ನಿಸಿ ರಾಹುಲ್ ಸೋತರು. ಒಂದು ವೇಳೆ ರಾಹುಲ್ ಗಾಂಧಿಗೆ ಮಣಿದಿದ್ದರೆ, ಅದು ಚೀನಾಗೆ ಸಿಗಬಹುದಾಗಿದ್ದ ಇನ್ನೊಂದು ಗೆಲುವಾಗುತ್ತಿತ್ತು. ಕೋವಿಡ್ ಸಮಯದಲ್ಲೂ ರಾಹುಲ್ ತಮ್ಮ ಚೀನಾಪ್ರೇಮ ಬಿಡಲಿಲ್ಲ. ಚೀನಾದಿಂದ ಹರಡಿದ್ದ ಕೋವಿಡ್‌ಗೆ ಚೀನಾ ತಾನು ಕೊಡುವ ವ್ಯಾಕ್ಸಿನ್ನನ್ನೇ ಇಡೀ ಜಗತ್ತು ಕೊಳ್ಳಬೇಕು ಎಂದು ಬಯಸಿತ್ತು. ರಾಹುಲ್ ಬಯಕೆಯೂ ಅದೇ ಆಗಿತ್ತು. ಆದರೆ ಭಾರತ ಸ್ವಾವಲಂಬಿಯಾಗಿ ಕೋವಿಡ್ ವ್ಯಾಕ್ಸಿನ್ ರೆಡಿ ಮಾಡಿತು. ಉತ್ತಮ ಗುಣಮಟ್ಟದ ವ್ಯಾಕ್ಸಿನನ್ನು ಪರದೇಶಗಳಿಗೆ ಕೊಡಮಾಡಿತು. ಇದನ್ನು ಕಟುವಾಗಿ ವಿರೋಧಿಸಿ, ಇದಕ್ಕೂ ಭ್ರಷ್ಟಾಚಾರ ಮತ್ತು ವೈಫಲ್ಯದ ಬಣ್ಣ ಹಚ್ಚಲು ನೋಡಿದ್ದು ಒನ್ಸ್ ಅಗೇನ್ ರಾಹುಲ್ ಗಾಂಧಿ. ಚೀನಾಗೆ ನಷ್ಟವಾದರೆ ರಾಹುಲ್ ಗಾಂಧಿಗೇಕೆ ಅಷ್ಟೊಂದು ದುಃಖ? ಇನ್ನು ಸೇನೆಯ ವಿಚಾರದಲ್ಲೂ ಕೀಳು ರಾಜಕೀಯ ಬಿಡಲಿಲ್ಲ, ಚೀನಾ ಸಿಂಪಥೈಸಿಂಗ್ ಬಿಡಲಿಲ್ಲ. 2022ರಲ್ಲಿ ಅಗ್ನಿಪಥ್ ಮೂಲಕ ಅಗ್ನಿವೀರರ ನೇಮಕಾತಿ ಶುರು ಮಾಡಿದಾಗ, ಅದನ್ನು ವಿರೋಧಿಸಿ ಜನರನ್ನು ಎತ್ತಿಕಟ್ಟುವ ಪ್ರಯತ್ನ ನಡೆಸಿದ್ದು ರಾಹುಲ್ ಗಾಂಧಿ. ಚೀನಾ ತನ್ನ ಸೇನೆಯನ್ನು ಆಧುನಿಕ ಶಸ್ತ್ರಾಸ್ತ್ರಗಳಿಂದ ತಂತ್ರ ಜ್ಞಾನದಿಂದ ಬಲಗೊಳಿಸುತ್ತಿತ್ತು. ನಾವು ಅದರ ಎದುರು ನಿಲ್ಲಲು ಅವರಷ್ಟೇ ಸನ್ನದ್ಧರಾಗಬೇಕಿತ್ತು. ಆದರೆ ಡಿಫೆನ್ಸ್ ಬಜೆಟ್ ಮುಕ್ಕಾಲು ಪಾಲು ಸಂಬಳ ಪಿಂಚಣಿ ಅಂತಲೇ ಹೋಗುತ್ತಿತ್ತು. ಹೀಗಾಗಿ ಅಗ್ನಿವೀರರ ನೇಮಕಾತಿ ಪ್ರಾರಂಭವಾಗಿತ್ತು. ಇದರಲ್ಲಿ ಅಗ್ನಿವೀರರಿಗೂ ಲಾಭವೇ ಇತ್ತು. ಅದನ್ನು ವಿರೋಧಿಸಿ, ರಾಹುಲ್ ಪರೋಕ್ಷ ಸಹಕಾರ ಕೊಟ್ಟಿದ್ದು ಚೀನಾಗೆ ಎಂದು ಬಿಡಿಸಿಹೇಳಬೇಕಿಲ್ಲ.

ನ್ಯೂಕ್ಲಿಯರ್ ಪವರ್ ಪ್ರಾಜೆಕ್ಟಿನ ವಿರುದ್ಧ ನಿಂತಿದ್ದ ಪಿಎಂಎಎನ್‌ಇ ಜತೆ, ಭಾರತ್ ಜೋಡೋ ಯಾತ್ರೆ ಸಮಯದಲ್ಲಿ ಕೈಗೂಡಿಸಿದ್ದೂ ಇದೇ ರಾಹುಲ್ ಗಾಂಧಿ. ಚೀನಾದ ಇಂಡಸ್ಟ್ರಿಯಲ್ ಪವರ್‌ಗೆ ಉತ್ತರವಾಗಿ ನಿಂತದ್ದು ಅದಾನಿ ಗ್ರೂಪ್. ರಾಹುಲ್ ಗಾಂಧಿಗೆ ಅದಾನಿ ಮೇಲೆ ಯಾಕಷ್ಟು ದ್ವೇಷ? ಉತ್ತರ ಚೀನಾಗೆ ಗೊತ್ತಿರಬಹುದಲ್ಲವೇ? ಇಷ್ಟು ಸಾಲದೆಂಬಂತೆ, ಚೀನಾವನ್ನು ಹಲವು ಜಾಗತಿಕ ವೇದಿಕೆಗಳಲ್ಲಿ ರಾಹುಲ್ ಗಾಂಧಿ ಹಾಡಿ ಹೊಗಳುತ್ತಲೇ ಬಂದರು. ಹೂಡಿಕೆದಾರರಿಗೆ ಭಾರತಕ್ಕಿಂತ ಚೀನಾ ಬೆಸ್ಟ್ ಎಂಬ ಸಂದೇಶವನ್ನೂ ಗುಪ್ತವಾಗಿ ನೀಡುತ್ತಲೇ ಬಂದರು.

ಈಗ ಲೇಟೆಸ್ಟ್ ಅಂದರೆ ಗ್ರೇಟ್ ನಿಕೋಬಾರ್ ಪ್ರಾಜೆಕ್ಟ್. ದೇಶದ ಆರ್ಥಿಕತೆಗೆ, ಅದಕ್ಕಿಂತ ಹೆಚ್ಚಾಗಿ ದೇಶದ ರಕ್ಷಣೆಯ ದೃಷ್ಟಿಯಿಂದ ರೂಪುಗೊಳ್ಳುತ್ತಿರುವ ಮಹತ್ವಾಕಾಂಕ್ಷೆಯ ಯೋಜನೆ ಇದು. ಅಂತಾರಾಷ್ಟ್ರೀಯ ಹಬ್ ಆಗುವ ಸಾಮರ್ಥ್ಯ ಹೊಂದಿರುವ ಈ ಜಾಗ ಜಾಗತಿಕ ವ್ಯಾಪಾರದಲ್ಲಿ ಭಾರತದ ಪಾತ್ರವನ್ನು ಹೆಚ್ಚಿಸಲಿದೆ. ಎಲ್ಲಕ್ಕಿಂತ ಹೆಚ್ಚಾಗಿ ಇದು ಚೀನಾ ವಿರುದ್ಧ ದೇಶವನ್ನು ರಕ್ಷಿಸಿಕೊಳ್ಳಲು ಬೇಕಾಗಿರುವ ಅಗತ್ಯದ ನಡೆಯಾಗಿದೆ. ಚೀನಾಗೆ ಈ ಯೋಜನೆ ಕೈಗೂಡುವುದು ಯಾವ ಕಾರಣಕ್ಕೂ ಇಷ್ಟವಿಲ್ಲ. ಇಂಥ ಸಮಯದಲ್ಲಿ ಚೀನಾದ ಮನದಾಳದ ಮಾತಿಗೆ ಸ್ಪಂದಿಸಿ ಹೋರಾಟಕ್ಕಿಳಿದಿರುವುದು ರಾಹುಲ್ ಗಾಂಧಿ. ಆದಿವಾಸಿಗಳ ಬಗ್ಗೆ ಕಾಳಜಿ ತೋರುವ ನೆಪದಲ್ಲಿ, ಪ್ರಾಣಿ ಮತ್ತು ಪರಿಸರದ ಪ್ರೇಮ ಮೆರೆಯುತ್ತಿರುವ ರಾಹುಲ್ ಗಾಂಧಿ ಗ್ರೇಟ್ ನಿಕೋಬಾರ್ ಯೋಜನೆ ಕೈಬಿಡಬೇಕೆಂದು ಹೊಸ ಹಾರಾಟ ಶುರುಮಾಡಿದ್ದಾರೆ.

ತಮ್ಮ ಇಂಥ ಪ್ರತಿ ಹೋರಾಟದ ಹಿಂದೆಯೂ ತಣ್ಣಗೆ ಹರಿಯುವ ಚೀನಾ ಪ್ರೇಮ ಇರುವುದು ದೇಶವಾಸಿಗಳಿಗೆ ತಿಳಿಯುವುದಿಲ್ಲವೇ? ಅಥವಾ ಚೀನಾದಿಂದ ಬಂದಿರುವ ಸೂಚನೆ ಮೇರೆಗೆ ಹೋರಾಟ ರೂಪುಗೊಳ್ಳುತ್ತಿದೆ ಎಂದು ಜಿಯೋಪೊಲಿಟಿಕ್ಸ್ ಗಮನಿಸುವವರಿಗೆ ಅರ್ಥವಾಗುವುದಿಲ್ಲವೇ? ಇಂಥ ನಡೆಗಳು ಹಿಂದಿನ ಕಾಲದಲ್ಲಿ ಬಹುಶಃ ತಿಳಿಯುತ್ತಿರಲಿಲ್ಲ. ಆದರೆ ಈಗ ಬದಲಾದ ಪರಿಸ್ಥಿತಿಯಲ್ಲಿ ರಾಹುಲ್ ಗಾಂಧಿಯ ಪ್ರತಿ ನಡೆಯೂ ಬಹಳ ನೀಟಾಗಿ ಎಕ್ಸ್‌ಪೋಸ್ ಆಗುತ್ತಿವೆ. ಹೀಗಾಗಿ ಅವರ ಯಾವ ಹೋರಾಟಕ್ಕೂ ಜಯ ಸಿಗುತ್ತಿಲ್ಲ. ಚೀನಾ ಪರ ಧುರಂಧರ್ ಆಗಲು ಪ್ರಯತ್ನಿಸಿ ಕೊನೆಗೆ ಬಿಜೆಪಿ ಪರವಿರುವ ಧುರಂಧರ್ ಆಗಿ ಬಿಜೆಪಿಯನ್ನು ಗೆಲ್ಲಿಸುತ್ತಿದ್ದಾರೆ. ರಾಹುಲ್‌ರ ಈ ಮನಸ್ಥಿತಿ ಮತ್ತು ದೇಶವಿರೋಧಿ ಆಲೋಚನೆ ಶುಭಸೂಚಕವಂತೂ ಅಲ್ಲ. ರಾಹುಲ್ ಚುನಾವಣಾ ಸೋಲುಗೆಲುವುಗಳ ಆಚೆಗೆ, ದೇಶದ ಅಭಿವೃದ್ಧಿ ಪರ, ರಕ್ಷಣೆ ಪರ ನಿಲುವು ತೋರಿಸಿದರೆ, ಕಳೆದುಹೋಗುತ್ತಿರುವ ಇಮೇಜು ಕೊಂಚವಾದರೂ ಉಳಿಯಬಹುದು.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue:109

ಸಮಾಚಾರ ಸಣ್ಣದಲ್ಲ

ಉದ್ಯೋಗಾವಕಾಶ: ನೇರ ಸಂದರ್ಶನ ನಾಳೆ

ಮಂಗಳೂರು: ಮುತ್ತೂಟ್ ಫಿನಾನ್ಸ್, ಬ್ಲಿಂಕಿಟ್ ಹಾಗೂ ರಿಲಯನ್ಸ್ ಸ್ಮಾರ್ಟ್ ಬಜಾರ್‌ಕಂಪೆನಿಯ ವತಿಯಿಂದ ಮಂಗಳೂರಿನಲ್ಲಿ ಖಾಲಿಯಿರುವ ಇಂಟರ್ನ್, ಕಸ್ಟಮರ್‌ಕೇರ್‌ಎಕ್ಸಿಕ್ಯೂಟಿವ್, ಸೇಲ್ ಎಕ್ಸಿಕ್ಯೂಟಿವ್, ಕ್ಯಾಪ್ಟನ್(ಪಿಕ್ಕರ್ಸ್) ಹುದ್ದೆಗಳಿಗೆ ನೇರ ಸಂದರ್ಶನ ಮೇ 6 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 1.30ರ ವರೆಗೆ ಜಿಲ್ಲಾಧಿಕಾರಿ ಕಚೇರಿಯ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಆಯೋಜಿಸಲಾಗಿದೆ. ನೇರ ಸಂದರ್ಶನದಲ್ಲಿ ಪಿ.ಯು.ಸಿ ಅಥವಾ ಯಾವುದೇ ಪದವಿ ಆಗಿರುವ ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳು ಬಯೋಡೇಟಾದೊಂದಿಗೆ ಭಾಗವಹಿಸಬಹುದು ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಮಂಗಳೂರು ಇಲ್ಲಿ ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಟಿಎಂಸಿ ದುರಾಡಳಿತ ಅಂತ್ಯ: ಶಾಸಕ ಕಾಮತ್

ಮಂಗಳೂರು: ಅಸ್ಸಾಂ, ಪುದುಚೇರಿ ಜೊತೆಗೆ ವಿಶೇಷವಾಗಿ ಪ. ಬಂಗಾಳದಲ್ಲಿ ಬಿಜೆಪಿಯು ಚರಿತ್ರೆಯಲ್ಲಿ ದಾಖಲಾಗುವಂತಹ ಅದ್ಭುತ ಗೆಲುವು ಸಾಧಿಸಿದ್ದು ಟಿಎಂಸಿಯ ದುರಾಡಳಿತ ಕೊನೆಗೊಂಡಿದೆ ಎಂದು ಶಾಸಕ ವೇದವ್ಯಾಸ ಕಾಮತ್ ಅವರು ಹರ್ಷ ವ್ಯಕ್ತಪಡಿಸಿದರು. ಟಿಎಂಸಿ ಹಾಗೂ ಕಮ್ಯುನಿಸ್ಟ್ ಎಂಬ ಒಂದೇ ನಾಣ್ಯದ ಎರಡು ಮುಖಗಳು ಬಂಗಾಳದಲ್ಲಿ ಹಿಂದೂಗಳನ್ನು ಗುರಿಯಾಗಿಸಿಕೊಂಡು ನಡೆಸಿದ ಮಾರಣಹೋಮ, ಮಿತಿ ಮೀರಿದ ಓಲೈಕೆ, ದೇಶದ ಭದ್ರತೆಗೆ ಸವಾಲು ಇವೆಲ್ಲವೂ ಬಿಜೆಪಿ ಗೆಲುವಿನಿಂದ ಅಂತ್ಯಗೊಂಡಿದೆ. ಭಾರತೀಯ ಜನಸಂಘದ ಸಂಸ್ಥಾಪಕರಾಗಿದ್ದ ಶ್ಯಾಮ್ ಪ್ರಸಾದ್ ಮುಖರ್ಜಿಯವರ ನಾಡಿನಲ್ಲಿ ಕಮಲ ಅರಳಿರುವುದು ಇಡೀ ದೇಶದ ಬಿಜೆಪಿ ಕಾರ್ಯಕರ್ತರಲ್ಲಿ ಹುಮ್ಮಸ್ಸು ತಂದಿದೆ ಎಂದರು. ಈ ಅಭೂತಪೂರ್ವ ಜಯಕ್ಕೆ ಕಾರಣೀಭೂತರಾದ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್, ನರೇಂದ್ರ ಮೋದಿ, ಅಮಿತ್ ಶಾ, ಸುವೆಂದು ಅಧಿಕಾರಿ ಸಹಿತ ಎಲ್ಲಾ ಬಿಜೆಪಿ ಪ್ರಮುಖರು, ಕಾರ್ಯಕರ್ತರು, ವಿಶೇಷವಾಗಿ ಬಂಗಾಳದ ಜನತೆ ಯಾವುದೇ ಭಯವಿಲ್ಲದೇ ಮತದಾನ ನಡೆಸಲು ಅವಕಾಶ ಮಾಡಿಕೊಟ್ಟ ಭದ್ರತಾ ಪಡೆಗಳಿಗೆ ವಿಶೇಷ ಅಭಿನಂದನೆಗಳು ಎಂದರು.

'ಅಜ್ಜಿ ಮನೆ' ಬೇಸಿಗೆ ಶಿಬಿರ ಮೇ 6 ರಿಂದ

ಶಿವಮೊಗ್ಗ: ಕಲ್ಲಹಳ್ಳಿಯ ಇಂದಿರಾ ಪ್ರಕಾಶ್ ಅಕಾಡೆಮಿ ವತಿಯಿಂದ 'ಅಜ್ಜಿಮನೆ' ಬೇಸಿಗೆ ಶಿಬಿರ ಮೇ 6ರಿಂದ 20ರ ವರೆಗೆ ವಿನೋಬನಗರದ ಕರಿಯಣ್ಣ ಬಿಲ್ಡಿಂಗ್ ಹತ್ತಿರವಿರುವ ಇಂದಿರಾ ಪ್ರಕಾಶ್ ಅಕಾಡೆಮಿಯ ಮೊದಲನೇ ಮಹಡಿಯಲ್ಲಿ ಆಯೋಜಿಸಲಾಗಿದೆ ಎಂದು ಅಕಾಡೆಮಿ ಅಧ್ಯಕ್ಷೆ ತಿಳಿಸಿದ್ದಾರೆ. 6 ವರ್ಷದಿಂದ 17 ವರ್ಷದೊಳಗಿನ ಮಕ್ಕಳು ಈ ಶಿಬಿರದಲ್ಲಿ ಭಾಗವಹಿಸಬಹುದು. ಶಿಬಿರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 1.30ರ ವರೆಗೆ ನಡೆಯಲಿದೆ. ಶಿಬಿರದಲ್ಲಿ ಮಕ್ಕಳಿಗೆ ಸಂಸ್ಕಾರ ಕಲೆ ಮತ್ತು ಆಧ್ಯಾತ್ಮದ ವಿಷಯಗಳನ್ನು ತಿಳಿಸಲಾಗುತ್ತದೆ. ಇದರ ಜೊತೆಗೆ ಪ್ರಾಣಾಯಾಮ, ನಾಟಕ ನೃತ್ಯ, ಏರೋಬಿಕ್ಸ್, ಮಂತ್ರಘೋಷ, ಮೈಂಡ್‌ಗೇಮ್ ಜಾನಪದ, ಜಾನಪದ ಕ್ರೀಡೆಗಳನ್ನು ಹೇಳಿಕೊಡಲಾಗುತ್ತದೆ. ಆಸಕ್ತರು ಮೊ.94496-29289, 83105-21423ಗೆ ಸಂಪರ್ಕಿಸುವಂತೆ ಕೋರಲಾಗಿದೆ.

ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಶಿವಮೊಗ್ಗ: ಎಸ್.ಕೆ.ಎನ್. ಚಾರಿಟಬಲ್ ಟ್ರಸ್ಟ್ನ ಸ್ವಾಮಿ ವಿವೇಕಾನಂದ ಇಂಟರ್ನ್ಯಾಷನಲ್ ಸಮೂಹ ಸಂಸ್ಥೆಗಳ ಶಾಲೆಗಳಲ್ಲಿ ಎಸ್‌ಎಸ್‌ಎಲ್ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ 9 ನೇ ಸ್ಥಾನ ಮತ್ತು 19ನೇ ಸ್ಥಾನ ಹಾಗೂ, 500ಕ್ಕೂ ಹೆಚ್ಚು ಅಂಕ ಪಡೆದು ಉನ್ನತ ಸಾಧನೆ ಮಾಡಿದ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಪ್ರತಿಭಾ ಸನ್ಮಾನ ಸಮಾರಂಭ ವಿನೋಬನಗರ ಶಾಲಾ ಆವರಣದಲ್ಲಿ ನಡೆಯಿತು. ಸುಮಾರು 50ಕ್ಕೂ ಹೆಚ್ಚು ವಿದ್ಯಾರ್ಥಿಗಳೊಂದಿಗೆ ಅವರ ಪೋಷಕರನ್ನೂ ಸನ್ಮಾನಿಸಿದ್ದು ತಮ್ಮ ಮಕ್ಕಳ ಜೊತೆಗೆ ತಾವೂ ಗೌರವಿಸಲ್ಪಟ್ಟಿದ್ದಕ್ಕೆ ಪೋಷಕರು ಹರ್ಷ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷ ಅನೂಪ್ ಎನ್. ಪಟೇಲ್ ಹಾಗೂ ಉಪಾಧ್ಯಕ್ಷೆ ರಾಗಿನಿ ಸಿಂಗ್ ಅವರ ನೇತೃತ್ವದಲ್ಲಿ ಶಾಸಕ ಎಸ್.ಎನ್. ಚನ್ನಬಸಪ್ಪ, ಮಾಜಿ ಶಾಸಕ ಕೆ.ಬಿ. ಪ್ರಸನ್ನಕುಮಾರ್, ಮಹಾನಗರ ಪಾಲಿಕೆ ಮಾಜಿ ಸದಸ್ಯೆ ಅನಿತಾ ರವಿಶಂಕರ್, ಶ್ರೀರಾಮಪುರ ಹಾಲು ಒಕ್ಕೂಟದ ಅಧ್ಯಕ್ಷ ರವಿಶಂಕರ್, ಕ್ಷೇತ್ರ ಶಿಕ್ಷಣಾಧಿಕಾರಿ ರಮೇಶ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕ ಮಂಜುನಾಥ ಉಪಸ್ಥಿತರಿದ್ದರು. ಈ ವೇಳೆ 9ನೇ ರ್ಯಾಂಕ್ ಪಡೆದ ರಾಣಿ ಆಚಾರ್ಯ,19ನೇ ಸ್ಥಾನ ಪಡೆದ ಚಿರಸ್ತ ಹಾಗೂ ಇತರರನ್ನು ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಉಪಾಧ್ಯಕ್ಷೆ ರಾಗಿನಿ ಸಿಂಗ್, ಮುಖ್ಯಶಿಕ್ಷಕಿ ರೂಪಶ್ರೀ, ಚಂದನಾ ಉಪಸ್ಥಿತರಿದ್ದರು.

ವಿರಾಮ
ಪ್ರತಿ ಭಾನುವಾರ

{ ವಿ.ಸುನಿಲ್ ಕುಮಾರ್ } ಶಾಸಕ

ಬಾಂಗ್ಲಾ ದೇಶದ ಮತಾಂಧರಿಗೆ ದೇಶದ ಹೆಬ್ಬಾಗಿಲು ತೆರೆದು ಸ್ವಾಗತಿಸಿ ಅವರನ್ನೇ ತನ್ನ ಮತಬ್ಯಾಂಕ್ ಆಗಿಸಿಕೊಂಡ ಪ.ಬಂಗಾಳದ ಮಮತಾ ಅವರ ದುಷ್ಟ ಆಡಳಿತ ಕುಟ್ಟಿ ಬಿಸಾಡುವಲ್ಲಿ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಯಶಸ್ವಿಯಾಗಿದ್ದಾರೆ. ಟಿಎಂಸಿಯ ಗೂಂಡಾ ರಾಜಕಾರಣ ಅಂತ್ಯ ಕಂಡಿದೆ.

79 ವಿದ್ಯಾರ್ಥಿಗಳಿಗೆ 155 ಚಿನ್ನದ ಪದಕ | 163 ಮಂದಿಗೆ ಪಿಎಚ್.ಡಿ | ಸಾಧಕರಿಗೆ ಗೌರವ ಡಾಕ್ಟರೇಟ್ ಪದವಿ

ಕುವೆಂಪು ವಿವಿ ಘಟಿಕೋತ್ಸವ ಮೇ 6ರಂದು

ಶಿವಮೊಗ್ಗ : ಕುವೆಂಪು ವಿಶ್ವವಿದ್ಯಾಲಯದ 35ನೇ ಘಟಿಕೋತ್ಸವ ಮೇ 6ರಂದು ಬೆಳಿಗ್ಗೆ 10.30ಕ್ಕೆ ಶಂಕರಘಟ್ಟದ ವಿವಿಯ ಜ್ಞಾನ ಸಹ್ಯಾದ್ರಿ ಆವರಣದಲ್ಲಿ ನಡೆಯಲಿದೆ ಎಂದು ಕುವೆಂಪು ವಿವಿ ಕುಲಪತಿ ಪ್ರೊ. ಶರತ್ ಅನಂತಮೂರ್ತಿ ತಿಳಿಸಿದರು.

ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ವಿಶ್ವವಿದ್ಯಾಲಯಗಳ ಕುಲಾಧಿಪತಿಗಳೂ ಆದ ರಾಜ್ಯಪಾಲ ಥಾವರ್ಚಂದ ಗೆಹ್ಲೋಟ್ ಅವರು ಅಧ್ಯಕ್ಷತೆವಹಿಸಲಿದ್ದು, ನ್ಯಾಕ್ ಮತ್ತು ಶೈಕ್ಷಣಿಕ ತಂತ್ರಜ್ಞಾನ ಫೋರಮ್ ಅಧ್ಯಕ್ಷ ಪ್ರೊ.ಅನಿಲ್ ಡಿ.ಸಹಸ್ರಬುಧೆ ಘಟಿಕೋತ್ಸವ ಭಾಷಣ ಮಾಡುವರು. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಉಪಸ್ಥಿತರಿರುವರು ಎಂದರು.

ಈ ಬಾರಿ ಘಟಿಕೋತ್ಸವದಲ್ಲಿ ಕಲಾ ನಿಕಾಯದಲ್ಲಿ 63, ವಾಣಿಜ್ಯಶಾಸ್ತ್ರದಲ್ಲಿ 6, ಶಿಕ್ಷಣ ನಿಕಾಯದಲ್ಲಿ 9, ಕಾನೂನು ನಿಕಾಯದಲ್ಲಿ 1, ವಿಜ್ಞಾನದಲ್ಲಿ 84 ಪಿಎಚ್.ಡಿ.ಗಳಲ್ಲಿ 106 ಪುರುಷರು ಹಾಗೂ 57 ಮಹಿಳೆಯರು ಸೇರಿದಂತೆ ಒಟ್ಟೂ 163 ಅಭ್ಯರ್ಥಿಗಳಿಗೆ ಪಿಎಚ್.ಡಿ.ಪದವಿ ಪ್ರದಾನ ಮಾಡಲಾಗುವುದು. ಎಂದರು.

ಅಲ್ಲದೆ 7,015 ಪುರುಷರು ಹಾಗೂ 9,940 ಮಹಿಳೆಯರು ಸೇರಿದಂತೆ ಒಟ್ಟೂ 16,955 ವಿದ್ಯಾರ್ಥಿಗಳು ಪದವಿ ಪಡೆಯಲು ಅರ್ಹರಾಗಿದ್ದಾರೆ ಎಂದ ಅವರು 155 ಸ್ವರ್ಣಪದಕಗಳು ಇದ್ದು ಅವುಗಳನ್ನು 11 ಪುರುಷರು ಮತ್ತು 68 ಮಹಿಳೆಯರು ಸೇರಿ 79 ವಿದ್ಯಾರ್ಥಿಗಳು ಹಂಚಿಕೊಂಡಿರುತ್ತಾರೆ. 21 ನಗದು ಬಹುಮಾನಗಳಿದ್ದು ಅವುಗಳನ್ನು 5 ಪುರುಷರು ಹಾಗೂ 24 ಮಹಿಳೆಯರು ಸೇರಿ ಒಟ್ಟೂ 29 ವಿದ್ಯಾರ್ಥಿಗಳು ಹಂಚಿಕೊಅಡಿದ್ದಾರೆ ಎಂದು ಮಾಹಿತಿ ನೀಡಿದರು.

ದೂರಶಿಕ್ಷಣದಲ್ಲಿ 172 ಎಂ.ಎ., 2,814 ಬಿ.ಎ., ಎಂಕಾಂ-66, ಎಂ.ಬಿ.ಎ.-16, ಬಿ.ಕಾಂ-579, ಬಿಬಿಎ-70, ಎಲ್.ಎಲ್.ಎಂ-4, ಎಂ.ಎಸ್ಸಿ-115, ಎಂ.ಎಲ್.ಐ.ಎಸ್ಸಿ-01, ಬಿ.ಎಸ್ಸಿ-521 ಮತ್ತು ಬಿ.ಎಲ್.ಐ.ಎಸ್ಸಿ-01 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುವುದು ಎಂದರು.

ಜ್ಞಾನಸಹ್ಯಾದ್ರಿಯ ಅಭಿಶೇಕ್ ಎಚ್.ಎಂ. ಅವರು ಎಂ.ಎ. (ಕನ್ನಡ)ನಲ್ಲಿ ಅತೀ ಹೆಚ್ಚು 10 ಸ್ವರ್ಣ ಪದಕ ಹಾಗೂ 2 ನಗದು ಬಹುಮಾನಗಳನ್ನು ಪಡೆದರೆ ರಕ್ಷಾ ಅವರು ಎಂಸ್ಸಿ (ಪರಿಸರ ವಿಜ್ಞಾನ)ಯಲ್ಲಿ 7 ಸ್ವರ್ಣಪದಕಗಳನ್ನು ಪಡೆದಿರುತ್ತಾರೆ.

ಸಹ್ಯಾದ್ರಿ ವಿಜ್ಞಾನ ಕಾಲೇಜಿನ ಸೃಷ್ಟಿ ಆರ್.ಅವರು ಎಂ.ಎಸ್ಸಿ (ಜೈವಿಕ ತಂತ್ರಜ್ಞಾನ ವಿಷಯದಲ್ಲಿ 6 ಸ್ವರ್ಣ ಪದಕಗಳನ್ನು ಪಡೆದಿದ್ದು ಸಹ್ಯಾದ್ರಿ ವಾಣಿಜ್ಯ ಕಾಲೇಜಿನ ಸಹನಾ ಗಣೇಶ್ ಶೇಟ್ ಅವರು ಎಂ.ಬಿ.ಎ.ನಲ್ಲಿ 5 ಸ್ವರ್ಣ ಥದಕ ಮತ್ತು ಒಂದು ನಗದು ಬಹುಮಾನ ಪಡೆದಿರುತ್ತಾರೆ. ಅಲ್ಲದೆ ಸಜನಾ ಎಸ್. ಅವರು ಎಂ.ಎ. (ಸಮಾಜಶಾಸ್ತ್ರ)ದಲ್ಲಿ 5 ಸ್ವರ್ಣ ಪದಕಗಳನ್ನು ಪಡೆದಿದದಾರೆ. ಅಭಿಲಾಷ್ ಎಲ್. ಅವರು ಎಂ.ಎಸ್ಸಿ (ಗಣಿತ)ಯಲ್ಲಿ 4 ಸ್ವರ್ಣ ಪದಕ ಹಾಗೂ 2 ನಗದು ಬಹುಮಾನಗಳನ್ನು ಪಡೆದಿರುತ್ತಾರೆ. ಇನ್ನುಳಿದ ಇತಿಹಾಸ , ಔದ್ಯೋಗಿಕ ಪತ್ರಿಕೋದ್ಯಮ , ಭೌತಶಾಸತ್ರ, ಇತರೆ ವಿಷಯಗಳಲ್ಲಿ ಅತೀ ಹೆಚ್ಚು ಅಂಕ ಪಡೆದವರಿಗೂ ಸ್ವರ್ಣ ಪದಕ, ನಗದು ಬಹುಮಾನ ನೀಡಲಾಗುವುದು ಎಂದರು.

ವಿವಿಧ ಕ್ಷೇತ್ರದ ಸಾಧಕರಿಗೆ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡುವ ಸಂಪ್ರದಾಯವಿದ್ದು ಈ ಬಾರಿಯ ಘಟಿಕೋತ್ಸವಕ್ಕೆ ಮೂವರು ಹಾಗೂ ಮುಂದಿನ ಘಟಿಕೋತ್ಸವಕ್ಕೆ ಮೂವರ ಹೆಸರನ್ನು ಆಯ್ಕೆ ಮಾಡಿ ಅನುಮತಿ ನೀಡಲು ರಾಜ್ಯಪಾಲರಿಗೆ 14 ಹೆಸರುಗಳುಳ್ಳ ಶಿಫಾರಸು ಪಟ್ಟಿ ಕಳುಹಿಸಲಾಗಿದೆ. ರಾಜ್ಯಪಾಲರು ಪ್ರವಾಸದಲ್ಲಿರುವ ಕಾರಣ ಇಂದಿನ ವರೆಗೆ ಆಯ್ಕೆ ಪಟ್ಟಿ ನಮ್ಮ ಕೈ ಸೇರಿಲ್ಲ. ನಾಳೆ ಒಳಗಾಗಿ ಬರುವ ನಿರೀಕ್ಷೆ ಇದೆ ಎಂದರು ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ಕುಲಸಚಿವ ಹೇಮಂತ್ ಎನ್., ಮೌಲ್ಯಮಾಪನ ಕುಲಸಚಿವ ಪ್ರೊ. ಆರ್.ತಿಮ್ಮರಾಯಪ್ಪ, ವಾಣಿಜ್ಯ ನಿಕಾಯದ ಡೀನ್ ಪ್ರೊ. ರಮೇಶ್, ಕಲಾ ನಿಕಾಯದ ಡೀನ್. ಪ್ರೊ. ರಾಜಾನಾಯ್ಕ್, ಪಿಆರ್‌ಒ ಡಾ.ಸತ್ಯಪ್ರಕಾಶ್ ಇದ್ದರು.

ಕುವೆಂಪು ವಿವಿ ಕುಲಪತಿ ಪ್ರೊ.ಶರತ್ ಅನಂತಮೂರ್ತಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ,ದರು.

ಡಿಜಿಟಲ್ ಮೌಲ್ಯಮಾಪನ ಅಕ್ರಮ ನಡೆದಿಲ್ಲ

ಶಿವಮೊಗ್ಗ: ಕುವೆಂಪು ವಿಶ್ವವಿದ್ಯಾಲಯದ ಪದವಿ ಪರೀಕ್ಷಾ ಡಿಜಿಟಲ್ ಮೌಲ್ಯಮಾಪನದಲ್ಲಿ ಯಾವುದೇ ಅಕ್ರಮ ಇದೆ ಎನ್ನುವುದನ್ನು ನಾವು ಒಪ್ಪುವುದಿಲ್ಲ ಎಂದು ವಿವಿ ಕುಲಪತಿ ಪ್ರೊ.ಶರತ್ ಅನಂತಮೂರ್ತಿ ಸ್ಪಷ್ಟನೆ ನೀಡಿದರು. ತಮ್ಮ ವಿಶ್ವವಿದ್ಯಾಲಯ ಪಾರದರ್ಶಕತೆ, ಬೇಗ ಫಲಿತಾಂಶ ನೀಡುವುದು ಹಾಗೂ ಖರ್ಚು ಕಡಿಮೆ ಮಾಡುವುದೂ ಸೇರಿದಂತೆ ಹಲವು ಉಪಕ್ರಮಗಳಿಗೆ ಆದ್ಯತೆ ನೀಡುತ್ತಿದೆ. ಅಗತ್ಯ ಅನುದಾನ ಬರದಿದ್ದ ಕಾರಣ ಆಂತರಿಕ ಹಣಕಾಸು ವ್ಯವಸ್ಥೆ ತಂದುಕೊಂಡಿದ್ದೇವೆ. ಆದರೂ ಕೆಲವು ತಾಂತ್ರಿಕ ಕಾರಣಗಳಿಂದ ಪದವಿ ಪರೀಕ್ಷೆ ಫಲಿತಾಂಶ ನೀಡುವಲ್ಲಿ ವಿಳಂಬವಾಗುತ್ತಿದೆ ಎಂಬುದನ್ನು ಒಪ್ಪಿಕೊಂಡರು.

ಕ್ರಿಕೆಟ್: ಮಂಗಳೂರು ರನ್ನರ್ ಅಪ್

ಮಂಗಳೂರು: ಮಂಗಳೂರು ಐಟಿ ಡೀಲರ್ಸ್ ಅಸೋಸಿಯೇಷನ್ ವತಿಯಿಂದ ಪಡುವ ಮೈದಾನದಲ್ಲಿ 7ನೇ ಆವೃತ್ತಿಯ ಪ್ರೀಮಿಯರ್ ಲೀಗ್‌ಆ್2026 ಕ್ರಿಕೆಟ್ ಟೂರ್ನಿ ಅತ್ಯಂತ ವೈಭವಯುತವಾಗಿ ಹಾಗೂ ಶಿಸ್ತಿನಿಂದ ನೆರವೇರಿತು. ಐಟಿ ಡೀಲರ್ಸ್ ಹಾಗೂ ಅವರ ಸಿಬ್ಬಂದಿಯಿಂದ ಕೂಡಿದ ಒಟ್ಟು 8 ತಂಡಗಳು ಈ ಕ್ರಿಕೆಟ್ ಟೂರ್ನಿಯಲ್ಲಿ ಭಾಗವಹಿಸಿದ್ದು, ಕ್ರೀಡಾಭಿಮಾನಿಗಳ ಗಮನ ಸೆಳೆದವು. ಲೀಗ್ ಹಂತದಿಂದಲೇ ತೀವ್ರ ಸ್ಪರ್ಧೆ ಕಂಡುಬಂದಿತು.

ಫೈನಲ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಮಂಗಳೂರು ಮತ್ತು ಬ್ಯಾರಾಕುಡಾ ಬ್ರೀಜರ್ಸ್ ತಂಡ ಮುಖಾಮುಖಿಯಾಗಿದ್ದವು. ರೋಚಕವಾಗಿ ನಡೆದ ಈ ಪಂದ್ಯದಲ್ಲಿ ಡಿಸ್ಟ್ರಿಬ್ಯೂಟರ್ ಉದ್ಯೋಗಿಗಳಿಂದ ರೂಪುಗೊಂಡ ರಾಯಲ್ ಚಾಲೆಂಜರ್ಸ್ ಮಂಗಳೂರು ತಂಡ ಉತ್ತಮ ಪ್ರದರ್ಶನ ನೀಡಿ ರನ್ನರ್-ಅಪ್ ಸ್ಥಾನವನ್ನು ಪಡೆದುಕೊಂಡಿತು.ಟೂರ್ನಿಯ ಅತ್ಯುತ್ತಮ ಆಟಗಾರ ಪ್ರಶಸ್ತಿಯನ್ನು ಆರ್ಪಿ ಟೆಕ್ ಮಂಗಳೂರು ತಂಡದ ಚೇತನ್ ಪಡೆದರು. ಅತ್ಯುತ್ತಮ ಬೌಲರ್‌ಪ್ರಶಸ್ತಿಯನ್ನು ಆರ್ಪಿ ಟೆಕ್ ಮಂಗಳೂರು ತಂಡದ ಆನಂದ್ ಕುಮಾರ್ ಪಡೆದುಕೊಂಡರು.

ಬಂಗಾಳದ ಗೆಲುವು ಚಾರಿತ್ರಿಕ

ಮಂಗಳೂರು: ಪಂಚರಾಜ್ಯ ಚುನಾವಣೆ ಫಲಿತಾಂಶದ ಬಗ್ಗೆ ಪ್ರತಿಕ್ರಿಯಿಸಿರುವ ಅವರು, ಅಸ್ಸಾಂನಲ್ಲಿ ಬಿಜೆಪಿ ಹ್ಯಾಟ್ರಿಕ್ ಗೆಲುವು ಸಾಧಿಸಿರುವುದು ಹಾಗೂ ಪುದುಚೇರಿಯಲ್ಲಿ ಎನ್ಡಿಎ ಮೈತ್ರಿಕೂಟ ಸ್ಪಷ್ಟ ಬಹುಮತ ಪಡೆದಿರುವುದು ಹಾಗೂ ಕೇರಳದಲ್ಲಿ ಉತ್ತಮ ಸಾಧನೆ ಮಾಡಿರುವುದು ಪ್ರಧಾನಮಂತ್ರಿ ಮೋದಿ ಅವರ ಮೇಲಿರುವ ಜನರ ವಿಶ್ವಾಸಕ್ಕೆ ಹಾಗೂ ''ವಿಕಸಿತ ಭಾರತ''ದ ಸಂಕಲ್ಪಕ್ಕೆ ಮತ್ತಷ್ಟು ಶಕ್ತಿ ತುಂಬಿದೆ ಎಂದು ಸಂಸದ ಕ್ಯಾ. ಬ್ರಿಜೇಶ್ ಚೌಟ ಹೇಳಿದ್ದಾರೆ.

ಇನ್ನೊಂದೆಡೆ, ಪಶ್ಚಿಮ ಬಂಗಾಲದಲ್ಲಿ ಬಿಜೆಪಿಯ ಗೆಲುವು ಇಡೀ ದೇಶದಲ್ಲಿರುವ ಬಿಜೆಪಿ ಕಾರ್ಯಕರ್ತರಿಗೆ ಸಂದ ಗೆಲುವು. ಏಕೆಂದರೆ, ಪಶ್ಚಿಮ ಬಂಗಾಲದಲ್ಲಿ ತೃಣಮೂಲ ಕಾಂಗ್ರೆಸ್ನ ಗೂಂಡಾ ರಾಜ್ಯದಲ್ಲಿ ಕಮಲವನ್ನು ಅರಳಿಸುವುದು ಅಷ್ಟೊಂದು ಸುಲಭವಿರಲಿಲ್ಲ.

ಬಿಜೆಪಿಯ ಕಾರ್ಯಕರ್ತರ ಮೇಲೆ ಸಾಕಷ್ಟು ದೌರ್ಜನ್ಯ ನಡೆದರೂ ಎದೆಗುಂದದೆ ಪಕ್ಷವನ್ನು ಅಧಿಕಾರಕ್ಕೆ ತರಲೇಬೇಕೆಂಬ ಬಿಜೆಪಿ ಕಾರ್ಯಕರ್ತರ ಹೋರಾಟಕ್ಕೆ ಹಾಗೂ ಬಿಜೆಪಿ ಸೈದಾಂತಿಕ ನಿಲುವಿಗೆ ಸಿಕ್ಕ ಐತಿಹಾಸಿಕ ಜಯ ಇದು ಎಂದು ಕ್ಯಾ. ಬ್ರಿಜೇಶ್ ಚೌಟ ಅಭಿಪ್ರಾಯಪಟ್ಟಿದ್ದಾರೆ.

ಉಪಕದನ: ಕಾಂಗ್ರೆಸ್ ವಿಜಯೋತ್ಸವ

ಹೊಸನಗರದ ಬ್ಲಾಕ್ ಅಧ್ಯಕ್ಷ ಚಂದ್ರಮೌಳಿ ಗೌಡರ ನೇತೃತ್ವದಲ್ಲಿ ಪಕ್ಷದ ಕಚೇರಿ ಮುಂಭಾಗ ಸಂಭ್ರಮ ಆಚರಿಸಲಾಯಿತು.

ಹೊಸನಗರ: ಕರ್ನಾಟಕ ರಾಜ್ಯದ ಎರಡು ವಿಧಾನಸಭೆ ಉಪ ಚುನಾವಣೆಯಲ್ಲಿ ಬಾಗಲಕೋಟೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಉಮೇಶ್ ಮೇಟಿ ಸುಮಾರು 21ಸಾವಿರ ಮತಗಳ ಅಂತರದಿಂದ ಜಯ ಸಾಧಿಸಿದ್ದು ಅದೇ ರೀತಿ ದಾವಣಗೆರೆ ದಕ್ಷಿಣದಲ್ಲಿ ಸಮರ್ಥ ಶಾಮನೂರು ಸುಮಾರು 5000 ಮತಗಳ ಅಂತರದ ಗೆಲುವು ಸಾಧಿಸಿದ್ದಾರೆ.

ಎರಡೂ ಕಡೆ ಬಿಜೆಪಿಯನ್ನು ಸೋಲಿಸಿ ಜಯಬೇರಿ ಬಾರಿಸಿದ್ದಾರೆ. ಅದಕ್ಕಾಗಿ ಹೊಸನಗರದ ಬ್ಲಾಕ್ ಅಧ್ಯಕ್ಷ ಚಂದ್ರಮೌಳಿ ಗೌಡರ ನೇತೃತ್ವದಲ್ಲಿ ಪಕ್ಷದ ಕಚೇರಿ ಮುಂಭಾಗ ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮವನ್ನು ಆಚರಿಸಲಾಯಿತು.

ಈ ಸಂದರ್ಭದಲ್ಲಿ ಪ್ರದಾನ ಕಾರ್ಯದರ್ಶಿಗಳಾದ ಸದಾಶಿವ ಶ್ರೇಷ್ಠಿ, ಎಂ.ಪಿ ಸುರೇಶ್, ನಿಟಕಪೂರ್ವಅಧ್ಯಕ್ಷ ಬಿ.ಜಿ. ನಾಗರಾಜ್, ಟೌನ್ ಘಟಕದ ಅಧ್ಯಕ್ಷ ಗುರುರಾಜ್, ನೇತ್ರಾವತಿ, ನೂರ ಮೇಟಿಲ್ಡಾ ಸ್ವೀಕ್ವರಾ, ಅಣ್ಣಪ್ಪ, ಪ್ರಶಾಂತ್, ಗಣೇಶ್ ಬಾಳೆಕೊಪ್ಪ, ಮಂಜುನಾಥ್ ಶ್ರೇಷ್ಠಿ ಗುರುರಾಜ್ ಜಯನಗರ ಉಪಸ್ಥಿತರಿದ್ದರು.

ಸಂಸದರ ತಂಡ ಸುಳ್ಯದ ವಿವಿಧ ಕಡೆ ಭೇಟಿ

ಸುಳ್ಯ: ಇನ್ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷರು ಹಾಗೂ ರಾಜ್ಯ ಸಭಾ ಸದಸ್ಯರಾದ ಸುಧಾಮೂರ್ತಿ,ಚಲನಚಿತ್ರ ನಟ ಹಾಗೂ ರಾಜ್ಯಸಭಾ ಸದಸ್ಯ ಜಗ್ಗೇಶ್, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಸೇರಿದಂತೆ ರಾಜ್ಯ ಸಭಾ ಸದಸ್ಯರ ತಂಡ ಸುಳ್ಯಕ್ಕೆ ಆಗಮಿಸಿದ್ದರು.

ರಾಜ್ಯ ಸಭೆಯ ಸಾರಿಗೆ, ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಸ್ಥಾಯಿ ಸಮಿತಿ ಸದಸ್ಯರ ಭೇಟಿಯ ಭಾಗವಾಗಿ ತಂಡ ಭೇಟಿ ನೀಡಿದೆ. ಮಡಿಕೇರಿಯಲ್ಲಿ ನಡೆಯುವ ಸಮಿತಿಯ ಸಭೆಗೆ ತೆರಳುವ ತಂಡ ಸುಳ್ಯದ ಕೆಲ ಕಡೆಗಳಿಗೆ ಭೇಟಿ ನೀಡಿದರು. ಅರಂಬೂರಿನ ಶ್ರೀಕೃಷ್ಣ ರಸಪಾಕ ಗ್ರ್ಯಾಂಡ್ ಹೋಟೆಲ್, ಅಡ್ಕಾರಿನ ಗೇರು ಬೀಜ ಫ್ಯಾಕ್ಟರಿ ಮತ್ತಿತರ ಕಡೆಗಳಿಗೆ ಭೇಟಿ ನೀಡಿದರು. ರಸಪಾಕಂ ಗ್ರ್ಯಾಂಡ್ ಹೋಟೆಲ್ನಲ್ಲಿ ಉಪಾಹಾರ ಸೇವಿಸಿ, ಕೆಲ ಹೊತ್ತು ವಿಶ್ರಾಂತಿ ಪಡೆದು ತೆರಳಿದರು.

ಸುಧಾಮೂರ್ತಿಯವರು ಅಡ್ಕಾರಿನ ಸುಧಾಕರ ಕಾಮತ್ ಅವರ ಸುಬ್ರಾಯ ಅನಂತ ಕಾಮತ್ - ಸನ್ಸ್ ಗೇರು ಬೀಜ ಫ್ಯಾಕ್ಟರಿಗೆ ಭೇಟಿ ನೀಡಿದರು. ಫ್ಯಾಕ್ಟರಿಯ ಕೆಲಸ ಕಾರ್ಯಗಳ ಬಗ್ಗೆ ಸುಧಾಕರ ಕಾಮತ್, ಪದ್ಮಾವತಿ ಕಾಮತ್, ಶುಭ ಕಾಮತ್ ಅವರು ವಿವರಿಸಿದರು. ಪುತ್ತೂರಿನ ಕ್ಯಾಂಪ್ಕೋ ಚಾಕಲೇಟ್ ಫ್ಯಾಕ್ಟರಿಗೂ ಸಂಸದರ ತಂಡ ಭೇಟಿ ನೀಡಿದೆ.

ರಾಜ್ಯ ಸಭಾ ಸದಸ್ಯರಾದ ಸಂಜಯ್ ಕುಮಾರ್‌ಝಾ, ಸುಧಾಮೂರ್ತಿ,ಗೊಲ್ಲ ಬಾಬು ರಾವ್, ಜಗ್ಗೇಶ್, ಕೇಸರಿದೇವ್ ಸಿನ್ಹಾ ಝಾಲ, ಸುರೇಂದ್ರ ಸಿಂಗ್ ನಗರ್,ಮಿಲನ್ ಅಲ್ತಾಫ್ ಅಹಮ್ಮದ್, ಆರ್.ಕೆ.ಚೌದರಿ, ತಾಪಿರ್‌ಗಾವೊ, ರಾಹುಲ್ ಕಸ್ವಾನ್, ರಾಜೀವ್ ಪ್ರತಾಪ್ ರೂಡಿ, ಅನುರಾಗ್ ಶರ್ಮಾ,ಸುರೇಶ್ ಕುಮಾರ್‌ಶೆಟ್ಕರ್,ತಂಗೆಲ್ಲ ಉದಯ್ ಶ್ರೀನಿವಾಸ್ ಮತ್ತಿತರ ಎಂಪಿಗಳು ತಂಡದಲ್ಲಿದ್ದಾರೆ.

ರಾಜ್ಯ ಸಭಾ ಸದಸ್ಯರಾದ ಸುಧಾಮೂರ್ತಿ,ಜಗ್ಗೇಶ್, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಸೇರಿದಂತೆ ರಾಜ್ಯ ಸಭಾ ಸದಸ್ಯರ ತಂಡ ಸುಳ್ಯಕ್ಕೆ ಆಗಮಿಸಿದ್ದರು.

ಶ್ರೀಕೃಷ್ಣ ಭಜನಾ ಮಂದಿರಕ್ಕೆ ನಟ ಟೆನ್ನಿಸ್ ಕೃಷ್ಣ

ಸುಳ್ಯ: ನಿರ್ಮಾಣ ಹಂತದಲ್ಲಿರುವ ಜಾಲ್ಸೂರು ಗ್ರಾಮದ ಸೋಣಂಗೇರಿ ಶ್ರೀಕೃಷ್ಣ ಭಜನಾ ಮಂದಿರಕ್ಕೆ ಚಿತ್ರನಟ ಟೆನ್ನಿಸ್ ಕೃಷ್ಣ ಭೇಟಿ ನೀಡಿದರು.

ಮಂದಿರವು ಚೆನ್ನಾಗಿ ಅಭಿವೃದ್ಧಿಯಾಗುತ್ತಿದ್ದು ಅದರ ಮೂಲಕ ಗ್ರಾಮದಲ್ಲಿ ಒಗ್ಗಟ್ಟಿನ ಭಾವನೆ ಮೂಡುತ್ತಿದೆ. ಭಜನಾ ಮಂದಿರಗಳು ಸಾಮಾನ್ಯವಾಗಿ ಭಕ್ತಿಗೆ ಮಾತ್ರ ಸೀಮಿತವಾಗದೆ, ಸಮಾಜದ ಜನರನ್ನು ಒಟ್ಟುಗೂಡಿಸುವ ಕೇಂದ್ರವಾಗುತ್ತವೆ. ಇಲ್ಲಿ ನಡೆಯುವ ಭಜನೆ, ಪೂಜೆ, ಹಾಗೂ ಇತರ ಧಾರ್ಮಿಕ ಕಾರ್ಯಕ್ರಮಗಳು ಜನರಲ್ಲಿ ಶಾಂತಿ ಮತ್ತು ಒಗ್ಗಟ್ಟನ್ನು ಹೆಚ್ಚಿಸುತ್ತವೆ. ಇದು ಮುಂದಿನ ದಿನಗಳಲ್ಲಿ ಇನ್ನಷ್ಟು ಧಾರ್ಮಿಕ ಹಾಗೂ ಸಾಮಾಜಿಕ ಚಟುವಟಿಕೆಗಳಿಗೆ ಪ್ರೇರಣೆಯಾಗಲಿದೆ ಎಂದು ಶುಭ ಹಾರೈಸಿದರು.

ಈ ಸಂದರ್ಭ ಭಜನಾ ಮಂದಿರದ ಅಧ್ಯಕ್ಷ ಗಿರಿಧರ ಗೌಡ ನಾಯರ್‌ಹಿತ್ಲು, ಸಂಚಾಲಕ ಸತ್ಯಶಾಂತಿ ತ್ಯಾಗಮೂರ್ತಿ, ಪ್ರಮುಖರಾದ ಸುಪ್ರೀತ್ ಮೋಂಟಡ್ಕ, ಲೀಲಾವತಿ ಕರುಣಾಕರ ನಡುಮನೆ, ಆಡಳಿತ ಸಮಿತಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಧರ್ಮಸ್ಥಳದಲ್ಲಿ ಭಗವಾನ್ ಚಂದ್ರನಾಥ ಸ್ವಾಮಿ ಬಸದಿಯ ವಾರ್ಷಿಕೋತ್ಸವದ ಅಂಗವಾಗಿ ದೇವರಿಗೆ ಸಹಸ್ರನಾಮ ಪುಷ್ಪಾರ್ಚನೆ ನಡೆಯಿತು. ಶ್ರದ್ಧಾಅಮಿತ್ ಮತ್ತು ಶ್ರಾವಕರು, ಶ್ರಾವಕಿಯರು ಕಾರ್ಯಕ್ರಮದಲ್ಲಿ ಭಾಗವಹಿಸಿದರು. ನಾಂದಿ ಮಂಗಲ, ವಾಸ್ತು ಪೂಜಾ ವಿಧಾನ, ನವಗ್ರಹ ಮಹಾಶಾಂತಿ, ಧಾರ್ಮಿಕ ವಿಧಿ-ವಿಧಾನಗಳನ್ನು ನಡೆಸಲಾಯಿತು.

ಬಂಗಾಳದ ಅರಾಜಕತೆಗೆ ಅಂತ್ಯ

ಉಡುಪಿ: ಪಶ್ಚಿಮ ಬಂಗಾಳವನ್ನು ಸುದೀರ್ಘ ಕಾಲದಿಂದ ಕಾಡುತ್ತಿದ್ದ ಅರಾಜಕತೆಗೆ ಕೊನೆಗೂ ಅಲ್ಲಿನ ಮತದಾರ ಅಂತ್ಯ ಹಾಡಿದ್ದಾರೆ. ಡಾ. ಶ್ಯಾಮ ಪ್ರಸಾದ್ ಮುಖರ್ಜಿಯವರ ಕನಸು ಇಂದು ನನಸಾಗಿದೆ ಎಂದು ರಾಜ್ಯ ಬಿಜೆಪಿ ಕಾರ್ಯದರ್ಶಿ, ಶಾಸಕ ವಿ. ಸುನಿಲ್ ಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ಬಾಂಗ್ಲಾದೇಶದ ಮತಾಂಧರಿಗೆ ದೇಶದ ಹೆಬ್ಬಾಗಿಲು ತೆರೆದು ಸ್ವಾಗತಿಸಿ ಅವರನ್ನೇ ತನ್ನ ಮತಬ್ಯಾಂಕ್ ಆಗಿಸಿಕೊಂಡು ಕ್ರೂರ ದಬ್ಬಾಳಿಕೆ ನಡೆಸುತ್ತಿದ್ದ ಮಮತಾ ಬ್ಯಾನರ್ಜಿಯವರ ದುಷ್ಟ ಅಟ್ಟಹಾಸವನ್ನು ಕುಟ್ಟಿ ಬಿಸಾಡುವಲ್ಲಿ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಮತ್ತು ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಯಶಸ್ವಿಯಾಗಿದ್ದಾರೆ. ಅವರ ಪ್ರಯತ್ನ ಅವರ್ಣನೀಯ. ತೃಣಮೂಲ ಕಾಂಗ್ರೆಸ್ ನ ಗೂಂಡಾಗಿರಿ ರಾಜಕಾರಣಕ್ಕೆ ಕೊನೆ ಹಾಡಲಾಗಿದೆ. ಅದೇ ರೀತಿ ಅಸ್ಸಾಂನಲ್ಲಿ ಸತತ ಮೂರನೇ ಬಾರಿಗೆ ಬಿಜೆಪಿ ಗೆಲುವು ಸಾಧಿಸಿದೆ. ಪುದುಚೇರಿ ಯಲ್ಲಿ ಎನ್ಡಿಎ ಗೆಲುವು ಅಭೂತಪೂರ್ವ. ಒಟ್ಟಾರೆ ಪಂಚರಾಜ್ಯಗಳ ಚುನಾವಣೆಯಲ್ಲಿ ಮೂರು ರಾಜ್ಯಗಳಲ್ಲಿ ಬಿಜೆಪಿ ಅಧಿಕಾರ ಹಿಡಿಯುವುದಕ್ಕೆ ಕಾರಣರಾದ ದೇವದುರ್ಲಭ ಕಾರ್ಯಕರ್ತರ ಅವಿಶ್ರಾಂತ ಶ್ರಮಕ್ಕೆ ಸುನಿಲ್ ಕುಮಾರ್‌ಅಭಿನಂದನೆ ಸಲ್ಲಿಸಿದ್ದಾರೆ.

ಕೈಗಾರಿಕಾ ಹಬ್ ಆಗಿ ಬೆಳಗಲಿದೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಬೈಕಂಪಾಡಿಯು ರಾಜ್ಯದ ಎರಡನೇ ಅತಿದೊಡ್ಡ ಕೈಗಾರಿಕಾ ವಲಯವಾಗಿದ್ದು, ಇಲ್ಲಿನ ಭೌಗೋಳಿಕ ಸಂಪರ್ಕ ವ್ಯವಸ್ಥೆ ಹಾಗೂ ಯುವ ಪ್ರತಿಭೆಗಳನ್ನು ಬಳಸಿಕೊಂಡರೆ ಮಂಗಳೂರು ಮುಂದಿನ ದಿನಗಳಲ್ಲಿ ದೇಶದ ಪ್ರಮುಖ ಕೈಗಾರಿಕಾ ಹಬ್ ಆಗಿ ಹೊರಹೊಮ್ಮಲಿದೆ ಎಂದು ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಪ್ರದೀಪ್ ಡಿ. ಸೋಜ ವಿಶ್ವಾಸ ವ್ಯಕ್ತಪಡಿಸಿದರು.

ಕೆನರಾ ಇಂಡಸ್ಟ್ರಿಯಲ್ ಅಸೋಸಿಯೇಷನ್ ವತಿಯಿಂದ ನಗರದ ಕರಾವಳಿ ಉತ್ಸವ ಮೈದಾನದಲಿ ನಡೆದ' 'ಕೆನರಾ ಎಂಜಿನಿಯರಿಂಗ್ ಇಂಡಸ್ಟ್ರಿಯಲ್ ಟೆಕ್ ಎಕ್ಸ್ಪೋ 2026' ಸಮಾವೇಶದ ಸಮಾರೋಪದಲ್ಲಿ ಅವರು ಮಾತನಾಡಿದರು. ಇಲ್ಲಿನ ಪ್ರತಿಭೆಗಳು ಉದ್ಯೋಗ ಅರಸಿ ಹೊರರಾಜ್ಯಗಳಿಗೆ ವಲಸೆ ಹೋಗುವ ಬದಲು, ಇಲ್ಲಿಯೇ ತಮ್ಮ ಕೌಶಲ ಪ್ರದರ್ಶಿಸುವಂತಾಗಬೇಕು ಎಂದರು. ಕಾರ್ಯಕ್ರಮದಲ್ಲಿ ಮಾತನಾಡಿದ ಚಾರ್ಟೆಡ್ ಅಕೌಂಟೆಂಟ್ ಎಸ್.ಎಸ್. ನಾಯಕ್, 'ಬೆಂಗಳೂರು ಬಿಟ್ಟರೆ ಬೈಕಂಪಾಡಿ ಅತಿ ದೊಡ್ಡ ಕೈಗಾರಿಕಾ ಪ್ರದೇಶವಾಗಿದೆ. ಆದರೆ ಇಲ್ಲಿ ಭೂಮಿಯ ಕೊರತೆ ಇದೆ ಎಂದರು.

ಅಸೋಸಿಯೇಷನ್ ಅಧ್ಯಕ್ಷ ಎಂ.ಡಿ. ಪೂಜಾರಿ ಸುಮಾರು 9 ಸಾವಿರಕ್ಕೂ ಅಧಿಕ ಮಂದಿ ವೀಕ್ಷಿಸಿದ್ದಾರೆ ಎಂದರು.

ಈ ಗೆಲುವು ದೇಶದ ರಾಜಕೀಯ ದಿಕ್ಸೂಚಿ

ಮಂಗಳೂರು: ಪಂಚರಾಜ್ಯಗಳ ಚುನಾವಣಾ ಫಲಿತಾಂಶ ದೇಶದ ರಾಜಕೀಯ ದಿಕ್ಕನ್ನು ಸ್ಪಷ್ಟಪಡಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಸರಕಾರದ ಜನಪ್ರಿಯತೆ ಸುನಾಮಿಯಂತೆ ವ್ಯಕ್ತವಾಗಿದ್ದು, ಹಿಂದೂ ವಿರೋಧಿ ನೀತಿ ಅನುಸರಿಸುವ ಪಕ್ಷಗಳಿಗೆ ಮತದಾರರು ತಕ್ಕ ಪಾಠ ಕಲಿಸಿದ್ದಾರೆ ಎಂದು ದಕ್ಷಿಣ ಕನ್ನಡ ಜಿಲ್ಲಾ ಬಿಜೆಪಿ ಅಧ್ಯಕ್ಷ ಸತೀಶ್ ಕುಂಪಲ ವಿಶ್ಲೇಷಿಸಿದ್ದಾರೆ. ಚುನಾವಣಾ ಫಲಿತಾಂಶ ಕುರಿತು ಪ್ರಕಟಣೆ ನೀಡಿರುವ ಅವರು, ಈ ಗೆಲುವು ದೇಶದಲ್ಲಿ ಬಿಜೆಪಿ ಪರವಾಗಿರುವ ಜನತೆಯ ಮನೋಭಾವಕ್ಕೆ ಸಾಕ್ಷಿ ಎಂದಿದ್ದಾರೆ. ವಿಶೇಷವಾಗಿ ತಮಿಳುನಾಡು, ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ರಾಜ್ಯಗಳಲ್ಲಿ ಹಿಂದೂ ವಿರೋಧಿ ನಿಲುವು ತಳೆದಿದ್ದ ರಾಜಕೀಯ ಶಕ್ತಿಗಳಿಗೆ ಅಲ್ಲಿನ ಜನತೆ ಚುನಾವಣೆಯ ಮೂಲಕವೇ ಉತ್ತರ ನೀಡಿದ್ದಾರೆ. ಪುದುಚೇರಿಯಲ್ಲಿ ಎನ್ಡಿಎ ಮೈತ್ರಿಕೂಟ ಅಧಿಕಾರದತ್ತ ಮುನ್ನಡೆಯುತ್ತಿರುವುದು ಮತ್ತು ಕೇರಳದಲ್ಲಿ ಬಿಜೆಪಿ ತನ್ನ ಮತ ಪ್ರಮಾಣ ಹೆಚ್ಚಿಸಿಕೊಂಡಿರುವುದು ಗಮನಾರ್ಹ. ಕೇರಳದ ಕಮ್ಯುನಿಸ್ಟ್ ವಿರುದ್ಧ ಅಲ್ಲಿನ ಜನಾಭಿಪ್ರಾಯ ರೂಪಿತವಾಗು ತ್ತಿರುವುದಕ್ಕೆ ಇದು ಸ್ಪಷ್ಟ ಸಂಕೇತ ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ. **ಎಕ್ಸಿಟ್ ಪೋಲ್ ತಲೆಕೆಳಗು:** ಈ ಬಾರಿಯ ಫಲಿತಾಂಶ ಗಳು ಬಹುತೇಕ ಎಲ್ಲಾ ಎಕ್ಸಿಟ್ ಪೋಲ್ಗಳ ಅಂದಾಜುಗಳನ್ನು ತಲೆಕೆಳಗು ಮಾಡಿವೆ. ತಳಮಟ್ಟದಲ್ಲಿ ಬಿಜೆಪಿ ಪರವಾದ ಅಲೆ ಇರುವುದನ್ನು ಈ ಫಲಿತಾಂಶ ಸಾಬೀತುಪಡಿಸಿದೆ. ಪ್ರಧಾನಿ ಮೋದಿಯವರ ಕಾರ್ಯವೈಖರಿ ಜನತೆ ಮೆಚ್ಚಿಕೊಂಡಿದ್ದಾರೆ ಎಂದು ಕುಂಪಲ ಅವರು ತಿಳಿಸಿದ್ದಾರೆ.

ಸಾಧಕ ವಿದ್ಯಾರ್ಥಿಗಳಿಗೆ ಆಳ್ವಾಸ್ ಸನ್ಮಾನ

ಮೂಡುಬಿದಿರೆ: ದ್ವಿತೀಯ ಪಿಯು ಅಂತಿಮ ಪರೀಕ್ಷೆಯಲ್ಲಿ ರಾಜ್ಯದ ಅಗ್ರಗಣ್ಯ 10 ರ್ಯಾಂಕ್ನ ಒಳಗೆ ಸ್ಥಾನ ಪಡೆದ ಆಳ್ವಾಸ್ ಪದವಿಪೂರ್ವ ಕಾಲೇಜಿನ 103 ವಿದ್ಯಾರ್ಥಿಗಳ ಜೊತೆ ಎಸ್‌ಎಸ್‌ಎಲ್ಸಿಯಲ್ಲಿ 50%ಕ್ಕಿಂತ ಕಡಿಮೆ ಅಂಕಗಳಿಸಿ, ನಂತರ ಪದವಿಪೂರ್ವ ಶಿಕ್ಷಣಕ್ಕೆ ಆಳ್ವಾಸ್ ಸೇರಿದ ನಂತರ 95%ಕ್ಕಿಂತಲೂ ಅಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸಂಸ್ಥೆಯ ವತಿಯಿಂದ ಗೌರವಿಸುವ ಸಮಾರಂಭ ನುಡಿಸಿರಿ ಸಭಾಂಗಣದಲ್ಲಿ ನಡೆಯಿತು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಮೋಹನ್ ಆಳ್ವ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ, ನೀವು ಈಗ ಕೇವಲ ನಮ್ಮ ವಿದ್ಯಾರ್ಥಿಗಳಲ್ಲ, ನಮ್ಮ ಸಂಸ್ಥೆಯ ರಾಯಭಾರಿ ಗಳಾಗುವವರು. ಇಲ್ಲಿ ಕಲಿತಿರುವ ಶಿಸ್ತಿನ ಜೊತೆಗೆ ಉತ್ತಮ ಸ್ವಭಾವ, ಹೋರಾಟ ಮನೋಭಾವ ಹಾಗೂ ಕೂಡಿ ಬಾಳುವ ಗುಣಗಳು ನಿಮ್ಮ ಮುಂದಿನ ಜೀವನಕ್ಕೆ ದಾರಿದೀಪವಾಗಲಿ ಎಂದರು.

ಆಳ್ವಾಸ್‌ನ್ನು 'ಮಿನಿ ಇಂಡಿಯಾ' ಎಂದು ಕರೆಯಲಾಗುತ್ತದೆ. ದೇಶದ ವಿವಿಧ ಭಾಗಗಳಿಂದ ಬಂದ ವಿದ್ಯಾರ್ಥಿಗಳು ಇಲ್ಲಿ ಬೆರೆತು ಬದುಕುತ್ತಾರೆ. ಭಾಷೆ, ಸಂಸ್ಕೃತಿ, ಸಂಪ್ರದಾಯಗಳ ವೈವಿಧ್ಯತೆಯ ನಡುವೆಯೂ ಒಗ್ಗಟ್ಟಿನಿಂದ ಬದುಕುವುದನ್ನು ಕಲಿಸುತ್ತದೆ ಎಂದರು.

ಮುಂದಿನ ಶೈಕ್ಷಣಿಕ ವಿಸ್ತರಣೆಯ ಭಾಗವಾಗಿ, ಈ ವರ್ಷದಿಂದ ಎಂಬಿಬಿಎಸ್ ಕೋರ್ಸ್ ಪ್ರಾರಂಭಿಸಲಾಗುವುದು ಎಂದರು. ವಾಣಿಜ್ಯ ವಿಭಾಗದಲ್ಲಿ 600ಕ್ಕೇ 600 ಅಂಕ ಪಡೆದ ದಿಶಾಳಿಗೆ 3 ಲಕ್ಷ ನಗದು ಹಾಗೂ ವಿಜ್ಞಾನ ವಿಭಾಗದಲ್ಲಿ ರಾಜ್ಯಕ್ಕೆ ದ್ವಿತೀಯ ಸ್ಥಾನಿಯಾದ ರಕ್ಷಿತಾ ಮಂಜುನಾಥ್‌ಗೆ 2 ಲಕ್ಷ ನಗದಿನೊಂದಿಗೆ ಸನ್ಮಾನಿಸಲಾಯಿತು. ಆಳ್ವಾಸ್ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಪ್ರೊ. ಮೊಹಮ್ಮದ್ ಸದಾಕತ್, ಉಪಪ್ರಾಂಶುಪಾಲೆ ಝಾನ್ಸಿ ಪಿ. ಎನ್. ಇದ್ದರು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಮೋಹನ್ ಆಳ್ವ ಅವರು ಪಿಯು, ಎಸ್ಸೆಸ್ಸೆಲ್ಸಿಯಲ್ಲಿ ಅಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸಂಸ್ಥೆಯ ವತಿಯಿಂದ ಸನ್ಮಾನಿಸಿ ಗೌರವಿಸಿದರು.

ಕುಡಿವ ನೀರಿನ ಘಟಕಕ್ಕೆ ಶಾಸಕ ಚನ್ನಬಸಪ್ಪ ಭೇಟಿ

ಶಿವಮೊಗ್ಗ: ನಗರಕ್ಕೆ ಕುಡಿಯುವ ನೀರು ಪೂರೈಸುವ ವ್ಯವಸ್ಥೆಯನ್ನು ಸಂಪೂರ್ಣವಾಗಿ ಮೇಲ್ದರ್ಜೆಗೇರಿಸುವ ಹಾಗೂ ಶುದ್ಧೀಕರಣ ಪ್ರಕ್ರಿಯೆಯಲ್ಲಿ ಕಂಡುಬರುತ್ತಿರುವ ತಾಂತ್ರಿಕ ಅಡಚಣೆಗಳನ್ನು ನಿವಾರಿಸುವಲ್ಲಿ ಶಾಸಕ ಎಸ್.ಎನ್. ಚನ್ನಬಸಪ್ಪ ತೀರ್ಥಹಳ್ಳಿ ರಸ್ತೆಯ ನೀರಿನ ಶುದ್ಧೀಕರಣ ಘಟಕಕ್ಕೆ ಅಧಿಕಾರಿಗಳೊಂದಿಗೆ ಭೇಟಿನೀಡಿ ಪರಿಶೀಲನೆ ನಡೆಸಿದರು. ಬಳಿಕ ಮಾತನಾಡಿದ ಶಾಸಕರು, 'ನಗರದ ಕುಡಿಯುವ ನೀರಿನ ಬೇಡಿಕೆ ಹೆಚ್ಚುತ್ತಿದ್ದು, ಹಾಲಿ ಇರುವ ಘಟಕದ ಮೇಲೆ ಒತ್ತಡ ಹೆಚ್ಚಿದೆ. ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಇತ್ತೀಚೆಗೆ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರನ್ನು ಭೇಟಿ ಮಾಡಿ, ಶಿವಮೊಗ್ಗಕ್ಕೆ ಮತ್ತೊಂದು ನೂತನ ಕುಡಿಯುವ ನೀರಿನ ಶುದ್ಧೀಕರಣ ಘಟಕವನ್ನು ಮಂಜೂರು ಮಾಡುವಂತೆ ಅಧಿಕೃತ ಮನವಿ ಸಲ್ಲಿಸಲಾಗಿದೆ. ಸರಕಾರದ ಮಟ್ಟದಲ್ಲಿ ಈ ಯೋಜನೆಯನ್ನು ತ್ವರಿತವಾಗಿ ಅನುಮೋದನೆಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು. ನೀರು ಸರಬರಾಜಿನ ಪ್ರತಿಯೊಂದು ಹಂತದಲ್ಲೂ ಕಟ್ಟುನಿಟ್ಟಾದ ಶುದ್ಧೀಕರಣ ಮಾನದಂಡಗಳನ್ನು ಅನುಸರಿಸಲು ನೀರು ಸರಬರಾಜು ಮಂಡಳಿಯ ಇಂಜಿನಿಯರ್‌ಗಳಿಗೆ ಸೂಚಿಸಿದರು. ಪೈಪ್ಲೈನ್ ಸೋರಿಕೆ ತಡೆಗಟ್ಟುವುದು, ವಾರ್ಡ್‌ಗಳಿಗೆ ಸಮಾನವಾಗಿ ನೀರು ಹಂಚಿಕೆಯಾಗುವುದನ್ನು ಖಚಿತಪಡಿಸಿಕೊಳ್ಳಲು ಅಧಿಕಾರಿಗಳಿಗೆ ತಾಕೀತು ಮಾಡಿದರು. ಈ ವೇಳೆ ನಾಗರಿಕರ ಹಿತರಕ್ಷಣಾ ವೇದಿಕೆಯ ಪದಾಧಿಕಾರಿಗಳು ಪಾಲಿಕೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಸಿಬ್ಬಂದಿ ನೇಮಕಾತಿ: ಅರ್ಜಿ ಗಳ ಆಹ್ವಾನ

ಚಿತ್ರದುರ್ಗ: ಕೇಂದ್ರದ ಸಿಬ್ಬಂದಿ ನೇಮಕಾತಿ ಆಯೋಗ ಹುದ್ದೆಗಳ ನೇಮಕಾತಿಗಾಗಿ ಮುಕ್ತ ಸ್ಪರ್ಧಾತ್ಮಕ ಕಂಪ್ಯೂಟರ್‌ಆಧಾರಿತ ಪರೀಕ್ಷೆಗೆ ಅರ್ಜಿ ಆಹ್ವಾನಿಸಲಾಗಿದೆ. ಮೆಟ್ರಿಕ್ಯುಲೇಷನ್, ಪಿಯುಸಿ, ಮಾನ್ಯತೆ ಪಡೆದ ವಿಶ್ವ ವಿದ್ಯಾಲಯಗಳಿಂದ ಪದವಿ ಉತ್ತೀರ್ಣರಾಗಿರಬೇಕು. ಅಭ್ಯರ್ಥಿಗಳ ವಯೋಮಿತಿ 18 ರಿಂದ 30 ವರ್ಷದೊಳಗಿರಬೇಕು. ಎಸ್.ಸಿ/ಎಸ್.ಟಿ/ಒ.ಬಿ.ಸಿ/ಇ.ಎಸ್.ಎಮ್ ಇತರ ನಿರ್ದಿಷ್ಟ ವರ್ಗಗಳಿಗೆ ವಯೋಮಿತಿ ಸಡಿಲಿಕೆ ಇರುತ್ತದೆ. ಪರೀಕ್ಷೆಯ ಸಂಭವನೀಯ ದಿನಾಂಕ ಜೂನ್-2026 ಆಗಿದ್ದು, ನಿಖರ ದಿನಾಂಕವನ್ನು ಎಸ್‌ಎಸ್ಸಿ ವೆಬ್‌ಸೈಟ್ ಮೂಲಕ ತಿಳಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಸಿಬ್ಬಂದಿ ನೇಮಕಾತಿ ಆಯೋಗದ ದೂ. 080-25502520 ಅಥವಾ ಚಿತ್ರದುರ್ಗ ನಗರದ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಮೊ. 9945587060, 7022459064 ಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗಾಧಿಕಾರಿ ತಿಳಿಸಿದ್ದಾರೆ.

ಮೇ 9ರಿಂದ ಅಲೆಮಾರಿ ನಿಗಮದ ಅಧ್ಯಕ್ಷೆ ಪ್ರವಾಸ

ಚಿತ್ರದುರ್ಗ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮ ಅಧ್ಯಕ್ಷೆ ಜಿ.ಪಲ್ಲವಿ ಅವರು ಮೇ 9 ಮತ್ತು 10ರಂದು ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕು ಪ್ರವಾಸ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. 9ರಂದು ಸಂಜೆ 6ಕ್ಕೆ ಬೆಂಗಳೂರಿನಿಂದ ಹೊರಟು ರಾತ್ರಿ 9ಕ್ಕೆ ಹಿರಿಯೂರು ನಗರಕ್ಕೆ ಆಗಮಿಸಿ, ಹಿರಿಯೂರು ಪ್ರವಾಸಿ ಮಂದಿರದಲ್ಲಿ ವಾಸ್ತವ್ಯ ಮಾಡುವರು. ಮೇ 10ರಂದು ಬೆಳಿಗ್ಗೆ 10ಕ್ಕೆ ಹಿರಿಯೂರು ನಗರದ 12ನೇ ವಾರ್ಡ್ ಮಾರಕ್ಕ ದೇವಸ್ಥಾನದ ಹತ್ತಿರ ಪರಿಶಿಷ್ಟ ಜಾತಿ ಅಲೆಮಾರಿ ಶಿಳ್ಳೆಕ್ಯಾತ ಸಮುದಾಯಗಳೊಂದಿಗೆ ಕುಂದು-ಕೊರತೆ ಸಭೆ ನಡೆಸುವರು. ಮಧ್ಯಾಹ್ನ 3ಕ್ಕೆ ಹಿರಿಯೂರು ನಗರದ ತೊರೆಪಕ್ಕದ ಎಲ್ಲಮ್ಮದೇವಿ ದೇವಸ್ಥಾನಹತ್ತಿರದ ಕೊರಮರ ಕಾಲೋನಿಯಲ್ಲಿ ಪರಿಶಿಷ್ಟ ಜಾತಿ ಅಲೆಮಾರಿ ಕೊರಮ ಸಮುದಾಯಗಳೊಂದಿಗೆ ಕುಂದು-ಕೊರತೆ ಸಭೆ ನಡೆಸುವರು. ಸಂಜೆ 5ಕ್ಕೆ ಬೆಂಗಳೂರಿಗೆ ಪ್ರಯಾಣ ಬೆಳೆಸುವರು ಎಂದು ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷರ ವಿಶೇಷ ಕರ್ತವ್ಯಾಧಿಕಾರಿ ಎಂ.ಬಿ.ಶಶಿಧರ್‌ತಿಳಿಸಿದ್ದಾರೆ.

ಕಾಂಗ್ರೆಸ್ ಲೀಡ್‌ಗೆ ಪಕ್ಷೇತರರ ಬ್ರೇಕ್!

ದಾವಣಗೆರೆ: ದಕ್ಷಿಣ ವಿಧಾನ ಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ನ ಸಮರ್ಥ್ ಶಾಮನೂರು 69, 578 ಪತ ಪಡೆದು ಜಯಬೇರಿ ಬಾರಿಸಿದ್ದಾರೆ. ಬಿಜೆಪಿಯ ಶ್ರೀನಿವಾಸ ದಾಸಕರಿಯಪ್ಪ 63, 870 ಮತ ಗಳಿಸಿ ಪರಾಜಿತಗೊಂಡಿದ್ದಾರೆ. ಆದರೆ ಎಸ್ಡಿಪಿಐಐ ಸೇರಿದಂತೆ ಹಲವು ಮುಸ್ಲಿಂ ಪಕ್ಷೇತರ ಅಭ್ಯರ್ಥಿಗಳು 22 ಸಾವಿರಕ್ಕೂ ಅಧಿಕ ಮತ ಪಡೆದು ಕಾಂಗ್ರೆಸ್ಗೆ ಹೆಚ್ಚಿನ ಲೀಡ್ ತಪ್ಪಿಸುವಲ್ಲಿ ಯಶಸು ಕಂಡಿದ್ದಾರೆ.

ಟಿಕೆಟ್ ಆಕಾಂಕ್ಷಿಯಾಗಿದ್ದ ಕಾಂಗ್ರೆಸ್ ಮುಖಂಡ ಸಾಧಿಕ್ ಪೈಲ್ವಾನ್ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ನಂತರ ಕಣದಿಂದ ನಿವೃತ್ತಿ ಹೊಂದಿದ್ದರೂ ಅವರಿಗೆ 47 ಮತಗಳು ಬಂದಿವೆ. ಎಸ್ಡಿಪಿಐನ ಅಪ್ಸರ್ ಕೊಡ್ಲಿಪೇಟೆ ಅವರು ಬರೋಬ್ಬರಿ 18,975 ಮತ ಪಡೆದಿದ್ದಾರೆ. ಇನ್ನು, ಪಕ್ಷೇತರರಾಗಿ ಸ್ಪರ್ಧಿಸಿದ್ದ ಖಾದರ್‌ಅದಿಲ್ ಭಾಷಾ ಅವರಿಗೆ ರೈತ ಸಂಘಟನೆಗಳ ಬೆಂಬಲ ಪಡೆದು ಅಬ್ಬರದ ಪ್ರಚಾರ ನಡೆಸಿದ್ದರು. ಅವರೂ 1082 ಮತ ಪಡೆದಿದ್ದಾರೆ. ನಂತರ, ಸೈಯದ್ ರಿಜಾಯ್ 1186 ಮತ ಪಡೆದಿದ್ದಾರೆ. ಪಕ್ಷೇತರರಾಗಿದ್ದಖಾಜಾಮುದ್ದೀನ್ ಗುಡಿಗೇರಿ 50 ಮತ, ದಾದಾ ಕಲಂದರ್50 ಮತ, ಶಬಾಜ್ ಖಾನ್ 95, ಸೈಯದ್ ಇಮ್ತೀಯಾಜ್ 87, ಜಬೀನಾತಾಜ್ 335, ಮನ್ಸೂರ್‌ಅಲಿ 477, ಮೆಹಬೂಬ್ 225, ಸಾಜಿದ್ 94, ಸುಭಾನ್ ಸಾಬ್ 70, ಸೈಯಾದ್ ಜಾಂದ್ವೀರ್77 ಮತ ಪಡೆದಿದ್ದಾರೆ. ಒಟ್ಟು 13 ಕಾಂಗ್ರೆಸ್ ಅಭ್ಯರ್ಥಿಗಳು 22,849 ಮತ ಪಡೆದಿದ್ದಾರೆ. ಇದರೊಟ್ಟಿಗೆ, 511 ನೋಟಾ ಮತಗಳು ಬಿದ್ದಿವೆ.

ಮತದಾರರ ಒಲವು ಕೈಗೆ ಉಪ ಚುನಾವಣೆ ಸಾಕ್ಷಿ

ಚಿತ್ರದುರ್ಗ: ರಾಜ್ಯದಲ್ಲಿ ನುಡಿದಂತೆ ನಡೆಯುತ್ತಿರುವ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದತ್ತ ಮತದಾರರ ಒಲವು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ ಎಂಬುದಕ್ಕೆ ದಾವಣಗೆರೆ ದಕ್ಷಿಣ, ಬಾಗಲಕೋಟೆ ಉಪ ಚುನಾವಣೆಯಲ್ಲಿನ ಗೆಲುವೇ ಸಾಕ್ಷಿ ಎಂದು ಮಾಜಿ ಸಚಿವ, ಕೆಪಿಸಿಸಿ ಉಪಾಧ್ಯಕ್ಷ ಎಚ್.ಆಂಜನೇಯ ಹೇಳಿದ್ದಾರೆ. ರಾಜ್ಯದ ಎರಡು ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿಗಳ ಗೆಲುವು ಸಿದ್ದರಾಮಯ್ಯ ಅವರ ಆಡಳಿತದ ಹಿರಿಮೆಗೆ ಬಹುದೊಡ್ಡ ಗರಿ ಆಗಿದೆ. ಬಾಗಲಕೋಟೆ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ವಿರುದ್ಧ ಎಲ್ಲ ರಾಜಕೀಯ ಶತ್ರುಗಳು ಒಗ್ಗೂಡಿದ್ದರು. . ಆದರೆ, ಆ ಕ್ಷೇತ್ರದ ಮತದಾರರು ನಮ್ಮ ನಿರೀಕ್ಷೆಗೂ ಮೀರಿ ಕೈ ಅಭ್ಯರ್ಥಿ ಉಮೇಶ್ ಮೇಟಿ ಅವರನ್ನು ಗೆಲ್ಲಿಸಿದ್ದಾರೆ ಎಂದು ತಿಳಿಸಿದ್ದಾರೆ.

{ಎಚ್.ಡಿ.ಕುಮಾರಸ್ವಾಮಿ} ಕೇಂದ್ರ ಸಚಿವ

ಎನ್ಡಿಎ ಮೈತ್ರಿಕೂಟದ ಅಭೂತಪೂರ್ವ ಗೆಲುವು ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿಯ ನಾಯಕತ್ವ ಮತ್ತು ವಿಕಸಿತ ಭಾರತಕ್ಕಾಗಿ ಅವರ ಪರಿವರ್ತನಾಪ್ರೇರಿತ ಕಾರ್ಯಸೂಚಿಯಲ್ಲಿ ಜನರು ಹೊಂದಿರುವ ನಿರಂತರ ನಂಬಿಕೆಯ ದೃಢೀಕೃತ ಫಲಿತಾಂಶವಾಗಿದೆ.



ಕೆಲವು ಗೊಂದಲಗಳ ನಡುವೆ ಗೆದ್ದು ಬೀಗಿದ ಕಾಂಗ್ರೆಸ್ | ಭರ್ಜರಿ ಸ್ಪರ್ಧೆ ಒಡ್ಡಿದ್ದ ಕಮಲದ ಅಭ್ಯರ್ಥಿ ಶ್ರೀನಿವಾಸ್

ತಾತನ ದಕ್ಷಿಣ ಕ್ಷೇತ್ರಕ್ಕೆ ಸಮರ್ಥ ಉತ್ತರಾಧಿಕಾರಿ

ವಿಶ್ವವಾಣಿ ಸುದ್ದಿಮನೆ, ದಾವಣಗೆರೆ:

ಸಾಕಷ್ಟು ಗೊಂದಲ, ಮುಸ್ಲಿಂ ಸಮುದಾಯದ ಅಸಮಾಧಾನದ ನಡುವೆಯೂ ದಾವಣಗೆರೆ ದಕ್ಷಿಣದಲ್ಲಿ ಮತ್ತೊಮ್ಮೆ ಕಾಂಗ್ರೆಸ್ ಅಧಿಪತ್ಯ ಸಾಧಿಸಿದೆ. ಶತಾಯಗತಾಯ ಕಮಲ ಅರಳಿಸಬೇಕೆಂದು ಪಣತೊಟ್ಟಿದ್ದ ಬಿಜೆಪಿ ಮತ್ತೊಮ್ಮೆ ಸೋಲು ಕಾಣುವಂತಾಯ್ತು.

ಒಟ್ಟು 25 ಜನ ಅಭ್ಯರ್ಥಿಗಳು ಸ್ಪರ್ಧಾ ಕಣದಲ್ಲಿದ್ದ ದಾವಣಗೆರೆ ದಕ್ಷಿಣದ ಮತ ಎಣಿಕೆ ಕಾರ್ಯ ನಗರದ ಡಿ.ಆರ್.ಆರ್‌ಶಾಲೆಯಲ್ಲಿ ಸೋಮವಾರ ನಡೆಯಿತು. 24 ಸುತ್ತಿನ ಮತ ಎಣಿಕೆಯಲ್ಲಿ ಕಾಂಗ್ರೆಸ್ಸಿನ ಸಮರ್ಥ ಶಾಮನೂರು ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ ವಿರುದ್ಧ 5,708 ಮತಗಳ ಅಂತರದಿಂದ ಜಯ ದಾಖಲಿಸಿದ್ದಾರೆ. ಸಮರ್ಥ ಶಾಮನೂರು 68,619 ಮತಗಳನ್ನು ಪಡೆದರೆ, ಶ್ರೀನಿವಾಸ ದಾಸಕರಿಯಪ್ಪ 63,746 ಮತ ಗಳಿಸಲಷ್ಟೇ ಶಕ್ತರಾಗಿದ್ದಾರೆ.

ತಾತನ ಕ್ಷೇತ್ರ ಮೊಮ್ಮಗ:

ಹಿರಿಯ ಕಾಂಗ್ರೆಸ್ ಶಾಸಕ ಡಾ.ಶಾಮನೂರು ಶಿವಶಂಕರಪ್ಪನವರ ನಿಧನದಿಂದ ತೆರವಾಗಿದ್ದ ಕ್ಷೇತ್ರವನ್ನು ಮೊಮ್ಮಗ ಉಳಿಸಿಕೊಳ್ಳುವ ಯಶಸ್ವಿಯಾದರೂ, ಅನುಕಂಪದ ಅಲೆಯ ನಡುವೆಯೂ ದಾಖಲೆಯ ಅಂತರದಲ್ಲಿ ಗೆಲುವು ಸಾಧಿಸಲು ಸಾಧ್ಯವಾಗಿಲ್ಲ. ಆದರೂ ಮೊದಲ ಚುನಾವಣೆಯಲ್ಲಿ ಸಮರ್ಥ ಶಾಮನೂರು ಗೆಲುವಿನ ನಗೆ ಬೀರುವ ಮೂಲಕ ದಾವಣಗೆರೆ ದಕ್ಷಿಣ ಕ್ಷೇತ್ರ ಕಾಂಗ್ರೆಸ್ ಭದ್ರಕೋಟೆ ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿದ್ದಾರೆ.

ಏರಿಳಿತದ ನಡುವೆ ಗೆಲುವು:

ಮತದಾರರ ಆಶೀರ್ವಾದ ನಮ್ಮ ಮೇಲಿದೆ. ಕಾರ್ಯಕರ್ತರು ಬಹಳ ಉತ್ಸುಕರಾಗಿ ಹೋರಾಡಿದ್ದರಿಂದ ನಮ್ಮ ಪುತ್ರ ಸಮರ್ಥ್ ಗೆದ್ದಿದ್ದಾರೆ. ನಮ್ಮ ತಂದೆ, ನಾನು ಇದೇ ಕ್ಷೇತ್ರದಿಂದ ಗೆದ್ದು ಬಂದಿದ್ದೇವೆ. ಈಗಾಗಲೇ ಸಾಕಷ್ಟು ಅಭಿವೃದ್ಧಿ ಮಾಡಿದ್ದು, ಮುಂದೆ ಮತ್ತಷ್ಟು ಅಭಿವೃದ್ಧಿ ಮಾಡುವೆ. ಸಾಕಷ್ಟು ಗೊಂದಲ ನಡುವೆಯೂ ಮತದಾರರು ನಮ್ಮನ್ನು ಆಶೀರ್ವದಿಸಿದ್ದಾರೆ. ಅವರೆಲ್ಲರಿಗೂ ನಾನು ಧನ್ಯವಾದ ಸಲ್ಲಿಸುವೆ.

-ಎಸ್.ಎಸ್. ಮಲ್ಲಿಕಾರ್ಜುನ್, ಸಚಿವ

ಜನರು ನನ್ನನ್ನು ಗೆಲ್ಲಿಸಿರುವುದು ಖುಷಿ ತಂದಿದೆ. ನಾನು ಮಾತನಾಡುವುದಿಲ್ಲ. ಕೆಲಸ ಮಾಡಿ ತೋರಿಸುವೆ. ಎರಡೇ ವರ್ಷದಲ್ಲಿ ದಕ್ಷಿಣ ಕೇತ್ರ ಅಭಿವೃದ್ಧಿ ಪಥದತ್ತ ಕೊಂಡ್ಯೊಯ್ಯುವೆ.

-ಸಮರ್ಥ್ ಶಾಮನೂರು, ವಿಜೇತ ಅಭ್ಯರ್ಥಿ

ನಮ್ಮ ಪಕ್ಷ, ನನ್ನ ಪರವಾಗಿ ಕೆಲಸ ಮಾಡಿದ ಎಲ್ಲಾ ಮುಖಂಡರು, ಕಾರ್ಯಕರ್ತರು, ಹಿತೈಷಿಗಳು, ಸ್ನೇಹಿತರು, ಎಲ್ಲಾ ಸಮುದಾಯದ ಮತದಾರರಿಗೂ ಕೃತಜ್ಞತೆ ಅರ್ಪಿಸುತ್ತೇನೆ.

-ಶ್ರೀನಿವಾಸ ದಾಸಕರಿಯಪ್ಪ, ಪರಾಜಿತ ಅಭ್ಯರ್ಥಿ

ಅಂಚೆ ಮತ ಎಣಿಕೆಯಲ್ಲಿ ಕಾಂಗ್ರೆಸ್ಸಿನ ಸಮರ್ಥ್ ಶಾಮನೂರು 8 ಮತಗಳಿಂದ ಮುನ್ನಡೆ ಸಾಧಿಸಿದ್ದರು. ಮೊದಲ ಸುತ್ತಿನಲ್ಲಿ ಕೂಡ ಕಾಂಗ್ರೆಸ್ ಮುನ್ನಡೆಯಲ್ಲಿತ್ತು. ಆದರೆ, ನಂತರದ 2ರಿಂದ 7ನೇ ಸುತ್ತಿನವರೆಗೆ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ನಿರಂತರವಾಗಿ ಮುನ್ನಡೆ ಕಾಯ್ದುಕೊಂಡಿದ್ದರು. 8ನೇ ಸುತ್ತಿನಿಂದ ಮುಂಚೂಣಿಗೆ ಬಂದ ಸಮರ್ಥ, ಆನಂತರ ತಿರುಗಿ ನೋಡಲಿಲ್ಲ. ಏರಿಳಿತದ ನಡುವೆ ಗೆಲುವಿನ ದಡ ಸೇರುವಲ್ಲಿ ಸಮರ್ಥ ಯಶಸ್ವಿಯಾದರು.

ನನಸಾಗದ ಕನಸು:

ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ವಾಲ್ಮೀಕಿನಾಯಕ ಸಮಾಜದ ಶ್ರೀನಿವಾಸ ದಾಸಕರಿಯಪ್ಪ ಸಾಕಷ್ಟು ನಿರೀಕ್ಷೆ ಹುಟ್ಟಿಸಿದ್ದರು. ಕ್ಷೇತ್ರದಲ್ಲಿ ನಿರಂತರವಾಗಿದ್ದ ಕಾಂಗ್ರೆಸ್ ಗೆಲುವಿನ ನಾಗಾಲೋಟಕ್ಕೆ ಶ್ರೀನಿವಾಸ್ ಬ್ರೇಕ್ ಹಾಕಲಿದ್ದಾರೆಂಬ ನಿರೀಕ್ಷೆ ಬಿಜೆಪಿ ಕಾರ್ಯಕರ್ತರಲ್ಲಿತ್ತು. ಆದರೆ ಸಾಕಷ್ಟು ಪೈಪೋಟಿ ನೀಡಿದ್ದಾರಾದರೂ ದಾವಣಗೆರೆ ದಕ್ಷಿಣದಲ್ಲಿ ಕಮಲ ಅರಳಿಸುವ ಕನಸು ನನಸಾಗಲಿಲ್ಲ. ಅದರೂ ಶ್ರೀನಿವಾಸ್ ಭರ್ಜರಿ ಪೈಪೋಟಿ ನೀಡಿ ಸೋಲುಂಡಿದ್ದಾರೆ.

ಕೈ ಕೊಟ್ಟ ಸ್ಟ್ರಾಂಗ್ ರೂಮ್ ಕೀ :

ಮತ ಎಣಿಕೆಯ ಸ್ಟ್ರಾಂಗ್ ರೂಂ ಓಪನ್ ಮಾಡಲು ಅಧಿಕಾರಿಗಳು ಕೆಲಕಾಲ ಹರಸಾಹಸ ಪಟ್ಟರು. ಬೆಳಗ್ಗೆ ಸರಿಯಾಗಿ 7.30ರ ಸುಮಾರಿನಲ್ಲಿ ಜಿಲ್ಲಾ ಚುನಾವಣಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ, ಚುನಾವಣಾಧಿಕಾರಿ ಸಂತೋಷ್ ಕುಮಾರ್,ಚುನಾವಣಾ ವೀಕ್ಷಕ ಕುಮಾರ್‌ರಮಣಿಕಾಂತ್, ಜಿಪಂ ಸಿಇಒ ಗಿತ್ತೆ ಮಾಧವ ವಿಠ್ಠಲ್ ರಾವ್, ಎಸ್ಪಿ ಡಾ.ಎಚ್.ಟಿ. ಶೇಖರ್ ಸಮ್ಮುಖದಲ್ಲಿ ಸ್ಟ್ರಾಂಗ್ ಓಪನ್ ಮಾಡಲು ಚಾಲನೆ ನೀಡಿದರು. ಆದರೆ, ಮತಯಂತ್ರಗಳು ಇರುವ ರೂಮ್ ನಂಬರ್1, 2, 3ರ ಬೀಗದ ಕೀ ಸಿಗದ ಹಿನ್ನೆಲೆಯಲ್ಲಿ ಬಾಗಿಲು ತೆಗೆಯಲು ಹರಸಾಹಸ ಮಾಡಲಾಯಿತು. ಕೊನೆಗೆ ಸುತ್ತಿಗೆ ಬಳಸಿ ಬೀಗ ಹೊಡೆದು ರೂಂ ಬಾಗಿಲ್ ಓಪನ್ ಮಾಡಲಾಯಿತು.

ಸಿಬ್ಬಂದಿಗೆ ತರಾಟೆ:

ಮೂರು ಸ್ಟ್ರಾಂಗ್ ರೂಮ್ ಬೀಗದ ಕೀ ಸಿಗದೆ ಸಿಬ್ಬಂದಿ ಪರದಾಡಿದರು. ಜಿಲ್ಲಾ ಚುನಾವಣಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಸಿಬ್ಬಂದಿ ವಿರುದ್ಧ ತರಾಟೆಗೆ ತೆಗೆದುಕೊಂಡರು. ಆಗ ಬೀಗದ ಕೀ ತೆಗೆಯುವ ಸಿಬ್ಬಂದಿ ಗಲಿಬಿಲಿಗೊಂಡರು.

ಶೂನಲ್ಲಿ ಮೊಬೈಲ್ :

ಮತ ಎಣಿಕೆ ಕೇಂದ್ರಕ್ಕೆ ಪಕ್ಷದ ಪರ ಮತ ಎಣಿಕೆ ಏಜೆಂಟರ್‌ಆಗಿ ಬಂದಿದ್ದ ಬಿಜೆಪಿ ಮುಖಂಡರೊಬ್ಬರೂ ಶೂನಲ್ಲಿ ಮೊಬೈಲ್ ಇಟ್ಟುಕೊಂಡು ಬಂದಿದ್ದರು. ತಪಾಸಣೆ ವೇಳೆ ಶೂನಲ್ಲಿ ಮೊಬೈಲ್ ತಂದಿರುವುದು ಪತ್ತೆಯಾಯಿತು. ಮುಖಂಡನನ್ನು ಎಸ್ಪಿ ಡಾ.ಎಚ್ .ಟಿ.ಶೇಖರ್ ಮೊಬೈಲ್ ತರದಂತೆ ತಾಕೀತು ಮಾಡಿ ಹೊರ ಕಳುಹಿಸಿದರು.

ಅಕ್ರಮದ ವಿರುದ್ಧ ಕಾನೂನು ಮೊರೆ: ಶ್ರೀನಿವಾಸ್

ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆಯಲ್ಲಿ ಅಕ್ರಮ ನಡೆದಿದ್ದು, ಈ ಬಗ್ಗೆ ರಾಜ್ಯ ಮತ್ತು ಕೇಂದ್ರ ಚುನಾವಣಾ ಆಯೋಗಗಳಿಗೆ ದೂರು ನೀಡುವ ಜೊತೆಗೆ ನ್ಯಾಯಾಲಯದ ಮೊರೆ ಹೋಗುವುದಾಗಿ ಕ್ಷೇತ್ರದ ಪರಾಜಿತ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ಟಿ. ದಾಸಕರಿಯಪ್ಪ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ದಕ್ಷಿಣ ಕ್ಷೇತ್ರದ ಮತ ಎಣಿಕೆ ಕೇಂದ್ರದ ಸ್ಟ್ರಾಂಗ್ ರೂಂಗಳ ಬಾಗಿಲುಗಳ ಬೀಗ ತೆಗೆಯುವ ಬದಲಿಗೆ, ಚಿಲಕಗಳನ್ನೇ ಒಡೆದಿದ್ದರಿಂದ ಅಲ್ಲಿ ಅಕ್ರಮದ ವಾಸನೆ ಬಂದಿದೆ ಎಂದರು. ಚುನಾವಣಾಧಿಕಾರಿ ಬೀಗ ಮರೆತು ಬರುತ್ತಾರೆಂದರೆ ಅಲ್ಲೇನೋ ನಡೆದಿದೆಯೆಂದೇ ಅರ್ಥ. ಜವಾಬ್ದಾರಿಯುತ ಚುನಾವಣಾಧಿಕಾರಿಗಳು ಮೋಸ ಮಾಡಿದರೆ ಅಂತಹ ಅಧಿಕಾರಿಗಳ ವಿರುದ್ಧ ರಾಜ್ಯ, ಕೇಂದ್ರ ಚುನಾವಣಾ ಆಯೋಗಗಳಿಗೆ ದೂರು ನೀಡುವ ಜೊತೆಗೆ ನ್ಯಾಯಾಲಯದಲ್ಲೂ ಕಾನೂನು ಹೋರಾಟ ನಡೆಸುವೆ ಎಂದು ಅವರು ಎಚ್ಚರಿಸಿದರು.

ಬಿಎಸ್‌ವೈ ಅಭಿಮಾನಿ ಬೈಕಿನಲ್ಲಿ ಪ್ರಚಾರ

ಚಿತ್ರದುರ್ಗ: ನಗರದ ಹೊರವಲಯದ ಮಾದಾರ ಚನ್ನಯ್ಯ ಗುರುಪೀಠದ ಪಕ್ಕದ ಮೈದಾನದಲ್ಲಿ ಮೇ 9 ರಂದು ನಡೆಯುವ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಯಡಿಯೂರಪ್ಪ ರವರ ಅಭಿಮಾನಿ ರಾಜ್ಯದಾದ್ಯಂತ ಬೈಕ್ನಲ್ಲಿ ಪ್ರವಾಸ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಆಗಮಿಸುವಂತೆ ಯಡಿಯೂರಪ್ಪ ಅಭಿಮಾನಿಗಳಿಗೆ ಆಹ್ವಾನವನ್ನು ನೀಡುತ್ತಿದ್ದಾನೆ.

ಮೈಸೂರಿನ ವಕೀಲರಾದ ಛಲವಾದಿ ಕರಿಯಪ್ಪ ತನ್ನ ಬದುಕಿನಲ್ಲಿ ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಹಲವಾರು ರೀತಿ ಸೌಲಭ್ಯ ಪಡೆದಿದ್ದಾರೆ. ವಿದ್ಯಾರ್ಥಿಯಾಗಿದ್ದಾಗ ಉಚಿತವಾಗಿ ಸೈಕಲ್‌ನ್ನು ನೀಡಿದರು. ಹೆಣ್ಣು ಮಕ್ಕಳು ಯಾರಿಗೂ ಸಹ ಹೊರೆಯಾಗ ಬಾರದೆಂದು ಭಾಗ್ಯಲಕ್ಷ್ಮೀ ಯೋಜನೆಯನ್ನು ಜಾರಿ ಮಾಡಿದರು. ಚಿತ್ರದುರ್ಗ ಜಿಲ್ಲೆಗೆ ಭದ್ರ ಮೇಲ್ದಂಡೆ ಜಾರಿ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಇದ್ದಲ್ಲದೆ ತುಮಕೂರು-ದಾವಣಗೆರೆ ನೇರ ರೈಲು ಮಾರ್ಗ ಯೋಜನೆ ಜಾರಿಗೆ ಆಸಕ್ತಿ ವಹಿಸಿದ್ದರು ಎಂದು ಹೇಳಿದರು.

ರಾಜ್ಯದ 31 ಜಿಲ್ಲೆಗಳನ್ನು ಸುಮಾರು 4500 ಕಿ,ಮೀನ್ನು ಎಂಟು ದಿನಗಳಲ್ಲಿ ಪೂರ್ಣ ಮಾಡುವುದರ ಮೂಲಕ ಅಭಿಮಾನೋತ್ಸವಕ್ಕೆ ಆಗಮಿಸುವಂತೆ ಜನರಿಗೆ ಮನವಿ ಮಾಡಲಾಗುವುದು. ಈಗಾಗಲೇ ಮೇ 2 ರಂದು ಬಿಜೆಪಿ ರಾಜ್ಯಾಧ್ಯಕ್ಷ ವಿಜೇಯೇಂದ್ರ ಮೈಸೂರಿನಲ್ಲಿ ನನ್ನ ಯಾತ್ರೆಗೆ ಚಾಲನೆ ನೀಡಿದರು. ಈಗಾಗಲೇ ಚಾಮರಾಜನಗರ, ಮಂಡ್ಯ, ರಾಮನಗರ, ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು ಮಾರ್ಗವಾಗಿ ಸೋಮವಾರ ಚಿತ್ರದುರ್ಗವನ್ನು ತಲುಪಲಾಗಿದೆ. ಮುಂದೆ ದಾವಣಗೆರೆ, ಹಾವೇರಿ ಮೂಲಕ ಉಳಿದ ಜಿಲ್ಲೆಗಳಲ್ಲಿ ಪ್ರವಾಸವನ್ನು ಮಾಡಿ ಮೇ 9ಕ್ಕೆ ದುರ್ಗಕ್ಕೆ ಬರಲಾಗುವುದು ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾ ಮಾಧ್ಯಮ ವಕ್ತಾರ ನಾಗರಾಜ್ ಬೇದ್ರೇ, ಕಾರ್ಯಕರ್ತ ಯಶವಂತ ಉಪಸ್ಥಿತರಿದ್ದರು.

ಇನ್ನೂ ಬಾರದ ಬೆಂಬಲ ಬೆಲೆಯ ರಾಗಿ ದುಡ್ಡು

ಹೊಸದುರ್ಗ: ತಾಲೂಕಿನ ರೈತರು ತಾವು ಕಷ್ಟಪಟ್ಟು ಬೆಳೆದಿದ್ದ ರಾಗಿಯನ್ನು ಬೆಂಬಲ ಬೆಲೆಗೆ ಮಾರಾಟ ಮಾಡಿ, ಎರಡು ತಿಂಗಳು ಕಳೆದರೂ ಅವರ ಬ್ಯಾಂಕ್ ಖಾತೆಗೆ ಸರಕಾರ ದುಡ್ಡು ಹಾಕದೇ ರೈತರು ಕಂಗಾಲಾಗಿದ್ದಾರೆ ಕೃಷಿಕ ಸಮಾಜದ ತಾಲೂಕು ಅಧ್ಯಕ್ಷ ರಾಗಿ ಶಿವಮೂರ್ತಿ ತಿಳಿಸಿದ್ದಾರೆ.

ಕಳೆದ ಫೆಬ್ರವರಿ ಮೊದಲನೇ ವಾರದಿಂದಲೇ ರಾಗಿ ಖರೀದಿ ಪ್ರಾರಂಭ ಮಾಡಿದ್ದು, ಇಲ್ಲಿಯವರೆಗೆ ಸುಮಾರು ಶೇ 80ರಷ್ಟು ಖರೀದಿ ಮುಗಿದಿದೆ. ಆದರೆ ಬೆಂಬಲ ಬೆಲೆಗೆ ರಾಗಿ ಮಾರಾಟ ಮಾಡಿದ್ದ ರೈತರಿಗೆ ಇನ್ನೂ ಬ್ಯಾಂಕ್ ಖಾತೆಗಳಿಗೆ ಹಣ ಜಮಾ ಮಾಡಿಲ್ಲ. ರಾಗಿ ಕೊಟ್ಟು ದುಡ್ಡಿಗಾಗಿ ಕಾಯುವಂತಾಗಿದೆ. ಹಣವಿಲ್ಲದೇ ರೈತರ ಜೀವನ ನಿರ್ವಹಣೆ ದುಸ್ತರವಾಗುತ್ತಿದೆ.

ಪೂರ್ವಮುಂಗಾರು ಅರಂಭವಾಗುತ್ತಿದ್ದು, ಈ ವೇಳೆ ಬಿತ್ತನೆ ಬೀಜ, ಗೊಬ್ಬರ, ಕೃಷಿ ಪರಿಕರ ಖರೀದಿಸಲು ರೈತರಿಗೆ ಹಣದ ಅವಶ್ಯಕತೆ ಹೆಚ್ಚಾಗಿದೆ. ಹಣಕ್ಕಾಗಿ ರೈತರು ಪರದಾಡುವಂತಾಗಿದೆ. ಸಂಬಂಧಪಟ್ಟ ಅಧಿಕಾರಿಗಳಿಗೆ ದೂರವಾಣಿ ಕರೆ ಮಾಡಿದರೆ ನಾಳೆ, ನಾಡಿದ್ದು ಮುಂದಿನ ವಾರ ಎಂದು ಸುಳ್ಳು ಭರವಸೆ ನೀಡಿ ರೈತರನ್ನು ಮೋಸ ಮಾಡಿದ್ದಾರೆ ಎಂದು ಶಿವಮೂರ್ತಿ ಆರೋಪಿಸಿದ್ದಾರೆ.

ಕಳೆದ ಫೆ.7ರಂದು ಸಾವೆ ಖರೀದಿ ಕೇಂದ್ರ ಪ್ರಾರಂಭ ಮಾಡಿದ್ದು ನೆಪಮಾತ್ರಕ್ಕೆ. ಏಕೆಂದರೆ ಇಲ್ಲಿ ಒಬ್ಬ ರೈತರ ಸಾವೆಯನ್ನು ಬೆಂಬಲ ಬೆಲೆಗೆ ಖರೀದಿಸಿಲ್ಲ. ಅಧಿಕಾರಿಗಳು ಸುಮ್ಮನೆ ಬೇಕಾಬಿಟ್ಟಿ ಸುಳ್ಳು ಮಾಹಿತಿ ನೀಡಿ, ರೈತರು ಕಣ್ಣೀರಿಡುವಂತೆ ಮಾಡಿದ್ದಾರೆ. ಮುಂದಿನ ವರ್ಷ ಮುಂಗಾರು ಸಾವೆ ಬೆಳೆದರೆ ಜೂನ್, ಜುಲೈ ತಿಂಗಳಲ್ಲಿ ಖರೀದಿ ಕೇಂದ್ರ ಮಾಡಿದರೆ ಒಳ್ಳೆಯದು ಎಂದು ತಿಳಿಸಿದ್ದಾರೆ.

ಮೂರು ರಾಜ್ಯಗಳಲ್ಲಿ ಬಿಜೆಪಿ ಗೆಲುವು: ಸಂಭ್ರಮ



ಜಗಳೂರು: ಪಶ್ಚಿಮಬಂಗಾಳ, ಅಸ್ಸಾಂ, ಪದುಚೇರಿ ರಾಜ್ಯದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಪಕ್ಷಗಳು ಹೆಚ್ಚು ಸ್ಥಾನಗಳನ್ನು ಪಡೆದು ಅಭೂತಪೂರ್ವ ಗೆಲುವು ಸಾಧಿಸಿರುವುದು ದೇಶದ ಮುಂದಿನ ಚುನಾವಣೆಯ ದಿಕ್ಸೂಚಿಯಾಗಿದೆ ಎಂದು ಮಾಜಿ ಶಾಸಕ ಎಚ್. ಪಿ. ರಾಜೇಶ್ ಹೇಳಿದರು. ಪಟ್ಟಣದ ಮಹಾತ್ಮಗಾಂಧಿ ವೃತ್ತದಲ್ಲಿ ಪಂಚ ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಪಶ್ಚಿಮಬಂಗಾಳ, ಅಸ್ಸಾಂ, ಪದುಚೇರಿಯಲ್ಲಿ ಬಿಜೆಪಿಯ ಭರ್ಜರಿ ಗೆಲುವಿಗೆ ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಣೆ ಮಾಡಿ ಮಾತನಾಡಿದರು. ಪ್ರಧಾನಮಂತ್ರಿ ನರೇಂದ್ರ ಮೋದಿಜಿಯ ವರ ಆಡಳಿತದಲ್ಲಿ ಅವರು ನೀಡಿದ ಜನಪರ ಯೋಜನೆಗಳು ಇಡೀ ದೇಶದಲ್ಲಿ ಬಿಜೆಪಿಯ ಪರವಾದ ಅಲೆ ಇದೆ ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿದೆ. ಇದು ಪಕ್ಷದ ಹಾಗೂ ಕಾರ್ಯಕರ್ತರ ಗೆಲುವಾಗಿದೆ. ಈ ಗೆಲುವು ಕಾರ್ಯಕರ್ತರ ಹುಮ್ಮಸ್ಸನ್ನು ಹೆಚ್ಚು ಮಾಡಿದೆ ಎಂದು ತಿಳಿಸಿದರು.

ದಾವಣಗೆರೆ ನೈತಿಕ ಗೆಲುವು:

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಉಪ ಚುನಾವಣೆಯಲ್ಲಿ ಬಿಜೆಪಿ ಪಕ್ಷದಿಂದ ಪ್ರಬಲವಾದ ಪೈಪೋಟಿ ಮಾಡಿದ್ದೇವೆ. ಇಲ್ಲಿ ಕಾಂಗ್ರೆಸ್ ಪಕ್ಷ ಸೋಲುತ್ತದೆ ಎಂದು ಸಿಎಂ ಸಿದ್ದರಾಮಯ್ಯ ಮೂರಾನಾಲ್ಕು ದಿನಗಳು ದಾವಣಗೆರೆಯಲ್ಲಿ ಇದ್ದು ಪ್ರಚಾರ ಮಾಡಿದ್ದರು. ಕಾಂಗ್ರೆಸ್ ಪಕ್ಷ ದೊಡ್ಡ ಗೆಲುವನ್ನು ಸಾಧಿಸಿಲ್ಲ, ಬಿಜೆಪಿ ನೈತಿಕವಾಗಿ ಗೆದ್ದಿದೆ ಎಂದು ರಾಜೇಶ್ ಬಿಜೆಪಿ ಸೋಲನ್ನು ಸಮರ್ಥಿಸಿಕೊಂಡರು.

ಬಿಜೆಪಿ ಮಂಡಲ ಅಧ್ಯಕ್ಷ ಮುರುಳಾರಧ್ಯ ಮಾತನಾಡಿದರು. ಈ ಸಂದರ್ಭದಲ್ಲಿ ಕೆಂಚಮ್ಮ ಧನ್ಯಕುಮಾರ್, ಮಾಜಿ ಪ.ಪಂ ಅಧ್ಯಕ್ಷ ಜೆ.ವಿ ನಾಗರಾಜ್, ಮುಖಂಡರಾದ ಬಿಸ್ತುವಳ್ಳಿ ಬಾಬು, ಶ್ರೀನಿವಾಸ್, ವಿಕ್ರಮ್, ಹೊನ್ನೂರಸ್ವಾಮಿ, ಓಬಳೇಶ್, ಮಾರುತಿ, ಲ್ಯಾಬ್ ಶಿವು, ಸೂರಲಿಂಗಪ್ಪ, ನರಸಿಂಹಮೂರ್ತಿ, ಬಾಲರಾಜ್, ಬಾಬು, ಉಮೇಶ್, ಬಸವರಾಜ್, ಇದ್ದರು.

ಉಪ ಚುನಾವಣೆ ಗೆಲುವು: ಕಾಂಗ್ರೆಸ್ ವಿಜಯೋತ್ಸವ

ಚಿತ್ರದುರ್ಗ: ರಾಜ್ಯದಲ್ಲಿ ನಡೆದ ಎರಡು ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಜಯಬೇರಿ ಬಾರಿಸಿದ್ದು ಸೋಮವಾರ ಚಿತ್ರದುರ್ಗದಲ್ಲಿ ಜಿಲ್ಲಾ ಕಾಂಗ್ರೆಸ್ ಕಚೇರಿ ಬಳಿ ಅಧ್ಯಕ್ಷರಾದ ಎಂ.ಕೆ.ತಾಜ್ ಪೀರ್‌ಅವರ ನೇತೃತ್ವದಲ್ಲಿ ವಿಜಯೋತ್ಸವ ಆಚರಣೆ ಮಾಡಲಾಯಿತು.

ಚಿತ್ರದುರ್ಗದಲ್ಲಿ ಜಿಲ್ಲಾ ಕಾಂಗ್ರೆಸ್ ಕಚೇರಿ ಬಳಿ ಜಿಲ್ಲಾಧ್ಯಕ್ಷ ಎಂ.ಕೆ.ತಾಜ್ ಪೀರ್ ಅವರ ನೇತೃತ್ವದಲ್ಲಿ ವಿಜಯೋತ್ಸವ ಆಚರಣೆ ಮಾಡಲಾಯಿತು.

ನಂತರ ಅವರು ಮಾತನಾಡಿ, ದಾವಣಗರೆ ದಕ್ಷಿಣದಲ್ಲಿ ಸಮರ್ಥ ಶಾಮನೂರು ಹಾಗೂ ಬಾಗಲಕೋಟೆಯಲ್ಲಿ ಉಮೇಶ್ ಮೇಟಿ ಅವರ ಗೆಲುವು ನಮ್ಮ ಪಕ್ಷದ ಸಿದ್ಧಾಂತದ ಗೆಲುವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರ ಜೋಡಿ ಪರಿಶ್ರಮದ ಫಲವಾಗಿ ಎರಡೂ ಕಡೆ ಪಕ್ಷ ಗೆದ್ದಿದೆ. ಇದ್ದಲ್ಲದೆ ರಾಜ್ಯದಲ್ಲಿ ಕಳೆದ ಮೂರು ವರ್ಷದಲ್ಲಿ ಸಿದ್ದರಾಮಯ್ಯ ಉತ್ತಮ ಆಡಳಿತ ನೀಡಿದ್ದಾರೆ. ಪಂಚ ಗ್ಯಾರೆಂಟಿಗಳನ್ನು ಜಾರಿ ಮಾಡುವ ಮೂಲಕ ಜನತೆಗೆ ನೆರವಾಗಿದ್ದಾರೆ. ಈ ಚುನಾವಣೆಯ ಫಲಿತಾಂಶ ಮಂದಿನ ಚುನಾವಣೆಯ ದಿಕ್ಸೂಚಿಯಾಗಲಿದೆ, ಮತದಾ ರರು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುತ್ತಿದ್ದಾರೆ ಎಂದರು. ಎರಡು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಿದ್ದಕ್ಕೆ ಮತದಾರರಿಗೆ ಕೃತಜ್ಞತೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಡಿಸಿಸಿ ಕಾರ್ಯದರ್ಶಿಗಳಾದ ಸಂಪತ್ ಕುಮಾರ್, ಮೈಲಾರಪ್ಪ, ಗ್ಯಾರೆಂಟಿ ಪ್ರಾಧಿಕಾರದ ಅಧ್ಯಕ್ಷ ಶಿವಣ್ಣ, ಓಬಿಸಿ ಅಧ್ಯಕ್ಷ ಎನ್.ಡಿ. ಕುಮಾರ್, ಮುದಾಸಿರ್, ಚೋಟು, ಖಾಸಿಂಅಲಿ, ಚಿತ್ರದುರ್ಗ ಜಿಲಲಾ ಆಶ್ರಯ ಕಮಿಟಿ ಸದಸ್ಯರಾದ ಮುನೀರಾ ಮಕಾನಾದಾರ್, ಸಾಧಿಕ್ ಭಾಗವಹಿಸಿದ್ದರು. ಈ ವೇಳೆ ಸಿಹಿಯನ್ನು ಹಂಚಿ ಪಟಾಕಿಯನ್ನು ಸಿಡಿಸಲಾಯಿತು.

ನೆಲ್ಲೂರು ಗ್ರಾಮ ರಸ್ತೆ ಕಾಮಗಾರಿ ಪೂರ್ಣ

ಚಂದ್ರಗುತ್ತಿ: ಸಮೀಪದ ಹರೀಶಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನೆಲ್ಲೂರು ಗ್ರಾಮದೊಳಗಿನ ರಸ್ತೆಅಭಿವೃದ್ಧಿ ಕಾಮಗಾರಿಯು ಶಿಕ್ಷಣ ಹಾಗೂ ಜಿಲ್ಲಾಉಸ್ತುವಾರಿ ಸಚಿವರಾದಎಸ್. ಮಧು ಬಂಗಾರಪ್ಪ ಅವರ ವಿಶೇಷ ಕಾಳಜಿಯಿಂದ ಯಶಸ್ವಿಯಾಗಿ ಪೂರ್ಣಗೊಂಡಿದೆ. ಸಿಎಂ ವಿಶೇಷ ಅನುದಾನದಡಿ ಈ ರಸ್ತೆ ನಿರ್ಮಾಣಕ್ಕೆ ಸುಮಾರು 30 ಲಕ್ಷ ರು. ವ್ಯಯಿಸಲಾಗಿದೆ. ಈ ಹಿಂದೆಗ್ರಾಮದ ರಸ್ತೆಗಳು ತೀವ್ರವಾಗಿ ಹದಗೆಟ್ಟಿದ್ದವು. ಇದನ್ನು ಅರಿತ ಸಚಿವರು, ವಿಶೇಷ ಆಸಕ್ತಿ ವಹಿಸಿ ಅನುದಾನ ಬಿಡುಗಡೆಗೊಳಿಸುವ ಮೂಲಕ ಸುಸಜ್ಜಿತ ರಸ್ತೆ ನಿರ್ಮಾಣಕ್ಕೆ ಹಾದಿ ಸುಗಮಗೊಳಿಸಿದ್ದಾರೆ. ತಾಪಂ ಮಾಜಿ ಸದಸ್ಯರಾದ ಸುನೀಲ್‌ಗೌಡ ಅವರು ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಪೂರ್ಣಗೊಂಡಿರುವ ಈ ಗುಣಮಟ್ಟದ ಕಾಂಕ್ರೀಟ್ ರಸ್ತೆಯು ಗ್ರಾಮ ದ ಮೂಲಭೂತ ಸೌಕರ್ಯಕ್ಕೆ ದೊಡ್ಡ ಬಲ ನೀಡಿದೆ ಎಂದು ತಿಳಿಸಿದರು.

ಗ್ಯಾರಂಟಿಗಳ ಸಭೆಗೆ ಮಾಹಿತಿ ಸಮೇತ ಬನ್ನಿ

ಚಳ್ಳಕೆರೆ: ಸಭೆಗೆ ಸರಿಯಾದ ಮಾಹಿತಿ ತನ್ನಿ, ಸಭೆಯಲ್ಲಿ ಮನಸೋ ಇಚ್ಛೆ ವರದಿ ನೀಡುವುದು ಶೋಭೆಯಲ್ಲ ಎಂದು ಗ್ಯಾರಂಟಿ ಸಮಿತಿ ಅಧ್ಯಕ್ಷ ಗದ್ದಿಗೆ ತಿಪ್ಪೇಸ್ವಾಮಿ ಅಧಿಕಾರಿಗಳ ವಿರುದ್ಧ ಗರಂ ಆದರು.

ಅವರು ನಗರದ ತಾಲೂಕು ಪಂಚಾಯತಿ ಸಭಾಂಗಣದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಕುರಿತು ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದರು, ಗ್ಯಾರಂಟಿ ಯೋಜನೆ ಜಾರಿಯಾದ ಇಲ್ಲಿಯವರೆಗೆ ಚಳ್ಳಕೆರೆ ತಾಲೂಕಿನಲ್ಲಿ ಸುಮಾರು 90, 062 ಫಲಾನುಭವಿಗಳಿಗೆ ಗೃಹ ಲಕ್ಷ್ಮಿ ಹಣ ತಲುಪುತ್ತಿದೆ, ಇನ್ನೂ ಬಾಕಿ ಉಳಿದ 34 ಫಲಾನುಭವಿಗಳು ಐಟಿ, ಜಿಎಸ್ ಟಿಗೆ ಒಳಪಟ್ಟವರು. ಇತರರನ್ನ ಗುರುತಿಸಿ ಸರಕಾರದ ಯೋಜನೆ ತಲುಪಿಸಿ , ಸಭೆಗೆ ಬಂದಾಗ ಸರಿಯಾದ ಮಾಹಿತಿ ತನ್ನಿ ಎಂದರು, ಇದೇ ಸಂಧರ್ಭದಲ್ಲಿ ತಾಪಂ ಸಹಾಯಕ ನಿರ್ದೇಶಕ ಸಂಪತ್ ಕುಮಾರ್, ಗ್ಯಾರಂಟಿ ಸಮಿತಿ ಸದಸ್ಯ ಆಂಜನೇಯ, ಕವಿತಾ ದಳವಾಯಿ, ಮುಜಿಬುಲ್ಲಾ, ತಿಪ್ಪೇಸ್ವಾಮಿ, ಜನಾರ್ದನ, ಅನಿಲ್ ಕುಮಾರ್ ಇದ್ದರು.

ಪ್ರಗತಿ ಪರೀಶಿಲನಾ ಸಭೆಯಲ್ಲಿ ಗ್ಯಾರಂಟಿ ಸಮಿತಿ ಅಧ್ಯಕ್ಷ ಗದ್ದಿಗೆ ತಿಪ್ಪೇಸ್ವಾಮಿ ಮಾತನಾಡಿದರು.

ಮೇ 9 ರಿಂದ ಅಲೆಮಾರಿ ನಿಗಮದ ಅಧ್ಯಕ್ಷೆ ಪ್ರವಾಸ

ಚಿತ್ರದುರ್ಗ: ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮ ಅಧ್ಯಕ್ಷೆ ಜಿ.ಪಲ್ಲವಿ ಅವರು ಇದೇ ಮೇ 09 ಮತ್ತು 10ರಂದು ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕು ಪ್ರವಾಸ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ.

ಮೇ 09ರಂದು ಸಂಜೆ 6ಕ್ಕೆ ಬೆಂಗಳೂರಿನಿಂದ ಹೊರಟು ರಾತ್ರಿ 9ಕ್ಕೆ ಹಿರಿಯೂರು ನಗರಕ್ಕೆ ಆಗಮಿಸಿ, ಹಿರಿಯೂರು ಪ್ರವಾಸಿ ಮಂದಿರದಲ್ಲಿ ವಾಸ್ತವ್ಯ ಮಾಡುವರು.

ಮೇ 10ರಂದು ಬೆಳಿಗ್ಗೆ 10ಕ್ಕೆ ಹಿರಿಯೂರು ನಗರದ 12ನೇ ವಾರ್ಡ್ ಮಾರಕ್ಕ ದೇವಸ್ಥಾನದ ಹತ್ತಿರ ಪರಿಶಿಷ್ಟ ಜಾತಿ ಅಲೆಮಾರಿ ಶಿಳ್ಳೆಕ್ಯಾತ ಸಮುದಾಯಗಳೊಂದಿಗೆ ಕುಂದು-ಕೊರತೆ ಸಭೆ ನಡೆಸುವರು.

ಮಧ್ಯಾಹ್ನ 3ಕ್ಕೆ ಹಿರಿಯೂರು ನಗರದ ತೊರೆಪಕ್ಕದ ಎಲ್ಲಮ್ಮದೇವಿ ದೇವಸ್ಥಾನಹತ್ತಿರದ ಕೊರಮರ ಕಾಲೋನಿಯಲ್ಲಿ ಪರಿಶಿಷ್ಟ ಜಾತಿ ಅಲೆಮಾರಿ ಕೊರಮ ಸಮುದಾಯಗಳೊಂದಿಗೆ ಕುಂದು-ಕೊರತೆ ಸಭೆ ನಡೆಸುವರು.

ಸಂಜೆ 5ಕ್ಕೆ ಬೆಂಗಳೂರಿಗೆ ಪ್ರಯಾಣ ಬೆಳೆಸುವರು ಎಂದು ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷರ ವಿಶೇಷ ಕರ್ತವ್ಯಾಧಿಕಾರಿ ಎಂ.ಬಿ.ಶಶಿಧರ್‌ತಿಳಿಸಿದ್ದಾರೆ.

ಮೋದಿ ಗ್ಯಾರಂಟಿ ಮುಂದೆ ಬೇರೆ ಮ್ಯಾಜಿಕ್ ನಡೆಯಲ್ಲ

ಶಿವಮೊಗ್ಗ: ಮೋದಿ ಗ್ಯಾರಂಟಿಯ ಮುಂದೆ ಯಾವ ಗ್ಯಾರಂಟಿಗಳು ನಡೆಯುವುದಿಲ್ಲವೆಂದು ಸಂಸದ ಬಿ. ವೈ. ರಾಘವೇಂದ್ರ ಹೇಳಿದ್ದಾರೆ.

ನಗರದ ಜಿಲ್ಲಾ ಬಿಜೆಪಿ ಕಛೇರಿಯ ಮುಂಭಾಗ ಅಸ್ಸಾಂ, ಪಶ್ಚಿಮ ಬಂಗಾಳ, ಪುದುಚರಿಯಲ್ಲಿ ಬಿಜೆಪಿ ನೇತೃತ್ವದ ಎನ್ಡಿಎ ಸರ್ಕಾರ ಬಹುಮತ ಪಡೆದ ಹಿನ್ನಲೆಯಲ್ಲಿ ವಿಜಯೋತ್ಸವದಲ್ಲಿ ಪಾಲ್ಗೊಂಡು ಮಾತನಾಡಿದರು.

ಇಂದಿನ ಪಂಚರಾಜ್ಯಗಳ ಫಲಿತಾಂಶ ಬಿಜೆಪಿ ದೇಶವ್ಯಾಪಿ ಸರ್ವಸ್ಪರ್ಶ ಎಂಬುದನ್ನು ಸಾಬೀತುಪಡಿಸಿದೆ. ಪ್ರಪಂಚದಲ್ಲೇ ಕಮ್ಯೂನಿಷ್ಟರ ರಾಕ್ಷಿಸಿ ಕೃತ್ಯಕ್ಕೆ ಮತದಾರ ಉತ್ತರ ನೀಡಿದ್ದು, ಕೇರಳದಲ್ಲೂ ಕಮ್ಯೂನಿಷ್ಟ್ ಸರ್ಕಾರ ತೊಲಗಿದೆ. ಬಂಗಾಳದಲ್ಲಿ ದೇಶದ್ರೋಹಿಗಳಿಗೆ ತಕ್ಕಪಾತ ಕಲಿಸಿದ್ದಾರೆ. ಮಹಿಳಾ ಮೀಸಲಾತಿಗೆ ಮಮತಾ ಬ್ಯಾನರ್ಜಿ ಕೂಡ ವಿರೋಧ ವ್ಯಕ್ತಪಡಿಸಿದ್ದರು. ಮಹಿಳೆಯರು ತಕ್ಕ ಉತ್ತರ ನೀಡಿದ್ದಾರೆ ಎಂದರು.

ಶಾಸಕ ಚನ್ನಬಸಪ್ಪ ಮಾತನಾಡಿ, ಇವತ್ತು ದೇಶದಾದ್ಯಂತ ಹಿಂದೂ ಎದ್ದಿದ್ದಾನೆ. ಇಂದು ಪಶ್ಚಿಮಬಂಗಾಳ ಗೆದ್ದಿದ್ದೇವೆ. ನಾಳೆ ಕೇರಳ ಗೆಲ್ಲುತ್ತೇವೆ. ತೃಣಮೂಲ ಕಾಂಗ್ರೆಸ್ ತೃಣಕ್ಕೆ ಸಮಾನ ಎಂಬುದನ್ನು ಮತದಾರ ತೋರಿಸಿದ್ದಾನೆ ಎಂದರು.

ಇತಿಹಾಸ ಗೊತ್ತಿದ್ದವರು ಮಾತ್ರ ಇತಿಹಾಸ ಸೃಷ್ಟಿಸಬಲ್ಲರು. ಪಂಚರಾಜ್ಯಗಳಲ್ಲಿ ಎನ್ಡಿಎ ಒಗ್ಗಟ್ಟು ಪ್ರದರ್ಶನವಾಗಿದೆ. ಪಶ್ಚಿಮ ಬಂಗಾಳದಲ್ಲಿ ಮತದಾರರು ದುರ್ಗೆಯ ಸ್ವರೂಪ ಹೊತ್ತು ಮತದಾನ ಮಾಡಿದ್ದಾರೆ. ಇದಕ್ಕೆ ಕಾರಣ ದೇವಿಯ ಆಶೀರ್ವಾದ. ದೀದಿಯ ಗಾಂಚಲಿತನವನ್ನು ಅಲ್ಲಿನ ಮತದಾರ ಹದ್ದುಬಸ್ತಿನಲ್ಲಿಟ್ಟಿದ್ದಾನೆ. ದೇಶ ಉನ್ನತಮಟ್ಟಕ್ಕೆ ಹೋಗಲು ಮತದಾರ ಗೆಲ್ಲಿಸಿದ್ದು ಎಲ್ಲಾ ಸಿದ್ಧತೆ ಮಾಡಿದ್ದೇವೆ. ಪಂಚರಾಜ್ಯಗಳ ಕಾರ್ಯಕರ್ತರಿಗೆ ಅಭಿನಂದನೆ ಸಲ್ಲಿಸುತ್ತೇವೆ. ಅಸ್ಸಾಂನ ಜನತೆಗೂ ಅಭಿನಂದನೆ ಸಲ್ಲಿಸುತ್ತೇನೆ. ಇಂದು ಪಶ್ಚಿಮಬಂಗಾಳ ಗೆದ್ದಿದ್ದೇವೆ. ನಾಳೆ ಕೇರಳಕ್ಕೂ ಲಗ್ಗೆ ಇಡುತ್ತೇವೆ. ಬಂಗಾಳದಲ್ಲಿ ಇನ್ನೂ ನುಸುಳುಕೋರರಿಗೆ ಅವಕಾಶವಿಲ್ಲ. ದೇಶಕ್ಕೆ ದೊಡ್ಡಶಕ್ತಿ ಸಿಕ್ಕಿದೆ. ದೇಶದ್ರೋಹಿಗಳು ಅಲ್ಲಿಂದಲೇ ದೇಶದ ಒಳಗೆ ಪ್ರವೇಶಿಸುತ್ತಿದ್ದರು. ಈಗ ಅಲ್ಲಿನ ಜನತೆ ಒಗ್ಗಟ್ಟಾಗಿ ದೇಶವಿರೋಧಿ ಶಕ್ತಿಗಳಿಗೆ ತಕ್ಕಪಾತ ಕಲಿಸಿದ್ದಾರೆ ಎಂದರು.

ಬಿಜೆಪಿ ಕಾರ್ಯಕರ್ತರು ಕಾರ್ಯಾಲಯದ ಮುಂದೆ ಸಿಹಿಹಂಚಿ, ಪಟಾಕಿ ಸಿಡಿಸಿ ವಿಜಯೋತ್ಸವ ಆಚರಿಸಿದರು. ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಎನ್.ಕೆ. ಜಗದೀಶ್, ಪ್ರಮುಖರಾದ ಎಸ್ .ದತ್ತಾತ್ರಿ, ಮೋಹನ್‌ರೆಡ್ಡಿ, ಜ್ಞಾನೇಶ್ವರ್, ನಾಗರಾಜ್, ಬಳ್ಳೆಕೆರೆ ಸಂತೋಷ್, ಹರಿಕೃಷ್ಣ, ವೀರಭದ್ರಪ್ಪ ಪೂಜಾರಿ, ಚಂದ್ರಶೇಖರ್, ಅಣ್ಣಪ್ಪ, ದಿವಾಕರ್‌ಶೆಟ್ಟಿ, ಮಾಲತೇಶ್, ರಾಜೇಶ್ ಕಾಮತ್, ವಿಶ್ವನಾಥ್, ಸುರೇಖಾ ಮುರಳೀಧರ್, ಶಾಂತಾ ಸುರೇಂದ್ರ, ಅನಿತಾ ರವಿಶಂಕರ್, ಚೈತ್ರಾ ಪೈ, ರಶ್ಮಿ ಶ್ರೀನಿವಾಸ್ ಇದ್ದರು.

ನಗರದ ಜಿಲ್ಲಾ ಬಿಜೆಪಿ ಕಚೇರಿಯ ಮುಂಭಾಗ ಅಸ್ಸಾಂ, ಪಶ್ಚಿಮ ಬಂಗಾಳ, ಪುದುಚರಿಯಲ್ಲಿ ಬಿಜೆಪಿ ಸಾರಿದ ದಿಗ್ವಿಜಯಕ್ಕಾಗಿ ವಿಜಯೋತ್ಸವ ದಲ್ಲಿ ಸಂಸದ ಬಿ.ವೈ. ರಾಘವೇಂದ್ರ ಮಾತನಾಡಿದರು.

ಸಮಾಚಾರ ಸಣ್ಣದಲ್ಲ

ಅಧ್ಯಕ್ಷ ಟ್ರಂಪ್‌ಗೆ ಅನಾರೋಗ್ಯ: ಶಂಕೆ

ವಾಷಿಂಗ್ಟನ್: ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಅನಾರೋಗ್ಯವಾಗಿದೆ. ಅವರು ಖಾಸಗಿ ದಂತವೈದ್ಯರನ್ನು ಭೇಟಿ ಮಾಡಿದ್ದಾರೆ, ತುರ್ತು ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾರೆ ಎಂಬ ಸುದ್ದಿಗಳು ಹರಿದಾಡುತ್ತಿವೆ. ದೇಶದ ಜನತೆ ಅಧ್ಯಕ್ಷ ಟ್ರಂಪ್ ಅವರಿಗೆ ಗಂಭೀರ ಆರೋಗ್ಯ ಸಮಸ್ಯೆ ಎದುರಾಗಿದೆ ಎಂದೇ ಆತಂಕಗೊಂಡಿದ್ದಾರೆ. ಟ್ರಂಪ್ ಮೇ 2ರಂದು ಫ್ಲೋರಿಡಾದಲ್ಲಿ ಖಾಸಗಿ ದಂತವೈದ್ಯರನ್ನು ಭೇಟಿ ಮಾಡಿದ್ದರು. ಇದರ ಬೆನ್ನಲ್ಲೇ 'ಇಂದು ಅಧ್ಯಕ್ಷರ ಯಾವುದೇ ಸಾರ್ವಜನಿಕ ಕಾರ್ಯಕ್ರಮ ಇಲ್ಲ' ಎಂಬ ಅರ್ಥದ ಪ್ರೆಸ್ ಲಿಡ್ ಅನ್ನು ಶ್ವೇತಭವನ ಪ್ರಕಟಿಸಿತು. ಜತೆಗೆ ಸಂಸದೆ ನ್ಯಾನ್ಸಿ ಮೇಸ್ ಅವರು 'ಅಧ್ಯಕ್ಷ ಟ್ರಂಪ್ ಅವರಿಗಾಗಿ ಪ್ರಾರ್ಥನೆ ಮಾಡಿರಿ' ಎಂದು 'ಎಕ್ಸ್' ಸಂದೇಶ ಬರೆದಿದ್ದಾರೆ. ಇದೆಲ್ಲವೂ ಟ್ರಂಪ್ ಅನಾರೋಗ್ಯದ ಸುದ್ದಿ ಹರಡುವುದಕ್ಕೆ ಕಾರಣವಾಗಿದೆ. ಶ್ವೇತಭವನದಲ್ಲಿ ಅತ್ಯಾಧುನಿಕ ವೈದ್ಯಕೀಯ ಸೌಲಭ್ಯಗಳಿದ್ದರೂ ಟ್ರಂಪ್ ಅವರು ಖಾಸಗಿ ವೈದ್ಯರನ್ನು ಭೇಟಿ ಮಾಡಿದ್ದೇಕೆ? ತುರ್ತು ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾರೆಯೇ? ಎಂಬ ಪ್ರಶ್ನೆಗಳು ಜನರ ಮನದಲ್ಲಿ ಮೂಡಿವೆ. ಈ ವದಂತಿಗಳನ್ನು ಶ್ವೇತಭವನ ಪೂರ್ಣ ಸುಳ್ಳು ಎಂದು ತಳ್ಳಿಹಾಕಿದೆ. ಅಧ್ಯಕ್ಷರು ಓವಲ್ ಆಫೀಸ್‌ನಲ್ಲಿ ನಿತ್ಯದ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ, ಅವರಿಗೆ ಯಾವುದೇ ಶಸ್ತ್ರಚಿಕಿತ್ಸೆ ಅಗತ್ಯವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿಯಲ್ಲಿ ಬಿಜೆಪಿ ಗೆಲುವು ಹಿನ್ನೆಲೆ ಬಿಜೆಪಿ ಕಚೇರಿಯಲ್ಲಿ ಸಿಹಿಹಂಚಿ ಹರ್ಷ

ಚುರುಮುರಿ ತಿಂದು ಬಿಜೆಪಿ ಕಾರ್ಯಕರ್ತರ ಸಂಭ್ರಮ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ಪಂಚರಾಜ್ಯಗಳ ಚುನಾವಣೆಯ ಫಲಿತಾಂಶ ಹೊರಬೀಳುತ್ತಿದ್ದಂತೆ ಮಲ್ಲೇಶ್ವರದಲ್ಲಿರುವ ರಾಜ್ಯ ಬಿಜೆಪಿ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಹಬ್ಬದ ಕಳೆ ಕಂಡುಬಂತು.

ಬೆಳಗಿನಿಂದಲೇ ಫಲಿತಾಂಶ ಬಿಜೆಪಿ ಪರ ಬರುತ್ತಿದ್ದಂತೆಯೇ ಪಕ್ಷದ ನಾಯಕರು ಕಾರ್ಯಕರ್ತರು ಪಟಾಕಿ ಹಚ್ಚಿ ಸಂಭ್ರಮಿಸಿದರಲ್ಲದೆ ಕಚೇರಿಯ ಹೊರಭಾಗದಲ್ಲಿ ಸಿಹಿ ತಿನಿಸು ಹಾಗೂ ಚುರುಮುರಿ ತಿಂದು ಸಂಭ್ರಮಿಸಿದರು. ಇದೇ ವೇಳೆ ಶೃಂಗೇರಿಯ ಮತಮರುಎಣಿಕೆಯಲ್ಲಿ ಡಿ.ಎನ್.ಜೀವರಾಜ್ ಕೂಡ ಗೆಲುವು ಸಾಧಿಸಿರುವುದನ್ನು ಪಕ್ಷದ ಕಚೇರಿಯಲ್ಲಿ ಸಂಭ್ರಮಿಸಿದರು.

ಈ ವೇಳೆ ಮಾತನಾಡಿದ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿಯಲ್ಲಿ ಬಿಜೆಪಿ ಗೆಲುವು ಒಂದು ಕಡೆ. ನರೇಂದ್ರ ಮೋದಿ ಅವರ ನಾಯಕತ್ವಕ್ಕೆ ದೊಡ್ಡ ಶಕ್ತಿಯನ್ನು ತುಂಬಿದಂತಾಗಿದೆ. ನಮ್ಮ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಅವರ ಮೊದಲ ಚುನಾವಣೆ ಇದಾಗಿದ್ದು ಅಮಿತ್ ಶಾ ಅವರ ತಂತ್ರಗಾರಿಕೆಯೂ ಈ ಗೆಲುವಿನ ಹಿಂದಿದೆ ಎಂದರು.

ಪಶ್ಚಿಮ ಬಂಗಾಲದ ಗೆಲುವಿಗಾಗಿ ಅಲ್ಲಿನ ಕಾರ್ಯಕರ್ತರಿಗೆ ನಾವು ದೊಡ್ಡ ಸಲಾಂ ಹೇಳಬೇಕಿದೆ. ಅಲ್ಲಿ ಹಲವು ದಶಕಗಳಿಂದ ನಮ್ಮ ಕಾರ್ಯಕರ್ತರ ಮೇಲೆ ನಿರಂತರ ದಬ್ಬಾಳಿಕೆ ಆಗುತ್ತಿತ್ತು. ಇದೆಲ್ಲದಕ್ಕೂ ಇತಿಶ್ರೀ ಹಾಕುವ ಕೆಲಸವನ್ನು ನಮ್ಮ ಕಾರ್ಯಕರ್ತರು ಮಾಡಿದ್ದಾರೆ ಎಂದರಲ್ಲದೇ 3 ರಾಜ್ಯಗಳ ಕಾರ್ಯಕರ್ತರಿಗೆ ವಂದನೆ, ಅಭಿನಂದನೆ ತಿಳಿಸುವುದಾಗಿ ಹೇಳಿದರು.

ಎರಡೂ ಕ್ಷೇತ್ರದಲ್ಲಿ ಕಾರ್ಯಕರ್ತರು ಸಾಕಷ್ಟು ಶ್ರಮ ಹಾಕಿದ್ದಾರೆ: ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಕಾರ್ಯಕರ್ತರು ಸಾಕಷ್ಟು ಶ್ರಮ ಹಾಕಿದ್ದಾರೆ. ಬಾಗಲಕೋಟೆಯ ಸೋಲನ್ನು ನಿರೀಕ್ಷಿಸಿರಲಿಲ್ಲ. ಹಿಂದೆ ಕಾಂಗ್ರೆಸ್ ಪಕ್ಷ ಗೆದ್ದಿದ್ದರೂ ಈ ಬಾರಿ ಮತದಾರರು ನಮ್ಮ ಕೈಹಿಡಿಯುವ ವಿಶ್ವಾಸ ಇತ್ತು. ಎರಡೂ ಕ್ಷೇತ್ರಗಳಲ್ಲಿ ನಮ್ಮ ಕಾರ್ಯಕರ್ತರು ಸಾಕಷ್ಟು ಶ್ರಮ ಹಾಕಿದ್ದಾರೆ. ಮುಖ್ಯಮಂತ್ರಿ ಬಾಗಲಕೋಟೆಯಲ್ಲಿ ಬಂದು 15 ದಿನ ಬೀಡು ಬಿಟ್ಟಿದ್ದರು. ಸಚಿವ ಸಂಪುಟದ ಸದಸ್ಯರೂ ಬೀಡು ಬಿಟ್ಟಿದ್ದರು. ಆದರೂ ಗೆಲುವಿನ ವಿಶ್ವಾಸ ನಮಗಿತ್ತು. ಆದರೆ, ಬಾಗಲಕೋಟೆಯಲ್ಲಿ ನಮಗೆ ಹಿನ್ನಡೆ ಆಗಿದೆ ಎಂಬುದನ್ನು ಒಪ್ಪಿಕೊಳ್ಳುವುದಾಗಿ ಹೇಳಿದರು. ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಶಾಸಕ ಡಾ. ಸಿ.ಎನ್. ಅಶ್ವಥನಾರಾಯಣ್, ವಿಧಾನಪರಿಷತ್ ಸದಸ್ಯರಾದ ಸಿ.ಟಿ. ರವಿ, ಪ್ರತಾಪ್ ಸಿಂಹ ನಾಯಕ್, ಶಾಸಕ ಹರೀಶ್ ಪೂಂಜಾ ಮತ್ತಿತರರಿದ್ದರು.

ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿಯಲ್ಲಿ ಬಿಜೆಪಿ ಗೆಲುವು ಸಾಧಿಸಿದ ಹಿನ್ನೆಲೆ ಬೆಂಗಳೂರಿನ ರಾಜ್ಯ ಬಿಜೆಪಿ ಕಚೇರಿಯಲ್ಲಿ ಕಾರ್ಯಕರ್ತರು ಸಿಹಿ ಹಂಚಿ ಸಂಭ್ರಮಿಸಿದರು.

ಕಾಂಗ್ರೆಸ್ ಪಕ್ಷದ ಕಡೆ ಒಲವಿದೆ ಎನ್ನಲು ಸಾಧ್ಯವಿಲ್ಲ

ಉಪ ಚುನಾವಣೆ ಗೆದ್ದಿದೆ ಎಂದರೆ ಕಾಂಗ್ರೆಸ್ ಪಕ್ಷದ ಕಡೆ ಒಲವಿದೆ ಎನ್ನಲು ಸಾಧ್ಯವಿಲ್ಲ. ಬಾಗಲಕೋಟೆಯಲ್ಲಿನ ಹಿನ್ನಡೆ ಕುರಿತು ನಾವು ಮುಖಂಡರ ಜತೆ ಕುಳಿತು ಚರ್ಚೆ ಮಾಡಬೇಕಾಗಿದೆ. ತದನಂತರ ನಮ್ಮ ಸಂಘಟಿತ ಕಾರ್ಯದ ಕುರಿತು ಕಾರ್ಯತಂತ್ರ ಮಾಡುತ್ತೇವೆ. ಎರಡೂ ಕ್ಷೇತ್ರಗಳಲ್ಲಿ ಯಾವುದೇ ಸಣ್ಣ ಒಡಕಿಲ್ಲದೇ, ಸ್ಥಳೀಯ ಮುಖಂಡರು ತಮ್ಮ ಸಮಸ್ಯೆಗಳನ್ನು ಬದಿಗಿಟ್ಟು ಪಕ್ಷದ ಅಭ್ಯರ್ಥಿ ಪರವಾಗಿ ಒಟ್ಟಾಗಿ, ಒಂದಾಗಿ ಎಲ್ಲರೂ ಶ್ರಮ ಹಾಕಿದ್ದಾರೆ. ಪಕ್ಷದ ನಾಯಕರು ಸಂಘಟಿತರಾಗಿ ಶ್ರಮ ಹಾಕಿದ್ದಾರೆ. ನಾವು ಕೂಡ ಕೈಜೋಡಿಸಿದ್ದೇವೆ. ಕಾರ್ಯಕರ್ತರೂ ಹಗಲೂ ರಾತ್ರಿ ಶ್ರಮ ಹಾಕಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಶೃಂಗೇರಿಯಲ್ಲಿ ಕಾಂಗ್ರೆಸ್‌ನಿಂದ ಮತಗಳವು

ವಿರೋಧ ಪಕ್ಷದ ನಾಯಕ ಆರ್.ಅಶೋಕ ಮಾತನಾಡಿ, ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲೂ ಬಿಜೆಪಿ ಅಭ್ಯರ್ಥಿ ಡಿ.ಎನ್.ಜೀವರಾಜ್ ಗೆಲುವು ಸಾಧಿಸಿದ್ದಾರೆ. ಅವರಿಗೆ ಅಭಿನಂದನೆಗಳು. ಶೃಂಗೇರಿಯಲ್ಲಿ ಕಾಂಗ್ರೆಸ್ ಪಕ್ಷ ಓಟ್ ಚೋರಿ ಮಾಡಿತ್ತು. ಕಾಂಗ್ರೆಸ್ ಅಭ್ಯರ್ಥಿ ಗೆಲ್ಲುವ ರೀತಿ ಒತ್ತಡ ಹಾಕಿದ್ದರು. ಆದರೆ ಅದಕ್ಕೆ ತಡೆ ಬಿದ್ದಿದೆ. ಮರು ಮತ ಎಣಿಕೆಯಲ್ಲಿ ಅಂತಿಮವಾಗಿ ಜೀವರಾಜ್ ಅವರು ಗೆಲುವು ಸಾಧಿಸಿದ್ದಾರೆ ಎಂದರು.ಜೀವರಾಜ್ ಅವರು ಅಧಿಕೃತವಾಗಿ ಗೆಲುವು ಸಾಧಿಸಿದ್ದರೂ ಘೋಷಣೆ ಮಾಡಿರಲಿಲ್ಲ. ಆದರೆ ಈಗ ಜೀವರಾಜ್ ಅವರೇ ವಿಧಾನಸಭಾ ಸದಸ್ಯರು ಎಂಬ ಪ್ರಮಾಣಪತ್ರ ಚುನಾವಣಾಧಿಕಾರಿಕಾರಿ ನೀಡಿದ್ದಾರೆ. ಸ್ಪೀಕರ್ ಅವರ ಬಳಿ ಮಾತನಾಡಿ ಕೂಡಲೇ ಪ್ರಮಾಣವಚನ ಸ್ವೀಕಾರ ಮಾಡಲು ಅವಕಾಶ ಕಲ್ಪಿಸಬೇಕು ಎಂದು ಮನವಿ ಮಾಡುತ್ತೇನೆ. ಬಿಜೆಪಿಗೆ ವಿಧಾನಸಭೆಯಲ್ಲಿ ಮತ್ತೊಂದು ಸೀಟು ಸೇರ್ಪಡೆಯಾಗಿರುವುದು ಖುಷಿ ತಂದಿದೆ. ಉಳಿದ ಎರಡು ವರ್ಷಗಳ ಕಾಲ ಜೀವರಾಜ್ ಅವರು ಶಾಸಕರಾಗಿ ಕೆಲಸ ಮಾಡಲು, ಕ್ಷೇತ್ರದಲ್ಲಿ ಬಿಜೆಪಿ ಕಟ್ಟಲು ಅವಕಾಶ ಸಿಗಲಿದೆ. ಅಲ್ಲದೆ ವಿಧಾನಸಭೆಯಲ್ಲಿ ಕಾಂಗ್ರೆಸ್ ವಿರುದ್ಧ ಹೋರಾಟ ಮಾಡಲು ನಮಗೆ ಇನ್ನಷ್ಟು ಶಕ್ತಿ ಬಂದಿದೆ ಎಂದರು.

ಅಂಚೆ ಮತಗಳ ಮರು ಎಣಿಕೆಯಲ್ಲಿ ಗೆಲುವು ಸಾಧಿಸಿರುವ ಶೃಂಗೇರಿ ಶಾಸಕ ಡಿ.ಎನ್.ಜೀವರಾಜ್ ಅವರು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಭೇಟಿ ಮಾಡಿದರು.

ಟಿವಿಕೆಗೆ ಜಯದ ನಿರೀಕ್ಷೆ ಇರಲಿಲ್ಲ

ಚೆನ್ನೈ: ತಮಿಳುನಾಡು ವಿಧಾನಸಭೆಯ ಚುನಾವ ಣೆಯಲ್ಲಿ ಅಚ್ಚರಿ ರೀತಿಯಲ್ಲಿ ಚಿತ್ರನಟ ವಿಜಯ್ ಜೋಸೆಫ್ ಅವರ ನಾಯಕತ್ವದ ಪಕ್ಷ ತಮಿಳಗ ವೆಟ್ರಿ ಕಳಗಂ ಭರ್ಜರಿ ಜಯ ಸಾಧಿಸಿದೆ. ಅಧಿಕಾರಕ್ಕೇರುವುದೂ ನಿಚ್ಚಳವಾಗಿದೆ.ಆದರೆ, ಸೋಮವಾರ ಬೆಳಗ್ಗೆ ಮತ ಎಣಿಕೆ ಆರಂಭಗೊಂಡ ವೇಳೆ ತಮ್ಮ ಪಕ್ಷಕ್ಕೆ ಈ ಮಟ್ಟದ ಜನಬೆಂಬಲ ಸಿಕ್ಕಿರಲಿದೆ ಎಂಬುದನ್ನು ಅರಿಯದ ಟಿವಿಕೆ ಪಕ್ಷದ ನಾಯಕರು, ಮತದಾನೋತ್ತರ ಚುನಾವಣಾ ಸಮೀಕ್ಷೆಗಳ ಪ್ರಕಾರ ಹೆಚ್ಚೆಂದರೆ ತಮ್ಮ ಪಕ್ಷಕ್ಕೆ 2 ಡಿಜಿಟ್ ಸ್ಥಾನಗಳು ಸಿಗಬಹುದು. ಅದೇ ವೇಳೆ, ಡಿಎಂಕೆಗಾಗಲೀ, ಎಐಎಡಿಎಂಕೆಗಾಗಲೀ ಸ್ಪಷ್ಟ ಬಹುಮತ ಸಿಗದೇ ಅತಂತ್ರ ವಿಧಾನಸಭಾ ಫಲಿತಾಂಶ ಬರಬಹುದು ಎಂದು ತಿಳಿದಿದ್ದರಂತೆ.

ತಮಿಳುನಾಡು ವಿಧಾನಸಭೆ ಚುನಾವಣೆಯಲ್ಲಿ ತಮಿಳಗ ವೆಟ್ರಿ ಕಳಗಂ(ಟಿವಿಕೆ) ಪಕ್ಷವು ಮೊದಲ ಪ್ರಯತ್ನದಲ್ಲಿಯೇ ಭಾರೀ ಗೆಲುವು ಸಾಧಿಸಿದೆ. ಟಿವಿಕೆ ಪಕ್ಷದ ಬೆಂಬಲಿಗ ಮಹಿಳೆಯರು ಚೆನ್ನೈನಲ್ಲಿ 'ಸೀಟಿ' ಊದಿ ಪಕ್ಷದ ಗೆಲುವನ್ನು ವಿಶಿಷ್ಟ ಬಗೆಯಲ್ಲಿ ಸೋಮವಾರ ಆಚರಿಸಿದರು. ಟಿವಿಕೆ ಪಕ್ಷದ ಚಿಹ್ನೆ 'ವಿಷಲ್' ಎಂಬುದು ಗಮನಾರ್ಹ.

ಕರ್ನಾಟಕ ಸರಕಾರ
ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ
(ಕರ್ನಾಟಕ ಸರಕಾರ ಸ್ವಾಯತ್ತ ಸಂಸ್ಥೆ)
ಇ-ಮೇಲ್: directorgimsgulbarga@gmail.com ದೂ.08472-260252

ಸಂಖ್ಯೆ: GIMS/KLB/Tender/IV Fluids/CR/11/2026-27/217 ದಿನಾಂಕ:-27/04/2026.

:: ಟೆಂಡರ ಪ್ರಕಟಣೆ ::

2026-27 ನೇ ಸಾಲಿಗೆ ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿಯ ಜಿಮ್ಸ್ ಆಸ್ಪತ್ರೆಯ ಹಾಗೂ ಟ್ರಾಮಾಕೇರ್ ಹಾಗೂ ಸಪರ್ ಸ್ಪೇಷಾಲಿಟಿ ಆಸ್ಪತ್ರೆಗಳಲ್ಲಿ ಉಪಯೋಗಿಸಲು ಬೇಕಾಗಿರುವ IV Fluids ಗಳನ್ನು ಖರೀದಿಸಲು ಅಧೀಕೃತ ಏಜೇನ್ಸಿ (ಸಂಸ್ಥೆ) ಯವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ (KTPP Act) ಅಧಿನಿಯಮ 1999 ಮತ್ತು ನಿಯಮಗಳು 2000 ರ ಪ್ರಕಾರ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಪ್ರೋಕ್ಯೂರ್‌ಮೆಂಟ ಮೂಲಕ ಟೆಂಡರ ಕರೆಯಲಾಗಿದೆ. ಎಲ್ಲ ವಿವರಗಳು **https://kppp.karnataka.gov.in** ಜಾಲತಾಣದಲ್ಲಿ ನೋಡಬಹುದಾಗಿದೆ.

1) ಟೆಂಡರ್ ಪ್ರಕಟಣೆ ದಿನಾಂಕ: No. GIMS/KLB/Tender/IV Fluids/CR/11/2026-27 Date:27.04.2026 IND. No: DME/2026-27/IND2274, 2) ಅನ್‌ಲೈನ್‌ನಲ್ಲಿ ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಂಡು, ಟೆಂಡರ್ ಅನ್ನು ಇ-Procurement Portal ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ: **26-05-2026 ಸಾಯಂಕಾಲ 4:30ಕ್ಕೆ,** 3) ಆನಲೈನ್ ಮುಖಾಂತರ ಪ್ರಶ್ನೆಗಳನ್ನು ಸಲ್ಲಿಸುವ ಕೋನೆಯ ದಿನಾಂಕ: **08-05-2026 ಸಾಯಂಕಾಲ 5.00 ಗಂಟೆಯವರೆಗೆ,** 4) ಟೆಂಡರ ಪೂರ್ವಭಾವಿ ಸಭೆ: **12-05-2026 ಮಧ್ಯಾಹ್ನ 12:30ಕ್ಕೆ,** 5) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: **27-05-2026 ಸಾಯಂಕಾಲ 5:00ಕ್ಕೆ,** 6) ಹಣಕಾಸಿನ ಲಕೋಟೆಯನ್ನು ತೆರೆಯುವ ದಿನಾಂಕ: **29-05-2026 11:30ಕ್ಕೆ,** 7) ಟೆಂಡರನ ಮೊತ್ತ: ರೂ. **4,52,70,300/-,** 8) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ: **ರೂ. 2,00,000/-,** 9) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ (ರಜಾ ದಿನಗಳನ್ನು ಹೊರತುಪಡಿಸಿ): ನಿರ್ದೇಶಕರು, ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ. ದೂರವಾಣಿ ಸಂಖ್ಯೆ: 08472-260252, Office Email: directorgimsgulbarga@gmail.com Cell:+91 9482093568, Tender Section Email: gimstenderklb22@gmail.com Cell:+91 9972688602

ಸಹಿ/- ನಿರ್ದೇಶಕರು,
ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/95/ಕೆ.ಎಸ್.ಎಂ.ಸಿ.&ಎ/2026-27

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ
(ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ)
E-Mail :- ka.chikkaballapur.dudc@gmail.com, Ph: 08156-277005

ಸಂ:ಜಿನಕೋ/ಚಿಸಿ(1)/ತಾಶಾ/ಅ.ನ-4/107/2025-26 ದಿನಾಂಕ:28.04.2026

ಟೆಂಡರ್ ಅಧಿಸೂಚನೆ

ಚಿಕ್ಕಬಳ್ಳಾಪುರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ)-4 ಯೋಜನೆಯಡಿ ಈ ಕೆಳಕಂಡ ವ್ಯಕ್ತಿ ಸಂಬಂಧಿತ ಕಾರ್ಯಕ್ರಮಗಳಿಗೆ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ ಜಿಲ್ಲೆ ಇವರಿಂದ ಅರ್ಹ ಗುತ್ತಿಗೆದಾರರಿಂದ/ಏಜನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. **ಕಾಮಗಾರಿಗಳ ವಿವರ: (1)** ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4 ರ ಯೋಜನೆಯಡಿ ಬಾಗೇಪಲ್ಲಿ ಪುರಸಭೆಯ ವಿಶೇಷ ಚೇತನರಿಗೆ ವಿದ್ಯುತ್ ಚಾಲಿತ ಟೈಲರಿಂಗ್ ಮಿಷನ್ ಖರೀದಿಸುವುದು. (DMA/2025-26/IND6228), **ಟೆಂಡರ್‌ಗಿಟ್ಟ ಮೊತ್ತ:** ರೂ. 1.85 ಲಕ್ಷ, **ಇ.ಎಮ್.ಡಿ ಮೊತ್ತ:** ರೂ.4650.00 **(2)** ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4 ರ ಯೋಜನೆಯಡಿ ಚಿಕ್ಕಬಳ್ಳಾಪುರ ನಗರಸಭೆಯ ವಿಶೇಷ ಚೇತನರಿಗೆ ವಿದ್ಯುತ್ ಚಾಲಿತ ತ್ರಿಚಕ್ರ ವಾಹನ ಖರೀದಿಸುವುದು. (DMA/2025-26/IND5651/Call-2), **ಟೆಂಡರ್‌ಗಿಟ್ಟ ಮೊತ್ತ: ರೂ.** 79.90, **ಇ.ಎಮ್.ಡಿ ಮೊತ್ತ:** 159816.00 **(3)** ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4 ರ ಯೋಜನೆಯಡಿ ಬಾಗೇಪಲ್ಲಿ ಪುರಸಭೆಯ ವಿಶೇಷ ಚೇತನರಿಗೆ ತ್ರಿಚಕ್ರ ವಾಹನ ಖರೀದಿಸುವುದು. (DMA/2025-26/IND5652/Call-2), **ಟೆಂಡರ್‌ಗಿಟ್ಟ ಮೊತ್ತ: ರೂ.** 13.49, **ಇ.ಎಮ್.ಡಿ ಮೊತ್ತ:** 33728.00 **(4)** ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4 ರ ಯೋಜನೆಯಡಿ ಗೌರಿಬಿದನೂರು ನಗರಸಭೆಯ ವಿಶೇಷ ಚೇತನರಿಗೆ ತ್ರಿಚಕ್ರ ವಾಹನ ಖರೀದಿಸುವುದು. (DMA/2025-26/IND5653/Call-2), **ಟೆಂಡರ್‌ಗಿಟ್ಟ ಮೊತ್ತ: ರೂ.** 19.72, **ಇ.ಎಮ್.ಡಿ ಮೊತ್ತ:** 49300.00, **(5)** ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4 ರ ಯೋಜನೆಯಡಿ ಶಿಡ್ಲಘಟ್ಟ ನಗರಸಭೆಯ ವಿಶೇಷ ಚೇತನರಿಗೆ ತ್ರಿಚಕ್ರ ವಾಹನ ಖರೀದಿಸುವುದು. (DMA/2025-26/IND5654/Call-2), **ಟೆಂಡರ್‌ಗಿಟ್ಟ ಮೊತ್ತ: ರೂ.** 24.90, **ಇ.ಎಮ್.ಡಿ ಮೊತ್ತ:** 49813.00, **(6)** ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4 ರ ಯೋಜನೆಯಡಿ ಚಿಂತಾಮಣಿ ನಗರಸಭೆಯ ವಿಶೇಷ ಚೇತನರಿಗೆ ತ್ರಿಚಕ್ರ ವಾಹನ ಖರೀದಿಸುವುದು. (DMA/2025-26/IND5655/Call-2), **ಟೆಂಡರ್‌ಗಿಟ್ಟ ಮೊತ್ತ: ರೂ.** 26.98, **ಇ.ಎಮ್.ಡಿ ಮೊತ್ತ:** 53965.00, **(7)** ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4 ರ ಯೋಜನೆಯಡಿ ಗುಡಿಬಂಡೆ ಪಟ್ಟಣ ಪಂಚಾಯತಿಯ ವಿಶೇಷ ಚೇತನರಿಗೆ ತ್ರಿಚಕ್ರ ವಾಹನ ಖರೀದಿಸುವುದು. (DMA/2025-26/IND5656/Call-2), **ಟೆಂಡರ್‌ಗಿಟ್ಟ ಮೊತ್ತ: ರೂ.** 12.45, **ಇ.ಎಮ್.ಡಿ ಮೊತ್ತ:** 31134.00. ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು/ ಏಜನ್ಸಿಯವರು ಕೆ.ಪಿ.ಪಿ ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸುವುದು. ಗುತ್ತಿಗೆದಾರರು/ಏಜನ್ಸಿಯವರು ಟೆಂಡರ್ ದಸ್ತಾವೇಜುಗಳನ್ನು ಕೆ.ಪಿ.ಪಿ ಪ್ರೊಕ್ಯೂರ್‌ಮೆಂಟ್ ವೇದಿಕೆ **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಂಡು ವಿದ್ಯುನ್ಮಾನ ಮೂಲಕವೇ **https://kppp.karnataka.gov.in** ನಲ್ಲಿ ಸಲ್ಲಿಸುವುದು. ಟೆಂಡರ್ ಸಂಸ್ಕರಣಾ ಶುಲ್ಕವನ್ನು ಆನ್‌ಲೈನ್ ಮೂಲಕವೇ ಪಾವತಿಸತಕ್ಕದ್ದು. **(1)** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 12.05.2026ರ ಸಂಜೆ 05.30 ಗಂಟೆಗೆ (2)** ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 14.05.2026ರ ಪೂರ್ವಾಹ್ನ 11.00 ಗಂಟೆಗೆ. (3)** ಟೆಂಡರ್‌ಗಳ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 02.06.2026ರ ಬೆಳಗ್ಗೆ 11.00 ಗಂಟೆಗೆ** ಅಥವಾ ಮುಂದೆ ಸೂಚಿಸಿದ ದಿನದಂದು. ಟೆಂಡರ್ ಷರತ್ತುಗಳು ಮತ್ತು ಹೆಚ್ಚಿನ ಮಾಹಿತಿಗಳನ್ನು ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ ಇವರ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಟೆಂಡರ್‌ನ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು, ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/-ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ ಜಿಲ್ಲೆ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:46/ಕೆಎಸ್‌ಎಂಸಿಎ/2026-27

ಪುರಸಭಾ ಕಾರ್ಯಾಲಯ, ಕೋನಪ್ಪನ ಅಗ್ರಹಾರ
ಬೆಂಗಳೂರು ನಗರ ಜಿಲ್ಲೆ-560100.
E-Mail: ka.konappanaagrahara.tmc@gmail.com

ನಂ.ಪು.ಕಾ.ಕೋ/ತಾಂ.ಶಾ/ಸಿ.ಆರ್/01/2026-27 ದಿನಾಂಕ: 04.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

2026-27ನೇ ಸಾಲಿನ ಎಸ್.ಎಫ್.ಸಿ ಮುಕ್ತನಿಧಿ, ಎಸ್‌ಸಿಎಸ್‌ಪಿ ಮತ್ತು ಪುರಸಭಾ ನಿಧಿಯಡಿ ಕೈಗೊಂಡಿರುವ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಸಂಬಂಧಪಟ್ಟ ಟೆಂಡರ್ ಡಾಕ್ಯೂಮೆಂಟ್‌ನ ಷರತ್ತು ಹಾಗೂ ಸೂಚನೆಗೊಳಪಟ್ಟು ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಇಂಡೆಟ್ ಸಂಖ್ಯೆ: DMA/2026-27/BD/WORK INDENT 57776, DMA/2026-27/OW/WORK_INDENT57817, DMA/2026-27/BD/WORK_INDENT57819, DMA/2026-27/WS/WORK_INDENT57820 ಟೆಂಡರ್ ದಿನಾಂಕದ ವಿವರಗಳು: ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:11.05.2026 ಸಂಜೆ17.00ಗಂಟೆಯವರೆಗೆ, ಟೆಂಡರ್ ತೆರೆಯುವ ದಿನಾಂಕ: 12.05.2026ರ ಸಾಯಂಕಾಲ 17.15 ಗಂಟೆಗೆ, ಮತ್ತು ಇಂಡೆಂಟ್ ಸಂಖ್ಯೆ: DMA/2026-27/RD/WORK_INDENT57846 ಟೆಂಡರ್ ದಿನಾಂಕದ ವಿವರಗಳು: ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:19.05.2026 ಸಂಜೆ17.00ಗಂಟೆಯವರೆಗೆ, ಟೆಂಡರ್ ತೆರೆಯುವ ದಿನಾಂಕ: 20.05.2026ರ ಸಾಯಂಕಾಲ 17.15 ಗಂಟೆಗೆ ಯಾವುದೇ ದಿನಾಂಕಗಳಲ್ಲಿನ ಮುಂದೂಡಿಕೆ ಮತ್ತು ತಿದ್ದುಪಡಿಗಳಿದ್ದಲ್ಲಿ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು ಯಾವುದೇ ವಾರ್ತ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಹೆಚ್ಚಿನ ವಿವರಗಳನ್ನು ಕಛೇರಿಯ ತಾಂತ್ರಿಕ ಶಾಖೆಯಿಂದ ಪಡೆಯಬಹುದಾಗಿದೆ

ಸಹಿ /- ಮುಖ್ಯಾಧಿಕಾರಿ
ಪುರಸಭೆ, ಕೋನಪ್ಪನ ಅಗ್ರಹಾರ

ಸಹಿ/- ಆಡಳಿತಾಧಿಕಾರಿಗಳು
ಪುರಸಭೆ, ಕೋನಪ್ಪನ ಅಗ್ರಹಾರ

ವಾಸಾಸಂಇ/ವಾ.ಪ್ರ/479/ಎಸ್‌ಎಸ್‌ಸಿ/2026-27

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ತುಮಕೂರು ಉಪ ವಿಭಾಗ (ಪ್ರಾದೇಶಿಕ), ತುಮಕೂರು
ಇ-ಮೇಲ್: E-Mail:acftumkur@gmail.com
ಸಂಖ್ಯೆ-ಸ.ಅ.ಸಂ/ತುಉವಿ/ಇಟೆಂಡರ್/ಸಿಆರ್-01/2026-27
ದಿನಾಂಕ: 30.04.2026

ಇ-ಟೆಂಡರ್ ಪ್ರಕಟಣೆ

2026-27 ನೇ ಸಾಲಿನಲ್ಲಿ ತುಮಕೂರು ಪ್ರಾದೇಶಿಕ ವಿಭಾಗ, ತುಮಕೂರು ಉಪ ವಿಭಾಗದ ತುಮಕೂರು, ಗುಬ್ಬಿ ಮತ್ತು ಕುಣಿಗಲ್ ವಲಯಗಳಲ್ಲಿ ವಿವಿಧ ಯೋಜನೆಗಳಾದ CAMPA, Rootstock, DDF, KFDF, Roadside, Sirichandanavana, Tiger Project, Daivivana, Treepark, AOA, APA-RSP(KSHIP) ಯೋಜನೆಗಳಡಿಯಲ್ಲಿ ಮುಂದುವರೆದ ಕಾಮಗಾರಿಗಳಿಗೆ ಹಾಗೂ ನಿರ್ವಹಣೆ ಮಾಡಬೇಕಾದ ಕಾಮಗಾರಿಗಳಾದ ನೆಡುತೋಪು ಬೆಳೆಸುವುದು, ಬೆಳೆಸಿರುವ ಸಸಿಗಳ ನಿರ್ವಹಣೆ, ಮೊದಲನೇ, ಎರಡನೇ, ಮೂರನೇ, ನಾಲ್ಕನೇ, ವರ್ಷಗಳ ಹಳೆಯ ನೆಡುತೋಪುಗಳನ್ನು ನಿರ್ವಹಣೆ ಮಾಡುವುದು, ವೃಕ್ಷೋದ್ಯಾನದ ನಿರ್ವಹಣೆಗೆ ಕಾವಲುಗಾರರ ನೇಮಕ ಇತ್ಯಾದಿ ಕಾಮಗಾರಿಗಳನ್ನು ಕೈಗೊಳ್ಳಲು 2026-27ನೇ ಸಾಲಿಗೆ ಅರಣ್ಯ ಗುತ್ತಿಗೆದಾರರಾಗಿ ನೊಂದಾವಣೆಯಾಗಿರುವ ಗುತ್ತಿಗೆದಾರರಿಂದ ಪ್ರತ್ಯೇಕವಾಗಿ ಇ-ಟೆಂಡರ್‌ಗಳನ್ನು ದಾಖಲಿಸಲು ಕೋರಿ ಟೆಂಡರ್ ಆಹ್ವಾನಿಸಲಾಗಿದೆ. ಒಟ್ಟು 92 ಕಾಮಗಾರಿಗಳ ಪೈಕಿ ಗರಿಷ್ಠ ಅಂದಾಜು ಮೊತ್ತ ರೂ.33,98,100/- ಗಳಿಗೆ ಇ.ಎಂ.ಡಿ ಮೊತ್ತ ರೂ.67,962/- ಗಳಾಗಿರುತ್ತದೆ ಮತ್ತು ಕನಿಷ್ಠ ಅಂದಾಜು ಮೊತ್ತ ರೂ.1,38,000/- ಗಳಿಗೆ ಇ.ಎಂ.ಡಿ.ಮೊತ್ತ ರೂ.3,450/-ಗಳಾಗಿರುತ್ತದೆ. ದಿನಾಂಕ:15-05-2026ರ ಅಪರಾಹ್ನ 3-00 ಗಂಟೆಯವರೆಗೆ ಟೆಂಡರ್ ಸಲ್ಲಿಸಬಹುದಾಗಿದೆ ಹಾಗೂ ದಿನಾಂಕ: 16-05-2026ರಂದು ಅಪರಾಹ್ನ 3-00 ಗಂಟೆಗೆ ತಾಂತ್ರಿಕ ಬಿಡ್ಡುಗಳನ್ನು ತೆರೆಯಲಾಗುವುದು. ಪರಿಮಾಣ, ಇಎಂಡಿ ಹಾಗೂ ಇನ್ನಿತರೆ ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಮತ್ತು ಅಂತರ್ಜಾಲದ ಮೂಲಕ ಪಡೆಯಬಹುದಾಗಿದೆ. ವೆಬ್‌ಸೈಟ್ ವಿಳಾಸ- http://www. kppp.karnataka.gov.in.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ತುಮಕೂರು ಉಪ ವಿಭಾಗ, ತುಮಕೂರು.

DIPR/TUM/52/KSMCA/2025-26

ನಾಗಾಲ್ಯಾಂಡ್, ತ್ರಿಪುರದಲ್ಲಿ ಬಿಜೆಪಿ ಗೆಲುವು | ಮಹಾರಾಷ್ಟ್ರದ ಬಾರಾಮತಿಯಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಗೆ ವಿಜಯಮಾಲೆ

ಉಪಚುನಾವಣೆಗಳಲ್ಲಿ ಬಿಜೆಪಿ ಗೆಲುವು

ದೆಹಲಿ: ಗುಜರಾತ್, ಮಹಾರಾಷ್ಟ್ರ, ನಾಗಾಲ್ಯಾಂಡ್, ತ್ರಿಪುರಾದ ನಾನಾ ವಿಧಾನಸಭಾ ಕ್ಷೇತ್ರಗಳಿಗೆ ಇತ್ತೀಚೆಗೆ ನಡೆದಿದ್ದ ಉಪ ಚುನಾವಣೆಯಲ್ಲಿ ಬಿಜೆಪಿ ಉತ್ತಮ ಸಾಧನೆ ಮಾಡಿದೆ. ಕರ್ನಾಟಕದ ಬಾಗಲಕೋಟೆ, ದಾವಣಗೆರೆ ಬಿಟ್ಟು ಉಳಿದ ಬಹುತೇಕ ಕ್ಷೇತ್ರಗಳಲ್ಲಿ ಬಿಜೆಪಿ ಅಥವಾ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ. ಗುಜರಾತ್‌ನ ಉಮ್ರೇತ್, ಮಹಾರಾಷ್ಟ್ರದ ರಹುರಿ, ನಾಗಾಲ್ಯಾಂಡ್‌ನ ಕೋರಿಗಂಜ್, ತ್ರಿಪುರಾದ ಧರ್ಮನಗರ್‌ಗಳಲ್ಲಿ ಬಿಜೆಪಿ ಅಭ್ಯರ್ಥಿ ಗೆಲುವು ಸಾಧಿಸಿದ್ದರೆ, ಮಹಾರಾಷ್ಟ್ರದ ಬಾರಾಮತಿಯಲ್ಲಿ ಬಿಜೆಪಿ ಬೆಂಬಲಿತ ಎನ್‌ಸಿಪಿಯ ಸುನೇತ್ರಾ ಪವಾರ್ ಅವರು ಗೆಲುವು ಸಾಧಿಸಿದ್ದಾರೆ.

ಗುಜರಾತ್‌ನ ಉಮ್ರೇತ್ ವಿಧಾನಸಭಾ ಕ್ಷೇತ್ರದಲ್ಲಿ ನಿಕಟಪೂರ್ವ ಶಾಸಕ ಗೋವಿಂದ ಪಾರ್ಮರ್ ಅವರ ಅಕಾಲಿಕ ಮರಣದಿಂದ ಆ ಕ್ಷೇತ್ರಕ್ಕೆ ಇದೇ ಏ. 23ರಂದು ಉಪ ಚುನಾವಣೆ ನಡೆಸಲಾಗಿದ್ದು, ಮೇ 4ರಂದು ಹೊರಬಿದ್ದ ಫಲಿತಾಂಶದಲ್ಲಿ ಬಿಜೆಪಿಯ ಹರ್ಷದ್ ಭಾಯ್ ಗೋವಿಂದಬಾಯಿ ಪಾರ್ಮರ್ ಅವರು ಗೆಲುವು ಸಾಧಿಸಿದ್ದಾರೆ. ತಮ್ಮ ಸಮೀಪದ ಪ್ರತಿಸ್ಪರ್ಧಿ ಕಾಂಗ್ರೆಸ್ಸಿನ ಭೃಗುರಾಜ್ ಸಿಂಗ್ ಚೌಹನ್ ವಿರುದ್ಧ ಗೆಲುವು ಸಾಧಿಸಿದ್ದಾರೆ.

ಮಹಾರಾಷ್ಟ್ರ: ಮಹಾರಾಷ್ಟ್ರದ ಬಾರಾಮತಿ ಹಾಗೂ ರಹುರಿ ವಿಧಾನಸಭಾ ಕ್ಷೇತ್ರಗಳಿಗೆ ಏ. 23ರಂದು ಉಪ ಚುನಾವಣೆ ನಡೆದಿತ್ತು. ಬಾರಾಮತಿ ಕ್ಷೇತ್ರದ ಶಾಸಕರಾಗಿದ್ದ ಎನ್‌ಸಿಪಿಯ ಅಜಿತ್ ಪವಾರ್ ಅವರು ಜ. 28ರಂದು ಸಾವಿಗೀಡಾದ ಹಿನ್ನೆಲೆಯಲ್ಲಿ ಆ ಕ್ಷೇತ್ರಕ್ಕೆ ಉಪಚುನಾವಣೆ ಘೋಷಣೆಯಾಗಿತ್ತು. ಮೇ 4ರಂದು ಹೊರಬಿದ್ದ ಫಲಿತಾಂಶದಲ್ಲಿ ಅಜಿತ್ ಪವಾರ್ ಪತ್ನಿ ಸುನಂದಾ ಪವಾರ್ (ಎನ್‌ಸಿಪಿ) ಅವರು ಗೆಲುವು ಸಾಧಿಸಿದ್ದಾರೆ. ತಮ್ಮ ಸಮೀಪದ ಪ್ರತಿಸ್ಪರ್ಧಿ ನ್ಯೂ ರಾಷ್ಟ್ರೀಯ ಸಮಾಜ ಪಾರ್ಟಿಯ ಪ್ರೊ. ಘುಟುಕಾಡೆ ಸರ್ ಅವರನ್ನು ಸೋಲಿಸಿದ್ದಾರೆ.

ರಹುರಿ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಬಿಜೆಪಿಯ ಅಕ್ಷಯ್ ಶಿವಾಜಿ ರಾವ್ ಕಾರ್ಡೈಲ್ ಅವರು ಗೆಲುವು ಸಾಧಿಸಿದ್ದಾರೆ. ಅವರ ತಂದೆ ಶಿವಾಜಿರಾವ್ ಕಾರ್ಡೈಲ್ ಅವರು ಕಳೆದ ವರ್ಷ ಅ.17ರಂದು ನಿಧನ ಹೊಂದಿದ್ದರಿಂದ ಆ ಕ್ಷೇತ್ರಕ್ಕೆ ಚುನಾವಣೆ ನಡೆದಿತ್ತು. ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿ ಎನ್‌ಸಿಪಿಯ ಮೊಕಾಟೆ ಗೋವಿಂದ್ ಖಂಡು ವಿರುದ್ಧ ಗೆದ್ದಿದ್ದಾರೆ.

ನಾಗಾಲ್ಯಾಂಡ್: ನಾಗಾಲ್ಯಾಂಡ್‌ನ ಕೋರಿಗಂಜ್ ಕ್ಷೇತ್ರಕ್ಕೆ ಏ. 9ರಂದು ನಡೆದಿದ್ದ ಉಪಚುನಾವಣೆಯ ಫಲಿತಾಂಶ ಹೊರಬಿದ್ದಿದ್ದು ಬಿಜೆಪಿಯ ದಾವೊಚಿರ್ ಐ. ಇಮ್ಚೆನ್ ಜಯ ಸಾಧಿಸಿದ್ದಾರೆ. ತಮ್ಮ ಸಮೀಪದ ಅಭ್ಯರ್ಥಿ ಟೋಷಿಬಾಕಾ (ಪಕ್ಷೇತರ) ಅವರ ವಿರುದ್ಧ ಜಯ ಗಳಿಸಿದ್ದಾರೆ.

ತ್ರಿಪುರಾ: ಧರ್ಮನಗರ್ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಬಿಜೆಪಿಯ ಜಹರ್ ಚಕ್ರಬೊರ್ತಿ ಅವರು ಜಯ ಗಳಿಸಿದ್ದಾರೆ. ತಮ್ಮ ಸಮೀಪದ ಸ್ಪರ್ಧಿ ಸಿಪಿಎಂನ ಅಮಿತಾಭ ದತ್ತಾ ವಿರುದ್ಧ ಜಯಗಳಿಸಿದ್ದಾರೆ. ಶಾಸಕ ಬಿಸ್ವ ಬಂಧು ಸೇನ್ ನಿಧನದಿಂದ ಕ್ಷೇತ್ರ ತೆರವಾಗಿತ್ತು.

ಬದಲಾವಣೆ ಗಾಳಿಯಲ್ಲಿ ಹೊಸ ಪಾಠ

← ಮೊದಲಪುಟದಿಂದ

ಬಂಗಾಳದಲ್ಲಿ ಮೊದಲ ಬಾರಿಗೆ ಬಿಜೆಪಿ ಗದ್ದುಗೆ ಏರುತ್ತಿದೆ. ಭ್ರಷ್ಟಾಚಾರದ ಆರೋಪಗ ಳನ್ನು ನಿರಾಕರಿಸುತ್ತಲೇ ಇದ್ದದ್ದು ಮಮತಾ ಬ್ಯಾನರ್ಜಿಗೆ ದುಬಾರಿಯಾಯಿತು. ಶಿಕ್ಷಕರ ನೇಮಕಾತಿ ಹಗರಣ ಮತ್ತು ಆರ್.ಜಿ ಕರ್ ಮೆಡಿ ಕಲ್ ಕಾಲೇಜಿನ ಅತ್ಯಾಚಾರ ಪ್ರಕರಣ ನಿಭಾಯಿ ಸಿದ ರೀತಿ ಬಂಗಾಳದ ಜನರನ್ನು ಕೆರಳಿಸಿತ್ತು.

ಕೈಗಾರಿಕಾ ವಿರೋಧಿ ನೀತಿಗಳು, ಹೆಚ್ಚುತ್ತಿ ರುವ ನಿರುದ್ಯೋಗ, ಮುಖ್ಯವಾಗಿ ಬಾಂಗ್ಲಾ ಅಕ್ರಮ ವಲಸಿಗರ ಹಿತ ಕಾಯುವ ನೀತಿಗಳು, ಯುವಜನತೆಯನ್ನು ಭಯಭೀತಗೊಳಿಸಿತು. ಅಷ್ಟೇ ಅಲ್ಲ, ಮಮತಾ ಬ್ಯಾನರ್ಜಿಯ ವೋಟ್ ಬ್ಯಾಂಕ್ ಆಗಿದ್ದ ಮಹಿಳಾ ಮತದಾರರೂ ಸಹ ಕೈಕೊಟ್ಟಿದ್ದಾರೆ.

ಮಮತಾ ಬ್ಯಾನರ್ಜಿಯ 'ಲಕ್ಷ್ಮಿ ಭಂಡಾರ್' ಯೋಜನೆಗೆ ಪ್ರತಿಯಾಗಿ ಬಿಜೆಪಿ ಘೋಷಿಸಿದ ಮಹಿಳೆಯರಿಗೆ ಮಾಸಿಕ 3,000 ರು. ಮತ್ತು ಉಚಿತ ಬಸ್ ಪ್ರಯಾಣದ ಭರವಸೆ ಮಹಿಳೆಯರನ್ನು ಸೆಳೆಯುವಲ್ಲಿ ಯಶಸ್ವಿಯಾಗಿದೆ. ಎಸ್‌ಸಿ/ ಎಸ್‌ಟಿ ಮತ್ತು ಮತುಮಾ ಸಮುದಾಯಗಳೂ ಈ ಬಾರಿ ಮಮತಾ ಅವರನ್ನು ಕೈಬಿಟ್ಟು ಕಮಲ ಹಿಡಿದಿರುವುದು ಅಚ್ಚರಿಯೇನಲ್ಲ. ಮುಸ್ಲಿಂ ಬಾಹುಳ್ಯ ಪ್ರದೇಶಗಳಲ್ಲೂ ಬಿಜೆಪಿಯೇ ಮುನ್ನಡೆ ಸಾಧಿಸಿದ್ದು ನೋಡಿದರೆ, ದಲಿತ ಮತ್ತು ಅಲ್ಪಸಂಖ್ಯಾತರೂ ದೀದಿಯ ಅಬ್ಬರಕ್ಕೆ ರೋಸಿಹೋಗಿದ್ದರು ಎಂದೇ ವ್ಯಾಖ್ಯಾನಿಸಲಾಗಿದೆ. ಇದೆಲ್ಲಕ್ಕಿಂತ ಬಹುಮುಖ್ಯವಾಗಿದ್ದು ಎಸ್‌ಐಆರ್ ಪ್ರಕ್ರಿಯೆ. ಚುನಾವಣಾ ಆಯೋಗ, ಮತದಾರರ ಪಟ್ಟಿಯಿಂದ ಸುಮಾರು 91 ಲಕ್ಷಕ್ಕೂ ಹೆಚ್ಚು ನಕಲಿ ಮತದಾರರ ಹೆಸರುಗಳನ್ನು ತೆಗೆದು ಹಾಕಿದ್ದು ಬಿಜೆಪಿಗೆ ಪ್ಲಸ್ ಆದರೆ ದೀದಿಗೆ ಒಳ ಏಟು ಕೊಟ್ಟಿದೆ. ಬಿಜೆಪಿ ಜತೆಗಿನ ನಿರಂತರ ಸಂಘರ್ಷ, ಸತತ ಸಮರ ಸಾರಿದರೂ, ಮತದಾರರ ಮನಗೆಲ್ಲುವಲ್ಲಿ ಮಮತಾ ಸೋತಿದ್ದಾರೆ ಅನ್ನೋದು ಸ್ಪಷ್ಟ.

ತಮಿಳುನಾಡಲ್ಲಿ ಜೆನ್ ಜೀ ಕ್ರಾಂತಿ..: ತಮಿಳುನಾಡಿನ ಫಲಿತಾಂಶ ಇಡೀ ದೇಶವನ್ನೇ ದಕ್ಷಿಣದತ್ತ ತಿರುಗಿ ನೋಡುವಂತೆ ಮಾಡಿದೆ. ಡಿಎಂಕೆ ಪಕ್ಷದ ಪತನ, ದ್ರಾವಿಡ ಸಿದ್ಧಾಂತಿಗಳಿಗೆ ಮುಖಭಂಗ ಉಂಟು ಮಾಡಿದೆ. ತಮಿಳುನಾಡು ಸಿಎಂ ಸ್ಟಾಲಿನ್ ಕುಟುಂಬ ರಾಜಕಾರಣ, ಪಕ್ಷದ ಹಿರಿಯ ನಾಯಕರನ್ನು ಮೂಲೆಗುಂಪು ಮಾಡಿ, ಮಗ ಉದಯನಿಧಿ ಸ್ಟಾಲಿನ್ ಗೆ ಡಿಸಿಎಂ ಪಟ್ಟ ಕಟ್ಟಿದಾಗಲೇ, ಡಿಎಂಕೆ ಪತನ ಆರಂಭವಾಗಿತ್ತು. ತಮಿಳುನಾಡಿನ ಮಾಧ್ಯಮಗಳನ್ನು ಕೈಗೊಂಬೆಯಾಗಿಸಿಕೊಂಡಿದ್ದ ಸ್ಟಾಲಿನ್, ಆಡಳಿತ ವಿರೋಧಿಯ ಅಲೆ ಏಳದಂತೆ ಎಚ್ಚರಿಕೆ ವಹಿಸಿದ್ದರು. ಆದರೆ, ಸ್ಟಾಲಿನ್ ಸರಕಾರದ ಹಿಂದೂ ವಿರೋಧಿ ನೀತಿಗಳು , ಜನರ ಆಕ್ರೋಶಕ್ಕೆ ಕಾರಣವಾಗಿತ್ತು. ಹಿಂದೂ ಧರ್ಮವನ್ನು ಡೆಂಗ್ಯೂ, ಮಲೇರಿಯಾಗೆ ಹೋಲಿಸುತ್ತಾ, ಹಿಂದೂ ವಿರೋಧಿ ಹೇಳಿಕೆಗಳನ್ನು ನೀಡುತ್ತಲೇ ಬಂದ ಉದಯನಿಧಿ ಸ್ಟಾಲಿನ್, ಸನಾತನ ಧರ್ಮವನ್ನು ತೊಡೆದುಹಾಕಬೇಕು ಎನ್ನುವಷ್ಟರ ಮಟ್ಟಿಗೆ ಮುಂದುವರಿದಿದ್ದ. ಇದಕ್ಕೆಲ್ಲ ತುಪ್ಪ ಸುರಿಯುವಂತೆ ಮಾಡಿದ್ದು, ಮುರುಗನ್ ದೇವಸ್ಥಾನದ ಕಾರ್ತಿಕ ದೀಪ ವಿವಾದ.

ತಿರುಪಾರಂಕುಂದ್ರಂ (ಮಧುರೈ ಹತ್ತಿರ) ಮುರುಗನ್ ದೇವಸ್ಥಾನದ ಬೆಟ್ಟದ ಮೇಲೆ ದೀಪ ಹಚ್ಚಲು ಮದ್ರಾಸ್ ಹೈಕೋರ್ಟ್ ಅನುಮತಿ ನೀಡಿದರೂ ಡಿಎಂಕೆ ಸರಕಾರ ಕಾನೂನು ನೆಪವೊಡ್ಡಿ ತಡೆಹಿಡಿಯಿತು. ಇದು ಹಿಂದೂಗಳ ಸಿಟ್ಟಿಗೆ ಕಾರಣವಾಯಿತು. ಸ್ಟಾಲಿನ್ ಸರಕಾರದ ಹಿಂದೂ ವಿರೋಧಿ ನೀತಿಗಳಿಂದ ಬೇಸತ್ತ ತಮಿಳರ ಪಾಲಿಗೆ ಆಶಾಕಿರಣ ಅನಿಸಿದ್ದು ದಳಪತಿ ವಿಜಯ್. ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷ ಕಟ್ಟಿದ ವಿಜಯ್ ಪರ ಅಭಿಮಾನಿಗಳ ಬೆಂಬಲದ ದೊಡ್ಡ ಅಲೆ ಎದ್ದಾಗ ವಿಚಲಿತಗೊಂಡ ಡಿಎಂಕೆ, ವಿಜಯ್ ಗೆ ಇನ್ನಿಲ್ಲದ ಕಾಟ ಕೊಟ್ಟಿತ್ತು. 'ಜನನಾಯಗನ್' ಚಿತ್ರಕ್ಕೆ ತಡೆಯೊಡ್ಡಿದ್ದು, ಕರೂರು ಕಾಲ್ತುಳಿತದ ವಿಚಾರಣೆಗಳು ವಿಜಯ್ ಅಭಿಮಾನಿಗಳ ಸಿಟ್ಟಿಗೆ ಕಾರಣವಾಗಿತ್ತು.

ಇದರಿಂದ ಡಿಎಂಕೆ ವಿರುದ್ಧ ಜೆನ್ ಜೀ ತಿರುಗಿಬಿದ್ದಿತ್ತು. ಸಮೀಕ್ಷೆಗಳಲ್ಲಿ ಮೂರನೇ ಸ್ಥಾನದಲ್ಲಿದ್ದ ಟಿವಿಕೆಯ ವಿಜಯ್, ಈಗ್ ತಮಿಳುನಾಡಿನಲ್ಲಿ ಎಬ್ಬಿಸಿದ ಸುನಾಮಿಗೆ ಸ್ಟಾಲಿನ್ ನೇತೃತ್ವದ ಡಿಎಂಕೆ ಕೊಚ್ಚಿ ಹೋಗಿದೆ. ತಮಿಳರು ಸಿನಿಮಾ ಪ್ರಿಯರು ಎಂಬುದು ಮತ್ತೊಮ್ಮೆ ಸಾಬೀತಾದರೂ, ವಿಜಯ್ ರಾಜಕೀಯ ನಡೆಯಲ್ಲೂ ತಂತ್ರಗಾರಿಕೆ ಇತ್ತು. ಬಿಜೆಪಿಯ ಮೈತ್ರಿ ಪ್ರಸ್ತಾಪ ತಿರಸ್ಕರಿಸಿ ಎಲ್ಲ 234 ಕ್ಷೇತ್ರಗಳಲ್ಲಿ ಏಕಾಂಗಿಯಾಗಿ ಸ್ಪರ್ಧಿಸುವ ಲೆಕ್ಕಾಚಾರದಲ್ಲಿ ವಿಜಯ್ ಗೆದ್ದಿದ್ದಾರೆ.

ಅತ್ತ ಎಐಎಡಿಎಂಕೆ ಮತ್ತು ಬಿಜೆಪಿ ಮಿತ್ರಪಕ್ಷದ ಸಾಧನೆಯೂ, ಡಿಎಂಕೆಗೆ ನುಗ್ಗಲಾರದ ತುತ್ತಾಗಿದೆ. ಕೊನೆ ಕ್ಷಣದಲ್ಲಿ ಎಐಡಿಎಂಕೆಗೆ ಕೈಕೊಟ್ಟು ಡಿಎಂಕೆ ಸೇರಿದ ನಾಯಕರೂ ಕೈಕೈ ಹಿಚುಕಿ ಕೊಳ್ಳುವಂತಾಗಿದೆ..

ಅಸ್ಸಾಂನಲ್ಲಿ ಅಭಿವೃದ್ಧಿ ಮತ್ತು ಹಿಂದುತ್ವ.!!: ಅಸ್ಸಾಂನಲ್ಲಿ ಬಿಜೆಪಿ ಗೆಲುವಿಗೆ ಮುಖ್ಯಮಂತ್ರಿ ಹಿಮಂತ್ ಬಿಸ್ವಾ ಶರ್ಮಾ ವರ್ಚಸ್ಸು, ಆಡಳಿತದಲ್ಲಿ ಬಿಗಿ ಹಿಡಿತವೇ ಕಾರಣ. ಹಿಂದುತ್ವದ ಫೈರ್‌ಬ್ರಾಂಡ್ ಆಗಿ, ಅಸ್ಸಾಂ ಹಿಂದೂಗಳ ಭರವಸೆಯ ನಾಯಕ ಎನಿಸಿರುವ ಹೇಮಂತ್ ಬಿಸ್ವಾ ಸೋಲಿಸುವುದು ಇನ್ನು ಕನಸಿನ ಮಾತು ಎನಿಸುವಂತೆ ಮಾಡಿದೆ ಈ ಚುನಾವಣೆ. ಅಭಿವೃದ್ಧಿ ಜತೆ ಜತೆಗೆ ಹಿಂದುತ್ವದ ವಿಚಾರಗಳನ್ನು ಪ್ರತಿಪಾದಿಸುತ್ತಾ, ಹಿಂದೂಗಳ ರಕ್ಷಣೆ, ಧಾರ್ಮಿಕ ಕೇಂದ್ರಗಳ ಸಂರಕ್ಷಣೆ, ಮತಗಳ ಧ್ರುವೀಕರಣಕ್ಕೆ ಕಾರಣವಾಯಿತು. ಮುಖ್ಯವಾಗಿ ದಶಕಗಳಿಂದ ನಡೆಯುತ್ತಿದ್ದ ಬೋಡೋಲ್ಯಾಂಡ್ ಮತ್ತು ಉಲ್ಫಾ ಬಂಡುಕೋರರೊಂದಿಗೆ ಶಾಂತಿ ಒಪ್ಪಂದ, ಗಡಿ ವಿವಾದಗಳ ಇತ್ಯರ್ಥ ಜನರ ವಿಶ್ವಾಸ ಹೆಚ್ಚಲು ಕಾರಣವಾಯಿತು. ಉದ್ಯೋಗ ಸೃಷ್ಟಿಯ ಭರವಸೆಯೂ ಜೆನ್ ಜೀ ಸೆಳೆಯಿತು. ಇದೆಲ್ಲದರ ಜತೆಗೆ, ಬಿಜೆಪಿಗೆ ಪ್ರಬಲ ವಿರೋಧ ಪಕ್ಷದ ಭಯವೇ ಇಲ್ಲದಂತಾಗಿತ್ತು. ವಿರೋಧ್ ಪಕ್ಷದಲ್ಲಿನ ನಾಯಕತ್ವ ಕೊರತೆ, ಎನ್ ಡಿಎ ಗೆಲುವಿನ ಹಾದಿ ಸರಾಗಗೊಳಿಸಿತು.

ಪುದುಚೇರಿಯಲ್ಲಿ ನಡೆಯದ ಡಿಎಂಕೆ ಆಟ..!: ಪುದುಚೇರಿಯಲ್ಲಿ ಎನ್‌ಡಿಎ ಮೈತ್ರಿಕೂಟ ಎರಡನೇ ಬಾರಿಗೆ ಅಧಿಕಾರದ ಗದ್ದುಗೆ ಹಿಡಿದಿದೆ. ಎನ್‌ಡಿಎ ಮೈತ್ರಿಗೆ 17 ಸ್ಥಾನ ದಕ್ಕಿದ್ದು ಮತ್ತೆ ಅಧಿಕಾರಕ್ಕೇರಿದೆ. ಪುದುಚೇರಿಯಲ್ಲೂ ಅಧಿಕಾರ ಹಿಡಿಯುವ ಕಾಂಗ್ರೆಸ್, ಡಿಎಂಕೆ ಮೈತ್ರಿಗೆ ತೀವ್ರ ಹಿನ್ನಡೆಯಾಗಿದೆ. ಎಐಎನ್ ಆರ್‌ಸಿ, ಬಿಜೆಪಿ ಮತ್ತು ಎಐಎಡಿಎಂಕೆ ಮೈತ್ರಿಕೂಟಕ್ಕೆ ಎಸ್. ರಂಗಸ್ವಾಮಿ ನಾಯಕತ್ವವೇ ಗಟ್ಟಿ. ಹಿಂದುತ್ವ, ಅಭಿವೃದ್ಧಿ, ಜನಪರ ಯೋಜನೆಗಳು ಎನ್‌ಡಿಎ ಕೈ ಹಿಡಿದಿವೆ. ಈ ನಾಲ್ಕು ರಾಜ್ಯಗಳಲ್ಲಿ ಆಡಳಿತ ವಿರೋಧಿ ಜತೆಗೆ ಸಿದ್ಧಾಂತದ ತಾಕಲಾಟವೂ ಸೇರಿತ್ತು. ಫಲಿತಾಂಶದ ನಿರ್ಣಾಯಕ ಎನಿಸಿರುವ ಮಹಿಳೆಯರು ಮತ್ತು ಜೆನ್‌ಜೀ ಸಿದ್ಧಾಂತ, ಆದ್ಯತೆಗಳು ಮತ್ತು ನಿರೀಕ್ಷೆಗಳನ್ನು ಬಹುತೇಕ ಪಕ್ಷಗಳು ನಿರ್ಲಕ್ಷಿಸಿಕೊಂಡೇ ಬಂದಿವೆ. ಧರ್ಮ ಮತ್ತು ರಾಜಕೀಯ ಒಂದೇ ನಾಣ್ಯದ ಎರಡು ಮುಖ ಗಳು. ಪ್ರಜಾಪ್ರಭುತ್ವ, ಸಂವಿಧಾನ ಏನೇ ಮಾತನಾ ಡಿದರೂ ಧರ್ಮವೇ ರಾಜಕಾರಣವನ್ನು ನಿಯಂತ್ರಿಸುತ್ತದೆ. ಈ ದೇಶದ ಮಣ್ಣಿನಲ್ಲಿರುವ ಧರ್ಮದ ಬಗೆಗಿನ ಭಾವನಾತ್ಮಕತೆಯನ್ನು ಬದಲಿಸಲು ಸದ್ಯಕ್ಕಂತೂ ಸಾಧ್ಯವಿಲ್ಲ, ಅದಕ್ಕೆ ಈ ಫಲಿತಾಂಶವೇ ಸಾಕ್ಷಿ.

ಐಪಿಎಲ್ ಹಬ್ಬ 2026

ಆರೆಂಜ್ ಕ್ಯಾಪ್
ಅಭಿಷೇಕ್ ಶರ್ಮಾ
ಹೈದರಾಬಾದ್

ಪರ್ಪಲ್ ಕ್ಯಾಪ್
ಭುವನೇಶ್ವರ್ ಕುಮಾರ್
ಬೆಂಗಳೂರು

IPL T20 2026

ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ
ಪಂಜಾಬ್	9	6	2	13
ಬೆಂಗಳೂರು	9	6	3	12
ಹೈದರಾಬಾದ್	10	6	4	12
ರಾಜಸ್ಥಾನ್	10	6	4	12
ಗುಜರಾತ್	10	6	4	12
ಚೆನ್ನೈ	9	4	5	8
ಡೆಲ್ಲಿ	9	4	5	8
ಕೋಲ್ಕತಾ	9	3	5	7
ಮುಂಬೈ	9	2	7	4
ಲಖನೌ	8	2	6	4

ಪೂರನ್, ಹಿಮ್ಮತ್ ಸಿಂಗ್ ಬ್ಯಾಟಿಂಗ್ ಅಬ್ಬರ | ಬೃಹತ್ ಮೊತ್ತ ದಾಖಲಿಸಿದ ಲಖನೌ

ಮುಂಬೈ ಇಂಡಿಯನ್ಸ್‌ಗೆ 229 ರನ್‌ಗಳ ಗುರಿ

ಮುಂಬೈ: ಇಲ್ಲಿನ ವಾಂಖೆಡೆ ಸ್ಟೇಡಿಯಂನಲ್ಲಿ ಸೋಮವಾರ ನಡೆದ ಐಪಿಎಲ್ ಪಂದ್ಯದಲ್ಲಿ ಲಖನೌ ತಂಡವು ಮುಂಬೈ ಇಂಡಿಯನ್ಸ್‌ಗೆ 229 ರನ್‌ಗಳ ಗೆಲುವಿನ ಗುರಿ ನೀಡಿದೆ.

ಟಾಸ್ ಸೋತು ಬ್ಯಾಟಿಂಗ್ ಮಾಡಿದ ಲಖನೌ ತಂಡ 20 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 228 ರನ್‌ಗಳ ಬೃಹತ್ ಮೊತ್ತ ಗಳಿಸಿದೆ. ನಿಕೋಲಸ್ ಪೂರನ್ ಕೊನೆಗೂ ಫಾರ್ಮ್ ಕಂಡುಕೊಂಡು 63 ರನ್ ಗಳಿಸಿದರೆ, ಮಿಚೆಲ್ ಮಾರ್ಷ್ 44 ರನ್ ಹಾಗೂ ಹಿಮ್ಮತ್ ಸಿಂಗ್ ಅಜೇಯ 44 ರನ್?ಗಳಿಸಿ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು.

ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿದ ಲಖನೌ ತಂಡ ನಿರೀಕ್ಷಿತ ಆರಂಭ ಪಡೆಯಲಿಲ್ಲ. ಸೋಮವಾರ ಮೊದಲ ಪಂದ್ಯವನ್ನಾಡಿದ ಜೋಶ್ ಇಂಗ್ಲಿಸ್ 5 ಬಾಲ್‌ಗಳಲ್ಲಿ 3 ಬೌಂಡರಿ ಸಹಿತ 13 ರನ್ ಗಳಿಸಿದರು. ಆದರೆ 2ನೇ ವಿಕೆಟ್ ಜತೆಯಾಟದಲ್ಲಿ ಒಂದಾದ ಮಿಚೆಲ್ ಮಾರ್ಷ್ ಹಾಗೂ ನಿಕೋಲಸ್ ಪೂರನ್ 94 ರನ್‌ಗಳ ಜತೆಯಾಟ ಪ್ರದರ್ಶಿಸಿ ತಂಡಕ್ಕೆ ಆಧಾರಸ್ತಂಭವೆನಿಸಿದರು.

ನಿಕೋಲಸ್ ಪೂರನ್ ಅರ್ಧ ಶತಕ.

ನಿಕೋಲಸ್ ಪೂರನ್ 21 ಎಸೆತಗಳಲ್ಲಿ 8 ಸಿಕ್ಸರ್ ಹಾಗೂ 1 ಬೌಂಡರಿಗಳ ಸಹಿತ 63 ರನ್‌ಗಳಿಸಿ ಕಾರ್ಬಿನ್ ಬಾಷ್ ಅವರ ಬೌಲಿಂಗ್‌ನಲ್ಲಿ ರಿಯಾನ್ ರಿಕೆಲ್ಟನ್ ಅವರಿಗೆ ಕ್ಯಾಚ್ ನೀಡಿ ಔಟ್ ಆದರು.

ಬಳಿಕ ಮಿಚೆಲ್ ಮಾರ್ಷ್ 25 ಎಸೆತಗಳಲ್ಲಿ 4 ಬೌಂಡರಿ, 3 ಸಿಕ್ಸರ್‌ಗಳ ಸಹಿತ 44 ರನ್‌ಗಳಿಸಿದ ಸಂದರ್ಭದಲ್ಲಿ ಕಾರ್ಬಿನ್ ಬಾಷ್ ಅವರ ಬೌಲಿಂಗ್‌ನಲ್ಲಿ ನಮನ್ ಧೀರ್ ಅವರಿಗೆ ಕ್ಯಾಚ್ ನೀಡಿ ಔಟ್ ಆದರು.

ನಂತರ ಕ್ರೀಸ್‌ಗೆ ಬಂದ ರಿಷಬ್ ಪಂತ್ 15 ರನ್‌ಗಳಿಸಿದ್ದ ವೇಳೆ ವಿಲ್ ಜ್ಯಾಕ್ಸ್ ಅವರ ಬೌಲಿಂಗ್‌ನಲ್ಲಿ ರಿಕೆಲ್ಟನ್ ಅವರಿಗೆ ಕ್ಯಾಚ್ ನೀಡಿ ಔಟ್ ಆದರು.

ರಘುವಂಶಿ 7 ಬಾಲ್‌ಗಳನ್ನು ಎದುರಿಸಿ 11 ರನ್ ಮಾಡಿ ರಘು ಶರ್ಮಾ ಅವರ ಬೌಲಿಂಗ್‌ನಲ್ಲಿ ವಿಕೆಟ್ ಕಳೆದುಕೊಂಡರು.

ಆದರೆ ಕೊನೆಯಲ್ಲಿ ಅಬ್ಬರಿಸಿದ ಐಡೆನ್ ಮಾರ್ಕ್ರಮ್ 25 ಎಸೆತಗಳಲ್ಲಿ ತಲಾ 1 ಬೌಂಡರಿ, ಸಿಕ್ಸರ್ ಸಹಿತ ಅಜೇಯ 31 ರನ್ ಗಳಿಸಿದರು.

ಹಿಮ್ಮತ್ ಸಿಂಗ್ 31 ಎಸೆತಗಳಲ್ಲಿ ತಲಾ 2 ಬೌಂಡರಿ, 2 ಸಿಕ್ಸರ್‌ಗಳ ಸಹಿತ ಅಜೇಯ 40 ರನ್ ಗಳಿಸಿ ತಂಡದ ಮೊತ್ತವನ್ನು 200ರ ಗಡಿ ದಾಟಿಸಿದರು.

ಪಂದ್ಯದ ಪವರ್‌ಪ್ಲೇನಲ್ಲಿ ವಿಶೇಷ ದಾಖಲೆ: ಸೋಮವಾರದ ಪಂದ್ಯದಲ್ಲಿ ಲಖನೌ ತಂಡದ ಪವರ್‌ಪ್ಲೇನಲ್ಲಿ ದೊಡ್ಡ ಮೊತ್ತವನ್ನು ಕಲೆ ಹಾಕಲು ಮುಖ್ಯ ಕಾರಣರಾದರು ನಿಕೋಲಸ್ ಪೂರನ್ ಹಾಗೂ ಮಿಚೆಲ್ ಮಾರ್ಷ್.

ಜಾಶ್ ಇಂಗ್ಲಿಷ್ ಔಟ್ ಆದ ಬಳಿಕ ಈ ಇಬ್ಬರೂ ಸ್ಫೋಟಕ ಬ್ಯಾಟಿಂಗ್ ಪ್ರದರ್ಶನವನ್ನು ತೋರಿದರು. ಇವರು ಇಬ್ಬರೂ ಪವರ್‌ಪ್ಲೇನಲ್ಲಿ 61 ರನ್‌ಗಳನ್ನು ಕಲೆ ಹಾಕಿದರು.

ಚೆನ್ನೈನಿಂದ ಹೊರಬಿದ್ದ ಘೋಷ್

ಚೆನ್ನೈ: ಸಿಎಸ್‌ಕೆ ತಂಡದ ಗಾಯದ ಪಟ್ಟಿ ಬೆಳೆಯುತ್ತಿದ್ದು, ಆಲ್‌ರೌಂಡರ್ ರಾಮಕೃಷ್ಣ ಘೋಷ್ ಗಾಯಗೊಂಡು ಟೂರ್ನಿಯಿಂದಲೇ ಹೊರಬಿದ್ದಿದ್ದಾರೆ. ಮುಂಬೈ ಇಂಡಿಯನ್ಸ್ ವಿರುದ್ಧದ ಐಪಿಎಲ್‌ಚೊಚ್ಚಲ ಪಂದ್ಯದಲ್ಲಿ ಪಾದದ ಮೂಳೆ ಮುರಿತಕ್ಕೊಳಗಾದ ನಂತರ ಘೋಷ್ ಋತುವಿನ ಉಳಿದ ಪಂದ್ಯಗಳಿಂದ ಹೊರಗುಳಿದಿದ್ದಾರೆ ಎಂದು ಸಿಎಸ್‌ಕೆ ದೃಢಪಡಿಸಿದೆ. ಸಾಮಾಜಿಕ ಮಾಧ್ಯಮದ ಮೂಲಕ ಈ ವಿಷಯವನ್ನು ಫ್ರಾಂಚೈಸಿ ಘೋಷಿಸಿದೆ. ಶನಿವಾರ ಮುಂಬೈ ಇಂಡಿಯನ್ಸ್ ವಿರುದ್ಧ ಪಂದ್ಯದಲ್ಲಿ ಆಡುವ ಮೂಲಕ 28 ವರ್ಷದ ಆಟಗಾರರಾಗಿದ್ದ ಅವರು ಐಪಿಎಲ್‌ಗೆ ಪದಾರ್ಪಣೆ ಮಾಡಿದ್ದರು. ಸೂರ್ಯಕುಮಾರ್ ಯಾದವ್ ಅವರ ವಿಕೆಟ್ ಪಡೆದಿದ್ದರು. ಇನ್ನೊಂದು ಕ್ಯಾಚ್ ಹಿಡಿಯುವ ವೇಳೆ ಕಾಲಿನ ಮೂಳೆ ಮುರಿತಗೊಂಡು ಟೂರ್ನಿಯಿಂದಲೇ ಹೊರಬಿದ್ದರು. ಅವರ ಗಾಯವು ಸಿಎಸ್‌ಕೆ ತಂಡದ ಹಿನ್ನಡೆಗೆ ಕಾರಣವಾಗಿದೆ. ಐದು ಬಾರಿಯ ಚಾಂಪಿಯನ್ ತಂಡದ ಹಲವು ಆಟಗಾರರು ಈ ಋತುವಿನಲ್ಲಿ ಈಗಾಗಲೇ ಫಿಟ್ನೆಸ್ ಸಮಸ್ಯೆಗಳಿಂದ ತೀವ್ರವಾಗಿ ಬಳಲುತ್ತಿದೆ. ಖಲೀಲ್ ಅಹ್ಮದ್ ಗಂಭೀರ ಗಾಯದಿಂದ ಹೊರಗುಳಿದಿದರೆ, ಆಯುಷ್ ಮ್ಹಾತ್ರೆ ಮಂಡಿರಜ್ಜು ಗಾಯದಿಂದ ಅಧಿಕೃತವಾಗಿ ಹೊರ ಗುಳಿದಿದ್ದಾರೆ. ಈ ಋತುವಿನಲ್ಲಿ ಇನ್ನೂ ಆಡದ ಎಂಎಸ್ ಧೋನಿ ಇದುವರೆಗೂ ಚೆನ್ನೈ ತಂಡಕ್ಕಾಗಿ ಇನ್ನೂ ಆಡಿಲ್ಲ.

ಸಮಾಚಾರ ಸಣ್ಣದಲ್ಲ

ಇಂದಿನ ಪಂದ್ಯಕ್ಕೂ ಧೋನಿ ಅಲಭ್ಯ

ಚೆನ್ನೈ: ಎಂಎಸ್ ಧೋನಿಯನ್ನು ಮೈದಾನದಲ್ಲಿ ಕಣ್ತುಂಬಿಸಿಕೊಳ್ಳಲು ಎದುರು ನೋಡುತಿದ್ದ ಚೆನ್ನೈ ಸೂಪರ್ ಕಿಂಗ್ಸ್ ಅಭಿಮಾನಿಗಳಿಗೆ ಮತ್ತೊಮ್ಮೆ ನಿರಾಶೆಯಾಗಲಿದೆ. ಇಂದು ನವದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆಯಲಿರುವ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಪಂದ್ಯಕ್ಕಾಗಿ ಧೋನಿ ತಂಡದೊಂದಿಗೆ ದೆಹಲಿಗೆ ಪ್ರಯಾಣಿಸಿಲ್ಲ. ಅವರು ಪ್ರಸ್ತುತ ಚೆನ್ನೈನಲ್ಲಿ ಉಳಿದುಕೊಂಡಿದ್ದು, ಕಾಲಿನ ಗಾಯದಿಂದ ಚೇತರಿಸಿಕೊಳ್ಳುವತ್ತ ಗಮನಹರಿಸುತ್ತಿದ್ದಾರೆ. ಋತುವಿನ ಆರಂಭದಿಂದಲೂ ಗಾಯದಿಂದ ಹೊರಗುಳಿದಿರುವ ಧೋನಿ, ಇದುವರೆಗೂ ಇನ್ನೂ ಒಂದೇ ಒಂದು ಪಂದ್ಯವನ್ನು ಆಡಿಲ್ಲ. ಅವರ ಅನುಪಸ್ಥಿತಿಯಲ್ಲಿ, ಸಂಜು ಸ್ಯಾಮ್ಸನ್ ವಿಕೆಟ್ ಕೀಪಿಂಗ್ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದಾರೆ. ಈ ಕುರಿತು ತಂಡದ ಕೋಚ್ ಸ್ಟಿಫನ್ ಫ್ಲೆಮಿಂಗ್ ಮಾತನಾಡಿದ್ದು, 'ಧೋನಿ ಅವರ ಸ್ನಾಯು ಸೆಳೆತದ ಗಾಯಗಳು ತುಂಬಾ ಜಟಿಲವಾಗಿವೆ. ಅವರು ಓಡಲು ಪ್ರಯತ್ನಿಸಿದರೆ ಇಡೀ ಋತುವಿಗೆ ಹೊರಗುಳಿಯಬಹುದೆಂಬ ಆತಂಕದಲ್ಲಿ ಇದ್ದೇವೆ. ಅಭ್ಯಾಸ ಪಂದ್ಯದ ಸಮಯದಲ್ಲಿ ಗಾಯವು ಮತ್ತೆ ಕಾಣಿಸಿಕೊಂಡಿತು. ಆರಂಭಿಕ ನಿರೀಕ್ಷೆಗಳನ್ನು ಮೀರಿ ಚೇತರಿಕೆ ಪ್ರಕ್ರಿಯೆ ಹೆಚ್ಚಿಸಿದೆ' ಎಂದು ಫ್ಲೆಮಿಂಗ್ ವಿವರಿಸಿದ್ದಾರೆ.

ಆರ್‌ಆರ್ ಶೇ.75 ಪಾಲು ಮಾರಾಟ

ದೆಹಲಿ: ಉದ್ಯಮಿ ಲಕ್ಷ್ಮಿ ಎನ್. ಮಿತ್ತಲ್ ಮತ್ತು ಅವರ ಪುತ್ರ ಆದಿತ್ಯ ಮಿತ್ತಲ್ ಅವರು ಉದ್ಯಮಿ ಅದಾರ್ ಪೂನಾವಾಲಾ ಜತೆಗೂಡಿ ರಾಜಸ್ಥಾನ ರಾಯಲ್ಸ್ ಲ್ಸ್ ಫ್ರಾಂಚೈಸಿಯ ಬಹುಪಾಲು ಷೇರನ್ನು ಖರೀದಿಸಿದ್ದಾರೆ. ಸುಮಾರು 15,600 ಕೋಟಿ ರು. ಮೊತ್ತಕ್ಕೆ ಈ ಷೇರುಗಳನ್ನು ಖರೀದಿ ಮಾಡಿದೆ. ಈ ಹಿಂದೆ ಅತ್ಯಧಿಕ ಮೊತ್ತದ ಬಿಡ್ ಸಲ್ಲಿಸಿದ್ದ ಕಲ್ ಸೋಮಾನಿ-ರಾಬ್ ವಾಲ್ಟನ್-ಶೀಲಾ ಫೋರ್ಡ್ ಹ್ಯಾಂಪ್ ಕನ್ಸೋರ್ಷಿಯಂ (ಕಂಪನಿಗಳ ಒಕ್ಕೂಟ) ಖರೀದಿ ರೇಸ್‌ನಿಂದ ಹಿಂದೆ ಸರಿದ ಕಾರಣ ಮಿತ್ತಲ್ ಸಮೂಹ ಆಸಕ್ತಿ ತೋರಿಸಿದೆ. ರಾಜಸ್ಥಾನ ರಾಯಲ್ಸ್ (ಪುರುಷರ ಫ್ರಾಂಚೈಸಿ), ಪಾರ್ಲ್ ರಾಯಲ್ಸ್ (ದಕ್ಷಿಣ ಆಫ್ರಿಕಾ ಲೀಗ್), ಬಾರ್ಬಾಡೋಸ್ ರಾಯಲ್ಸ್ (ಕೆರೀಬಿಯನ್ ಲೀಗ್) ಖರೀದಿ ಒಪ್ಪಂದದ ವ್ಯಾಪ್ತಿಯಲ್ಲಿ ಬರಲಿದೆ.

ಐಪಿಎಲ್‌ನಲ್ಲಿ ಇನ್ನು ಕಠಿಣ ನಿಯಮ ಜಾರಿ ಸಾಧ್ಯತೆ

ದೆಹಲಿ: ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯು ಆಟಗಾರರ ಜೊತೆ ಗರ್ಲ್‌ಫ್ರೆಂಡ್ಸ್ ಪ್ರಯಾಣಿಸುವ ವಿಷಯದಲ್ಲಿ ಕಠಿಣ ಕ್ರಮ ಕೈಗೊಳ್ಳಲು ಸಿದ್ಧವಾಗಿದೆ. ಈ ಐಪಿಎಲ್ ವೇಳೆ ಹಲವಾರು ಆಟಗಾರರು ತಮ್ಮ ಸಂಗಾತಿಯರೊಂದಿಗೆ ಪ್ರಯಾಣಿಸುತ್ತಿರುವುದು ಅದರ ಗಮನಕ್ಕೆ ಬಂದಿದ್ದು, ಕೆಲವರು ತಂಡದ ಬಸ್‌ಗಳಲ್ಲಿ ಸಂಚರಿಸುವುದು ಮತ್ತು ಆಟಗಾರರು ಉಳಿಯುವ ಅದೇ ಹೋಟೆಲ್‌ಗಳಲ್ಲಿ ತಂಗಿರುವುದೂ ಕಂಡುಬಂದಿದೆ.

ಬಿಸಿಸಿಐ ವಲಯದಲ್ಲಿ ಈ ವಿಷಯ ಆತಂಕ ಮೂಡಿಸಿದೆ. ಮಹತ್ವದ ವಿಷಯವೆಂದರೆ ಈ ಸಂಗಾತಿಯರಲ್ಲಿ ಕೆಲವರು ದೊಡ್ಡ ಮಟ್ಟದ ಸೋಶಿಯಲ್ ಮೀಡಿಯಾ ಇನ್‌ಫ್ಲುಯೆನ್ಸರ್‌ಗಳಾಗಿದ್ದು, ತಮ್ಮ ಸಾಮಾಜಿಕ ಜಾಲತಾಣಗಳಲ್ಲಿ ಹಿಂದೆ ಬೆಟ್ಟಿಂಗ್ ಆ್ಯಪ್‌ಗಳನ್ನು ಪ್ರಚಾರ ಮಾಡಿರುವ ಆರೋಪಗಳಿವೆ.

ಭವಿಷ್ಯದಲ್ಲಿ ಯಾವುದೇ ದೊಡ್ಡ ವಿವಾದ ತಪ್ಪಿಸಲು ಮುನ್ನೆಚ್ಚರಿಕೆಯಾಗಿ ಈ ಕ್ರಮ ತೆಗೆದುಕೊಳ್ಳಲಾಗುತ್ತಿದೆ. 2013ರಲ್ಲಿ ನಡೆದ ಸ್ಪಾಟ್ ಫಿಕ್ಸಿಂಗ್ ಹಗರಣ ಐಪಿಎಲ್‌ಗೆ ದೊಡ್ಡ ಆಘಾತ ನೀಡಿತ್ತು. ಇದರ ಪರಿಣಾಮವಾಗಿ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ರಾಜಸ್ಥಾನ್ ರಾಯಲ್ಸ್ ತಂಡಗಳಿಗೆ 2016 ಮತ್ತು 2017ರಲ್ಲಿ ಎರಡು ವರ್ಷಗಳ ನಿಷೇಧ ಹೇರಲಾಗಿತ್ತು.

ಈ ವಿಷಯವನ್ನು ತಕ್ಷಣ ನಿಯಂತ್ರಿಸದಿದ್ದರೆ ಮುಂದಿನ ದಿನಗಳಲ್ಲಿ ದೊಡ್ಡ ಸಮಸ್ಯೆಗಳು ಎದುರಾಗಬಹುದು, ಕೆಲ ಸಂದರ್ಭಗಳಲ್ಲಿ ಆಟಗಾರರ ಗರ್ಲ್‌ಫ್ರೆಂಡ್ಸ್‌ಗಾಗಿ ತಂಡದ ಬಸ್ ಕಾಯಬೇಕಾದ ಘಟನೆಗಳೂ ನಡೆದಿವೆ ಎಂದೂ ಅಧಿಕಾರಿಗಳು ತಿಳಿಸಿದ್ದಾರೆ.

ಕ್ರಿಕೆಟ್ ಬೋರ್ಡ್ ನೀತಿಯಲ್ಲಿ ಗರ್ಲ್‌ಫ್ರೆಂಡ್ಸ್ ಬಗ್ಗೆ ಯಾವುದೇ ಸ್ಪಷ್ಟ ನಿಯಮಗಳಿಲ್ಲ. ಮಾರ್ಗಸೂಚಿಗಳ ಪ್ರಕಾರ ಪತ್ನಿ ಮತ್ತು ಕುಟುಂಬದ ಸದಸ್ಯರಿಗೆ ಮಾತ್ರ ಅನುಮತಿ ಇದೆ. ಶೀಘ್ರದಲ್ಲೇ ಈ ವಿಷಯದ ಬಗ್ಗೆ ತನಿಖೆ ನಡೆಯಲಿದೆ ಎಂದು ಬಿಸಿಸಿಐ ಅಧಿಕಾರಿಗಳು ತಿಳಿಸಿದ್ದಾರೆ.

ಲಂಡನ್‌ಗೆ ತೆರಳಿದ ಫಿಲ್‌ಸಾಲ್ಟ್

ಲಂಡನ್: ಆರ್‌ಸಿಬಿ ತಂಡದ ಆರಂಭಿಕ ಆಟಗಾರ ಫಿಲ್ ಸಾಲ್ಟ್ ಸ್ಕ್ಯಾನಿಂಗ್‌ಗೆ ಇಂಗ್ಲೆಂಡ್‌ಗೆ ಹಿಂತಿರುಗಿದ್ದಾರೆ, ಇದರಿಂದಾಗಿ ಆರ್‌ಸಿಬಿ ಐಪಿಎಲ್‌ನಲ್ಲಿ ಹೊಸ ಅನಿಶ್ಚಿತತೆಯನ್ನು ಎದುರಿಸುತ್ತಿದೆ. ಆರಂಭಿಕ ಆಟಗಾರರಾಗಿದ್ದ ಅವರು ಈಗಾಗಲೇ ಮೂರು ಪಂದ್ಯ ಗಳನ್ನು ತಪ್ಪಿಸಿಕೊಂಡಿದ್ದಾರೆ. ಏಪ್ರಿಲ್ 18ರಂದು ಡೆಲ್ಲಿ ಕ್ಯಾಪಿ ಟಲ್ ವಿರುದ್ಧ ನಡೆದಿದ್ದ ಪಂದ್ಯಕ್ಕೂ ಮುನ್ನ ಬೆರಳಿನ ಗಾಯದ ಸಮಸ್ಯೆಯಿಂದಾಗಿ ಸಾಲ್ಟ್ ತಂಡದಿಂದ ಹೊರಗುಳಿದಿದ್ದಾರೆ. ಈ ವರ್ಷದ ಆರ್‌ಸಿಬಿಯ ಆರಂಭಿಕ ಅಭಿಯಾನದಲ್ಲಿ ಸಾಲ್ಟ್ ಆರು ಇನ್ನಿಂಗ್ಸ್‌ಗಳಲ್ಲಿ 168.33 ಸ್ಟ್ರೈಕ್‌ರೇಟ್‌ನಲ್ಲಿ 202 ರನ್ ಗಳಿಸಿದ್ದರು. ಅವರ ಅನುಪಸ್ಥಿತಿಯಲ್ಲಿ ಜಾಕೋಬ್ ಬೆಥೆಲ್ ವಿರಾಟ್ ಕೊಹ್ಲಿ ಜತೆಗೆ ಅಗ್ರಸ್ಥಾನದಲ್ಲಿ ಇನ್ನಿಂಗ್ಸ್ ಆರಂಭಿಸುತ್ತಿದ್ದಾರೆ. ಆರ್‌ಸಿಬಿ ಉತ್ತಮ ಪ್ರದರ್ಶನ ತೋರುತ್ತಿದ್ದು ಈ ಬಾರಿಯೂ ಪಶಸ್ತಿ ಗೆಲ್ಲುವ ನೆಚ್ಚಿನ ತಂಡವಾಗಿದೆ. ಪ್ರಸ್ತುತ ಆರ್‌ಸಿಬಿಯ ಭುವನೇಶ್ವರ್ ಕುಮಾರ್ ಪರ್ಪ ಲ್ ಕ್ಯಾಪ್ ಅನ್ನು ಹೊಂದಿದ್ದಾರೆ. ವಿರಾಟ್ ಕೊಹ್ಲಿ ತಂ ಡದ ಪರ ಅತಿ ಹೆಚ್ಚು ರನ್ ಗಳಿಸಿದ ಆಟಗಾರರಾಗಿದ್ದು, ಕೊಹ್ಲಿ ಈ ಋತುವಿನಲ್ಲಿ ಹಲವು ಬಾರಿ ಆರೆಂಜ್ ಕ್ಯಾಪ್ ಅನ್ನು ಸಹ ಹೊಂದಿದ್ದರು. ಆದರೆ ಕಳೆದ ಪಂದ್ಯದಲ್ಲಿ ಗುಜರಾತ್ ವಿರುದ್ಧ ಆರ್‌ಸಿಬಿ ಸೋಲು ಕಂಡಿತ್ತು.

ಗೆಲುವಿನ ಹಳಿಗೆ ಮರಳಿರುವ ಎರಡೂ ತಂಡಗಳಿಂದಲೂ ಭಾರೀ ಪೈಪೋಟಿ ನಿರೀಕ್ಷೆ

ಇಂದು ಚೆನ್ನೈ-ಡೆಲ್ಲಿ ಹಣಾಹಣಿ

ದೆಹಲಿ: ಈ ಬಾರಿಯ ಐಪಿಎಲ್‌ನಲ್ಲಿ ಕಳಪೆ ಪ್ರದರ್ಶನ ತೋರಿ ಅಂಕಪಟ್ಟಿಯ 6ನೇ ಸ್ಥಾನದಲ್ಲಿರುವ ಚೆನ್ನೈ ತಂಡ ವು 7ನೇ ಸ್ಥಾನದಲ್ಲಿರುವ ಡೆಲ್ಲಿಯನ್ನು ಇಂದು ಇಲ್ಲಿನ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಎದುರಿಸಲಿದೆ. ತಲಾ 8 ಅಂಕ ಗಳಿಸಿದ್ದರೂ ರನ್‌ರೇಟ್‌ನಲ್ಲಿ ಚೆನ್ನೈ ಮುಂದಿದೆ.

ಸತತ ಸೋಲಿನಿಂದ ಕೆಂಗೆಟ್ಟಿದ್ದ ಅಕ್ಷರ್ ಪಟೇಲ್ ನೇತೃತ್ವದ ಡೆಲ್ಲಿ ಕ್ಯಾಪಿಟಲ್ಸ್ ತಂಡ, ತನ್ನ ಕಳೆದ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ವಿರುದ್ಧ ಗೆಲುವು ಪಡೆದು ಹೊಸ ಉತ್ಸಾಹದಲ್ಲಿದೆ. ರಾಜಸ್ಥಾನ ನೀಡಿದ್ದ 226 ರನ್‌ಗಳ ಗುರಿಯನ್ನು ಡೆಲ್ಲಿ ತಂಡ, ಇನಿಂಗ್ಸ್‌ನ ಇನ್ನೂ 5 ಎಸೆತಗಳು ಬಾಕಿಯಿರುವಂತೆಯೇ ಗೆಲುವು ಸಾಧಿಸಿತು. ತಂಡದ ಟಾಪ್ ಬ್ಯಾಟರ್‌ಗಳಾದ ಕೆಎಲ್ ರಾಹುಲ್, ನಿತೀಶ್ ರಾಣಾ ಉತ್ತಮ ಫಾರ್ಮ್‌ನಲ್ಲಿರುವುದರ ಜತೆಗೆ ತಂಡದ ಮತ್ತೊಬ್ಬ ಆಟಗಾರ ಪಾತುಮ್ ನಿಸ್ಸಂಕಾ ಅವರು ಕಳೆದ ಪಂದ್ಯದಲ್ಲಿ ತಂಡಕ್ಕೆ ಮರಳಿರುವುದು ಉತ್ಸಾಹವನ್ನು ಹೆಚ್ಚಿಸಿದೆ.

ಚೆನ್ನೈ ಸೂಪರ್ ಕಿಂಗ್ಸ್ ತಂಡ, ಈವರೆಗೆ ತಾನು ಆಡಿರುವ ಐದು ಪಂದ್ಯಗಳಲ್ಲಿ ನಾಲ್ಕರಲ್ಲಿ ಗೆಲುವು ಹಾಗೂ ಐದರಲ್ಲಿ ಸೋಲು ಕಂಡಿದೆ. ಕಳೆದ ಪಂದ್ಯದಲ್ಲಿ ತನ್ನ ಸಾಂಪ್ರದಾಯಿಕ ಎದುರಾಳಿ ಮುಂಬೈ ವಿರುದ್ಧ ಗೆಲ್ಲುವ ಮೂಲಕ ಅದು ತನ್ನ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ. ತಂಡದ ಋತುರಾಜ್ ಗಾಯಕ್ವಾಡ್ ಫಾರ್ಮ್‌ಗೆ ಮರಳಿರುವುದು ಉತ್ತಮ ಬೆಳವಣಿಗೆಯಾಗಿದೆ.

ಇಂದಿನ ಪಂದ್ಯ

ಚೆನ್ನೈ vs ಡೆಲ್ಲಿ

ಸ್ಥಳ	: ಜೇಟ್ಲಿ ಕ್ರೀಡಾಂಗಣ, ದೆಹಲಿ
ಸಮಯ:	ರಾತ್ರಿ 7.30
ನೇರಪ್ರಸಾರ	: ಸ್ಟಾರ್‌ಸ್ಪೋರ್ಟ್ಸ್
ಲೈವ್ ಸ್ಟ್ರೀಮಿಂಗ್	: ಜಿಯೋ ಹಾಟ್‌ಸ್ಟಾರ್

ತೊಡೆ ತಟ್ಟಿದ ಗಿಲ್

ಅಹಮದಾಬಾದ್: ಪಂಜಾಬ್ ವಿರುದ್ಧ ಗುಜರಾತ್ ಜಯ ಗಳಿಸಿದ ನಂತರ ಶುಭಮನ್ ಗಿಲ್ ಮತ್ತೊಮ್ಮೆ ಮೈದಾನದ ಹೊರಗೆ ಗಮನ ಸೆಳೆದರು. ಈ ಬಾರಿ ಐಪಿಎಲ್ ಟೇಬಲ್ ಟಾಪರ್‌ಗಳನ್ನು ಗುರಿಯಾಗಿಸಿಕೊಂಡು ಪಂದ್ಯದ ನಂತರದ ತಮ್ಮ ಪರಿಚಿತ ಹಾಸ್ಯವನ್ನು ಮುಂದುವರೆಸಿದರು. ಅಹಮದಾಬಾದ್ ಗೆಲುವಿನ ಸ್ವಲ್ಪ ಸಮಯದ ನಂತರ, ಅವರು ವಾಷಿಂಗ್ಟನ್ ಸುಂದರ್ ಮತ್ತು ಸಾಯಿ ಸುದರ್ಶನ್ ಅವರೊಂದಿಗೆ ಫೋಟೋ ಹಂಚಿಕೊಂಡರು, ತೊಡೆ ತಟ್ಟುವ ಭಂಗಿಯನ್ನು ಮರುಸೃಷ್ಟಿಸಿದರು.

ವಿಜಯ್‌ಗೆ ವರುಣ್ ವಿಶೇಷ ಸಂದೇಶ

ದೆಹಲಿ: ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ನಟ ವಿಜಯ್ ಹಾಗೂ ಅವರ ರಾಜಕೀಯ ಪಕ್ಷ ತಮಿಳಗ ವೆಟ್ರಿ ಕಳಗಂ ಭರ್ಜರಿ ಪ್ರದರ್ಶನ ನೀಡಿದ ಹಿನ್ನೆಲೆಯಲ್ಲಿ ಕೋಲ್ಕತಾ ನೈಟ್ ರೈಡರ್ಸ್ ತಂಡದ ಸ್ಪಿನ್ನರ್ ವರುಣ್ ಚಕ್ರವರ್ತಿ ಸಾಮಾಜಿಕ ಜಾಲ ತಾಣಗಳಲ್ಲಿ ವಿಶೇಷ ಸಂದೇಶ ಹಂಚಿಕೊಂಡಿದ್ದಾರೆ. ಟಿವಿಕೆ ಪಕ್ಷವು ತಮಿಳುನಾಡಿನಲ್ಲಿ ಅಧಿಕಾರದ ಗದ್ದುಗೆ ಯೇರಿ, ಅಜಿತ್ ಮುಂದಿನ ಮುಖ್ಯಮಂತ್ರಿಯಾಗುವ ಹಿನ್ನೆಲೆಯಲ್ಲಿ ಈ ಸಂದೇಶ ರವಾನಿಸಿದ್ದಾರೆ.

ವಿಟಾಕೀಸ್

ರಾಧಾ ರಾಧಾ ಎಂದ ಬೃಂದಾವಿಹಾರಿ

ಚಿತ್ರರಂಗದಲ್ಲಿ ಎರಡು ದಶಕಗಳನ್ನು ಪೂರೈಸಿದ ನಟ ಗಣೇಶ್ ಈಗ ಬೃಂದಾವಿಹಾರಿಯ ಅವತಾರ ತಾಳಿದ್ದು, ತೆರೆಯಲ್ಲಿ ಮಿಂಚಲು ಸಿದ್ಧವಾಗಿದ್ದಾರೆ. ಈ ಹಿಂದೆ ಕೃಷ್ಣಂ ಪ್ರಣಯಸಖಿ ಚಿತ್ರವನ್ನು ನಿರ್ದೇಶನ ಮಾಡಿದ್ದ ಶ್ರೀನಿವಾಸ ರಾಜು ನಿರ್ದೇಶನದಲ್ಲಿ ಬೃಂದಾವಿಹಾರಿ ಮೂಡಿಬರುತ್ತಿದೆ. ಈಗಾಗಲೇ ಬಹುತೇಕ ಶೂಟಿಂಗ್ ಮುಗಿಸಿರುವ ಬೃಂದಾವಿಹಾರಿ ಹಾಡುಗಳ ಮೂಲಕವೇ ಸದ್ದು ಮಾಡುತ್ತಿದೆ. ಈ ಹಿಂದೆ ರಾಮನನ್ನು ಜಪಿಸಿದ್ದ ಬೃಂದವಿಹಾರಿ ಈಗ ರಾಧಾ .. ರಾಧಾ.. ಎನ್ನುತ್ತಾ ಮನಗೆಲ್ಲುತ್ತಿದ್ದಾರೆ. ರಾಧಾ.. ರಾಧಾ.. ಎಂಬ ಹಾಡು ಇದಾಗಿದ್ದು, ವಿ.ನಾಗೇಂದ್ರ ಪ್ರಸಾದ್ ಸಾಹಿತ್ಯದ ಈ ಗೀತೆಗೆ, ಹೇಶಮ್ ಅಬ್ದುಲ್ ವಹಾಬ್ ಸಂಗೀತ ಸಂಯೋಜಿಸಿದ್ದಾರೆ. ಸಿದ್ ಶ್ರೀರಾಮ್ ಮತ್ತು ಚಿನ್ಮಯಿ ದನಿಯಲ್ಲಿ ಈ ಹಾಡು ಮಧುರವಾಗಿ ಮೂಡಿಬಂದಿದೆ. ಗಣೇಶ್, ದೇವಿಕಾ ಭಟ್ ಈ ಗೀತೆಯಲ್ಲಿ ಕಾಣಿಸಿಕೊಂಡಿದ್ದಾರೆ.

ಬೃಂದಾ ವಿಹಾರಿ ಚಿತ್ರದ ಮೊದಲ ಹಾಡು ರಾಮ.. ರಾಮ.. ನಿರೀಕ್ಷೆಗೂ ಮೀರಿ ಯಶಸ್ವಿಯಾಗಿದೆ. ಈಗ ಬಿಡುಗಡೆಯಾಗಿರುವ ರಾಧಾ.. ರಾಧಾ.. ಹಾಡು ಸಹ ಎಲ್ಲರಿಗೂ ಮೆಚ್ಚುಗೆಯಾಗಲಿದೆ. ಎಲ್ಲರಿಗೂ ಇಷ್ಟವಾಗುವ ಸಿನಿಮಾ ಇದಾಗಿದೆ ಎಂದು ನಟ ಗಣೇಶ್ ಸಂತಸದಿಂದ ನುಡಿದರು.

ಬೃಂದಾ ವಿಹಾರಿ ಚಿತ್ರದಲ್ಲಿ ಏಳು ಹಾಡುಗಳಿವೆ. ಸದ್ಯ ಎರಡು ಹಾಡುಗಳು ಬಿಡುಗಡೆಯಾಗಿದ್ದು ಮುಂದೆ ಒಂದೊಂದೆ ಹಾಡು ಪ್ರೇಕ್ಷಕರ ಮುಂದೆ ಬರಲಿದೆ ಎಂದು ನಿರ್ದೇಶಕ ಶ್ರೀನಿವಾಸರಾಜು ಹೇಳಿದರು. ಬೃಂದಾ ವಿಹಾರಿ ನಮ್ಮ ಸಂಸ್ಥೆಯ ನಿರ್ಮಾಣದ ನಾಲ್ಕನೇ ಚಿತ್ರ. ಒಳ್ಳೆಯ ಕಥೆ ಚಿತ್ರದಲ್ಲಿದ್ದು, ಕುಟುಂಬ ಸಮೇತ ಕುಳಿತು ನೋಡಬಹುದಾದ ಸಿನಿಮಾ ಇದಾಗಿದೆ ಎಂದು ನಿರ್ಮಾಪಕ ಸಮೃದ್ಧಿ ಮಂಜುನಾಥ್ ತಿಳಿಸಿದರು. ಇದು ನನ್ನ ಮೊದಲ ಚಿತ್ರ, ಚೊಚ್ಚಲ ಸಿನಿಮಾದಲ್ಲಿಯೇ ಒಳ್ಳೆಯ ಪಾತ್ರದಲ್ಲಿ ಅಭಿನಯಿಸಿರುವುದು ಖುಷಿಕೊಟ್ಟಿದೆ. ಗಣೇಶ್ ಅವರ ಜತೆಗೆ ನಟಿಸಿದ್ದು ಖುಷಿಯಾಗಿದೆ ಎಂದು ನಾಯಕಿ ದೇವಿಕಾ ಭಟ್ ಸಂತಸ ವ್ಯಕ್ತಪಡಿಸಿ ದರು. ಬೃಂದವಿಹಾರಿ ಕೌಟುಂಬಿಕ ಕಥೆಯ ಜತೆಗೆ ಲವ್ ಸ್ಟೋರಿಯನ್ನು ಒಳಗೊಂಡಿದೆ. ಗಣೇಶ್‌ಗೆ ಜತೆಯಾಗಿ ದೇವಿಕಾ ಭಟ್ ಹಾಗೂ ಮಾಳವಿಕಾ ಶರ್ಮ ಅಭಿನಯಿಸಿದ್ದಾರೆ. ವಿರಾಟ್ ಸಾಯಿ ಕ್ರಿಯೇಷನ್ಸ್ ಅರ್ಪಿಸುವ ಈ ಚಿತ್ರವನ್ನು ಸಮೃದ್ಧಿ.ವಿ. ಮಂಜುನಾಥ್ ಅದ್ದೂರಿಯಾಗಿ ನಿರ್ಮಾಣ ಮಾಡುತ್ತಿದ್ದಾರೆ. ಶ್ರೀನಿವಾಸರಾಜು ಅವರೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಹೇಶಮ್ ಅಬ್ದುಲ್ ವಹಾಬ್ ಸಂಗೀತ ನಿರ್ದೇಶನ ಹಾಗೂ ವೆಂಕಟ್ ಪ್ರಸಾದ್ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ.

ಹಾಡಿನಲ್ಲಿ ಮನಗೆದ್ದ ಲವ್ ಸೀಸನ್ಸ್

ನವಿರಾದ ಪ್ರೇಮಕಥೆಯ ಸೀಸನ್ಸ್ ಚಿತ್ರದಲ್ಲಿ ವಿಭಿನ್ನ ಪ್ರೇಮಕಥೆ ಇದೆ. ಕೃತ್ವಿಕ್ ನಿರ್ದೇಶನದಲ್ಲಿ ಮೂಡಿ ಬಂದಿರುವ ಈ ಸಿನಿಮಾದ ಮೊದಲ ಹಾಡು ಈ ಹಿಂದೆಯೇ ಬಿಡುಗಡೆಯಾಗಿತ್ತು. ಸಂಗೀತ ಪ್ರಿಯರ ಮನಗೆದ್ದಿತ್ತು. ಈಗ ಈ ಚಿತ್ರದ ಮತ್ತೊಂದು ಹಾಡು ಬಿಡುಗಡೆಯಾಗಿದೆ. ಮಳೆಯಾಗೋ ಮೊದಲೇ... ಕೊಡೆ ಹಿಡಿದು ಬರುವೆ... ನಗು ಮುಗಿವಾ ಮೊದಲೇ ಹೊಸ ಖುಷಿಯ ಕೊಡುವೆ... ಎಂಬ ಹಾಡು ಇದಾಗಿದ್ದು, ಪ್ರಮೋದ್ ಮರವಂತೆ ಸಾಹಿತ್ಯದ ಈ ಹಾಡಿಗೆ ವೀರ್ ಸಮರ್ಥ್ ಸಂಗೀತ ಸಂಯೋಜಿಸಿದ್ದಾರೆ. ಸರೆಗಮಪ ಖ್ಯಾತಿಯ ಪ್ರಜ್ಞಾ ಮರಾಠೆ ಮತ್ತು ಅರ್ಮಾನ್ ಮಲಿಕ್ ಈ ಗೀತೆಗೆ ದನಿಯಾಗಿದ್ದಾರೆ. ಈ ಚಿತ್ರದಲ್ಲಿ ಮುಕುಂದ ರಾಮಸ್ವಾಮಿ ನಾಯಕನಾಗಿ ನಟಿಸಿದ್ದು, ದಿಯಾ ಕೀರ್ತಿ, ಚಂದನಾ ಗೌಡ ಮತ್ತು ಶ್ವೇತಾ ಕೊಗ್ಗೂರು ನಾಯಕಿಯರಾಗಿ ಕಾಣಿಸಿಕೊಂಡಿದ್ದಾರೆ. ಮಂಡ್ಯ ರಮೇಶ್, ರಾಜೇಶ್ ನಟರಂಗ, ಸಂಗೀತಾ ಅನಿಲ್, ಜಯತೀರ್ಥ, ಚೇತನ್ ದುರ್ಗ, ಕಾಮಿಡಿ ಕಿಲಾಡಿ ಸದಾನಂದ, ಹುಲಿ ಕಾರ್ತಿಕ್, ಬೇಬಿ ರಿತು ಸಿಂಗ್ ಮುಂತಾದವರು ತಾರಾಗಣದಲ್ಲಿದ್ದಾರೆ. ಎನ್.ಆರ್ ಸ್ಟುಡಿಯೋಸ್ ಬ್ಯಾನರ್‌ನಲ್ಲಿ ಎನ್.ಆರ್ ಮಂಜು ನಾಥ್ ಈ ಚಿತ್ರವನ್ನು ನಿರ್ಮಾಣ ಮಾಡಿ ದ್ದಾರೆ. ವೀರ್ ಸಮರ್ಥ್ ಸಂಗೀತ ಸಂಗೀತ ಸಂಯೋ ಜಿಸಿರುವ ಚಿತ್ರದ ಹಾಡುಗಳಿಗೆ ಕೆ.ಕಲ್ಯಾಣ್, ಪ್ರಮೋದ್ ಮರವಂತೆ ಮುಂತಾದವರು ಸಾಹಿತ್ಯ ಬರೆದಿದ್ದಾರೆ. ಅವಿನಾಶ್ ಛಾಯಾಗ್ರಹಣ, ಮಧು ತುಂಬಕೆರೆ ಸಂಕಲನ, ಭಜರಂಗಿ ಮೋಹನ್ ನೃತ್ಯ ನಿರ್ದೇಶನ ಈ ಚಿತ್ರಕ್ಕಿದೆ.

ತೆರೆಗೆ ಸಿದ್ಧವಾದ ಮಕ್ಕಳ ಸೈನ್ಯ

ಎಸ್.ಕೆ. ಸುನೀಲ್ ಕುಮಾರ್ ನಿರ್ದೇಶನದ ಮಕ್ಕಳ ಸೈನ್ಯ ತೆರೆಗೆ ಸಿದ್ಧವಾಗಿದೆ. ಇದು ಮಕ್ಕಳ ಸಿನಿಮಾವಾಗಿದ್ದು, ಸಮಾಜಕ್ಕೆ ಒಳ್ಳೆಯ ಸಂದೇಶವೂ ಅಡಕವಾಗಿದೆ. ಎಪ್ಪತ್ತರ ದಶಕದಲ್ಲಿ ಬಂದಿದ್ದ ಸಿಂಹದ ಮರಿ ಸೈನ್ಯ ಚಿತ್ರದ ನಂತರ ಆ ರೀತಿಯ ಮಕ್ಕಳ ಚಿತ್ರ ಬಂದಿರಲಿಲ್ಲ. ಅದೇ ರೀತಿಯ ಕಥೆ ಈ ಚಿತ್ರದಲ್ಲಿದೆ. ಚಿತ್ರದಲ್ಲಿ ಸ್ನೇಹ, ಸಾಹಸ, ತಂದೆ ಮಗಳ ಬಾಂಧವ್ಯ ಎಲ್ಲವೂ ಚಿತ್ರದಲ್ಲಿ ಬೆರೆತಿವೆ. ಮಕ್ಕಳ ಸೈನ್ಯ ಚಿತ್ರಕ್ಕೆ ಸವಾಲಿಗೆ ಸವಾಲ್ ಎಂಬ ಅಡಿಬರಹವಿದೆ ಎಂದು ನಿರ್ದೇಶಕ ಸುನೀಲ್ ಕುಮಾರ್ ತಿಳಿಸಿದರು. ಮಹಾಲಕ್ಷ್ಮಿ, ಗಗನ, ಸೋನಾಕ್ಷಿ, ಶಶಾಂಕ್, ರಾಬರ್ಟ್, ರುದ್ರಪ್ಪ ಮುಂತಾದವರು ಮಕ್ಕಳ ಸೈನ್ಯ ಚಿತ್ರದಲ್ಲಿ ನಟಿಸಿದ್ದಾರೆ. ಚಿತ್ರದ ಹಾಡುಗಳಿಗೆ ಹಿರಿಯ ಸಾಹಿತಿ ದೊಡ್ಡರಂಗೇ ಗೌಡ ಅವರು ಸಾಹಿತ್ಯ ರಚಿಸಿದ್ದು, ಸನ್ನಿರಾಜ್ ಸಂಗೀತ ಸಂಯೋಜಿಸಿದ್ದಾರೆ. ಮುನಿಸ್ವಾಮಿ ಚಿತ್ರ ನಿರ್ಮಾಣ ಮಾಡಿದ್ದಾರೆ. ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆಯ ಅಕ್ಕಿ ಹೆಬ್ಬಾಳಿನಲ್ಲಿ ಚಿತ್ರೀಕರಣ ನಡೆಸಲಾಗಿದೆ.

ಮೃತ್ಯುದೇವತೆ ಹಾಡು ಬಿಡುಗಡೆ

ನವೀನ್ ಮಹದೇವ್ ಕಥೆ ಬರೆದು ನಿರ್ದೇಶನ ಮಾಡಿರುವ ಮೃತ್ಯುದೇವತೆ ಚಿತ್ರದ ಹಾಡು ಬಿಡುಗಡೆಯಾಗಿದೆ. ಸಿನಿಮಾದ ಶೀರ್ಷಿಕೆ ಗೀತೆ ಇದಾಗಿದ್ದು, ಹಿರಿಯ ನಿರ್ದೇಶಕ ಓಂಸಾಯಿ ಪ್ರಕಾಶ್ ಹಾಡು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋ ರಿದರು. ಇಂದು ಸಿನಿಮಾ ನಿರ್ಮಾಣ ಮಾಡುವುದೇ ಸಾಹಸದ ಕೆಲಸವಾಗಿದೆ. ಸಿನಿಮಾಗೆ ಪ್ರೇಕ್ಷಕರು ಬರುವುದೇ ಕಷ್ಟವಾಗಿದೆ. ಹಿಂದೆ ಸಿನಿಮಾಗಳಿಗೆ ಬಲು ಬೇಡಿಕೆಯಿತ್ತು. ಹಿಂದಿನ ಚಿತ್ರರಂಗದ ವೈಭವ ಮರಳಿ ಬರಬೇಕು. ಮೃತ್ಯುದೇವತೆ ಹೆಸರಿನಲ್ಲಿಯೇ

ಮನಗೆದ್ದಿದೆ. ರಿವೆಂಜ್ ಹಾಡು ಅದ್ಭುತವಾಗಿ ಮೂಡಿಬಂದಿದೆ ಎಂದು ಓಂ ಸಾಯಿಪ್ರಕಾಶ್ ಮೆಚ್ಚುಗೆ ವ್ಯಕ್ತಪಡಿ ಸಿದರು. ವೈಷ್ಣವಿ ಈ ಹಾಡಿಗೆ ದನಿಯಾಗಿದ್ದು, ರಘು ನೃತ್ಯ ನಿರ್ದೇಶನ ಮಾಡಿದ್ದಾರೆ. ಸಾರಿಕಾ ರಾವ್ ಹಾಡಿನಲ್ಲಿ ಅದ್ಭುತವಾಗಿ ಹೆಜ್ಜೆ ಹಾಕಿದ್ದಾರೆ.

ಮಹಿಳಾ ಪ್ರಧಾನ ಕಥೆ ಚಿತ್ರದಲ್ಲಿದೆ. ಮಹಿಳೆ ತನಗಾದ ಅನ್ಯಾಯಕ್ಕೆ ಹೇಗೆ ಸೇಡು ತೀರಿಸಿಕೊಳ್ಳುತ್ತಾಳೆ ಎಂಬುದೇ ಸಿನಿಮಾದ ಕಥೆ. ಸಿನಿಮಾದ ಶೂಟಿಂಗ್ ಮುಗಿದಿದ್ದು, ಸೆನ್ಸಾರ್ ಅಂಗಳದಲ್ಲಿದೆ ಎಂದು ನಿರ್ದೇಶಕ ನವೀನ್ ಹೇಳಿದರು. ಸೌಮ್ಯಾ ಎಂಬ ಹಳ್ಳಿಹುಡುಗಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಇಲ್ಲಿ ಸಸ್ಪೆನ್ಸ್, ಥ್ರಿಲ್ಲರ್, ಹಾರರ್ ಸ್ಟೋರಿಯೂ ಇದೆ ಎಂದು ನಟಿ ಹಿಮಾಶ್ರೀ ಹೇಳಿದರು. ಶ್ರೀಮಂತ ಹುಡುಗನ ಪಾತ್ರದಲ್ಲಿ ನಟಿಸಿದ್ದೇನೆ. ದುಡ್ಡಿನ ಮದದಲ್ಲಿ ಮರೆಯುವ ಪಾತ್ರವದು. ಈ ಪಾತ್ರದಲ್ಲಿ ನಟಿಸಿದ್ದು ಖುಷಿಕೊಟ್ಟಿದೆ ಎಂದು ನಟ ಮಾಹಿನ್ ಕುಬೇರ್ ತಿಳಿಸಿದರು. ಡಯಾನಾ, ಸಾರಿಕಾ, ವಿನಯಾ ಪ್ರಸಾದ್ ಮುಂತಾದವರು ತಾರಾಗಣದಲ್ಲಿದ್ದಾರೆ. ವರ್ಷಿತಾ ಪ್ರೊಡಕ್ಷನ್‌ನಲ್ಲಿ ಸರಸ್ವತಿ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ.